ಮಂಗಳೂರು

ಶನಿವಾರ, 11 ಏಪ್ರಿಲ್ 2026

ಸಂಪುಟ 48, ಸಂಚಿಕೆ 23, ಪುಟಗಳು 14+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮುಗಿಯದ ರಗಳೆ

ಜೆ.ಡಿ. ವ್ಯಾನ್ಸ್ ಹೊರಟಿದ್ದರೂ ಇರಾನ್ ಸುದ್ದಿಯೇ ಇಲ್ಲ

• ಪುಟ 2



ಕಿರುಸುದ್ದಿ

ಕೆನರಾ ವಿಕಾಸ್ ಕಾಲೇಜಿಗೆ ಮೂರು ರ್‍ಯಾಂಕ್



• **ಮಂಗಳೂರು:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕೆನರಾ ವಿಕಾಸ್ ಕಾಲೇಜಿಗೆ 100% ಫಲಿತಾಂಶ ಲಭಿಸಿದೆ. ವಾಣಿಜ್ಯ ವಿಭಾಗದಲ್ಲಿ ದಶಾ ಆರ್.ಪಿ. ರಾಜ್ಯ ಮಟ್ಟದಲ್ಲಿ 6ನೇ ರ್‍ಯಾಂಕ್ (595), ಅಮೃತ್ ಶೆಣೈ ರಾಜ್ಯ ಮಟ್ಟದಲ್ಲಿ 8ನೇ ರ್‍ಯಾಂಕ್ (593) ಮತ್ತು ಪ್ರಣವ್ ಪೈಲೂರು ರಾಜ್ಯ ಮಟ್ಟದಲ್ಲಿ 9ನೇ ರ್‍ಯಾಂಕ್ (592) ಪಡೆದಿದ್ದಾರೆ. ಸಾಧನೆಗೈದ ಮಕ್ಕಳನ್ನು ಕಾಲೇಜಿನ ಆಡಳಿತ ವರ್ಗದವರು ಅಭಿನಂದಿಸಿದ್ದಾರೆ.

ವಕ್ವಾಡಿ ಗುರುಕುಲ ಪದವಿ ಪೂರ್ವ ಕಾಲೇಜಿಗೆ ಶೇ.100 ಫಲಿತಾಂಶ



• **ಕುಂದಾಪುರ :** ಕೋಟೇಶ್ವರ ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ವಕ್ವಾಡಿಯ ಗುರುಕುಲ ಪದವಿ ಪೂರ್ವ ಕಾಲೇಜು 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾಗಿದ್ದು 35 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಇದರಲ್ಲಿ 12 ಮಂದಿ ವಿಶಿಷ್ಟ ಶ್ರೇಣಿ ಮತ್ತು 23 ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದ ಅಮೃತ್ ಎಸ್. ಕೆ. (568), ಅಭಿಷೇಕ್ (566), ಯಶವಂತ್ ಗೌಡ ಕೆ. (552), ವಿಘ್ನೇಶ್ ಸಂತೋಷ್ ನಾಯ್ಕ್ (547) ಉತ್ತಮ ಸಾಧನೆ ಮಾಡಿದ್ದರೆ, ವಾಣಿಜ್ಯ ವಿಭಾಗದ ಶಿಲ್ಪಾ ವಿ. (566), ದರ್ಶನ್ ಎಂ. ವೈ. (561) ಕುಶಾಲ್ ಡಿ. (538) ಉತ್ತಮ ಅಂಕಗಳನ್ನು ಗಳಿಸಿದ್ದಾರೆ.

ಬಬಿನ್‌ಗೆ ವಿಜ್ಞಾನದಲ್ಲಿ ಶೇ. 95



• **ಬಂಟ್ವಾಳ :** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪುತ್ತೂರಿನ ಅಂಬಿಕಾ ಪದವಿಪೂರ್ವ ವಿದ್ಯಾಲಯದ ವಿದ್ಯಾರ್ಥಿ ಬಬಿನ್ ಎನ್. ವಿಜ್ಞಾನ ವಿಭಾಗದಲ್ಲಿ 95% ಅಂಕ ಪಡೆದು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಈತ ಬಂಟ್ವಾಳ ತಾಲೂಕಿನ ಮಾರ್ನಬೈಲು ನಂದಕಿಶೋರ್ ಕುಲಾಲ್–ಪೂರ್ಣಿಮಾ ದಂಪತಿಯ ಪುತ್ರ.

ಜಿಲ್ಲೆಗೆ ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗೆ ಸನ್ಮಾನ



• **ಕುಶಾಲನಗರ:** ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಜಿಲ್ಲೆ ದ್ವಿತೀಯ ಹಾಗೂ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ ಕೂಡಿಗೆ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ನಂದಿತಾ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ ಬಣದಿಂದ ಸನ್ಮಾನಿಸಲಾಯಿತು. ಸಂಘಟನೆಯ ಜಿಲ್ಲಾಧ್ಯಕ್ಷ ಬಿ.ಎ. ದಿನೇಶ್ ಶೆಟ್ಟಿ ಮತ್ತು ತಂಡದವರು ಕೂಡಿಗೆ ಪದವಿಪೂರ್ವ ಕಾಲೇಜಿಗೆ ಭೇಟಿ ನೀಡಿ ವಿದ್ಯಾರ್ಥಿನಿ ಮತ್ತು ಅವರ ಪೋಷಕರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಚಾಲಕ ಎಂ. ಎಸ್. ಮಣಿಕಂಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣ ಜಿಲ್ಲಾ ಉಪಾಧ್ಯಕ್ಷೆ ನಿರ್ಮಲಾ ಸುರೇಶ್, ಕಾರ್ಯದರ್ಶಿ ಸರಳಾ ರಾಮಣ್ಣ, ಗೌರವಾಧ್ಯಕ್ಷ ನಾಗರಾಜ ಹೆಚ್. ಕಾವಲ್"ಕೊಂಡ, ಕುಶಾಲನಗರ ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿ, ಕಾರ್ಯದರ್ಶಿ ಅನಸೂಯ, ಮುಖಂಡರಾದ ಪುಟ್ಟಮ್ಮ, ಗಣೇಶ ಕಾಲೇಜು ಪ್ರಾಂಶುಪಾಲ ಹಂಡ್ರಂಗಿ ನಾಗರಾಜ್, ಉಪನ್ಯಾಸಕ ವೃಂದದವರು ಹಾಜರಿದ್ದರು.

600ಕ್ಕೆ 600 ಅಂಕ ಗಳಿಸಿದ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿ ದಿಶಾ

ಸಿಎ ತೇರ್ಗಡೆ ಮುಂದಿನ ಗುರಿ

ದಿಗಂತ ವಿಶೇಷ

▸ **ಹರೀಶ್ ಕೆ.ಆದೂರು**



• **ಮೂಡುಬಿದಿರೆ:** ಅಲ್ಲಿ ಅಮ್ಮನ ಮೃತದೇಹದ ಪೋಸ್ಟ್ ಮಾರ್ಟಂ ನಡೆಯುತ್ತಿದ್ದರೆ, ಇತ್ತ ಪುಸ್ತಕ ಹಿಡಿದು ಪರೀಕ್ಷೆಗಾಗಿ ಓದುತ್ತಿದ್ದ ದಿಶಾ, ತಾಯಿಯ ನಿಧನದ ನೋವಿನಲ್ಲೂ ದಿಟ್ಟತನದಿಂದ ಓದಿ ಸಾಧನೆ ಮಾಡಿದ್ದಾಳೆ. ಮೂಡುಬಿದಿರೆಯ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ದಿಶಾ 600ಕ್ಕೆ 600 ಅಂಕವನ್ನು ಪಡೆದುಕೊಂಡು ರಾಜ್ಯದಲ್ಲೇ ಪ್ರಥಮ ಸ್ಥಾನಿಯಾಗಿ ಹೊರಹೊಮ್ಮಿದ್ದಾಳೆ.

ಇನ್ನೇನು ಎರಡು ಪರೀಕ್ಷೆಗಳು ಬಾಕಿ ಇವೆ ಎಂಬಷ್ಟರಲ್ಲಿ ಈಕೆಯ ಹೆತ್ತಬ್ಬೆ ಮೃತಪಟ್ಟಿದ್ದರು. ಸಂಬಂಧಿಕರ ಅಸಹಕಾರ, ವಿದ್ಯಾಭ್ಯಾಸಕ್ಕಿಂತ ಅಮ್ಮನೇ ಹೆಚ್ಚು, ಅಮ್ಮನೊಂದಿಗಿರು ಎಂಬ ಮಾತುಗಳು ಹೀಗೆ ಹತ್ತು ಹಲವು ನೋವುಗಳು, ಒತ್ತಡಗಳ ನಡುವೆಯೂ ಈಕೆ ಸಾಧನೆಯನ್ನು ಮೆರೆದಿದ್ದಾಳೆ.

ಉರು ಹೊಡೆಯುವುದರಲ್ಲಿ ನಂಬಿಕೆಯಿಲ್ಲ


ನಾನು ಉರು ಹೊಡೆಯುವುದಿಲ್ಲ. ಬಾಯಿಪಾಠ ಮಾಡಿ ಬರೆಯುವ ವಿಚಾರದಲ್ಲಿ ನನಗೆ ನಂಬಿಕೆಯೇ ಇಲ್ಲ. ಏನಿದ್ದರೂ ವಿಚಾರವನ್ನು ಅರ್ಥೈಸಿಕೊಂಡು, ಅದನ್ನು ಪರೀಕ್ಷೆಯಲ್ಲಿ ಬರೆಯುವ ಅಭ್ಯಾಸ ಮಾಡಿದ್ದೇನೆ. ಅದು ಫಲ ಕೊಟ್ಟಿದೆ ಎನ್ನುತ್ತಾಳೆ. ಭವಿಷ್ಯದಲ್ಲಿ ಸಿ.ಎ ತೇರ್ಗಡೆಯಾಗಬೇಕಾಗಿದೆ. ಅದಕ್ಕಾಗಿ ತಯಾರಿ ನಡೆಸುತ್ತಿದ್ದೇನೆ. ಮುಂಬರುವ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಪರೀಕ್ಷೆ ತೇರ್ಗಡೆಹೊಂದುವ ವಿಶ್ವಾಸವಿದೆ ಎನ್ನುತ್ತಾಳೆ.

ಇಂಗ್ಲಿಷ್ ಕಷ್ಟ!

ನನಗೆ ಉಳಿದೆಲ್ಲಾ ವಿಚಾರಗಳೂ ಸುಲಭವಾಗುತ್ತಿದ್ದು, ಇಂಗ್ಲಿಷ್ ಮಾತ್ರ ಕೊಂಚ ಕಷ್ಟ. ಹಾಗಂತ ಕಡಿಮೆ ಅಂಕ ಪಡೆಯುತ್ತೇನೆಂದಲ್ಲ, ಎಲ್ಲೋ ಒಂದೆರಡು ಸೂಕ್ಷ್ಮ ತಪ್ಪುಗಳು ಸಂಭವಿ ಸುತ್ತದೆಯೋ ಎಂಬ ಭಯ ಇತ್ತು. ಆದರೆ ಫಲಿತಾಂಶ ನೋಡಿದಾಗ ಖುಷಿ ಆಗಿದೆ. ನಾನಂದುಕೊಂಡ ಸಾಧನೆ ಅಲ್ಲಿ ಆಗಿಹೋಗಿದೆ.

■ **ದಿಶಾ**

ಸ್ಪೋರ್ಟ್ಸ್ ಮ್ಯಾನ್ ಸ್ಪಿರಿಟ್ ಈಕೆಯಲ್ಲಿತ್ತು...



ಇದು ಅಂತಿಂಥಾ ಸಾಧನೆಯಲ್ಲ. 600ಕ್ಕೆ 600 ಅಂಕ ಪಡೆಯುವುದು ಸುಲಭದ ಕೆಲಸವಲ್ಲ. ಅದೂ ಕಠಿಣ ಸಮಯದಲ್ಲಿ ಒಂದು ದಿಟ್ಟ ನಿರ್ಧಾರವನ್ನು ಕೈಗೊಂಡು ಈ ಹುಡುಗಿ ಈ ಸಾಧನೆಯನ್ನು ಮಾಡಿದ್ದಾಳೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಸಂತಸ ವ್ಯಕ್ತಪಡಿಸಿದ್ದಾರೆ. ಇದು ದ್ವಿತೀಯ ಬಾರಿ ನಮ್ಮ ಸಂಸ್ಥೆಯಲ್ಲಿ ಈ ರೀತಿಯ ಸಾಧನೆಯಾಗಿದೆ. ಕ್ರೀಡಾ ಸ್ಪೂರ್ತಿಯಂತೆ ಈ ವಿದ್ಯಾರ್ಥಿನಿ ಈ ಸಾಧನೆ ಮಾಡಿದ್ದಾಳೆ ಎಂದು ಪ್ರಶಂಸಿಸಿದ್ದಾರೆ.

ಬೆಳಗ್ಗೆ 3 ಗಂಟೆಗೆ ಓದುತ್ತಿದ್ದಳು: ಅಮ್ಮನ ನಿಧನದ ಸಂದರ್ಭದಲ್ಲಿ ಆಶ್ರಯ ನೀಡಿದ್ದ ಆಕೆಯ ಶಿಕ್ಷಕಿ, ಆಕೆ 3ಗಂಟೆಗೆ ಎದ್ದು ಓದುತ್ತಿದ್ದಳು, 8.30ಕ್ಕೆ ಊಟಮುಗಿಸಿ ಒಂದು ಗಂಟೆಗಳ ಕಾಲ ಓದುತ್ತಿದ್ದಳು, 9.30ಕ್ಕೆ ಮಲಗುತ್ತಿದ್ದಳು, ಈ ರೀತಿಯ ದಿನಚರಿಯನ್ನು ರೂಢಿಸಿಕೊಂಡಿದ್ದಳು. ಶ್ರದ್ಧೆ, ಪರಿಶ್ರಮ, ಹಾಗೂ ತ್ಯಾಗಕ್ಕೆ ಇಂದು ಫಲ ಸಿಕ್ಕಿದೆ ಎಂದು ಹೇಳುತ್ತಾರೆ.

ಅತ್ಯುತ್ತಮ ಶೈಕ್ಷಣಿಕ ಸಾಧನೆ: ವಿದ್ಯಾರ್ಥಿಗಳಿಗೆ ತ್ರಿಶಾ ಅಭಿನಂದನೆ





• **ಮಂಗಳೂರು:** ದ್ವಿತೀಯ ಪಿಯು ಫಲಿತಾಂಶದಲ್ಲಿ ಅತ್ಯುತ್ತಮ ಸಾಧನೆ ದಾಖಲಿಸಿರುವ ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ತ್ರಿಶಾ ಶಿಕ್ಷಣ ಸಂಸ್ಥೆ ಅಭಿನಂದನೆ ಸಲ್ಲಿಸಿದೆ. ಕಾಲೇಜಿನ ಸಹಾನ 595 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದು, ಸಿಂಚನ ಎಚ್ ಕುಂದರ್ 590 ಅಂಕ ಗಳಿಸುವ ಮೂಲಕ 11ನೇ ರ್‍ಯಾಂಕ್ ಮುಡಿಗೇರಿಸಿಕೊಂಡಿದ್ದಾರೆ. ಶ್ರೇಯಸ್ ಎಸ್. (582), ಸಮೃದ್ಧಿ ಆಳ್ವ (580), ನಿಶಾಲಿ (569), ಅಭಿನವ್ ಅನುಪ್ (556), ಶ್ರವಂತ್ ಹೆಬ್ಬಾರ್ (555), ಸಾಯಿವರುಣ್ (550), ಪಿ.ಎಸ್. ಅರ್ದಶ್ (544), ಅನ್ವಿ ಎಸ್. ಶೆಟ್ಟಿ (521) ಉತ್ತಮ ಸಾಧನೆ ದಾಖಲಿಸಿದ್ದಾರೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ ಅದ್ಭುತವಾಗಿದೆ. ಈ ಅಸಾಧಾರಣ ಫಲಿತಾಂಶ ನಮ್ಮದಾಗಲು ಉತ್ತಮ ಗುಣಮಟ್ಟದ ಶಿಕ್ಷಣ, ತಜ್ಞ ಅಧ್ಯಾಪಕರ ಮಾರ್ಗದರ್ಶನ ಹಾಗೂ ಫಲಿತಾಂಶ ಆಧಾರಿತ ಕಲಿಕಾ ವಾತಾವರಣ ಕಾರಣವಾಗಿದೆ. ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯ ಹಾರೈಸುತ್ತೇವೆ ಎಂದು ಆಡಳಿತ ಮಂಡಳಿ ಹೇಳಿದೆ.

ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ





• **ಪುತ್ತೂರು:** ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ರಲ್ಲಿ ಪುತ್ತೂರು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅಭಿರಾಮ್ ವಿ. ಭಟ್ 598 ಅಂಕಗಳೊಂದಿಗೆ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಮನ್ವಿತ 596, ಬಿಂದು ಎಚ್.ಆರ್. 596, ಕಲಾ ವಿಭಾಗದಲ್ಲಿ ರೂಪಶ್ರೀ 584 ಅಂಕಗಳೊಂದಿಗೆ ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ತೀರ್ಥ ಶೆಟ್ಟಿ 595, ಶ್ರೀಜಾ 594, ಪ್ರಾಪ್ತಿ ಆಳ್ವ 593, ಮಂಗಳಾಮೃತ ಕೆ.ಆರ್. 592 ಹಾಗೂ ಪ್ರಸ್ತುತಿ ಪಿ. ಅದಿತಿ ಯು. 590 ಅಂಕಗಳನ್ನು ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪ್ರಮಥ ಎಂ. ಭಟ್ 594, ಶ್ರೀವಿದ್ಯಾ ಜೆ. 593, ಸುಶ್ಮಿತಾ ಬಿ. 592, ಸಹನ ಮಳಿ 591 ಅಂಕಗಳನ್ನು ಪಡೆದುಕೊಂಡಿದ್ದಾರೆ. ಕಲಾ ವಿಭಾಗದಲ್ಲಿ ಪ್ರೀತಿ ಸುನಿಲ್ ಚಿಲ್ಲಾಲ್ 582, ಬಿಂದು ಕೆ.ಜೆ. 580, ಕಿರಣ್ ಆರ್. 577, ಶೋಭಿತಾ ಸಿ.ಎಚ್. 571 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಸರೋಜಿನಿ ಮಧುಸೂದನ್ ಕುಶೆ ಕಾಲೇಜ್ 99.19 ಶೇ.

ವಾಣಿಜ್ಯ ವಿಭಾಗ / ವಿಜ್ಞಾನ ವಿಭಾಗ



• **ಮಂಗಳೂರು:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ತಾವರದ ಸರೋಜಿನಿ ಮಧುಸೂದನ್ ಕುಶೆ ಪದವಿಪೂರ್ವ ಕಾಲೇಜ್ 99.19 ಶೇ. ಫಲಿತಾಂಶ ದಾಖಲು ಮಾಡಿದೆ.

ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಹರ್ಷ ಜಿ.ಎಸ್. 595 (99.16 ಶೇ.) ಅಂಕ ಗಳಿಸಿ ರಾಜ್ಯಕ್ಕೆ ಆರನೇ ಸ್ಥಾನ ಪಡೆದಿದ್ದಾರೆ. 37 ಮಂದಿ ವಿಶಿಷ್ಟ ಶ್ರೇಣಿಯಲ್ಲಿ 83 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, ವಾಣಿಜ್ಯ ವಿಭಾಗದಲ್ಲಿ ಶೇ. 100 ಫಲಿತಾಂಶ ದಾಖಲಾಗಿದೆ.

ವಿಜ್ಞಾನ ವಿಭಾಗದಲ್ಲಿ ಅನ್ವಿತಾ ಪಿ. 583, ವೈಷ್ಣವಿ ಜೆ. ಶೆಟ್ಟಿ 579, ಧೃತಿ 573, ನಿಶ್ಮಿತಾ ಬಿ. 572, ಸುಜನ್ ಕೆ. 563, ಶರಣ್ಯ್ರೇಘಾ ಎಸ್. ರೈ 561 ಅಂಕಗಳನ್ನು ಪಡೆದಿದ್ದಾರೆ.

ಕಾಮರ್ಸ್ ವಿಭಾಗದಲ್ಲಿ ತನ್ಮಯಿ ಪಿ. 583, ಅಪೇಕ್ಷಾ ಜಿ. ರಾವ್ 568, ದೀಕ್ಷಾ 567, ಅಶ್ವಿನಿ 567, ಸುಹಾನ್ ಶೆಟ್ಟಿ 560, ರುಚಿತ್ ಯು.ಕೆ. 559, ಯಶ್ವಿತ್ ಎಂ. 548, ದಿವ್ಯಾ 541, ವೈಲಾಡ್ ಲಿಂಗ್ದಾನ್ 524, ಜಿ. ರೋಹಿತ್ 516, ಸೃಜನ್ 506 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಸರೋಜಿನಿ ಮಧುಸೂದನ್ ಕುಶೆ, ಪ್ರಾಂಶುಪಾಲರು, ಶಿಕ್ಷಕ ವರ್ಗದವರು, ಆಡಳಿತ ವರ್ಗದವರು ಸಾಧಕ ಮಕ್ಕಳನ್ನು ಅಭಿನಂದಿಸಿದ್ದಾರೆ.

ವಿದ್ವತ್ ಪಿಯು ಕಾಲೇಜಿಗೆ ಮೊದಲ ಪ್ರಯತ್ನದಲ್ಲೇ ಅತ್ಯುತ್ತಮ ಫಲಿತಾಂಶ



• **ಬೆಳ್ತಂಗಡಿ:** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗುರುವಾಯನಕೆರೆಯ ವಿದ್ವತ್ ಪಿಯು ಕಾಲೇಜು ಪ್ರಥಮ ಪ್ರಯತ್ನದಲ್ಲೇ ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ವಿದ್ಯಾರ್ಥಿಗಳು ಅಮೋಘ ಸಾಧನೆ ತೋರಿದ್ದಾರೆ.

ಪರೀಕ್ಷೆಗೆ ಹಾಜರಾದ ಒಟ್ಟು 154 ವಿದ್ಯಾರ್ಥಿಗಳ ಪೈಕಿ ವಿಜ್ಞಾನ ವಿಭಾಗದಲ್ಲಿ ತನುಶ್ರೀ (593) ಅಂಕ ಗಳಿಸಿ (ರಸಾಯನಶಾಸ್ತ್ರ–100, ಭೌತಶಾಸ್ತ್ರ–100 ಗಣಿತಶಾಸ್ತ್ರ–100, ಜೀವಶಾಸ್ತ್ರ–100) ಕಾಲೇಜಿಗೆ ಪ್ರಥಮ ಸ್ಥಾನಿಯಾಗಿದ್ದಾಳೆ. ಉಳಿದಂತೆ ಚಿನ್ಮಯ್ ಜಿ.ಕೆ. (589) ಅಂಕ(ಭೌತಶಾಸ್ತ್ರ–100, ರಸಾಯನ ಶಾಸ್ತ್ರ–100, ಗಣಿತ–100 ಮತ್ತು ಗಣಕ ವಿಜ್ಞಾನ–100) ಪಡೆದು ದ್ವಿತೀಯ, ದೇವಿ ಪ್ರಸಾದ್ ಶೆಣೈ(586) ಅಂಕ ಭೌತಶಾಸ್ತ್ರ–100, ಗಣಿತ–100, ಜೀವಶಾಸ್ತ್ರ–100 ಪಡೆದು ತೃತೀಯ ಸ್ಥಾನಿಯಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಧ್ಯಾನ (590) ಅಂಕ (ಕನ್ನಡ–100, ಲೆಕ್ಕಶಾಸ್ತ್ರ ಅಧ್ಯಯನ–100) ಪಡೆಯುವ ಮೂಲಕ ಪ್ರಥಮ ಸ್ಥಾನಿಯಾಗಿದ್ದು, ರಿಷಾಂತ್ ವೈ.ಪಿ. (581), ದ್ವಿತೀಯ ಸ್ಥಾನಿಯಾಗಿದ್ದು, ಶಾನ್ ಹರ್ವಿನ್ ಫೆರ್ನಾಂಡಿಸ್ (580) ತೃತೀಯ ಸ್ಥಾನ ಪಡೆದಿದ್ದಾರೆ. ಕಾಲೇಜು ಮೊದಲ ಪ್ರಯತ್ನದಲ್ಲಿಯೇ ಅದ್ವಿತೀಯ ಸಾಧನೆ ತೋರಿದ್ದಾರೆ.

ಈ ಎಲ್ಲ ವಿದ್ಯಾರ್ಥಿಗಳು ಜೆಇಇ ಮೇನ್ಸ್ –2026 ಪ್ರಥಮ ಹಂತದಲ್ಲಿ 99 ಪರ್ಸೆಂಟೈಲ್ ಪಡೆದಿದ್ದು, ಇದೀಗ ಬೋರ್ಡ್ ಪರೀಕ್ಷೆಯಲ್ಲೂ ಉತ್ತಮ ಸಾಧನೆ ತೋರಿದ್ದಾರೆ.

ಸಾಧಕ ವಿದ್ಯಾರ್ಥಿಗಳನ್ನು ವಿದ್ವತ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಸುಭಾಷ್ಚಂದ್ರ ಶೆಟ್ಟಿ ಪ್ರಶಂಸಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆ | ಎಲ್ಲಾ 282 ವಿದ್ಯಾರ್ಥಿಗಳೂ ಉತ್ತೀರ್ಣ

ಸಿಎಫ್‌ಎಎಲ್: ಶೇ. 100ರ ಸಾಧನೆ



• **ಮಂಗಳೂರು:** ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಂಗ್‌ನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಸಂಸ್ಥೆಯ ಶೇ.100ರಷ್ಟು ಫಲಿತಾಂಶ ಪಡೆದಿದೆ. ಸಿಎಫ್‌ಎಎಲ್‌ನಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲ 282 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ. ಅವರಲ್ಲಿ 238 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, 8 ವಿದ್ಯಾರ್ಥಿಗಳು 590ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಅತ್ಯುತ್ತಮ ಫಲಿತಾಂಶವಾಗಿದೆ ಎಂದು ಸಂಸ್ಥೆಯ ಪ್ರಾಂಶುಪಾಲೆ ಡಾ. ಸ್ಮಿತಾ ಹೆಗ್ಡೆ ತಿಳಿಸಿದರು.

ಸಂಸ್ಥೆಯ ವಿದ್ಯಾರ್ಥಿನಿಯರಾದ ಪ್ರಿಸ್ಸಿಲ್ಲಾ ಕಾರ್ಡೋಝಾ (599) ಪ್ರಥಮ ಮತ್ತು ಮೀನಾಕ್ಷಿ ಉಣ್ಣಿತ್ತಾನ್ (598) ಅವರು ದ್ವಿತೀಯ ರ್‍ಯಾಂಕ್ ಪಡೆದು ಸಿಎಫ್‌ಎಎಲ್ ಹಾಗೂ ಮಂಗಳೂರಿಗೆ ಕೀರ್ತಿ ತಂದಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಟ್ರಸ್ಟಿ ವಿಜಯ್ ಮೋರಸ್ ಮಾತನಾಡಿ, ಸಿಎಫ್‌ಎಎಲ್‌ನಲ್ಲಿ ಜೆಇಇ, ನೀಟ್, ಕೆಸಿಇಟಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಅಗತ್ಯವನ್ನು ಒಗ್ಗೂಡಿಸಿ ಬೋಧನೆ ಮಾಡಲಾಗುತ್ತಿದೆ. ನಿರಂತರ ಸಮಸ್ಯಾ ಪರಿಹಾರ ಅಭ್ಯಾಸ ಮತ್ತು ಶಿಸ್ತಿನ ಶಿಕ್ಷಣ ನೀಡಲಾಗುತ್ತಿದೆ. ಸಿಎಫ್‌ಎಎಲ್ ನಲ್ಲಿ ವಿದ್ಯಾರ್ಥಿಗಳು ಕೇವಲ ಅಂಕಗಳನ್ನು ಮಾತ್ರವಲ್ಲ ಜೀವನ ಕೌಶಲವನ್ನೂ ಕಲಿಯುತ್ತಾರೆ ಎಂದರು.

ರ್‍ಯಾಂಕ್ ಪಡೆದ ವಿದ್ಯಾರ್ಥಿನಿಯರಾದ ಪ್ರಿಸ್ಸಿಲ್ಲಾ ಕಾರ್ಡೋಝಾ ಮತ್ತು ಮೀನಾಕ್ಷಿ ಉನ್ನಿತ್ತಾನ್, ವಿದ್ಯಾರ್ಥಿನಿಯರ ಹೆತ್ತವರಾದ ಜೆಸಿಂತಾ ಕಾರ್ಡೋಜ, ಅಶ್ವಿನ್ ಉಣ್ಣಿತ್ತಾನ್, ನೀತು, ಉಪನ್ಯಾಸಕಿ ಅಕ್ಷತಾ ಕದ್ರಿ ಉಪಸ್ಥಿತರಿದ್ದರು.

ಸಾಧನೆಗೈದ ಎಲ್ಲ ವಿದ್ಯಾರ್ಥಿಗಳನ್ನು ಸಿಎಫ್‌ಎಎಲ್ ಆಕಾಶಭವನ ಕ್ಯಾಂಪಸ್‌ನಲ್ಲಿ ಅಭಿನಂದಿಸಲಾಯಿತು.

ರಾಜ್ಯಕ್ಕೆ ಮೊದಲ ಹತ್ತರ ಸ್ಥಾನದಲ್ಲಿ ಜ್ಞಾನಸುಧಾದ ನಲ್ವತ್ತೊಂಬತ್ತು ವಿದ್ಯಾರ್ಥಿಗಳು



• **ಕಾರ್ಕಳ:** 2026ರ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–1ರ ಫಲಿತಾಂಶದಲ್ಲಿ ಜ್ಞಾನಸುಧಾಪದವಿ ಪೂರ್ವ ಕಾಲೇಜಿನ 49 ವಿದ್ಯಾರ್ಥಿಗಳು ಮೊದಲ ಹತ್ತು ರ್‍ಯಾಂಕ್ ಗಳಿಸಿದ್ದು, ಕಾರ್ಕಳ ಜ್ಞಾನಸುಧಾದ ವಿಜ್ಞಾನ ವಿಭಾಗದ ಚೈತ್ರಿಕಾಚೌದರಿ, ವೈಷ್ಣವಿ ಕುಲಕರ್ಣಿ ಹಾಗೂ ಉಡುಪಿ ಜ್ಞಾನಸುಧಾದ ಅರ್ನವಿತಲಾ 597 ಅಂಕ ಪಡೆದು ರಾಜ್ಯಕ್ಕೆ 3ನೇ ಸ್ಥಾನದೊಂದಿಗೆ ಉಡುಪಿ ಜಿಲ್ಲೆಗೆ ದ್ವಿತೀಯ ಸ್ಥಾನಿಗಳಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಸಾನ್ವಿ ದಿನೇಶ್ 595 ಅಂಕ ಪಡೆದು ರಾಜ್ಯಕ್ಕೆ 6ನೇ ಸ್ಥಾನ ಪಡೆದಿದ್ದಾರೆ. ಕಾರ್ಕಳ ಜ್ಞಾನಸುಧಾ, ಉಡುಪಿ ಜ್ಞಾನಸುಧಾ ಹಾಗೂ ಮಣಿಪಾಲ ಜ್ಞಾನಸುಧಾವು ಶೇ.100 ಫಲಿತಾಂಶವನ್ನು ಪಡೆದಿದ್ದು, ಒಟ್ಟು 966 ವಿದ್ಯಾರ್ಥಿಗಳಲ್ಲಿ 888 (91.93%) ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಫಲಿತಾಂಶವನ್ನು ದಾಖಲಿಸಿಕೊಂಡಿದ್ದಾರೆ.

ವಿಜ್ಞಾನ ವಿಭಾಗ

ಚೈತ್ರಿಕಾಚೌದರಿ–597 (ರಾಜ್ಯಕ್ಕೆ 3ನೇ ಸ್ಥಾನ, ಜಿಲ್ಲೆಗೆ ದ್ವಿತೀಯ ಸ್ಥಾನ), ವೈಷ್ಣವಿ ಕುಲಕರ್ಣಿ– 597 (3ನೇ ಸ್ಥಾನ, ಜಿಲ್ಲೆಗೆ ದ್ವಿತೀಯ ಸ್ಥಾನ), ಅರ್ನವಿ – 597 (3ನೇ ಸ್ಥಾನ, ಜಿಲ್ಲೆಗೆ ದ್ವಿತೀಯ ಸ್ಥಾನ), ಅಶ್ವಿನ್ ವಿ. ಶೆಟ್ಟಿ– 596 (4ನೇ ಸ್ಥಾನ, ಜಿಲ್ಲೆಗೆ ತೃತೀಯ ಸ್ಥಾನ), ಪ್ರತ್ವಿತಾ ಪಿ. ಶೆಟ್ಟಿ– 596 (4ನೇ ಸ್ಥಾನ, ಜಿಲ್ಲೆಗೆ ತೃತೀಯ ಸ್ಥಾನ), ಸಮೃದ್ ದಿನೇಶ್ ನಾಯಕ್ – 594, ನಿಶ್ಮಿತಾ –594 , ಶ್ರೀರಾಮ್ ಕೆ. ಹೆಬ್ಬಾರ್ 594, ಪಿ. ಅಖಿಲ್ ಶರ್ಮಾ–594, ಭುವನಶ್ರೀ–593 , ಸಹನ ಎನ್.–593, ಚಿನ್ಮಯೀ ಭಟ್ –593

ಪರ್ಣಿಕಾ– 593, ಅಮೃತವರ್ಷಿಣಿ ಎನ್ ಜಿ – 592, ಕನಿಷ್ಕ ಅಮಿನ್– 592, ನವಮಿ ಎನ್. –592, ನಿಶಾನ್ಎನ್. ಸಾಲ್ಯಾನ್– 592, ಪರಿಣಿತ ಎಸ್.– 592, ಪ್ರೀತಮ್ ಕೆ. ಎಂ. –592, ಯಶಸ್ವಿನಿ ಎ. ಬಿ.–592, ಆಕಾಶ್ ಶೆಟ್ಟಿ– 591, ಚೈತನ್ಯ ಎಚ್. ಎಂ. – 591, ದಿಗಂತ್ ಎಸ್.– 591, ಕುನಾಲ್ ಆರ್. ಗೌಡ– 591, ಪ್ರಜ್ಞಾ– 591 ಈಶ್ವರಿ ಬಿ. ಶೇಟ್– 591, ಸಿದ್ಧಾಂತ್ ಎನ್. ಜಿ. – 591, ಮಹಿಮಾ 591, ಶ್ರೇಯಾ ಎಸ್. ಆಚಾರ್–591, ಆರ್ಯ ನಾರಾಯನ್ ಜಿ.ಎಲ್.– 590, ಭಾವನ ಡಿ.ಎಸ್.–590, ಪ್ರಣವ್ ಎಂ. ಯು.–590, ಪ್ರಶ್ಮಾ ಕಾಮತ್–590, ಸಮನ್ವಿತಾ ಎಚ್.ಆರ್.–590, ಸಂಪ್ರೀತಾ ಭಟ್– 590, ಶರಧಿ ಶೆಟ್ಟಿ – 590, ಶಿವಾನಿ ಬಿ.ಎನ್.–590, ಸುಜಲ್ ದೀಪಕ್ ಕೆ.– 590, ಸುಶಾಂತ್ ತಿಮ್ಮನವರ್– 590, ವಿಜೇತ ಪುಟ್ಟಪ್ಪಗೌಡರ್– 590, ದೀಪಶ್ರೀ ರಮೇಶ್ ಎಸ್.– 590, ಡೆಲಿಷಿಯಾ ಎಂ. – 590, ಪ್ರಗತಿ ಎಲ್.– 590, ಪ್ರಥ್ವೀಧರ ಎಲ್. ಕೆ. – 590 ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗ

ವಾಣಿಜ್ಯ ವಿಭಾಗದದಲ್ಲಿ ಕಾರ್ಕಳ ಜ್ಞಾನಸುಧಾದ ಸಾನ್ವಿ ದಿನೇಶ್ 595 ಅಂಕ ಪಡೆದು ರಾಜ್ಯಕ್ಕೆ 6ನೇ ಸ್ಥಾನ, ಚಾನ್ವಿ 593 ಅಂಕ ಪಡೆದು ರಾಜ್ಯಕ್ಕೆ 8ನೇಸ್ಥಾನ, ಪ್ರಥುಲ್ ಡಿಸೋಜಾ 592 ಅಂಕ ಪಡೆದು ರಾಜ್ಯಕ್ಕೆ 9ನೇ ಸ್ಥಾನ, ಮಣಿಪಾಲ ಜ್ಞಾನಸುಧಾದ ರಕ್ಷಿತ್ 592 ಅಂಕ ಪಡೆದು ರಾಜ್ಯಕ್ಕೆ 9ನೇ ಸ್ಥಾನ ಹಾಗೂ ಸಜನ್ 591 ಅಂಕ ಪಡೆದು ರಾಜ್ಯಕ್ಕೆ 10ನೇ ಸ್ಥಾನ ಗಳಿಸಿದ್ದಾರೆ. ಪರೀಕ್ಷೆ ಬರೆದ ಜ್ಞಾನಸುಧಾದ 79 ವಿದ್ಯಾರ್ಥಿಗಳಲ್ಲಿ 70 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯ ಫಲಿತಾಂಶ ತನ್ನದಾಗಿಸಿಕೊಂಡಿದ್ದಾರೆ.

ಸಾನ್ವಿ ದಿನೇಶ್ – 595, ಚಾನ್ವಿ– 593, ಪ್ರಥುಲ್ ಡಿಸೋಜಾ –592, ರಕ್ಷಿತ್ – 592, ಸಜನ್–591.

ಕಾರ್ಕಳ ಜ್ಞಾನಸುಧಾ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 523 ವಿದ್ಯಾರ್ಥಿಗಳಲ್ಲಿ ವಿಶಿಷ್ಟ ಶ್ರೇಣಿಯಲ್ಲಿ 500 ವಿದ್ಯಾರ್ಥಿಗಳು, ವಾಣಿಜ್ಯವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 52 ವಿದ್ಯಾರ್ಥಿಗಳ್ಲಿ 48 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, ಉಡುಪಿ ಜ್ಞಾನಸುಧಾದ ವಿಜ್ಞಾನ ವಿಭಾಗದಲ್ಲಿ 209 ವಿದ್ಯಾರ್ಥಿಗಳಲ್ಲಿ 182 ವಿದ್ಯಾರ್ಥಿಗಳುವಿಶಿಷ್ಟಶ್ರೇಣಿಯಲ್ಲಿ,27ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಮಣಿಪಾಲ ಜ್ಞಾನಸುಧಾದ ವಿಜ್ಞಾನ ವಿಭಾಗದಲ್ಲಿ 155 ವಿದ್ಯಾರ್ಥಿಗಳಲ್ಲಿ 137 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 18 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 27 ವಿದ್ಯಾರ್ಥಿಗಳಲ್ಲಿ 21 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 6 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡಿದ್ದಾರೆ.

ಕಾರ್ಕಳ ಜ್ಞಾನಸುಧಾ, ಉಡುಪಿ ಜ್ಞಾನಸುಧಾ ಹಾಗೂ ಮಣಿಪಾಲ್ ಜ್ಞಾನಸುಧಾದ ಒಟ್ಟು 966 ವಿದ್ಯಾರ್ಥಿಗಳಲ್ಲಿ 888 (91.93%) ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ದಾಖಲೆಯ ಫಲಿತಾಂಶವನ್ನು ತನ್ನದಾಗಿಸಿಕೊಂಡಿದ್ದು, ವಿಷಯ ವಾರು ಪೂರ್ಣಾಂಕದಲ್ಲಿ ಗಣಿತಶಾಸ್ತ್ರ–292, ಜೀವಶಾಸ್ತ್ರದಲ್ಲಿ–22, ರಸಾಯನಶಾಸ್ತ್ರ–11, ಭೌತಶಾಸ್ತ್ರ–89, ಸಂಖ್ಯಾಶಾಸ್ತ್ರ–42, ಗಣಕಶಾಸ್ತ್ರ–123, ಲೆಕ್ಕಶಾಸ್ತ್ರ–13, ವ್ಯವಹಾರ ಅಧ್ಯಯನದಲ್ಲಿ–19, ಸಂಸ್ಕೃತ–186, ಕನ್ನಡ–4, ಅರ್ಥಶಾಸ್ತ್ರ–4, ಹಿಂದಿ–9 ಸೇರಿದಂತೆ 814 ಉತ್ತರ ಪತ್ರಿಕೆಗಳಿಗೆ ಪೂರ್ಣಾಂಕ ಬಂದಿದೆ.

ಅಧ್ಯಕ್ಷರ ಅಭಿನಂದನೆ

ಈ ಎಲ್ಲಾ ವಿದ್ಯಾರ್ಥಿಗಳ ಸಾಧನೆಗೆ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ ಅಭಿನಂದಿಸಿದ್ದಾರೆ.

ಮಂಗಳೂರು

ಶನಿವಾರ, 11 ಏಪ್ರಿಲ್ 2026

ಸಂಪುಟ 48, ಸಂಚಿಕೆ 23, ಪುಟಗಳು 14+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮಥುರಾ: ದೋಣಿ ಮುಳುಗಿ 10 ಜನ ಸಾವು | ೦೨

ಏರ್ ಡ್ರಾಪ್ ಟೆಸ್ಟ್ ಯಶಸ್ವಿ | ೦೨

ಗ್ಯಾಸ್ ಮಾದರಿ ವಿದ್ಯುತ್ ಜ್ವಾಲೆ ಸ್ಟೌ: ಜೋಶಿ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ಸುಖ ದುಃಖಗಳೆರಡನ್ನು
ಆರಿಯದವನು ಜ್ಞಾನಿ ಎನಿಸಲಾರ.

▲ ಲಾವೋತ್ಸೆ

ಹಸ್ತದಲ್ಲಿ ಸೂರ್ಯ ರೇಖೆ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಲೂರು

• ಪುಟ ೬

ಕಿರುಸುದ್ದಿ

ಸರ್ಕಾರಿ ಕಟ್ಟಡಗಳಿಂದ ಸೇವಾ ತೆರಿಗೆ ವಸೂಲಿ

• **ಬೆಂಗಳೂರು:** ವಿಧಾನಸೌಧ ಸೇರಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಐದು ನಗರ ಪಾಲಿಕೆಗಳಲ್ಲಿನ ಸರ್ಕಾರಿ ಕಟ್ಟಡಗಳಿಂದ ಬಾಕಿ ಇರುವ ಸೇವಾ ತೆರಿಗೆ ವಿಚಾರವಾಗಿ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತರು ಪಾಲಿಕೆಗಳಿಗೆ ಸೂಚನೆ ನೀಡಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿರುವ ಸರ್ಕಾರಿ ಕಟ್ಟಡಗಳಿಂದ ಬಾಕಿ ಇರುವ ಸುಮಾರು 473 ಕೋಟಿ ರೂ. ಸೇವಾ ತೆರಿಗೆ ವಸೂಲಿಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಐದು ಪಾಲಿಕೆಗಳ ಆಯುಕ್ತರಿಗೆ ಜಿಬಿಎ ಮುಖ್ಯ ಆಯುಕ್ತರು ಕಚೇರಿ ಟಿಪ್ಪಣಿ ಹೊರಡಿಸಿದ್ದಾರೆ. ➡ಪುಟ ೪

ಗುಡ್ಡ ಕುಸಿದು ಕಾರ್ಮಿಕರ ಸಾವು; ಪರಿಹಾರ ಘೋಷಣೆ

• **ಶಿವಮೊಗ್ಗ:** ಜಿಲ್ಲೆಯ ಹೊಸನಗರ ತಾಲೂಕಿನ ಹುಲಿಕಲ್ ಘಾಟ್‌ನಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ವೇಳೆ ಗುರುವಾರ ಗುಡ್ಡ ಕುಸಿದು ಮೂವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ಕಾರ್ಮಿಕರನ್ನು ರಾಘವೇಂದ್ರ(37), ರಾಜು(30) ಮತ್ತು ಶಬ್ಬೀರ್(40) ಎಂದು ಗುರುತಿಸಲಾಗಿದೆ. ಮೃತರ ಕುಟುಂಬ ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಚರು, ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ➡ಪುಟ ೪

ಪಾಕಿಸ್ತಾನ ಬೆಂಬಲಿತ 11 ಶಂಕಿತ ಉಗ್ರರ ಬಂಧನ

• ಪುಟ ೦೨

ಅರ್ಜಿದಾರರಿಗೆ 1 ಲಕ್ಷ ರೂ. ದಂಡ ವಿಧಿಸಿದ ಹೈಕೋರ್ಟ್

• ಪುಟ ೫

ಮಹಾಭಿಯೋಗ ಭೀತಿ ನ್ಯಾ.ವರ್ಮಾ ರಾಜೀನಾಮೆ

• ಪುಟ ೦೨

ಸಿಡಬ್ಲ್ಯುಸಿ ಸಭೆ: ಮಹಿಳಾ ಮೀಸಲಾತಿ ಕಾಯ್ದೆ ಬಗ್ಗೆ ಚರ್ಚೆ

• ಪುಟ ೦೨

ಉತ್ತರ ಪ್ರದೇಶ ಅಂತಿಮ ಪಟ್ಟಿಗೆ 84 ಲಕ್ಷ ಮತದಾರರು ಸೇರ್ಪಡೆ

• ಪುಟ ೦೨

ಜೆ.ಡಿ. ವ್ಯಾನ್ಸ್ ಹೊರಟಿದ್ದರೂ ಇರಾನ್ ಸುದ್ದಿಯೇ ಇಲ್ಲ

ಮುಗಿಯದ ರಗಳೆ



• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದ ಉದ್ವಿಗ್ನತೆಗೆ ತೆರೆ ಎಳೆಯುವ ನಿರ್ಣಾಯಕ ರಾಜತಾಂತ್ರಿಕ ಪ್ರಯತ್ನವಾಗಿ ಕಾಣಲಾಗುತ್ತಿರುವ ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಕಿಸ್ತಾನಕ್ಕೆ ಆಗಮಿಸುತ್ತಿದ್ದು, ಇರಾನ್ ಪ್ರತಿನಿಧಿ ಮಂಡಳಿಯ ಆಗಮನದ ಕುರಿತು ಇನ್ನೂ ಅನಿಶ್ಚಿತತೆ ಮುಂದುವರಿದಿದೆ. ಈ ಬೆಳವಣಿಗೆಯ ನಡುವೆ ಇಸ್ಲಾಮಾಬಾದ್‌ನ್ನು ಕಟ್ಟುನಿಟ್ಟಿನ ಭದ್ರತಾ ವಲಯಕ್ಕೆ ಒಳಪಡಿಸಲಾಗಿದೆ. ಎರಡು ವಾರಗಳ ಯುದ್ಧ ವಿರಾಮ ಘೋಷಿಸಿದ್ದ ಪಾಕಿಸ್ತಾನದ ಪ್ರಧಾನಿ ಶಹಭಾಜ್ ಷರೀಫ್, ಅಮೆರಿಕ ಮತ್ತು ಇರಾನ್ ನಡುವಿನ ಮಹತ್ವದ ಮಾತುಕತೆ ಪಾಕಿಸ್ತಾನದ ರಾಜಧಾನಿಯಲ್ಲಿ ನಡೆಯಲಿದೆ ಎಂದು ಪ್ರಕಟಿಸಿದ್ದರು.

ಪಾಕ್‌ಗೆ ತೆರಳುವ ಮುನ್ನ ವ್ಯಾನ್ಸ್ ಕಠಿಣ ಸಂದೇಶ ರವಾನಿಸಿದ್ದು, 'ಇರಾನ್ ಉತ್ತಮ ಸಂಕಲ್ಪದಿಂದ ಬಂದರೆ ಅಮೆರಿಕ ಮಾತುಕತೆಗೆ ಸಿದ್ಧ; ಆದರೆ ನಮ್ಮ ಜತೆ ಆಟವಾಡಲು ಬಯಸಿದರೆ ನಮ್ಮ ಪ್ರತಿಕ್ರಿಯೆ ಗಟ್ಟಿಯಾಗಿರಲಿದೆ' ಎಂದು ಎಚ್ಚರಿಸಿದರು.

ಇದಕ್ಕೆ ಪ್ರತಿಯಾಗಿ, ಲೆಬನಾನ್ ಮೇಲಿನ ಇಸ್ರೇಲ್ ದಾಳಿ ತಕ್ಷಣ ನಿಲ್ಲದಿದ್ದರೆ ಮಾತುಕತೆಯಿಂದ ಹಿಂದೆ ಸರಿಯುವುದಾಗಿ ಇರಾನ್ ಘೋಷಿಸಿದೆ. ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಫ್, 'ಲೆಬನಾನ್ ಯುದ್ಧ ವಿರಾಮ ಮತ್ತು ಇರಾನ್‌ನ ಸ್ಥಗಿತ ಆಸ್ತಿಗಳ ಬಿಡುಗಡೆ ಆಗುವವರೆಗೂ ಮಾತುಕತೆ ಆರಂಭವೇ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ➡ಪುಟ ೪

ಜಗತ್ತಿನ ಕಣ್ಣು ಪಾಕ್ ಮೇಲೆ

ಈ ಮಾತುಕತೆಯ ಫಲಿತಾಂಶ ಪಶ್ಚಿಮ ಏಷ್ಯಾದ ಭದ್ರತೆ, ಜಾಗತಿಕ ತೈಲ ಮಾರುಕಟ್ಟೆ ಹಾಗೂ ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಮೀಕರಣಗಳನ್ನು ನಿರ್ಧರಿಸಬಹುದಾದ ಮಹತ್ವದ್ದಾಗಿರುವುದರಿಂದ ವಿಶ್ವದ ಗಮನ ಈಗ ಇಸ್ಲಾಮಾಬಾದ್ ಕಡೆ ನೆಟ್ಟಿದೆ.

ಡೊನಾಲ್ಡ್ ಟ್ರಂಪ್‌ಗೆ ಟೆನ್ಷನ್ • ಪುಟ ೪



» ಪಶ್ಚಿಮ ಏಷ್ಯಾ ಉದ್ವಿಗ್ನತೆ ತಣಿಸುವ ನಿರ್ಣಾಯಕ ಕ್ಷಣ

» ಲೆಬನಾನ್ ದಾಳಿ ನಿಲ್ಲದಿದ್ದರೆ ಹಿಂದೆ ಸರಿಯುವ ಎಚ್ಚರಿಕೆ ನೀಡಿದ ಇರಾನ್

ಇಸ್ಲಾಮಾಬಾದ್‌ನಲ್ಲಿ 2 ದಿನಗಳ ಲಾಕ್‌ಡೌನ್

ಮಾತುಕತೆ ಹಿನ್ನೆಲೆ ರಾಜಧಾನಿಯಲ್ಲಿ ರೆಡ್ ಅಲರ್ಟ್ ಜಾರಿಗೊಂಡಿದ್ದು, 10,000ಕ್ಕೂ ಅಧಿಕ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ. ಸೇನೆ, ರೇಂಜರ್ಸ್ ಹಾಗೂ ಪೊಲೀಸ್ ಪಡೆಗಳ ಸಹಾಯದಿಂದ ರೆಡ್ ಝೋನ್ ಸಂಪೂರ್ಣ ಸೀಲ್ ಮಾಡಲಾಗಿದೆ. ಕೇವಲ ಅಧಿಕೃತ ಅಧಿಕಾರಿಗಳು ಮತ್ತು ಈ ಸ್ಥಳಗಳಲ್ಲಿ ವಾಸ ಮಾಡುತ್ತಿರುವ ಮಂದಿಗೆ ಪ್ರವೇಶ ನೀಡಲಾಗಿದೆ. ಇಡೀ ಇಸ್ಲಾಮಾಬಾದ್‌ನಲ್ಲಿ ಎರಡು ದಿನಗಳ ಲಾಕ್‌ಡೌನ್ ಘೋಷಿಸಲಾಗಿದೆ.

ನಿತ್ಯ 15 ಶಿಪ್‌ಗೆ ಒಪ್ಪಿಗೆ

ಇಸ್ರೇಲ್‌ನಿಂದ ಲೆಬನಾನ್ ಮೇಲೆ ದಾಳಿ ಮುಂದುವರಿದಿರುವಂತೆಯೇ, ಇರಾನ್ ಹಾರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಿದೆ. ಅಲ್ಲದೆ, ಮುಂದೆಯೂ ದಿನಕ್ಕೆ ಕೇವಲ 15 ಶಿಪ್‌ಗಳಿಗಷ್ಟೇ ಇಲ್ಲಿಂದ ತೆರಳಲು ಅವಕಾಶ ನೀಡುವುದಾಗಿ ಅದು ಹೇಳಿದೆ. ಅಮೆರಿಕ ಮತ್ತು ಇರಾನ್ ದೇಶಗಳು ಕದನ ವಿರಾಮ ಘೋಷಿಸಿದ್ದರೂ, ಇಸ್ರೇಲ್ ಲೆಬನಾನ್ ಮೇಲೆ ದಾಳಿ ಮುಂದುವರಿಸಿತ್ತು. ಸಿಟ್ಟಿಗೆದ್ದಿದ್ದ ಇರಾನ್, ಶಾಂತಿ ಮಾತುಕತೆಗೆ ಬರುವುದಿಲ್ಲ ಎಂಬ ಎಚ್ಚರಿಕೆ ನೀಡಿತ್ತು.

ಮಾತುಕತೆ ವಿಫಲವಾದರೆ ಮತ್ತೊಮ್ಮೆ ದಾಳಿ: ಟ್ರಂಪ್

• **ವಾಷಿಂಗ್ಟನ್/ಇಸ್ಲಾಮಾಬಾದ್:** ಮಾತುಕತೆ ವಿಫಲವಾದರೆ ಹೊಸ ದಾಳಿಗಳನ್ನು ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.ಅಮೆರಿಕದ ಯುದ್ಧನೌಕೆಗಳಿಗೆ ಹೊಸದಾಗಿ ಶಸ್ತ್ರಾಸ್ತ್ರಗಳನ್ನು ತುಂಬಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಪಾಕಿಸ್ತಾನದಲ್ಲಿ ನಡೆಯಲಿರುವ ಮಾತುಕತೆಗಳು ಯಾವುದೇ ಒಪ್ಪಂದಕ್ಕೆ ದಾರಿ ಮಾಡಿಕೊಡದಿದ್ದರೆ, ಈ ಶಸ್ತ್ರಾಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ. 'ನಾವು ಒಂದು ಹೊಸ ಆರಂಭವನ್ನು ಮಾಡುತ್ತಿದ್ದೇವೆ. ನಮ್ಮ ನೌಕೆಗಳನ್ನು ಅತ್ಯುತ್ತಮ ಗುಂಡುಮದ್ದು ಮತ್ತು ಶಸ್ತ್ರಾಸ್ತ್ರಗಳಿಂದ ತುಂಬುತ್ತಿದ್ದೇವೆ. ಹಿಂದಿನದಕ್ಕಿಂತಲೂ ಹೆಚ್ಚು ಶಕ್ತಿಶಾಲಿ ಸಜ್ಜುಗೊಳಿಸಿದ್ದೇವೆ,' ಎಂದು ಅವರು ನ್ಯೂಯಾರ್ಕ್ ಪೋಸ್ಟ್ ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. 'ಒಪ್ಪಂದವಾಗದಿದ್ದರೆ, ನಾವು ಅವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುತ್ತೇವೆ,' ಎಂದು ಅವರು ಎಚ್ಚರಿಸಿದ್ದಾರೆ. ಇದಕ್ಕೂ ಮೊದಲು, ತಮ್ಮ ಸಾಮಾಜಿಕ ಜಾಲತಾಣ ಟ್ರುಥ್ ಸೋಶಿಯಲ್ ನಲ್ಲಿ ಟ್ರಂಪ್ 'ವಿಶ್ವದ ಅತ್ಯಂತ ಶಕ್ತಿಶಾಲಿ ರೀಸೆಟ್' ಎಂಬ ಸಂಕ್ಷಿಪ್ತ ಸಂದೇಶವನ್ನು ಹಂಚಿಕೊಂಡಿದ್ದರು.

ಜೆಡಿಎಸ್‌ಗೆ 25 ವರ್ಷ ಹಿನ್ನೆಲೆ ಕಾರ್ಯಕ್ರಮ

ಬೆಳ್ಳಿ ಹಬ್ಬದ ಜನತಾ ಸಮಾವೇಶ ಇಂದು



• **ಬೆಂಗಳೂರು:** ಜನತಾದಳ(ಜಾತ್ಯತೀತ) ಪಕ್ಷ ಉದಯವಾಗಿ 25 ವರ್ಷವಾದ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ಸಂಭ್ರಮ ಜನತಾ ಸಮಾವೇಶವನ್ನು ಆಯೋಜಿಸಲಾಗಿದ್ದು, ಜೆಡಿಎಸ್ ಘಟಾನುಘಟಿ ನಾಯಕರು ಪಾಲ್ಗೊಳ್ಳಲಿದ್ದಾರೆ.

ಕೆಂಗೇರಿ ಹತ್ತಿರವಿರುವ ಕೊಮ್ಮಘಟ್ಟ ನೈಸ್ ಗ್ರೌಂಡ್‌ನಲ್ಲಿ ಶನಿವಾರ(ಏ.11) ಬೆಳಗ್ಗೆ 10.30ಕ್ಕೆ ನಡೆಯಲಿರುವ ಈ ಬೆಳ್ಳಿ ಹಬ್ಬ ಜನತಾ ಸಮಾವೇಶದಲ್ಲಿ ಲಕ್ಷಾಂತರ ಕಾರ್ಯಕರ್ತರನ್ನು ಸೇರಿಸಲು ಸಿದ್ಧತೆ ನಡೆಸಲಾಗಿದೆ. ವಿಶೇಷವಾಗಿ ಮುಂಬರುವ ಜಿಬಿಎ ಚುನಾವಣೆಗೆ ಎನ್‌ಡಿಎ ಮಿತ್ರ ಪಕ್ಷವಾದ ಜನತಾದಳ ನಿಲುವು ಏನೆಂದು ಕಾರ್ಯಕರ್ತರಿಗೆ ತಿಳಿಸಿ ಈಗಿನಿಂದಲೇ ಪಕ್ಷ ಸಂಘಟನೆ ಮಾಡಿ ತಯಾರಾಗಿ ಎಂಬ ಕರೆ ಕೊಡಲಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಎಂಟು ಕಡೆ ಸಮಾವೇಶಗಳನ್ನು ಆಯೋಜಿಸಲಾಗುತ್ತಿದ್ದು, ಶನಿವಾರ ಬೆಂಗಳೂರಿನಿಂದ ಆರಂಭವಾಗಲಿದೆ. ➡ಪುಟ ೪



ಬೆಂಗಳೂರು ನಗರಕ್ಕೆ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಕೊಡುಗೆ ಅಪಾರವಾಗಿದೆ. ಬೆಂಗಳೂರು ನಗರದಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂದು ಕಾಂಗ್ರೆಸ್‌ನ ಕೆಲವರು ಹೇಳುತ್ತಿದ್ದಾರೆ. ಅವರಿಗೆ ಜಿಬಿಎ ಚುನಾವಣೆ ನಂತರ ಉತ್ತರ ನೀಡುತ್ತೇನೆ.


■ **ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ**

ಸಮಾವೇಶಕ್ಕೆ 1 ಲಕ್ಷಕ್ಕೂ ಅಧಿಕ ಜನ

ಸಮಾವೇಶದ ಪೂರ್ವಸಿದ್ಧತೆ ಪರಿಶೀಲನೆ ನಡೆಸಲು ಶುಕ್ರವಾರ ಸ್ಥಳಕ್ಕೆ ಆಗಮಿಸಿದ್ದ ನಿಖಿಲ್ ಕುಮಾರ್ ಅವರು, ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನತಾ ಸಮಾವೇಶ ಹೊಸ ನಾಯಕತ್ವಕ್ಕೆ ಹೊಸ ಹುರುಪು ತುಂಬಲಿದೆ. 1 ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ವಿಶ್ವಾಸವಿದೆ. ದೇವೇಗೌಡರು ಸಮಾವೇಶ ಉದ್ಘಾಟನೆ ಮಾಡಲಿದ್ದಾರೆ ಎಂದು ತಿಳಿಸಿದರು.ಜಿಬಿಎ ಚುನಾವಣೆ ಹಿನ್ನೆಲೆ ಪಕ್ಷವನ್ನು ಸಂಘಟಿತಗೊಳಿಸುವ ಕಾರ್ಯ ನಡೆಯುತ್ತಿದೆ. ಮಾಜಿ ಪ್ರಧಾನಮಂತ್ರಿ ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರು ಸಿಎಂ ಆಗಿದ್ದ ಅವಧಿಯಲ್ಲಿ ಬೆಂಗಳೂರಿಗೆ ನೀಡಿದ ಕೊಡುಗೆಗಳನ್ನು ಜನರಿಗೆ ತಿಳಿಸಲಾಗುವುದು ಎಂದು ತಿಳಿಸಿದ್ದಾರೆ. ಜಿಬಿಎ ಚುನಾವಣೆಯಲ್ಲೂ ಹೆಚ್ಚಿನ ಸದಸ್ಯರನ್ನು ಹೊಂದುವ ಗುರಿಯೊಂದಿಗೆ ಪಕ್ಷ ಸಂಘಟನೆ ಬಲಪಡಿಸಲು ಈ ಸಮಾವೇಶಗಳು ನೆರವಾಗಲಿವೆ. ಬೆಂಗಳೂರಿನಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂಬ ಟೀಕೆಗಳಿಗೆ ಉತ್ತರವಾಗಿ, ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯರಾದ ಶರವಣ, ಟಿ.ಎನ್. ಜವರಾಯಿಗೌಡ, ಮಾಜಿ ಶಾಸಕರಾದ ವೈ.ಎಸ್.ವಿ.ದತ್ತ, ಕೃಷ್ಣಾರೆಡ್ಡಿ, ಮುಖಂಡರಾದ ಚೇತನ್ ಗೌಡ, ಎಸ್. ಕೇಶವ ಮೂರ್ತಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪತ್ರಕರ್ತ, ಲೇಖಕ, ಚಿಂತಕ, ವಿಮರ್ಶಕ, ಪರಿಸರ ಹೋರಾಟಗಾರ

ನಾಡೋಜ ಡಾ.ರಾಮಸ್ವಾಮಿ ನಿಧನ



• **ಬೆಂಗಳೂರು:** ಪತ್ರಕರ್ತ, ಲೇಖಕ, ಚಿಂತಕ, ವಿಮರ್ಶಕ, ಪರಿಸರ ಹೋರಾಟಗಾರ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರು ಶುಕ್ರವಾರ ಬೆಳಗ್ಗೆ ಬೆಂಗಳೂರಿನ ಶಂಕಪುರಂನ ರಂಗರಾವ್ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನರಾದರು. ಕೆಲ ಸಮಯದಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 88 ವರ್ಷ ವಯಸ್ಸಾಗಿತ್ತು. ಸೊಂಡೆಕೊಪ್ಪ ರಾಮಚಂದ್ರಶಾಸ್ತ್ರಿ ರಾಮಸ್ವಾಮಿ ಅವರು 1937ರ ಅಕ್ಟೋಬರ್ 29ರಂದು ಬೆಂಗಳೂರಿನಲ್ಲಿ ಜನಿಸಿದರು. 1950ರ ದಶಕದಲ್ಲಿ ಪತ್ರಿಕೋದ್ಯಮ ಪ್ರವೇಶಿಸಿದ ಅವರು, 1972ರಿಂದ 79ರವರೆಗೆ ಸುಧಾ ವಾರಪತ್ರಿಕೆಯ ಮುಖ್ಯ ಉಪಸಂಪಾದಕರಾಗಿ ಸೇವೆ ಸಲ್ಲಿಸಿದ್ದರು. ➡ಪುಟ ೪




ಸಾರಸ್ವತ ಲೋಕದ ಧೀಮಂತ ಎಸ್.ಆರ್. ರಾಮಸ್ವಾಮಿ • ಪುಟ ೧೦

ಪ.ಬಂಗಾಳ: ಏನಾಸಂ ಸೇರಿ 15 ಅಂಶಗಳ ಬಿಜೆಪಿ ಪ್ರಣಾಳಿಕೆ

ಮಹಿಳೆಯರಿಗೆ 3000 ರೂ. ನೆರವು

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಅಧಿಕಾರಕ್ಕೆ ಬಂದಲ್ಲಿ, ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಜಾರಿ, ಅಕ್ರಮ ನುಸುಳುವಿಕೆಗೆ ತಡೆ, ಯುವವರ್ಗ ಮತ್ತು ಮಹಿಳೆಯರು, ರೈತರು, ರಾಜ್ಯ ಸರ್ಕಾರಿ ನೌಕರರಿಗೆ ಕಲ್ಯಾಣ ಪ್ಯಾಕೇಜ್‌ಗಳ ಭರವಸೆ ಸೇರಿದಂತೆ 15 ಅಂಶಗಳ ಮಹತ್ವದ ಮೆಗಾ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆಗೊಳಿಸಿದೆ. ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಜನತೆಗೆ ತಿಂಗಳಿಗೆ ತಲಾ 3000 ರೂ. ಆರ್ಥಿಕ ನೆರವಿನ ಭರವಸೆ ನೀಡಿದೆ. ➡ಪುಟ ೪



ರೈತರಿಗೆ ವಾರ್ಷಿಕ ₹9 ಸಾವಿರ • ಪುಟ ೪

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಗಾಗಿ ₹15000

ಮಹಿಳೆಯರು, ಯುವಶಕ್ತಿ, ರೈತರಿಗಾಗಿ ಹಲವು ಕಲ್ಯಾಣ ಯೋಜನೆಗಳನ್ನು ಪ್ರಕಟಿಸಿದ ಬಿಜೆಪಿಯು, ಪಕ್ಷ ಅಧಿಕಾರಕ್ಕೆ ಬಂದಲ್ಲಿ ಮಹಿಳೆಯರಿಗೆ ತಿಂಗಳಿಗೆ 3000 ರೂ., ಹಾಗೆಯೇ ನಿರುದ್ಯೋಗಿ ಯುವಜನತೆಗೆ ತಿಂಗಳಿಗೆ 3000 ರೂ. ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆಗಾಗಿ 15000 ರೂ.ಗಳ ಭರವಸೆ ನೀಡಿದೆ. ➡ಪುಟ ೪

ಶ್ರೀನಂದಾ ಶವವಾಗಿ ಪತ್ತೆ



ಮಾಣಿಕ್ಯಧಾರ ಜಲಪಾತ ಬಳಿ ನಾಪತ್ತೆಯಾಗಿದ್ದ ಬಾಲಕಿ

• **ಚಿಕ್ಕಮಗಳೂರು:** ಕಳೆದ ನಾಲ್ಕು ದಿನಗಳ ಹಿಂದೆ ಚಂದ್ರದ್ರೋಣ ಪರ್ವತದ ಮಾಣಿಕ್ಯಧಾರ ಜಲಪಾತದ ಬಳಿ ನಿಗೂಢವಾಗಿ ನಾಪತ್ತೆಯಾಗಿದ್ದ ಕೇರಳ ಮೂಲದ ಬಾಲಕಿ ಶ್ರೀನಂದಾ ಶುಕ್ರವಾರ ಶವವಾಗಿ ಪತ್ತೆಯಾಗಿದ್ದಾಳೆ. ಕುಟುಂಬದವರೊಂದಿಗೆ ಪ್ರವಾಸಕ್ಕೆ ಬಂದಾಕೆ ದಿಢೀರನೆ ಕಣ್ಮರೆಯಾಗಿದ್ದ ಹಿನ್ನೆಲೆಯಲ್ಲಿ ಪ್ರಕರಣ ಹತ್ತು ಹಲವು ಸಂಶಯಗಳನ್ನು ಹುಟ್ಟುಹಾಕಿತ್ತು. ಇದೀಗ ಬಾಲಕಿ ಮೃತದೇಹ ಪತ್ತೆಯಾಗುವ ಮೂಲಕ ಶೋಧ ಕಾರ್ಯಕ್ಕೆ ತೆರೆಬಿದ್ದಿದೆ ಆದರೂ ಆಕೆಯ ಸಾವಿನ ಬಗ್ಗೆ ಹಲವು ಪ್ರಶ್ನೆಗಳು ಹಾಗೆಯೇ ಉಳಿದಿರುವ ಕಾರಣ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದಾರೆ. ➡ಪುಟ ೪



ಜ್ಯೋತಿರಾವ್ ಫುಲೆ: ಭಾರತಕ್ಕೆ ದಾರಿ ದೀಪವಾಗಿರುವ ಚೇತನ

▶ **ನರೇಂದ್ರ ಮೋದಿ, ಪ್ರಧಾನಿ**

ಇಂದು, ಏಪ್ರಿಲ್ 11, ನಮ್ಮೆಲ್ಲರಿಗೂ ಅತ್ಯಂತ ವಿಶೇಷವಾದ ದಿನ. ಇದು ಭಾರತದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರು ಮತ್ತು ತಲೆಮಾರುಗಳಿಗೆ ಮಾರ್ಗದರ್ಶಕರಾಗಿರುವ ಮಹಾತ್ಮ ಜ್ಯೋತಿರಾವ್ ಫುಲೆ ಅವರ ಜನ್ಮದಿನೋತ್ಸವ. ಪ್ರಸಕ್ತ ವರ್ಷ ಈ ಸಂದರ್ಭವು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ, ಏಕೆಂದರೆ ಇದು ಅವರ 200ನೇ ಜಯಂತಿ ಆಚರಣೆಯ ಆರಂಭವನ್ನು ಸೂಚಿಸುತ್ತದೆ.

ಮಹಾತ್ಮ ಫುಲೆ ಅವರು ಕೇವಲ ಒಬ್ಬ ಮಹಾನ್ ಸುಧಾರಕರಷ್ಟೇ ಅಲ್ಲ, ಅವರ ಜೀವನವು ನೈತಿಕ ಧೈರ್ಯ, ನಿರಂತರ ಅನ್ವೇಷಣೆ ಮತ್ತು ಸಾಮಾಜಿಕ ಒಳಿತಿಗಾಗಿ ಅಚಲವಾದ ಬದ್ಧತೆಯಿಂದ ಕೂಡಿತ್ತು. ತಾವು ಕಟ್ಟಿದ ಸಂಸ್ಥೆಗಳು ಮತ್ತು ಮುನ್ನಡೆಸಿದ ಚಳವಳಿಗಳಿಗಾಗಿ ಮಹಾತ್ಮ ಫುಲೆ ಅವರು ಸ್ಮರಣೀಯರು. ಅದೇ ಸಮಯದಲ್ಲಿ, ನಮ್ಮ ನಾಗರಿಕತೆಯ ಪಯಣಕ್ಕೆ ಅವರ ದೊಡ್ಡ ಕೊಡುಗೆಯೆಂದರೆ ಅವರು ಜನರಲ್ಲಿ ಮೂಡಿಸಿದ ಭರವಸೆ, ತುಂಬಿದ ಆತ್ಮವಿಶ್ವಾಸ ಮತ್ತು ಅವರ ಪ್ರಖರ ಆಲೋಚನೆಗಳು ಇಂದಿಗೂ ದೇಶದ ಕೋಟ್ಯಂತರ ಜನರಿಗೆ ನೀಡುತ್ತಿರುವ ಅತೀವ ಶಕ್ತಿಯಾಗಿದೆ.

1827ರಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಹಾತ್ಮ ಫುಲೆ ಅವರು ಸಾಮಾನ್ಯ ಹಿನ್ನೆಲೆಯಿಂದ ಬಂದ ವರು. ಆದರೆ ಅವರ ಆರಂಭಿಕ ಸಂಕಷ್ಟಗಳು ಅವರ ಕಲಿಕೆ, ಧೈರ್ಯ ಅಥವಾ ಸಮಾಜದ ಬಗೆಗಿನ ಬದ್ಧತೆಗೆ ಎಂದಿಗೂ ಅಡ್ಡಿಯಾಗಲಿಲ್ಲ. ಸವಾಲುಗಳು ಏನೇ ಇರಲಿ, ಕಷ್ಟಪಟ್ಟು ಕೆಲಸ ಮಾಡಬೇಕು, ಜ್ಞಾನವನ್ನು ಪಡೆಯಬೇಕು ಮತ್ತು ಸುಮ್ಮನೆ ಕುಳಿತುಕೊಳ್ಳುವ ಬದಲಿಗೆ ಆ ಸವಾಲುಗಳನ್ನು ಎದುರಿಸಬೇಕು ಎಂಬುದು ಅವರ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದ ಗುಣವಾಗಿತ್ತು. ➡ಪುಟ ೬



ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,48,000(2,42,000)	ಅಪರಂಜಿ ಚಿನ್ನ 15,170(15,010)	ಆಭರಣ ಚಿನ್ನ: 14,025(13,885)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 77,562(2946↑)	ಎನ್‌ಎಸ್‌ಇ 23,997(873↑)	$1=₹92.35	

ಎರಡು ಹೈಸ್ಪೀಡ್ ರೈಲು ಮಾರ್ಗ

» ಚೆನ್ನೈ-ಮೈಸೂರು, ಚೆನ್ನೈ-ಬೆಂಗಳೂರು ಆಗಿ ಬದಲು

» ಬೆಂಗಳೂರು-ಹೈದರಾಬಾದ್ ನಡುವೆ ಹೊಸ ಮಾರ್ಗ



• **ಹೊಸದಿಲ್ಲಿ:** ಕೇಂದ್ರ ಸರ್ಕಾರ ಘೋಷಿಸಿರುವ ಹೊಸ ಹೈ-ಸ್ಪೀಡ್ ರೈಲು ಕಾರಿಡಾರ್ ಯೋಜನೆಗಳಲ್ಲಿ ಕರ್ನಾಟಕಕ್ಕೆ ಮಹತ್ವದ ಎರಡು ವೇಗ ರೈಲು ಮಾರ್ಗಗಳು ಲಭಿಸಿರುವುದು ವಿಶೇಷವಾಗಿದ್ದು, ಹೈದರಾಬಾದ್-ಬೆಂಗಳೂರು ಹಾಗೂ ಚೆನ್ನೈ-ಬೆಂಗಳೂರು ಕಾರಿಡಾರ್‌ಗಳಿಗೆ ಆದ್ಯತೆ ನೀಡಲಾಗಿದೆ.


ಹಿಂದಿನ ವಿಸ್ತೃತ ಯೋಜನಾ ವರದಿಗಳ (ಡಿಪಿಆರ್) ಆಧಾರದ ಮೇಲೆ ರೂಪುಗೊಂಡಿದ್ದ ಏಳು ಹೈ-ಸ್ಪೀಡ್ ಕಾರಿಡಾರ್‌ಗಳ ಪಟ್ಟಿಯನ್ನು ಕೇಂದ್ರ ಸರ್ಕಾರ ಮರುಪರಿಶೀಲನೆ ಮಾಡಿ, ಹಲವು ಮಾರ್ಗಗಳಲ್ಲಿ ಬದಲಾವಣೆ ಮಾಡಿದ ಬಳಿಕ ಅಂತಿಮ ರೂಪುರೇಷೆ ಪ್ರಕಟಿಸಿದೆ.

ಈ ಪ್ರಕ್ರಿಯೆಯಲ್ಲಿ ದೆಹಲಿ-ಅಹಮದಾಬಾದ್ ಮಾರ್ಗದ ಬದಲು ಹೈದರಾಬಾದ್-ಬೆಂಗಳೂರು ಕಾರಿಡಾರ್ ಸೇರಿಸಲ್ಪಟ್ಟರೆ, ಚೆನ್ನೈ-ಮೈಸೂರು ಮಾರ್ಗವನ್ನು ಪರಿಷ್ಕರಿಸಿ ಚೆನ್ನೈ-ಬೆಂಗಳೂರು ಕಾರಿಡಾರ್ ಆಗಿ ರೂಪಿಸಲಾಗಿದೆ. ಇದರಿಂದ ದಕ್ಷಿಣ ಭಾರತದ ಪ್ರಮುಖ ಐಟಿ ಮತ್ತು ಕೈಗಾರಿಕಾ ಕೇಂದ್ರವಾದ ಬೆಂಗಳೂರಿಗೆ ಎರಡು ವೇಗ ರೈಲು ಸಂಪರ್ಕ ಸಿಗುವಂತಾಗಿದೆ.

ರೈಲ್ವೆ ವಲಯದ ತಜ್ಞರ ಪ್ರಕಾರ, ಈ ಎರಡೂ ಕಾರಿಡಾರ್‌ಗಳು ಜಾರಿಯಾದರೆ ಬೆಂಗಳೂರು-ಹೈದರಾಬಾದ್ ಹಾಗೂ ಬೆಂಗಳೂರು-ಚೆನ್ನೈ ನಡುವಿನ ಪ್ರಯಾಣ ಸಮಯದಲ್ಲಿ ಭಾರೀ ಇಳಿಕೆ ಸಂಭವಿಸುವುದರ ಜೊತೆಗೆ, ಕೈಗಾರಿಕೆ, ಐಟಿ, ಲಾಜಿಸ್ಟಿಕ್ಸ್ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ.

ಇದಲ್ಲದೆ ಮೂಲ ಯೋಜನೆಗಳಲ್ಲಿ ಪ್ರಸ್ತಾವವಾಗಿದ್ದ ಹಲವಾರು ಮಾರ್ಗಗಳಿಗೆ ತಿದ್ದುಪಡಿ ಮಾಡಲಾಗಿದೆ. ದಿಲ್ಲಿ-ವಾರಾಣಸಿ ಕಾರಿಡಾರ್ ಮಾತ್ರ ಮೂಲ ರೂಪದಲ್ಲೇ ಉಳಿದಿದ್ದು, ಉಳಿದ ಆರು ಮಾರ್ಗಗಳಲ್ಲಿ ಬದಲಾವಣೆ ಅಥವಾ ಪರ್ಯಾಯ ಮಾರ್ಗಗಳನ್ನು ಕೇಂದ್ರ ಸರ್ಕಾರ ಅಂತಿಮಗೊಳಿಸಿದೆ.

ರಾಮ ಬಾಣ



ಕಣ್ಣೀರಿಟ್ಟ ಉಪಸಭಾಪತಿ ರುದ್ರಪ್ಪ ಲಮಾಣಿ

• **ಹಾವೇರಿ:** ನಗರಸಭೆಯಿಂದ ನೀರಿನ ಟ್ಯಾಂಕ್ ನಿರ್ಮಾಣಕ್ಕೂ ಅರಣ್ಯ ಇಲಾಖೆ ಅಧಿಕಾರಿಗಳು ಅಡ್ಡಿ ಮಾಡುತ್ತಿದ್ದಾರೆ. ಸಣ್ಣ ಗಿಡ ಕಡಿದದ್ದಕ್ಕೆ ಕೇಸ್ ಹಾಕಿದ್ದಾರೆ. ಖಂಡೇರಾಯನಹಳ್ಳಿಯಲ್ಲಿ ನನ್ನದೂ ಸೇರಿದಂತೆ ಹಲವು ವರ್ಷಗಳಿಂದ ವಾಸವಿರುವ ಜಾಗವನ್ನು ತೆರವು ಮಾಡಲು ಅರಣ್ಯ ಅಧಿಕಾರಿಗಳು ಮುಂದಾಗಿದ್ದಾರೆ. ಇವರ ಕಿರುಕುಳದಿಂದ ನನಗೇ ಇಷ್ಟು ಸಮಸ್ಯೆ ಆಗಿರುವಾಗ ಜನಸಾಮಾನ್ಯರ ಗತಿಯೇನು ಎಂದು ವಿಧಾನಸಭೆ ಉಪಾಧ್ಯಕ್ಷರೂ ಆಗಿರುವ ಶಾಸಕ ರುದ್ರಪ್ಪ ಲಮಾಣಿ ಕಣ್ಣೀರಿಟ್ಟು ಕೆಡಿಪಿ ಸಭೆಯಲ್ಲಿ ಅಸಹಾಯಕತೆ ಪ್ರದರ್ಶಿಸಿ ಕಣ್ಣೀರು ಹಾಕಿದರು. ಆಗ ಮಧ್ಯ ಪ್ರವೇಶಿಸಿದ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ, ಕುಡಿಯುವ ನೀರು ಸೇರಿದಂತೆ ಜನರಿಗೆ ಅಗತ್ಯವಿರುವ ಕೆಲಸ ಮಾಡುತ್ತಿದ್ದಾಗ ಕೇಸ್ ಹಾಕಿದರೆ ಹೇಗೆ? ಸುಖಾಸುಮ್ಮನೆ ಅಡ್ಡಿಪಡಿಸಬಾರದು ಎಂದು ಅರಣ್ಯ ಇಲಾಖೆ ಸಿಬ್ಬಂದಿಗೆ ತಾಕೀತು ಮಾಡಿದರು. ರಸ್ತೆ ಬದಿ ಗಿಡ ನೆಡುವ ಯೋಜನೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ನೀಡುವಂತೆ ಡಿಎಫ್‌ಒಗೆ ಕೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ 0 ಬಿಜೆಪಿ ಆರೆಸ್ಸೆಸ್ಸನ್ನು ವಿಷದ ಸರ್ಪ ಎನ್ನುವ ಹಾಗೆ ಖರ್ಗೆಯವರು ಮಂಗಳೂರಿನಲ್ಲಿ ಕುಕ್ಕರ್ ಸ್ಫೋಟ ಮಾಡಿದವರು ಯಾರು ಎಂಬುದನ್ನು ತಿಳಿಸಲಿ, ಇವರಿಗೆ ನಕ್ಸಲರು, ಭಯೋತ್ಪಾದಕರು ದೇವದೂತರಂತೆ ಕಾಣಿಸುತ್ತಾರೆ -ಆರ್.ಅಶೋಕ್

-ನಾವೆಲ್ಲ ಭಕ್ತಿಯಿಂದ ಪೂಜಿಸುವ ನಾಗರ ಹಾವಿಗೆ ವಿಷವಿದೆ ನಿಜ, ಅದಿಲ್ಲದೆ ಹೋಗಿದ್ದಲ್ಲಿ ಅದನ್ನು ಬದುಕಲು ದುರ್ಜನರು ಬಿಡುತ್ತಿರಲಿಲ್ಲ, ಆದರೆ ಅದು ಸುಮ್ಮನಿರುವ ಸಜ್ಜನರ ತಂಟೆಗೆ ಬರುವುದಿಲ್ಲ, ತೊಂದರೆ ಮಾಡುವ ದುರ್ಜನರ ಮೇಲೆ ವಿಷವನ್ನು ಕಾರದೆ ಬಿಡುವುದಿಲ್ಲ!

ದಿನ ಭವಿಷ್ಯ

ಮೇಷ ವೃತ್ತಿಯಲ್ಲೂ ಖಾಸಗಿಯಾಗಿಯೂ ನಿಮ್ಮ ಹಿತಾಸಕ್ತಿಗೆ ಧಕ್ಕೆ ಒದಗಲಿದೆ. ತಾಳ್ಮೆಯಿಂದ ಪರಿಸ್ಥಿತಿ ನಿಭಾಯಿಸಿ. ದುಡುಕಿನ ವರ್ತನೆ ತೋರದಿರಿ.

ವೃಷಭ ವೈಯಕ್ತಿಕವಾಗಿ ಅನಿರೀಕ್ಷಿತ ಸನ್ನಿವೇಶ. ವೃತ್ತಿ ಸಂಬಂಧಿತ ಪ್ರಯಾಣ ಸುಖಕರ, ಉದ್ದೇಶ ಸಾಧನೆ. ಆಪ್ತರೊಬ್ಬರು ಮುನಿಸು ತೋರಿಯಾರು.

ಮಿಥುನ ಕೆಲ ವಿಷಯದಲ್ಲಿ ಅತಿರೇಕದ ಉತ್ಸುಕತೆ ತೋರದಿರಿ. ಬಳಿಕ ನಿರಾಶೆ ಆದೀತು. ಆಹಾರದಲ್ಲಿ ಹಿತಮಿತ ಸಾಧಿಸಿ. ಧನವ್ಯಯ ನಿಯಂತ್ರಣ.

ಕಟಕ ಅಹಿತಕರ ಭಾವ. ಮಾಡುವ ಕೆಲಸದಲ್ಲಿ ಅನಿಶ್ಚಿತತೆ. ಅಧಿಕ ಕೆಲಸದ ಒತ್ತಡ. ಆತುರ ತೋರದೆ ಸಮಾಧಾನದಿಂದ ವ್ಯವಹರಿಸಿ.

ಸಿಂಹ ನಿಮ್ಮ ಕಾರ್ಯಶೈಲಿಗೆ ಇನ್ನಷ್ಟು ಹೊಸತನ ಅಳವಡಿಸಿ. ಕೆಲಸದಲ್ಲಿ ಸದಾ ಧಾವಂತ ತೋರುವ ನೀವು ಸ್ವಲ್ಪ ನಿಧಾನಗತಿ ತೋರುವುದು ಒಳಿತು.

ಕನ್ಯಾ ನಿರ್ವಹಣೆಯಿಂದ ಇತರರನ್ನು ಮೆಚ್ಚಿಸುವ ಪ್ರಯತ್ನ ಫಲ ನೀಡಲಿದೆ. ಆದರೆ ವಿನಯ ಬಿಡದಿರಿ. ಅಹಂಭಾವದ ವರ್ತನೆ ಟೀಕೆಗೆ ಗುರಿಯಾದೀತು.

ತುಲಾ ವೃತ್ತಿಯಲ್ಲಿ ನಿಮಗೆ ಪೂರಕ ಬೆಳವಣಿಗೆ. ಬುದ್ಧಿವಂತಿಕೆಯಿಂದ ಹಣ ವ್ಯಯಿಸಿರಿ. ಆತ್ಮೀಯರ ಸಂಗದಲ್ಲಿ ಹರುಷ. ಖರ್ಚು ನಿಯಂತ್ರಣ.

ವೃಶ್ಚಿಕ ಹೆಚ್ಚು ಹೊಣೆ. ನೆರವು ಯಾಚಿಸಲು ಹಿಂಜರಿಕೆ ಬೇಡ. ಅವಿವಾಹಿತರಿಗೆ ಸಂಗಾತಿ ಹುಡುಕಾಟ ಕಷ್ಟವೆನಿಸಲಿದೆ. ದೇವರ ಪ್ರಾರ್ಥನೆ ಮಾಡಿರಿ.

ಧನು ಅಧಿಕ ಕೆಲಸದ ನಡುವೆಯೂ ಸಂತೋಷ ಆಚರಣೆಯ ಅವಕಾಶ. ಪ್ರೀತಿಯಲ್ಲಿ ಯಶಸ್ಸು. ಕೌಟುಂಬಿಕ ಸಾಮರಸ್ಯ. ಆಪ್ತರಿಂದ ಧನಪ್ರಾಪ್ತಿ.

ಮಕರ ಆಪ್ತರ ಸಾಮಿಪ್ಯದಲ್ಲಿ ಖುಷಿ ಕಾಣುವಿರಿ. ಆದರೆ ಅವರ ಮೇಲೆ ಅಧಿಪತ್ಯ ಸಾಧಿಸುವ ಪ್ರಯತ್ನ ಬೇಡ. ಸೌಹಾರ್ದದಿಂದ ಕಾರ್ಯ ಸಾಧಿಸಿರಿ.

ಕುಂಭ ಆತ್ಮವಿಶ್ವಾಸ ಮತ್ತು ಸಮರ್ಥ ನಿರ್ವಹಣೆ ನಿಮ್ಮ ಕುರುಹಾಗಲಿದೆ. ಅನ್ಯರ ದೌರ್ಬಲ್ಯವನ್ನು ನಿಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುವಿರಿ.

ಮೀನ ಏರುಪೇರು ಇಲ್ಲದ ಸಾಧಾರಣ ದಿನ. ಹಾಗಾಗಿ ದೊಡ್ಡ ಕಾರ್ಯಕ್ಕೆ ಕೈ ಹಾಕದಿರಿ. ವಿವಾಹಿತರಿಗೆ ಶುಭ ಬೆಳವಣಿಗೆ. ಆರ್ಥಿಕ ಪ್ರಗತಿಗೆ ಅಡ್ಡಿ ತೋರಲಿದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 8,2,5.0

ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಕಿವಿಮಾತು

ಬಲವರ್ಧನೆಗೆ ಸಂಕಲ್ಪ ಮಾಡಿ



• **ವಿಜಯನಗರ:** ರಾಷ್ಟ್ರವಾದದ ನೆಲೆಗಟ್ಟಿನಲ್ಲಿ ಸ್ಥಾಪನೆಗೊಂಡಿರುವ ರಾಷ್ಟ್ರೀಯ ಸಹಕಾರ ಭಾರತಿ ಇನ್ನೆರಡು ವರ್ಷಗಳಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಿದೆ. ಅದಕ್ಕೂ ಮುನ್ನವೇ ಸಹಕಾರ ಭಾರತಿಯನ್ನು ಮತ್ತಷ್ಟು ವಿಸ್ತರಣೆಯೊಂದಿಗೆ ಬಲವರ್ಧನೆಗೆ ಎಲ್ಲರೂ ಪಣತೊಡಬೇಕು ಎಂದು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಹೇಳಿದರು.

ಹೊಸಪೇಟೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಹಕಾರ ಭಾರತಿಯ ರಾಜ್ಯ ಕಾರ್ಯಕಾರಿ ಹಾಗೂ ಪ್ರಮುಖ ಸಹಕಾರಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವೆಯಲ್ಲಿರುವ ಪ್ರಮುಖ ಪ್ರಕೋಷ್ಠಗಳಲ್ಲಿ ಸಹಕಾರ ಭಾರತಿಯೂ ಒಂದು. ಆದರೆ, ಇದು ಆರಂಭಗೊಂಡಾಗ ಆರ್‌ಎಸ್‌ಎಸ್‌ನ ಶೇ.30ರಷ್ಟು ಜನರು ಸಹಕಾರ ರಂಗದಲ್ಲಿ ತೊಡಗಿಸಿಕೊಂಡಿದ್ದರು. ಆದರೆ, ಈಗ ಎಲ್ಲೆಡೆ ಸಹಕಾರ ಭಾರತಿ ಸಹಯೋಗದಲ್ಲಿ ಎಲ್ಲೆಡೆ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಸಹಕಾರ ಭಾರತಿ ಸಂಸ್ಥೆಯೂ ದೇಶಾದ್ಯಂತ ವಿಸ್ತಾರಗೊಂಡಿದೆ. ಸಹಕಾರ ಭಾರತಿ ಪರಿಶ್ರಮದಿಂದಾಗಿ ಕೇಂದ್ರ ಸರ್ಕಾರ ಪ್ರತ್ಯೇಕವಾದ ಸಹಕಾರ ಸಚಿವಾಲಯವನ್ನೂ ಸ್ಥಾಪಿಸಿ, ಸಚಿವರನ್ನೂ ನೇಮಿಸಿತು. ಪರಿಣಾಮ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ಸಾಧ್ಯವಾಗುತ್ತಿದೆ. ಇದು ನಮ್ಮ ಸಂಸ್ಥೆಯ ಹೆಮ್ಮೆ ಎಂದು ತಿಳಿಸಿದರು.

ನಮ್ಮ ಸಂಸ್ಕೃತಿ, ಇತಿಹಾಸ, ಪರಂಪರೆಯ ಬಗ್ಗೆ ನಾವು ಮಾತನಾಡುವುದನ್ನು ಬಿಡಬಾರದು. ಇಂತಹ ಚರ್ಚೆ, ಸಂವಾದಗಳೇ ನಮ್ಮ ಸಂಸ್ಕೃತಿಯನ್ನು ಉಳಿಸಲು ಇರುವ ದಾರಿ. ಸಂಸ್ಕೃತಿ ಗಟ್ಟಿಯಾದಷ್ಟೂ ಸಹಕಾರ ಚಳವಳಿಯೂ ಪ್ರಬಲವಾಗುತ್ತದೆ. ಸಹಕಾರ ಕ್ಷೇತ್ರದಲ್ಲಿರುವ ಅನೇಕ ಲೋಪದೋಷಗಳು, ಸಮಸ್ಯೆ, ಸವಾಲುಗಳನ್ನು ಮೆಟ್ಟಿನಿಲ್ಲುವ ಜೊತೆಗೆ ದೇಶದ ಅಭಿವೃದ್ಧಿಗೆ ತನ್ನದೇ ಆದ ಯೋಗದಾನ ನೀಡಬೇಕು. ಅದಕ್ಕಾಗಿ ಸಂಸ್ಥೆ 50 ವರ್ಷ ಪೂರ್ಣಗೊಳಿಸುವ ವೇಳೆಗೆ ಸಂಘಟನೆಯನ್ನು ಬಲಪಡಿಸಬೇಕು. ವಿಸ್ತರಿಸುವ ಜೊತೆಗೆ ಬಿನಾ ಸಂಸ್ಕಾರ ನಹಿ ಸಹಕಾರ್, ಬಿನಾ ಸಹಕಾರ್ ನಹೀ ಉದ್ಧಾರ್ ಎಂಬ ಸಂಕಲ್ಪವನ್ನು ಸಾಕಾರಗೊಳಿಸಬೇಕು ಎಂದು ಸಲಹೆ ನೀಡಿದರು.

ಕೊಟ್ಟೂರು ಸಂಸ್ಥಾನ ಮಠದ ಜ.ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಸಹಕಾರ ಎಂಬುದೇ ಮಾನವ ಬದುಕಿನ ಮೂಲ ತಿರುಳು. ಸಹಕಾರವಿಲ್ಲದೇ ಜೀವನದಲ್ಲಿ ಯಾರೂ, ಏನನ್ನೂ ಸಾಧಿಸಲಾರರು. ಪರಸ್ಪರ ಸಹಕಾರದೊಂದಿಗೆ ಎಲ್ಲರೂ ದೇಶ ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ವೇದಿಕೆ ಮೇಲೆ ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೆಂಡೆ, ಸಹಕಾರ ಭಾರತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭುದೇವ ಚೌರಾಸಿಯಾ, ರಾಜ್ಯ ಪ್ರಧಾನ ಕಾರ್ಯದರ್ಶಿ ನರಸಿಂಹ ಕಾಮತ್, ಕಾರ್ಯಕಾರಿಣಿ ಸಮಿತಿ ಸಂಚಾಲಕ ಜಿ.ನಂಜನಗೌಡ, ರಾಜ್ಯ ಮಹಿಳಾ ಪ್ರಮುಖ್ ವಿದ್ಯಾಪೈ, ವಿಜಯನಗರ ಜಿಲ್ಲಾ ಅಧ್ಯಕ್ಷ ಕರಿಬಸವರಾಜ್ ಬದಾಮಿ ಉಪಸ್ಥಿತರಿದ್ದರು.

ಆರು ಜಿಲ್ಲೆಗಳಲ್ಲಿ ಮಹಿಳಾ ಸಮಿತಿ

ಈ ಅವಧಿಯಲ್ಲಿ ಎರಡನೇ ಬಾರಿಗೆ ರಾಜ್ಯ ಕಾರ್ಯ ಕಾರಿ ಸಮಿತಿ ಸಭೆ ನಡೆಯುತ್ತಿದೆ. ಸಹಕಾರ ಭಾರತಿಯನ್ನು ಬೇರು ಮಟ್ಟದಿಂದ ಬಲಪಡಿಸಲು ಈಗಾಗಲೇ ರಾಜ್ಯದ 24 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಜಿಲ್ಲಾ ಮಟ್ಟದ ಅಭ್ಯಾಸ ವರ್ಗವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. 6 ಜಿಲ್ಲೆಗಳಲ್ಲಿ ಮಹಿಳಾ ಸಮಿತಿಗಳನ್ನು ರಚಿಸಿದ್ದು, 2 ಜಿಲ್ಲೆಗಳಲ್ಲಿ ಮಹಿಳಾ ಅಭ್ಯಾಸ ವರ್ಗ ನಿರ್ವಹಿಸಲಾಗಿದೆ ಎಂದು ಸಹಕಾರ ಭಾರತಿ ರಾಜ್ಯ ಅಧ್ಯಕ್ಷ ಪ್ರಭುದೇವ ಮಾಗನೂರ್ ಮಾಹಿತಿ ನೀಡಿದರು.

ಮುಗಿಯದ ರಗಳೆ

ಪುಟ ೧ ➡ ಇದಕ್ಕೂ ಮೊದಲು ಪಾಕಿಸ್ತಾನದಲ್ಲಿನ ಇರಾನ್ ರಾಯಭಾರಿ ರೆಜಾ ಅಮಿರ್ ಮೋಗ್ದಮ್ 10 ಸದಸ್ಯರ ಪ್ರತಿನಿಧಿ ಮಂಡಳಿ ಇಸ್ಲಾಮಾಬಾದ್‌ಗೆ ಆಗಮಿಸಲಿದೆ ಎಂದು ಹೇಳಿದ್ದರೂ, ನಂತರ ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದು ಕುತೂಹಲ ಹೆಚ್ಚಿಸಿದೆ.



ಟ್ರಂಪ್‌ಗೆ ಟೆನ್ಶನ್

ಸದ್ಯ ಇರಾನ್-ಅಮೆರಿಕ ನಡುವೆ ಕದನ ವಿರಾಮ ಏರ್ಪಟ್ಟಿದ್ದರೂ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿರುವುದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಟೆನ್ಶನ್ ತಂದಿದೆ ಎಂದು ಮೂಲಗಳು ಹೇಳಿವೆ. ಇದರ ಬೆನ್ನಲ್ಲೇ ಅವರು, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಕರೆ ಮಾಡಿ, ದಾಳಿ ನಿಲ್ಲಿಸುವಂತೆ ಹೇಳಿದ್ದಾರೆ. ಇದಾದ ಬಳಿಕ ನೆತನ್ಯಾಹು ಲೆಬನಾನ್ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿ ಕದನ ವಿರಾಮ ಘೋಷಿಸಿದ್ದಾರೆ. ಅಲ್ಲದೆ, ಶಾಂತಿ ಮಾತುಕತೆಯಲ್ಲಿ ಭಾಗಿಯಾಗುವ ಬಗ್ಗೆ ಲೆಬನಾನ್ ಕೂಡ ಇಚ್ಛೆ ವ್ಯಕ್ತಪಡಿಸಿದೆ.

ಬೆಳ್ಳಿ ಹಬ್ಬದ ಜನತಾ ಸಮಾವೇಶ ಇಂದು

ಪುಟ ೧ ➡ ತುಮಕೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ರಜತ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮುಂಬರುವ ಗ್ರೇಟರ್ ಬೆಂಗಳೂರು ಚುನಾವಣೆ ಸೇರಿದಂತೆ ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟವನ್ನು ಬಲಪಡಿಸುವ ನಿಟ್ಟಿನಲ್ಲಿ ಜೆಡಿಎಸ್ ಗ್ರೇಟರ್ ಬೆಂಗಳೂರು ಸಮಾವೇಶವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಪಕ್ಷದ ಮುಖಂಡರು ಕಾರ್ಯಕರ್ತರ ಜತೆಗೆ ಮಹತ್ವದ ಸಭೆ ನಡೆಸಿದ್ದಾರೆ. ಈ ಜನತಾ ಸಮಾವೇಶವು ಬೆಂಗಳೂರು ಹಾಗೂ ಪಕ್ಷದ ಬೆಳ್ಳಿ ಹಬ್ಬದ ಸಂಭ್ರಮವಾಗಿದ್ದು, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಪಕ್ಷದ ನಾಯಕರು, ಶಾಸಕರು ಮತ್ತು ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಲಾಗಿದೆ.

ಮಹಿಳೆಯರಿಗೆ 3000 ರೂ. ನೆರವು

ಪುಟ ೧ ➡ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು 'ಸಂಕಲ್ಪ ಪತ್ರ'- ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿ ಇದು 'ಸೋನಾರ್ ಬಾಂಗ್ಲಾ'ಕ್ಕಾಗಿ ಇರುವ ಮಾರ್ಗಸೂಚಿ ಎಂದು ಬಣ್ಣಿಸಿದರು. ಟಿಎಂಸಿಯ 15 ವರ್ಷಗಳ ಆಡಳಿತ ಪಶ್ಚಿಮ ಬಂಗಾಳದ ಜನತೆಯ ಪಾಲಿಗೆ ಒಂದು 'ದುಃಸ್ವಪ್ನ'ವಾಗಿತ್ತು ಎಂದ ಅವರು, ದುರಾಡಳಿತಕ್ಕಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ತೀವ್ರ ತರಾಟೆಗೆತ್ತಿಕೊಂಡರು.

ಟಿಎಂಸಿಯ ಜನವಿರೋಧಿ ಆಡಳಿತದಿಂದ ಬಂಗಾಳದ ಜನತೆ ರೋಸಿ ಹೋಗಿದ್ದು, ಈ ಚುನಾವಣೆಯನ್ನು ಟಿಎಂಸಿಯ ಭ್ರಷ್ಟಾಚಾರ, ರಾಜಕೀಯ ಹಿಂಸಾಚಾರ, ಅಕ್ರಮ ನುಸುಳುವಿಕೆ ಮತ್ತು ನಿರುದ್ಯೋಗದ ಮೇಲಿನ ಜನಮತ ಸಂಗ್ರಹವಾಗುವಂತೆ ಪರಿವರ್ತಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅಕ್ರಮ ನುಸುಳುಕೋರರ ವಿರುದ್ಧ "ಪತ್ತೆ, ಅಳಿಸಿ ಮತ್ತು ಗಡೀಪಾರುಗೊಳಿಸಿ" ನೀತಿಯನ್ನು ಅನುಸರಿಸಲಿದೆ. ಬಂಗಾಳದಲ್ಲಿ ಬಿಜೆಪಿಗೆ ಜನಾಶೀರ್ವಾದ ಲಭಿಸಿದಲ್ಲಿ ಅಕ್ರಮ ನುಸುಳುವಿಕೆಯ ಬಗೆಗೆ ಶೂನ್ಯ ಸಹಿಷ್ಣುತೆಯ ನೀತಿಯನ್ನು ಹೊಂದಲಿದೆ ಎಂದ ಅಮಿತ್ ಶಾ ಅವರು, ಟಿಎಂಸಿಯ ಹಿಂಸಾಯುಕ್ತ ದುರಾಡಳಿತದ ವಿರುದ್ಧ ಬಿಜೆಪಿಯ ಬಲವಾದ ನಿಲುವನ್ನು ಪ್ರಕಟಿಸಿದರು. ರಾಜ್ಯದ ಗಡಿಗಳನ್ನು ಸುರಕ್ಷಿತವಾಗಿರಿಸುವ ಭರವಸೆ ನೀಡಿರುವ ಪಕ್ಷವು, ಗೋವುಗಳ ಕಳ್ಳಸಾಗಣೆಯನ್ನು ತಡೆದು ಸರ್ಕಾರಿ ಭೂಮಿಯನ್ನು ಅತಿಕ್ರಮಣಕಾರರು ಮತ್ತು ನುಸುಳುಕೋರರಿಂದ ಮುಕ್ತಗೊಳಿಸ ಲಾಗುವುದು ಎಂದಿದೆ. ವಿಶೇಷವಾಗಿ ಉತ್ತರ 24 ಪರಗಣಾಸ್, ನಾಡಿಯಾ, ಮಾಲ್ಡಾ, ಮುರ್ಷಿದಾಬಾದ್ ಮತ್ತು ಉತ್ತರ ಬಂಗಾಳದ ಜನತೆಗೆ ಭದ್ರತೆಯ ಭರವಸೆಯನ್ನು ನೀಡಿದೆ. ವಿಶೇಷವಾಗಿ ನಿರಾಶ್ರಿತ ಮತುವಾ, ದಲಿತರನ್ನೊಳಗೊಂಡ ಹಿಂದು ಮತದಾರರಿಗೆ ಸುರಕ್ಷತೆಯ ಖಾತ್ರಿಯನ್ನು ನೀಡುವ ನಿಲುವನ್ನು ವ್ಯಕ್ತಪಡಿಸಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲಾಗುವುದು, ಈ ಮೂಲಕ ರಾಜ್ಯದ ಎಲ್ಲ ನಾಗರಿಕ ಪ್ರಜೆಗಳಿಗೂ ಒಂದೇ ಕಾನೂನನ್ನು ಅನ್ವಯಿಸಲಾಗುವುದು. ಇದೇ ವೇಳೆ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೂ ತಮ್ಮ ಮತ, ಧರ್ಮಗಳ ಆಚರಣೆಗೆ ಮುಕ್ತ ಸ್ವಾತಂತ್ರ್ಯ ನೀಡಲಾಗುವುದು ಎನ್ನುವ ಮೂಲಕ ಅಲ್ಪಸಂಖ್ಯಾತರಲ್ಲಿ ಬಿಜೆಪಿ ವಿರೋಧಿಗಳು ಬಿತ್ತಿರುವ ಆತಂಕವನ್ನು ನಿವಾರಿಸುವ ಯತ್ನವನ್ನೂ ಬಿಜೆಪಿ ಮಾಡಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಗಾಗಿ ₹15000

ಪುಟ ೧ ➡ ಪೊಲೀಸ್ ಸೇರಿದಂತೆ ಎಲ್ಲ ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಶೇ.33ರ ಮೀಸಲಾತಿ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಉಚಿತ ಪ್ರಯಾಣದ ಭರವಸೆ ನೀಡಲಾಗಿದೆ. ಟಿಎಂಸಿ ಸರ್ಕಾರವು ಮಹಿಳೆಯರನ್ನು ಸೆಳೆಯಲು ಲಕ್ಷ್ಮೀರ್ ಭಾಂಡರ್ ಯೋಜನೆಯಲ್ಲಿ ಸಾಮಾನ್ಯ ವರ್ಗದ ಮಹಿಳೆಯರಿಗೆ ತಿಂಗಳಿಗೆ 1500 ರೂ. ಮತ್ತು ಪರಿಶಿಷ್ಟ ಜಾತಿ, ವರ್ಗದ ಮಹಿಳೆಯರಿಗೆ 1700 ರೂ.ಗಳ ನೆರವನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಈ ಭರವಸೆ ನೀಡಿದೆ. ಮಮತಾ ಸರ್ಕಾರದ ಶಾಲಾ ನೇಮಕಾತಿ ಹಗರಣದಲ್ಲಿ ಉದ್ಯೋಗ ಕಳೆದುಕೊಂಡವರಿಗೆ ವಯೋಮಿತಿಯನ್ನು 5 ವರ್ಷಗಳಷ್ಟು ವಿಸ್ತರಿಸುವ ಭರವಸೆ ನೀಡಿದೆ.

ರೈತರಿಗೆ ವಾರ್ಷಿಕ 9 ಸಾವಿರ ರೂ.

ರೈತರಿಗೆ ಪಿಎಂ ಕಿಸಾನ್ ಯೋಜನೆಯಲ್ಲಿ ಕೇಂದ್ರದ 6000 ರೂ.ಗಳಿಗೆ ರಾಜ್ಯ ಸರ್ಕಾರದ ಕಡೆಯಿಂದ 3000 ರೂ.ಗಳನ್ನು ಸೇರಿಸಿ 9000 ರೂ.ಗಳಿಗೆ ಹೆಚ್ಚಿಸಲಾಗುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆ ವ್ಯತ್ಯಯವನ್ನು ಸರಿಪಡಿಸಿ 7ನೇ ವೇತನಾ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವುದಾಗಿಯೂ ಬಿಜೆಪಿ ಹೇಳಿದೆ. ರಸ್ತೆ, ಬಂದರು ಅಭಿವೃದ್ಧಿ ಸೇರಿದಂತೆ ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು. ಉತ್ತರ ಬಂಗಾಲದ ವಿವಿಧೆಡೆ ಎಐಐಎಂಎಸ್, ಐಐಟಿ, ಐಐಎಂ, ಅತ್ಯಾಧುನಿಕ ಸೌಕರ್ಯಗಳುಳ್ಳ ಹೊಸ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದ ಭರವಸೆಯನ್ನೂ ನೀಡಲಾಗಿದೆ. ಕೋಲ್ಕತ್ತಾಕ್ಕಾಗಿ 10 ವರ್ಷಗಳ ಕ್ರಿಯಾ ಯೋಜನೆಯೊಂದನ್ನು ಪ್ರಕಟಿಸಲಾಗಿದೆ. ಚೈತನ್ಯ ಮಹಾಪ್ರಭು ಆಧ್ಯಾತ್ಮಿಕ ಸರ್ಕ್ಯೂಟ್, ರವೀಂದ್ರನಾಥ ಟಾಗೋರ್ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ, ವಂದೇಮಾತರಂ ಮ್ಯೂಸಿಯಂ ಸ್ಥಾಪನೆಯ ಬಗೆಗೂ ಭರವಸೆ ನೀಡಲಾಗಿದೆ. ಮಮತಾ ಸರ್ಕಾರದಲ್ಲಿ ಸಂದೇಶಖಾಲಿಯಲ್ಲಿ ನಡೆದ ಮಹಿಳೆಯರ ವಿರುದ್ಧದ ದೌರ್ಜನ್ಯ ಸೇರಿದಂತೆ ರಾಜಕೀಯ ಹಿಂಸಾಚಾರಗಳ ತನಿಖೆಗೆ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು ಎಂದಿದೆ.

ಸರ್ಕಾರಿ ಕಟ್ಟಡಗಳಿಂದ ಸೇವಾ ತೆರಿಗೆ ವಸೂಲಿ

ಪುಟ ೧ ➡ 473 ಕೋಟಿ ಬಾಕಿ ವಸೂಲಿ ಜತೆಗೆ, ಅಗತ್ಯಬಿದ್ದರೆ ವಿಧಾನಸೌಧ, ವಿಕಾಸಸೌಧದಂತಹ ಪ್ರಮುಖ ಕಟ್ಟಡಗಳನ್ನೇ ಜಪ್ತಿ ಮಾಡುವ ಬಗ್ಗೆ ದೂರುದಾರರು ಪ್ರಸ್ತಾಪಿಸಿದ್ದು, ಇದನ್ನು ಸಹ ನಿಯಮಾನುಸಾರ ಪರಿಶೀಲಿಸುವಂತೆ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ಕಚೇರಿಗಳು ಬಾಕಿ ಉಳಿಸಿಕೊಂಡಿರುವ ಬೃಹತ್ ಮೊತ್ತದ ಕುರಿತು ಮೌನ ವಹಿಸಿರುವ ಜಿಬಿಎ ಬಗ್ಗೆ ಬಿಜೆಪಿ ನಾಯಕ ಎನ್.ಆರ್.ರಮೇಶ್ ಸರ್ಕಾರಿ ಕಟ್ಟಗಳ ಸೇವಾ ತೆರಿಗೆ ಬಾಕಿ ವಸೂಲಿ ಕ್ರಮ ವಹಿಸುವಂತೆ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು.

ಗುಡ್ಡ ಕುಸಿದು ಕಾರ್ಮಿಕರ ಸಾವು; ಪರಿಹಾರ ಘೋಷಣೆ

ಪುಟ ೧ ➡ ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದು, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟಿ ತಿರುವಿನಲ್ಲಿ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿಯ ವೇಳೆ ಮಣ್ಣು ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಸುದ್ದಿ ಕೇಳಿ ದುಃಖವಾಯಿತು. ಮೃತ ಕಾರ್ಮಿಕರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ಸದಸ್ಯರಿಗೆ ನೋವು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ. ಘಟನೆ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರೊಂದಿಗೆ ಮಾತುಕತೆ ನಡೆಸಿ, ಮಾಹಿತಿ ಪಡೆದಿದ್ದೇನೆ. ಕುಟುಂಬಕ್ಕೆ ಆಧಾರವಾಗಿದ್ದ ದುಡಿಯುವ ಜೀವಗಳು ಈ ಘಟನೆಯಲ್ಲಿ ಬಲಿಯಾಗಿದ್ದು, ಮಾನವೀಯ ನೆಲೆಯಲ್ಲಿ ಮೃತ ಕಾರ್ಮಿಕರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀನಂದಾ ಶವವಾಗಿ ಪತ್ತೆ

ಪುಟ ೧ ➡ ಶ್ರೀನಂದಾ ಜೀವಂತವಾಗಿರಲಿ ಎಂಬ ನೂರಾರು ಜನರ ಪ್ರಾರ್ಥನೆಗೆ ಕೊನೆಗೂ ಫಲ ಸಿಗಲಿಲ್ಲ. ಆಕೆಯ ನಾಪತ್ತೆ ಪ್ರಕರಣದ ಕುರಿತು ವ್ಯಕ್ತವಾದ ಬೇರೆ ಬೇರೆ ವ್ಯಾಖ್ಯಾನಗಳಾವುವು ನಿಜವಾಗಲೂ ಇಲ್ಲ. ಆಕೆ ಸಾವಿಗೆ ನಿಖರವಾದ ಕಾರಣ ಏನು ಎನ್ನುವುದಕ್ಕೆ ಸಿಸಿ ಕ್ಯಾಮೆರಾ ಸೇರಿದಂತೆ ಸ್ಥಳದಲ್ಲಿ ಯಾವುದೇ ಸ್ಪಷ್ಟ ಸಾಕ್ಷ್ಯಗಳೂ ಇಲ್ಲದಿರುವುದರಿಂದ ಈಗ ಅದನ್ನು ಪತ್ತೆ ಹಚ್ಚುವ ಜವಾಬ್ದಾರಿ ಪೊಲೀಸರ ಹೆಗಲಮೇಲಿದೆ.

ಮೇಲ್ನೋಟಕ್ಕೆ ಶ್ರೀನಂದಾ ಕಾಲು ಜಾರಿ ಬಿದ್ದಿರಬಹುದು ಅಥವಾ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಅನಿಸಿಕೆಗಳನ್ನು ಘಟನೆ ನಡೆದಿರುವ ಸ್ಥಳವು ಹುಟ್ಟುಹಾಕುತ್ತದೆ. ದೂರದ ಕೇರಳದಿಂದ ಬಂದು ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತಹದ್ದು ಏನಿತ್ತು? ಎನ್ನುವ ಪ್ರಶ್ನೆ ಎದುರಾದರೆ, ಅದು ಆತ್ಮಹತ್ಯೆಯೇ ಆಗಿದ್ದರೆ ಅದರ ಹಿಂದೆ ಏನಾದರೂ ಕಾರಣ ಇರಲೇ ಬೇಕಾಗುತ್ತದೆ. ಅದು ಗೊತ್ತಾಗುವವರೆಗೆ ಸಂಶಯಗಳು ಹಾಗೇ ಉಳಿಯುತ್ತವೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿವೆ. ಮಾಣಿಕ್ಯಧಾರದ ಬಳಿ ಕುಟುಂಬದವರೆಲ್ಲರೂ ಬಂದ ಸಂದರ್ಭದಲ್ಲಿ ಶ್ರೀನಂದಾ ತನ್ನ ಬಳಿ ಇದ್ದ ಮೊಬೈಲ್‌ನ್ನು ತಾಯಿಯ ಕೈಗಿತ್ತು, ನಾನು ಜಲಪಾತದ ಬಳಿ ಬರುವುದಿಲ್ಲ. ನೀವು ಬರುವವರೆಗೆ ಇಲ್ಲೇ ಇರುತ್ತೇನೆ ಎಂದು ಒಬ್ಬಳೇ ಉಳಿದುಕೊಂಡಿದ್ದಾಳೆ. ಕುಟುಂಬದವರು ಹಿಂತಿರುಗಿ ಬರುವಷ್ಟರಲ್ಲಿ ಆಕೆ ನಾಪತ್ತೆಯಾಗಿದ್ದಾಳೆ. ಈ ಅಂಶಗಳನ್ನೂ ಆಧಾರವಾಗಿಟ್ಟುಕೊಂಡು ಪೊಲೀಸ್ ತನಿಖೆ ನಡೆಯುತ್ತಿದೆ.

ನಿಗೂಢವಾಗಿ ಕಣ್ಮರೆಯಾದ ಮಗಳನ್ನು ಜೀವಂತವಾಗಿ ಕಾಣಲು ಕಾತುರದಿಂದ ಕಾಯುತ್ತಿದ್ದ ತಂದೆ ರಮೇಶ್‌ಗೆ ಆಕೆ ಸಾವಿನ ವಿಷಯ ಕೇಳಿ ಜಂಗಾಬಲವೇ ಕುಸಿದಂತಾಯಿತು. ಆದರೂ ಹತ್ತಾರು ಕಿ.ಮೀ. ದುರ್ಗಮ ಮಾರ್ಗವನ್ನು ಸಿಬ್ಬಂದಿಯ ಜತೆ ಕ್ರಮಿಸಿ ಶವವಾಗಿ ಮಲಗಿದ್ದ ಮಗಳನ್ನು ಕಂಡು ಕಣ್ಣೀರಿಟ್ಟರು. ಅತ್ತ ತಾಯಿ ರೋಹಿಣಿ ಅವರು ಮಾಣಿಕ್ಯಧಾರದ ಬಳಿ ಮಗಳ ಅಗಲಿಕೆ ವಿಚಾರ ಕೇಳಿ ಕುಸಿದುಬಿದ್ದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು.

ಡ್ರೋನ್ ಕ್ಯಾಮೆರಾದಲ್ಲಿ ಪತ್ತೆ

ಚಂದ್ರದ್ರೋಣ ಪರ್ವತದ ಮಾಣಿಕ್ಯಧಾರದ ಬಳಿ ನಾಲ್ಕು ದಿನಗಳ ಹಿಂದೆ ನಾಪತ್ತೆಯಾಗಿದ್ದ ಕೇರಳದ ಬಾಲಕಿ ಶ್ರೀನಂದಾ ಕೊನೆಯದಾಗಿ ನಿಂತಿದ್ದ ಸ್ಥಳದ ಪಕ್ಕದಲ್ಲೇ ಪ್ರಪಾತಕ್ಕೆ ಬಿದ್ದಿರುವುದು ಅರಣ್ಯ ಇಲಾಖೆಯ ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಪತ್ತೆಯಾಗಿದೆ. ಆಕೆಯ ಶವ ಸಾವಿರಾರು ಅಡಿ ಆಳದ ಮರವೊಂದರ ಬಳಿ ಕಂಡುಬಂದಿದೆ. ಕೂಡಲೇ ಶವವನ್ನು ಮೇಲೆತ್ತುವ ಕಾರ್ಯಾಚರಣೆ ಆರಂಭವಾಯಿತಾದರೂ ಸತತ ಆರು ಗಂಟೆಗಳ ಸವಾಲಿನ ಕಾರ್ಯಾಚರಣೆ ನಂತರ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಶವ ಕೊಳೆತಿದ್ದ ಕಾರಣ ಅದನ್ನು ಮೇಲ್ಮುಖವಾಗಿ ಹೊರತರಲು ಸಾಧ್ಯವಿರಲಿಲ್ಲ. ಅಲ್ಲದೆ ಶವವಿದ್ದ ಸ್ಥಳಕ್ಕೆ ಹಗ್ಗ ಕಟ್ಟಿ ಇಳಿಯುವುದಕ್ಕೂ ಆಗುತ್ತಿರಲಿಲ್ಲ. ಈ ಕಾರಣಕ್ಕೆ ಸಿಬ್ಬಂದಿ ಮಲ್ಲೇನಹಳ್ಳಿ ಮಾರ್ಗದ ಹರಿಶಿನಗುಪ್ಪೆ ಭಾಗದಿಂದ ಸಾವಿರಾರು ಅಡಿ ಎತ್ತರದ ಬೆಟ್ಟವನ್ನು ಹರಸಾಹಸ ಪಟ್ಟು ಏರುವ ಮೂಲಕ ಸ್ಥಳಕ್ಕೆ ತಲುಪಬೇಕಾಯಿತು. ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಅಗ್ನಿಶಾಮಕ, ಎಸ್‌ಡಿಆರ್‌ಎಫ್, ಎಎನ್‌ಎಫ್ ಸಿಬ್ಬಂದಿ ಸೇರಿ ಚಿಕ್ಕಮಗಳೂರು ಅಡ್ವೆಂಚರ್ ಸ್ಪೋರ್ಟ್ಸ್ ಕ್ಲಬ್ ಸದಸ್ಯರು ಸ್ಥಳೀಯರು ಶ್ರೀನಂದಾ ಪತ್ತೆಗಾಗಿ ನಾಲ್ಕು ದಿನ ಶ್ರಮಪಟ್ಟರು. ಅಂತಿಮವಾಗಿ ಆಕೆ ಶವವಾಗಿ ಪತ್ತೆಯಾಗಿದ್ದು ಮಾತ್ರ ಎಲ್ಲರ ಬೇಸರಕ್ಕೆ ಕಾರಣವಾಯಿತು. ಸೋಕೋ ತಂಡದ ಸಿಬ್ಬಂದಿ ಹಾಗೂ ಎಫ್‌ಎಸ್‌ಎಲ್ ಪರೀಕ್ಷಾ ಸಿಬ್ಬಂದಿಯೊಂದಿಗೆ ತೆರಳಿದ್ದ ಡಿವೈಎಸ್ಪಿ ನಾಗರಾಜ್ ಅವರು ಸ್ಥಳಮಹಜರು ನಡೆಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ, ಜಿಲ್ಲಾಧಿಕಾರಿ ಎನ್.ಎಂ. ನಾಗರಾಜು ಸ್ಥಳದಲ್ಲೇ ಇದ್ದು ಶೋಧ ಕಾರ್ಯದ ಮೇಲ್ವಿಚಾರಣೆ ನೋಡಿಕೊಂಡರು. ಸಂಜೆ 6 ಗಂಟೆ ವೇಳೆಗೆ ಶ್ರೀನಂದಾ ಮೃತದೇಹವನ್ನು ಅರಿಶಿನಗುಪ್ಪೆ ಮಾರ್ಗವಾಗಿ ಕೈಮರ ಮುಖಾಂತರ ನಗರದ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ತಂದು ಶವಪರೀಕ್ಷೆ ನಂತರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ನಾಡೋಜ ಡಾ.ರಾಮಸ್ವಾಮಿ ನಿಧನ

ಪುಟ ೧ ➡ 1980ರಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಉತ್ಥಾನ ಮಾಸಪತ್ರಿಕೆಯ ಗೌರವ ಪ್ರಧಾನ ಸಂಪಾದಕರಾಗಿ ನಿಧನರಾಗುವವರೆಗೂ ಆ ಹುದ್ದೆಯಲ್ಲಿ ಸೇವಾನಿರತರಾಗಿದ್ದರು.

ರಾಮಸ್ವಾಮಿ ಅವರು 1966ರಿಂದ ರಾಷ್ಟ್ರೋತ್ಥಾನ ಪರಿಷತ್‌ನ ನಿಕಟ ಸಂಪರ್ಕ ಹೊಂದಿದ್ದರು. ಅಲ್ಲದೇ ರಾಷ್ಟ್ರೋತ್ಥಾನ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾಗಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ (ಜಿಐಪಿಎ) ಗೌರವ ಕಾರ್ಯದರ್ಶಿಯಾಗಿಯೂ ಸಾಮಾಜಿಕ ಕಾರ್ಯಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು.

ಬಹುಭಾಷಾ ಪರಿಣಿತ: ರಾಮಸ್ವಾಮಿ ಅವರು ಕನ್ನಡ, ತೆಲುಗು, ಸಂಸ್ಕೃತ, ಹಿಂದಿ, ಇಂಗ್ಲಿಷ್, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸುಮಾರು 55ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಅವರು ಸಾವಿರಾರು ಲೇಖನ ಬರೆದಿದ್ದಾರೆ. ಐದು ದಶಕಗಳ ಸಾಹಿತ್ಯ ಮತ್ತು ಪತ್ರಿಕೋದ್ಯಮ ಜೀವನದ ನಡುವೆ ಸ್ವದೇಶಿ ಚಳವಳಿಯ ಬಲವಾದ ಪ್ರತಿಪಾದಕರೂ ಆಗಿದ್ದರು.

ಡಿ.ವಿ.ಗುಂಡಪ್ಪ ಮತ್ತಿತರ ಶ್ರೇಷ್ಠ ಚಿಂತಕರ ಒಡನಾಟ ಇವರಿಗೆ ಲಭಿಸಿತ್ತು. ಡಿ.ವಿ.ಜಿ. ಅವರೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದ ಅವರು, ಡಿವಿಜಿ ಅವರ ಅತ್ಯಮೂಲ್ಯ ಗ್ರಂಥವಾದ ಜೀವನಧರ್ಮಯೋಗ ಸೇರಿದಂತೆ ಅನೇಕ ಗ್ರಂಥಗಳ ಪ್ರಕಾಶನಕ್ಕೆ ಬಹುಮುಖವಾಗಿ ಶ್ರಮಿಸಿದವರು.

ರಾಮಸ್ವಾಮಿ ಅವರು ಬರೆದ ಶತಮಾನದ ತಿರುವಿನಲ್ಲಿ ಭಾರತ ಕೃತಿಗೆ 1992ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಗಣ್ಯರಿಂದ ಸಂತಾಪ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹಸರಕಾರ್ಯವಾಹ ಮುಕುಂದ ಸಿ.ಆರ್., ಕ್ಷೇತ್ರೀಯ ಸಂಘಚಾಲಕ ಡಾ. ಪಿ.ವಾಮನ್ ಶೆಣೈ, ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಪ್ರಾಂತ ಕಾರ್ಯವಾಹ ಡಾ. ಎಂ. ಜಯಪ್ರಕಾಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಅನೇಕ ಗಣ್ಯರು ಡಾ. ಎಸ್.ಆರ್. ರಾಮಸ್ವಾಮಿ ಅವರ ಅಗಲಿಕೆಗೆ ಸಂತಾಪ ಸೂಚಿಸಿದ್ದಾರೆ.

ಅಂತಿಮ ದರ್ಶನ-ಅಂತ್ಯಕ್ರಿಯೆ: ಶುಕ್ರವಾರ ಬೆಳಗ್ಗೆ 10.30ರಿಂದ 12ಗಂಟೆಯವರೆಗೆ ಕೆಂಪೇಗೌಡನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಂದ್ರ ಕಚೇರಿ ಕೇಶವಶಿಲ್ಪ ಸಭಾಂಗಣದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್, ಕ್ಷೇತ್ರೀಯ ಕಾರ್ಯಕಾರಿಣಿ ಸದಸ್ಯ ವಿ. ನಾಗರಾಜ, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ.ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಸೇರಿದಂತೆ ಅನೇಕ ಗಣ್ಯರು ಅಂತಿಮ ದರ್ಶನ ಪಡೆದರು. ಬಳಿಕ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಅರ್ಜಿದಾರರಿಗೆ ₹1 ಲಕ್ಷ ದಂಡ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಿರುವ ಪಿಐಎಲ್ ವಜಾಗೊಳಿಸಿರುವ ಹೈಕೋರ್ಟ್, ಪ್ರಚಾರಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರಿಗೆ ಬರೋಬ್ಬರಿ 1ಲಕ್ಷ ರೂ.ದಂಡ ವಿಧಿಸಿ ಅರ್ಜಿ ವಜಾಗೊಳಿಸಿದೆ.

ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ಪ್ರಸ್ತಾವ ಪ್ರಶ್ನಿಸಿ ಬೆಂಗಳೂರಿನ ಎಚ್.ಎನ್. ಚಂದನಾ ಮತ್ತು ಎಸ್.ವೆಂಕಟೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ವಜಾಗೊಳಿಸಿದೆ. ಸಚಿವರು ಆಕ್ಷೇಪಾರ್ಹವಾದ ಹೇಳಿಕೆ ನೀಡಿದ್ದು, ನ್ಯಾಯಾಲಯವು ವಿಶೇಷ ವ್ಯಾಪ್ತಿಯ ಅಧಿಕಾರ ಬಳಸಿ, ಹೇಳಿಕೆ ವಜಾಗೊಳಿಸಬೇಕು ಎಂದು ಕೋರಿದ್ದಾರೆ. ಇದೊಂದು ಪ್ರಚಾರ ಹಿತಾಸಕ್ತಿ ಹೊಂದಿರುವ ಅರ್ಜಿಯಾಗಿದ್ದು, ಅರ್ಜಿದಾರರಿಗೆ 50,000 ದಂಡ ವಿಧಿಸಿ ವಜಾಗೊಳಿಸಲಾಗಿದೆ. ಎರಡು ವಾರಗಳಲ್ಲಿ ಕಾನೂನು ಸೇವಾ ಪ್ರಾಧಿಕಾರಕ್ಕೆ ದಂಡದ ಮೊತ್ತ ಪಾವತಿಸಬೇಕು ಎಂದು ನಿರ್ದೇಶಿಸಿತು. ಇಲ್ಲವಾದಲ್ಲಿ ಅದನ್ನು ಭೂಕಂದಾಯ ಬಾಕಿಯಾಗಿ ವಸೂಲಿ ಮಾಡಲು ಜಿಲ್ಲಾಧಿಕಾರಿಗೆ ಆದೇಶ ಕಳುಹಿಸಿಕೊಡಲು ಸರ್ಕಾರಕ್ಕೆ ನಿರ್ದೇಶಿಸಿತು.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಹಿಂದಿಯನ್ನು ಕೈಬಿಡುವ ಆತಂಕ ವ್ಯಕ್ತಪಡಿಸಿದರು. ಅದಕ್ಕೆ ಪೀಠವು ಪತ್ರಿಕಾ ವರದಿಯಲ್ಲಿ ಮೂರು ಪದಗಳು ಮಾತ್ರ ಇವೆ. ಹಿಂದಿಯನ್ನು ಕೈಬಿಡುವ ಹೇಳಿಕೆಯೇ ವರದಿಯಲ್ಲಿಲ್ಲ. ಇದಕ್ಕಾಗಿ ದಂಡವನ್ನು 1 ಲಕ್ಷಕ್ಕೆ ಏರಿಸಲಾಗುತ್ತಿದೆ ಎಂದಿತು. ಆದೇಶದಲ್ಲಿ ಮಾರ್ಪಾಡು ಮಾಡಿದ ಪೀಠವು ದಂಡದ ಮೊತ್ತವನ್ನು 1 ಲಕ್ಷಕ್ಕೆ ಏರಿಕೆ ಮಾಡಿತು. ಅಲ್ಲದೇ, ಹಿಂದಿಯನ್ನು ಕೈಬಿಡಲಾಗುತ್ತದೆ ಎಂಬ ಹೇಳಿಕೆಯೇ ಉಲ್ಲೇಖಿತ ಪತ್ರಿಕಾ ವರದಿಯಲ್ಲಿಲ್ಲ. ಇದೊಂದು ಪ್ರಚಾರ ಹಿತಾಸಕ್ತಿ ಅರ್ಜಿಯಾಗಿದೆ ಎಂದು ಆದೇಶಲ್ಲಿ ದಾಖಲಿಸಿತು. ವಿವಾದಾತ್ಮಕ ವಿಷಯ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ ಎಂಬುದನ್ನು ಗಮನಿಸಿ, ಹೇಳಿಕೆಯಲ್ಲದ ಹೇಳಿಕೆ ಆಧರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಕೇವಲ ಮೂರು ಪದದ ಪತ್ರಿಕಾ ಹೇಳಿಕೆ! ಎಂದು ಕಿಡಿಕಾರಿತು.

ಅನಾವರಣ



ಬೆಂಗಳೂರು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್)ನ ಉನ್ನತೀಕರಿಸಿದ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ ಅನ್ನು ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಡಿ.ಕೆ.ಸುನೀಲ್ ಶುಕ್ರವಾರ ಅನಾವರಣಗೊಳಿಸಿದರು.

ಗ್ರಾಹಕರಿಗೆ ತೊಂದರೆ ನೀಡಿದ್ರೆ ಕ್ರಮ

ಬೆಂಗಳೂರು: ಮಾರುಕಟ್ಟೆಯಲ್ಲಿ ಸರ್ಕಾರದ ದರದಂತೆ ಖಾಸಗಿ ಕಂಪನಿಗಳು ಗ್ಯಾಸ್ ವಿತರಿಸಬೇಕು. ಹೆಚ್ಚಿನ ದರ ವಿಧಿಸಿ ಗ್ರಾಹಕರಿಗೆ ತೊಂದರೆ ನೀಡದಿದ್ದಲ್ಲಿ ಅಂತಹ ಕಂಪನಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಸೀಜ್ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.



ಶುಕ್ರವಾರ ವಸಂತನಗರದಲ್ಲಿರುವ ಆಹಾರ ಭವನದಲ್ಲಿ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಖಾಸಗಿ ಕಂಪನಿಗಳ ಹೆಚ್ಚಿನ ದರದಿಂದ ಗ್ರಾಹಕರಲ್ಲಿ ಗೊಂದಲ ಉಂಟಾಗಿದ್ದು ಆದಷ್ಟು ಕಡಿಮೆ ಮಾಡಿದರೆ ಗ್ರಾಹಕರಿಗೆ ಸಹಕಾರಿಯಾಗಲಿದ್ದು, ತಾವು ನಿರ್ಧಾರ ಮಾಡಬೇಕು ಎಂದು ಸೂಚಿಸಿದರು. ಮಾರುಕಟ್ಟೆಯಲ್ಲಿ ಗ್ರಾಹಕರು ನಿಮಗೆ ಅತ್ಯವಶ್ಯಕವಾಗಿದ್ದು ಈ ಕಷ್ಟದ ಸಂದರ್ಭದಲ್ಲಿ ಗ್ರಾಹಕರಿಗಾಗಿ ಧರ ಹೆಚ್ಚಿಸದೆ ಒಂದೆ ದರವನ್ನು ವಿಧಿಸಲು ನಿಮ್ಮ ಮಾಲಿಕರೊಂದಿಗೆ ಚರ್ಚಿಸಿ ಸರ್ಕಾರದ ದರವನ್ನು ಪಾಲಿಸುವಂತೆ ಮನವರಿಕೆ ಮಾಡಲು ಸಲಹೆ ನೀಡಿದರು.

ಕೇಂದ್ರ ಸರ್ಕಾರವು ಹಂಚಿಕೆ ಮಾಡುವ ಇಂಧನವನ್ನು ನಾವು ರಾಜ್ಯದ ಗ್ರಾಹಕರಿಗೆ ವಿತರಣೆ ಮಾಡುವುದು ಮತ್ತು ಹೆಚ್ಚಿನ ಬೇಡಿಕೆಗೆ ಒತ್ತಡ ತಂದು ವಿತರಿಸಲು ನಾವು ಬದ್ಧರಾಗಿ ಕೆಲಸ ಮಾಡುತ್ತಿದ್ದೇವೆ. ಕಾಳಸಂತೆಯಲ್ಲಿ ಹೆಚ್ಚಿನ ಧರದಲ್ಲಿ ಮಾರಾಟ ಮಾಡುವ ಮಾಲಿಕರ ವಿರುದ್ಧ ಕಾನೂನು ಕ್ರಮವಹಿಸಲಾಗುತ್ತದೆ ಮತ್ತು ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ ಎಂದರು.

ನಿತ್ಯ 29 ಸಾವಿರ ವಾಣಿಜ್ಯ ಸಿಲಿಂಡರ್ ವಿತರಣೆ

ರಾಜ್ಯದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಿಲ್ಲ. ಇದುವರೆಗೆ ಒಟ್ಟು 88,99,796 ಗೃಹ ಸಿಲಿಂಡರ್‌ಗಳು ವಿತರಣೆಗೊಂಡಿವೆ. ಜತೆಗೆ 5,30,426 ವಾಣಿಜ್ಯ ಸಿಲಿಂಡರ್‌ಗಳು ಹಾಗೂ ಸುಮಾರು 1,17,522 ಆಟೋ ಎಲ್‌ಪಿಜಿ ಸಿಲಿಂಡರ್‌ಗಳು (2232.68 ಮೆಟ್ರಿಕ್ ಟನ್) ವಿತರಣೆಗೊಂಡಿವೆ. ರಾಜ್ಯದಲ್ಲಿ ನಿತ್ಯ 44,700 ವಾಣಿಜ್ಯ ಸಿಲಿಂಡರ್‌ಗಳ ಬೇಡಿಕೆ ಇದ್ದು, ಸರಾಸರಿ 29,463 ವಾಣಿಜ್ಯ ಸಿಲಿಂಡರ್‌ಗಳು ವಿತರಣೆಗೊಳ್ಳುತ್ತಿವೆ. ಆಟೋ ಎಲ್‌ಪಿಜಿ ಸರಬರಾಜು ಸರಾಸರಿ ಶೇ.98 ರಷ್ಟು ಇದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಕಿರುಸುದ್ದಿ

ಅಂಕಗಳ ಆಧಾರದ ಮೇಲೆ ಗ್ರೇಡ್

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇತ್ತೀಚೆಗೆ ತೃತೀಯ ಭಾಷೆಯನ್ನು ಗ್ರೇಡ್‌ಗೆ ಸೀಮಿತಗೊಳಿಸಿದ್ದು, ಅಭ್ಯರ್ಥಿಯು ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ ವಿಷಯಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಫಲಿತಾಂಶಗಳನ್ನು ಶ್ರೇಣಿಗಳಲ್ಲಿ (ಗ್ರೇಡ್) ಘೋಷಿಸಿ ಸರ್ಕಾರ ಆದೇಶಿಸಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯೂಎಫ್ ವಿಷಯಗಳಲ್ಲಿ ಪಡೆದ ಅಂಕಗಳನ್ನು ಶ್ರೇಣಿಗಳ ರೂಪದಲ್ಲಿ ಪ್ರಕಟಿಸಲಿದೆ. ಈ ವಿಷಯಗಳನ್ನು ಅಂಕಪಟ್ಟಿಯಲ್ಲಿ ಹೆಚ್ಚುವರಿ ವಿಷಯಗಳಾಗಿ ನಮೂದಿಬೇಕು ಮತ್ತು ಉತ್ತೀರ್ಣರಾಗಲು ಪರಿಗಣಿಸಲಾಗುವುದಿಲ್ಲ. ಇದು 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ಜಾರಿಗೆ ಬಂದಿದೆ. ತೃತೀಯ ಭಾಷೆಯಾದ ಹಿಂದಿ, ಅರೇಬಿಕ್, ಉರ್ದು, ಮರಾಠಿ ಸೇರಿದಂತೆ ಇತ್ಯಾದಿ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಪರಿಗಣಿಸಲಾಗುವುದಿಲ್ಲ. ಬದಲಾಗಿ ತೃತೀಯ ಭಾಷೆಯಲ್ಲಿ ವಿದ್ಯಾರ್ಥಿಗಳು ಗಳಿಸುವ ಅಂಕಗಳ ಆಧಾರದ ಮೇಲೆ ಎ,ಬಿ,ಸಿ,ಡಿ ಶ್ರೇಣಿಗಳನ್ನು ನೀಡಲಾಗುತ್ತದೆ. ಅದರಂತೆ, ತೃತೀಯ ಭಾಷೆ ಪರೀಕ್ಷೆಯಲ್ಲಿ ಶೇಕಡಾವಾರು 80 ರಿಂದ 100 ರವರೆಗೆ ಎ ಶ್ರೇಣಿ, 50 ರಿಂದ 79ರವರೆಗೆ ಬಿ ಮತ್ತು 49ರವರೆಗೆ ಸಿ ಶ್ರೇಣಿಗಳನ್ನು ನೀಡಲಿದೆ. ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಒಟ್ಟಾರೆಯಾಗಿ ಶೇ.33 ಅಂಕಗಳನ್ನು ಪಡೆಯಬೇಕು ಹಾಗೂ ಅವರ ಒಟ್ಟು 525 ಅಂಕಗಳಲ್ಲಿ ಕನಿಷ್ಠ 173 ಅಂಕಗಳನ್ನು ಗಳಿಸುವುದರೊಂದಿಗೆ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 30 ಪ್ರತಿಶತ ಅಂಕಗಳನ್ನು ಗಳಿಸಿದರೆ ಅಂತಹ ಅಭ್ಯರ್ಥಿಗಳನ್ನು ಉತ್ತೀರ್ಣರೆಂದು ಘೋಷಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸೂಚಿಸಿದ್ದಾರೆ.

ದೂರುದಾರರಿಗೆ ತೃಪ್ತಿಯಾಗುವ ಭಾಷೆಯಲ್ಲಿ ಪರಿಷ್ಕೃತ ಪ್ರಮಾಣಪತ್ರ

ಬೆಂಗಳೂರು: ಕಾಂತಾರ ಚಾಪ್ಟರ್–1 ಸಿನಿಮಾದ ದೈವಪಾತ್ರದ ಕುರಿತು ಅಪಮಾನಕಾರಿ ಸನ್ನೆ ಮಾಡಿ ಮಾತನಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ದೂರುದಾರರೊಂದಿಗೆ ಚರ್ಚಿಸಿ ಅವರಿಗೆ ತೃಪ್ತಿಯಾಗುವ ಭಾಷೆಯಲ್ಲಿ ಪರಿಷ್ಕೃತ ಕ್ಷಮಾಪಣಾ ಪ್ರಮಾಣ ಪತ್ರ ಸಲ್ಲಿಸುವುದಾಗಿ ನಟ ರಣವೀರ್ ಸಿಂಗ್ ಹೈಕೋರ್ಟ್‌ಗೆ ತಿಳಿಸಿದ್ದಾರೆ. ಗೋವಾದಲ್ಲಿ ಕೆಲ ತಿಂಗಳ ಹಿಂದೆ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಾಂತಾರ ಚಾಪ್ಟರ್–1 ಚಿತ್ರದ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದಡಿ ದಾಖಲಾಗಿರುವ ಖಾಸಗಿ ದೂರು ಮತ್ತು ಅದರ ಮುಂದುವರಿದ ಭಾಗವಾಗಿ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ, ರಣವೀರ್ ಸಿಂಗ್ ಸಲ್ಲಿಸಿರುವ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆಯ ವೇಳೆ ದೂರುದಾರರ ಪರ ವಕೀಲರು, ಅರ್ಜಿದಾರ ರಣವೀರ್ ಸಿಂಗ್ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಪಶ್ಚಾತ್ತಾಪವಿಲ್ಲ. ದೂರು ನೀಡಿರುವುದೇ ತಪ್ಪು ಎಂಬಂತೆ ಬಿಂಬಿಸಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು, ದೂರುದಾರರೊಂದಿಗೆ ಚರ್ಚಿಸಿ ಅವರಿಗೆ ತೃಪ್ತಿಯಾಗುವ ಭಾಷೆಯಲ್ಲಿಯೇ ಪರಿಷ್ಕೃತ ಪ್ರಮಾಣ ಪತ್ರ ಸಲ್ಲಿಸುವುದಾಗಿ ಹೇಳಿದರು.

ಕೆಪಿಸಿಎಲ್‌ನಿಂದ 15,509 ದಶಲಕ್ಷ ಯುನಿಟ್ ಜಲವಿದ್ಯುತ್ ಉತ್ಪಾದನೆ

ಸಾರ್ವಕಾಲಿಕ ವಿದ್ಯುತ್ ದಾಖಲೆ



ಬೆಂಗಳೂರು: ಜಲ ವಿದ್ಯುತ್ ಉತ್ಪಾದನೆಯಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಕೆಪಿಸಿಎಲ್ 2025–26ನೇ ಸಾಲಿನಲ್ಲಿ 15,509 ದಶಲಕ್ಷ ಯುನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಬರೆದಿದೆ.

ಕರ್ನಾಟಕವು 3.63 ಗಿಗಾವ್ಯಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಇತ್ತೀಚೆಗೆ ಕೇಂದ್ರ ಸಚಿವಾಲಯ ವರದಿ ನೀಡಿತ್ತು. ಇದರ ಮಧ್ಯೆಯೇ 2025–26ನೇ ಸಾಲಿನಲ್ಲಿ ಕೆಪಿಸಿಎಲ್ ಈ ದಾಖಲೆ ನಿರ್ಮಿಸಿರುವುದು ಹೆಚ್ಚು ಮಹತ್ವ ಪಡೆದಿದೆ. ಶರಾವತಿ ಕಣಿವೆಯಲ್ಲಿ ನಾಲ್ಕು, ಕಾಳಿ ಕಣಿವೆಯ ನಾಲ್ಕು, ವಾರಾಹಿ ಕಣಿವೆ ಮತ್ತು ಕಾವೇರಿ ಕಣಿವೆಯ ತಲಾ ಎರಡು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ತಲಾ ಒಂದು ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ 15,509 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆಯಾಗಿದೆ. 2024–25ನೇ ಸಾಲಿನಲ್ಲಿ 13,853 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಿರುವುದು ಇದುವರೆಗಿನ ದಾಖಲೆಯಾಗಿತ್ತು.

2025-26ನೇ ಸಾಲಿನಲ್ಲಿ ಸ್ಥಾವರಗಳ ವಿವರ

ವಿದ್ಯುತ್ ಸ್ಥಾವರದ ಹೆಸರು	ಸಿಇಎ ಗುರಿ	ಸಾಧನೆ
ಶರಾವತಿ ಕಣಿವೆ	4800 ದಶಲಕ್ಷ ಯುನಿಟ್	5642 ಮಿಲಿಯನ್ ಯುನಿಟ್ (ಶೇ. 17.54ರಷ್ಟು ಹೆಚ್ಚು)
ಮಹಾತ್ಮಾ ಗಾಂಧಿ	549 ದಶಲಕ್ಷ ಯುನಿಟ್	643 ದಶಲಕ್ಷ ಯುನಿಟ್ (ಶೇ. 17.15ರಷ್ಟು ಹೆಚ್ಚು)
ಗೇರುಸೊಪ್ಪ	1060 ದಶಲಕ್ಷ ಯೂನಿಟ್	644 ದಶಲಕ್ಷ ಯುನಿಟ್ (ಹಿಂದಿನ ವರ್ಷಕ್ಕಿಂತ ಹೆಚ್ಚು)
ವರಾಹಿ	1060 ದಶಲಕ್ಷ ಯುನಿಟ್	1599 ದಶಲಕ್ಷ ಯುನಿಟ್ (ಶೇ. 50.85ರಷ್ಟು ಹೆಚ್ಚು)
ಭದ್ರಾ	55 ದಶಲಕ್ಷ ಯುನಿಟ್	68 ದಶಲಕ್ಷ ಯುನಿಟ್ (ಶೇ. 25.39ರಷ್ಟು ಹೆಚ್ಚು)
ಶಿಂಷಾ	47 ದಶಲಕ್ಷ ಯುನಿಟ್	66 ದಶಲಕ್ಷ ಯುನಿಟ್ (ಶೇ. 41.03ರಷ್ಟು ಹೆಚ್ಚು)
ಮಾಣಿ	24 ದಶಲಕ್ಷ ಯುನಿಟ್	32 ದಶಲಕ್ಷ ಯುನಿಟ್ (ಶೇ. 34.37ರಷ್ಟು ಹೆಚ್ಚು)

ಸ್ಥಾವರದಲ್ಲಿ ದಾಖಲೆ

ರಾಜ್ಯದ ವಿದ್ಯುತ್ ಸ್ಥಾವರಗಳು ಕೇಂದ್ರ ವಿದ್ಯುತ್ ಪ್ರಾಧಿಕಾರ(ಸಿಇಎ) ನೀಡಿದ ಗುರಿಗಿಂತಲೂ ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡಿವೆ. ರಾಜ್ಯದಲ್ಲಿ ಅತಿ ಹೆಚ್ಚು ಜಲ ವಿದ್ಯುತ್ ಉತ್ಪಾದನೆಯಾಗುವ ಶರಾವತಿ ಮತ್ತು ವಾರಾಹಿ ಕಣಿವೆಯ ವಿದ್ಯುತ್ ಸ್ಥಾವರಗಳಲ್ಲೂ 2025–26ನೇ ಸಾಲಿನಲ್ಲಿ ಒಟ್ಟಾರೆ 8,696 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ನಿರ್ಮಿಸಿದೆ. ಅಲ್ಲದೆ ಮಹಾತ್ಮಾ ಗಾಂಧಿ, ಗೇರುಸೊಪ್ಪ, ವರಾಹಿ ವಿದ್ಯುತ್ ಸ್ಥಾವರಗಳ ವಿದ್ಯುತ್ ಉತ್ಪಾದನೆಯಲ್ಲಿ ಹಿಂದಿನ ದಾಖಲೆಗಳನ್ನು ಮೀರಿ ಈ ಸಲ ಸಾರ್ವಕಾಲಿಕ ದಾಖಲೆ ನಿರ್ಮಾಣ ಮಾಡಿವೆ.

ಕಳೆದ ವರ್ಷ ಸಾಕಷ್ಟು ಮಳೆ ಬಿದ್ದಿರುವುದರ ಜತೆಗೆ ವಿದ್ಯುತ್ ಸ್ಥಾವರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿರುವುದರಿಂದ ರಾಜ್ಯದ ಜಲ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆಯಾಗಿದೆ.
■ ಕೆ.ಜೆ.ಜಾರ್ಜ್, ಇಂಧನ ಸಚಿವ

ಕೆಪಿಸಿಎಲ್ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಶ್ರಮಿಸಿದೆ. ಜಲವಿದ್ಯುತ್ ಕೇಂದ್ರಗಳ ಕಾರ್ಯಕ್ಷಮತೆ ಮತ್ತು ಉತ್ತಮ ನಿರ್ವಹಣೆಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ.
■ ಗೌರವ್ ಗುಪ್ತ, ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಖರ್ಗೆ ವಿರುದ್ಧ ದೂರು



ಹುಬ್ಬಳ್ಳಿ: ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ, ಆರೆಸ್ಸೆಸ್ ಕುರಿತಾಗಿ ಆಡಿರುವ ದ್ವೇಷಪೂರಿತ ಭಾಷಣದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಿ ಕಾನೂನು ಕ್ರಮಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ಬಿಜೆಪಿ ದೂರು ದಾಖಲಿಸಿದೆ.

ಖರ್ಗೆ ಅವರು ಈ ರೀತಿ ಮಾತನಾಡುವ ಮೂಲಕ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡಿ ದ್ದಾರೆ. ಈ ಕೂಡಲೇ ಬಂಧಿಸುವಂತೆ ಬಿಜೆಪಿ ಯುವ ಮೋರ್ಚಾದಿಂದ ಹೊಸಪೇಟೆ ಪಟ್ಟಣದ ಠಾಣೆಗೆ ದೂರು ನೀಡಿ ಒತ್ತಾಯಿಸಿದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್ ಮಾತನಾಡಿ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಸ್ಸಾಂ ಚುನಾ ವಣಾ ಪ್ರಚಾರದಲ್ಲಿ ಭಾಷಣ ಮಾಡುತ್ತಾ, 'ಕುರಾನ್‌ನಲ್ಲಿ ಬರೆದಿದೆ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು. ಆರ್‌ಎಸ್‌ಎಸ್ ಹಾಗೂ ಬಿಜೆಪಿ ಅದೇ ರೀತಿಯ ವಿಷ ಸರ್ಪಗಳಿ ದ್ದಂತೆ. ನೀವು ಅದನ್ನು ಕೊಲ್ಲದಿದ್ದರೆ ಬದುಕುವುದಿಲ್ಲ ಎಂದು ಮುಸಲ್ಮಾನರಿಗೆ ಆರ್‌ಎಸ್‌ಎಸ್ ಸದಸ್ಯರನ್ನು ಕೊಲ್ಲಬೇಕು ಎಂದು ಪ್ರಚೋದಿಸಿದ್ದಾರೆ ಎಂದು ಆರೋಪ ಮಾಡಿದರು. ಖರ್ಗೆ ಮೇಲೆ ಕ್ರಮ ಆಗದಿದ್ದರೆ ತೀವ್ರ ಪ್ರತಿಭಟನೆಯ ದಾರಿ ಹಿಡಿಯುವುದಾಗಿ ಬಿಜೆಪಿ ಎಚ್ಚರಿಸಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲಾ, ಶಿರಸಿ, ದಾಂಡೇಲಿ ಮತ್ತಿತರ ಕಡೆ ಬಿಜೆಪಿ ಕಾರ್ಯಕರ್ತರು ಮಲ್ಲಿಕಾರ್ಜುನ್ ಖರ್ಗೆ ವಿರುದ್ಧ ದೂರು ದಾಖಲಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವು

ದಾವಣಗೆರೆ: ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನವೆಂಬರ್‌ನಿಂದಲೇ ಹೇಳುತ್ತಿದ್ದಾರೆ. ಅದರ ಬಗ್ಗೆ ಹೆಚ್ಚು ಮಾತನಾಡಬೇಕಾಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಹರಿಹರ ತಾಲೂಕು ಬೆಳ್ಳೂಡಿ ಸಮೀಪದ ಕನಕ ಗುರುಪೀಠ ಶಾಖಾಮಠದ ಕಾರ್ಯಕ್ರಮಕ್ಕೆ ಶುಕ್ರವಾರ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಸದನದಲ್ಲೇ ಅದರ ಬಗ್ಗೆ ಉತ್ತರ ನೀಡಿದ್ದಾರೆ. ಉಪ ಚುನಾವಣೆ ಫಲಿತಾಂಶದ ಬಳಿಕ ರಾಜಕೀಯ ಜಂಗಿ ನಿಕಾಲಿ ಕುಸ್ತಿ ಎಂದೆಲ್ಲಾ ವಿಪಕ್ಷದವರು ಹೇಳುತ್ತಿದ್ದಾರೆ. ಆದರೆ, ವಿಪಕ್ಷದವರು ಅಂದಿದ್ದೆಲ್ಲಾ ಆಗುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲೂ ನಮ್ಮ ಪರ ಜನರ ಒಲವಿದ್ದು, ಕಾಂಗ್ರೆಸ್ ಗೆಲುವು ಸಾಧಿಸಲಿದೆ. ಉಭಯ ಕ್ಷೇತ್ರಗಳಲ್ಲಿ ಶೇಕಡವಾರು ಮತದಾನ ಪ್ರಮಾಣ ಹೆಚ್ಚಾಗಿರುವುದು ಸಹ ನಮಗೆ ಪ್ಲಸ್ ಪಾಯಿಂಟ್ ಆಗಿದೆ. ಎರಡೂ ಕಡೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳೇ ಜಯ ಸಾಧಿಸಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.



ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧವೇ ಸ್ವಪಕ್ಷದ ನಾಯಕರು ಷಡ್ಯಂತ್ರ ಮಾಡಿದ್ದಾರೆಂಬ ವಿಧಾನ ಪರಿಷತ್ ವಿಪಕ್ಷ ನಾಯಕ ಸಲೀಂ ಅಹಮ್ಮದ್ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಸಲೀಂ ಅಹಮ್ಮದ್ ರ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪ ಚುನಾವಣೆಗಳಲ್ಲಿ ನಮ್ಮೆಲ್ಲಾ ನಾಯಕರು, ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಪಕ್ಷದ ಗೆಲುವಿಗಾಗಿ ಕೆಲಸ ಮಾಡಿದ್ದೇವೆ ಎಂದು ಅವರು ತಿಳಿಸಿದರು.

ಕ್ಷೇತ್ರ ಪುನರ್ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಕುರಿತಂತೆ ಚರ್ಚಿಸಲು ಸಿಎಂ ದೆಹಲಿ ಪ್ರವಾಸ ಹೋಗಿದ್ದಾರೆ. ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಈಗಾಗಲೇ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಕೇಂದ್ರ ಸರ್ಕಾರ ಒಂದಿಷ್ಟು ವಿವರಣೆ ಕೇಳಿದ್ದು, ಕುರುಬ ಸಮಾಜವನ್ನು ಎಸ್ಟಿಗೆ ಸೇರ್ಪಡೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ಕೇಂದ್ರದವರು ಏನು ಮಾಡುತ್ತಾರೋ ನೋಡಬೇಕು ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ದಾಖಲಾತಿಗೆ ವಿನಾಯಿತಿ

ಬೆಂಗಳೂರು: 2026–27ನೇ ಶೈಕ್ಷಣಿಕ ಸಾಲಿಗೆ ಮಕ್ಕಳನ್ನು ಒಂದನೇ ತರಗತಿ ದಾಖಲಾತಿ ಮಾಡಲು 60 ದಿನಗಳ ವಯೋಮಿತಿ ಸಡಿಲಿಕೆ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶಿಸಿದೆ. ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಒಟ್ಟು 60 ದಿನಗಳು ವಿನಾಯಿತಿ ನೀಡಿದೆ.

ಕಳೆದ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯಲ್ಲಿಯೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರು, ಈ ವರ್ಷ ಒಂದನೇ ತರಗತಿ ದಾಖಲಾತಿಗೆ ಜೂ.1 ರಂದು ಆರು ವರ್ಷ ತುಂಬಿರದ ಮಕ್ಕಳಿಗೆ 60 ದಿನಗಳ ವಯೋಮಿತಿ ನೀಡುವುದಾಗಿ ಪ್ರಕಟಿಸಿದ್ದರು. ಆದರೆ, ಸರ್ಕಾರ ಈ ತೀರ್ಮಾನ ಪ್ರಕಟಿಸುತ್ತಿದ್ದಂತೆ ಈ ವಯೋಮಿತಿ ಸಡಿಲಿಕೆಯನ್ನು 5.5 ವರ್ಷ ತುಂಬಿದ ಮಕ್ಕಳಿಗೂ ವಿಸ್ತರಿಸಬೇಕು ಎಂದು ಹಲವು ಪೋಷಕರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಸಿದ್ದರು. ಆದರೆ ಇದಕ್ಕೆ ಮಣಿಯದ ಶಿಕ್ಷಣ ಇಲಾಖೆ ಇದೀಗ ಜೂ.1ಕ್ಕೆ 6 ವರ್ಷ ಪೂರ್ಣಗೊಳ್ಳಲು ಗರಿಷ್ಠ 60 ದಿನ ಬಾಕಿ ಇರುವ ಮಕ್ಕಳನ್ನು ಸಹ ಈ ಬಾರಿ ಒಂದನೇ ತರಗತಿಗೆ ದಾಖಲಿಸಿಕೊಳ್ಳಲು ಅವಕಾಶ ನೀಡಿ ಆದೇಶಿಸಿದೆ. ಸರ್ಕಾರದ ಹೊಸ ಆದೇಶದ ಪ್ರಕಾರ, ಒಂದನೇ ತರಗತಿಗೆ ದಾಖಲಾಗಲು ಮಗುವಿಗೆ ಜೂ. 1 ರಂದು ಕಡ್ಡಾಯವಾಗಿ 6 ವರ್ಷ ತುಂಬಿರಬೇಕು ಎಂಬ ನಿಯಮ ಚಾಲ್ತಿಯಲ್ಲಿದೆ. ಆದರೆ, ಪೋಷಕರ ನಿರಂತರ ಮನವಿ ಹಾಗೂ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ, ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಕಲಂ 20ರ ಅಡಿಯಲ್ಲಿ ಈ ಬಾರಿ ವಿಶೇಷ ವಿನಾಯಿತಿ ನೀಡಲಾಗಿದೆ ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ. ಈ ಸಡಿಲಿಕೆಯು 2026–27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತವಾಗಿರಲಿದೆ ಎಂದು ಆದೇಶದಲ್ಲಿ ಸರ್ಕಾರ ಸ್ಪಷ್ಟಪಡಿಸಿದೆ.

ಗ್ಯಾಸ್ ಮಾದರಿ ವಿದ್ಯುತ್ ಜ್ವಾಲೆ

ಹೊಸದಿಲ್ಲಿ/ಬೆಂಗಳೂರು: ಮಧ್ಯಪ್ರಾಚ್ಯ ಯುದ್ಧ ಪರಿಣಾಮ ಗ್ಯಾಸ್, ಪೆಟ್ರೋಲಿಯಂ ಉತ್ಪನ್ನಗಳಿಲ್ಲದೆ ಜಗತ್ತೇ ತತ್ತರಿಸುತ್ತಿದ್ದರೆ, ಇತ್ತ ಭಾರತ ಹೊಸ ಹೊಸ ತಂತ್ರಜ್ಞಾನ, ಆವಿಷ್ಕಾರದೊಂದಿಗೆ ಒಂದೊಂದೇ ಸ್ವಾವಲಂಬನೆ ಹೆಜ್ಜೆ ಇರಿಸುತ್ತಿದೆ.

ಹೌದು, ಎಲ್‌ಪಿಜಿಗೆ ಪರ್ಯಾಯವಾಗಿ ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರ ಸಲಹೆಯಂತೆ ಕೇಂದ್ರ ಸರ್ಕಾರ ದೇಶದೆಲ್ಲೆಡೆ 50 ಲಕ್ಷ ಪಿಎನ್‌ಜಿ ಸಂಪರ್ಕಕ್ಕೆ ಪ್ರಾಶಸ್ತ್ಯ ನೀಡಿದ ಬೆನ್ನಲ್ಲೇ ಇದೀಗ ಗ್ಯಾಸ್ ಸ್ಟೌ ಮಾದರಿಯಲ್ಲೇ ಜ್ವಾಲೆ ಹರಡುವ ವಿದ್ಯುತ್ ಸ್ಟೌ ಅನ್ನು ಪರಿಚಯಿಸಿ ಅದರ ಉತ್ಪಾದನೆಗೆ ಆದ್ಯತೆ ನೀಡುವ ಚಿಂತನೆ ಸಹ ನಡೆಸುತ್ತಿದೆ.



ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಎಲ್‌ಪಿಜಿ ಇಲ್ಲದೆ ಜ್ವಾಲೆಯನ್ನು ಉತ್ಪಾದಿಸುವ ವಿನೂತನ ಮಾದರಿ, ತಂತ್ರಜ್ಞಾನದ ವಿದ್ಯುತ್ ಸ್ಟೌ ಅನ್ನು ಪ್ರದರ್ಶಿಸಿ, ಪರಿಚಯಿಸಿದ್ದಾರೆ. ಗ್ಯಾಸ್ ಸ್ಟೌ ರೀತಿಯೇ ಜ್ವಾಲೆ ಹರಡುವ ಈ ವಿದ್ಯುತ್ ಸ್ಟೌ ನೋಡಿ ಭಾರತದಲ್ಲಿ ಬೃಹತ್ ಪ್ರಮಾಣದಲ್ಲಿ ಇದರ ಉತ್ಪಾದನೆಗೆ ಸಿದ್ಧತೆ ನಡೆಸುವಂತೆ ಗಮನ ಸೆಳೆದಿದ್ದಾರೆ. ಎಲ್‌ಪಿಜಿಯ ಅಗತ್ಯವಿಲ್ಲದೆ ಅನಿಲದಂತೆ ಉರಿಯುವ ಶುದ್ಧ ಇಂಧನ ಮೂಲವನ್ನು ಅರಸುತ್ತಿದ್ದ ಭಾರತಿಯರಿಗೆ ಇದೀಗ ಎಲ್‌ಪಿಜಿಯಂತೆ ಜ್ವಾಲೆ ಹರಡುವ ಈ ವಿದ್ಯುತ್ ಸ್ಟೌ ಅಡುಗೆ ಅನಿಲದ ಕೊರತೆ ನೀಗಿಸುವ ಆಶಾಭಾವನೆ ಮೂಡಿಸಿದೆ. ಹೋಟೆಲ್, ಬೇಕರಿ ಮುಂತಾದ ಆಹಾರೋದ್ಯಮಿಗಳಿಗೆ ಒಂದು ಪರ್ಯಾಯ ಇಂಧನ ಮೂಲದ ಒಲೆಯಾಗಿ ಕಾಣಿಸುತ್ತಿದೆ. ಎಲ್‌ಪಿಜಿ ಬಳಸದೆ ಜ್ವಾಲೆಯನ್ನು ಉತ್ಪಾದಿಸುವ ಈ ಸ್ಟೌವ್ ಅಂದುಕೊಂಡಂತೆ ಭಾರತದಲ್ಲೇ ದೊಡ್ಡ ಮಟ್ಟದಲ್ಲಿ ತಯಾರಾದರೆ ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಸಾಕಾರಕ್ಕೆ ಮತ್ತೊಂದು ಗರಿ ಎನ್ನುತ್ತಾರೆ ಸಚಿವ ಪ್ರಲ್ಹಾದ ಜೋಶಿ.

ಏನಿದರ ವಿಶೇಷತೆ:? ವಿದ್ಯುತ್ ಚಾಲಿತ ಈ ಸ್ಟೌವ್ ಅಲ್ಲಿ ಎಲ್‌ಪಿಜಿ ಇಲ್ಲದೆಯೇ ಗ್ಯಾಸ್ ಒಲೆಯಂತೆಯೇ ಜ್ವಾಲೆ ಉತ್ಪಾದನೆ ಆಗುತ್ತದೆ. ಹೆಚ್ಚು ಶಾಖವೂ ಇರುತ್ತದೆ. ಮಾತ್ರವಲ್ಲದೆ, ಕಾರ್ಬನ್ ಸಹ ಹೊರ ಸೂಸುವುದಿಲ್ಲ. ನಿಜವಾಗಿ ನಾನು ಸಹ ಈ ಹೊಸ ತಂತ್ರಜ್ಞಾನದಿಂದ ಪ್ರಭಾವಿತನಾಗಿದ್ದೇನೆ ಎಂದಿದ್ದಾರೆ.

ಎಲ್‌ಪಿಜಿ ಗೆ ಪರ್ಯಾಯವಾಗಿ ದೇಶದಲ್ಲಿ ಮತ್ತೊಂದು ತಂತ್ರಜ್ಞಾನದ ಬಗ್ಗೆಯೂ ಚರ್ಚೆ ನಡೆದಿದೆ. ಎಲ್‌ಪಿಜಿ ಕೊರತೆ ಮತ್ತು ಬೆಲೆ ಏರಿಕೆ ಪರಿಣಾಮ ಹೈಡ್ರೋಜನ್ ಅಡುಗೆ ಘಟಕದ ಬಗ್ಗೆಯೂ ವ್ಯಾಪಕ ಚಿಂತನೆ ನಡೆದಿದೆ. ನೀರಿನಿಂದ ಅನಿಲ ಉತ್ಪಾದಿಸುವ ವಿಧಾನ ಇದಾಗಿದೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಡಲ್ಲ: ಕೇಂದ್ರ ಸಚಿವ

ಡಿಕೆಶಿ ಪ್ರಯತ್ನ ಫಲಿಸುವುದಿಲ್ಲ: ಎಚ್‌ಡಿಕೆ

ಮೈಸೂರು: ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವುದಿಲ್ಲ. ಅವರ ಸ್ವಭಾವ ನನಗೆ ಗೊತ್ತಿದೆ. ಸಿಎಂ ಗಾದಿಗಾಗಿಯೇ ಒಬ್ಬರು ಹೆಚ್ಚಾಗಿ ದೇವರ ಮೊರೆ ಹೋಗುತ್ತಿದ್ದಾರೆ. ದೇವರಿಗೆ ಪ್ರಾರ್ಥನೆಯನ್ನು ಮನಪೂರ್ವಕವಾಗಿ ಮಾಡಬೇಕು. ಸ್ವಾರ್ಥಕ್ಕೆ ಬೇಡಿಕೊಂಡರೆ ದೇವರು ಫಲ ಕೊಡುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಕೊನೆಯ ಮೊಳೆ ಹೊಡೆಯು ವುದೇ ಇದೇ ಸಿದ್ದರಾಮಯ್ಯ. ಅವರನ್ನು ಕಂಡರೆ ಅಸೂಯೆ, ಹೊಟ್ಟೆಕಿಚ್ಚು ಇರುವುದು ನಮಗಲ್ಲ. ಕಾಂಗ್ರೆಸ್‌ನಲ್ಲೇ ಕೆಲವರಿಗೆ ಹೊಟ್ಟೆಕಿಚ್ಚಿದೆ' ಎಂದರು. ನಾನು ಅಹಿಂದ ಚಾಂಪಿಯನ್ ಎನ್ನುವ ಸಿದ್ದರಾಮಯ್ಯ, ಕಾಂಗ್ರೆಸ್ ಬಿಟ್ಟು ಹೊರ ಬಂದು 5–10 ಕ್ಷೇತ್ರಗಳಲ್ಲಿ ಅವರ ಅಭ್ಯರ್ಥಿಗಳನ್ನು ಗೆಲ್ಲಿಸಲಿ ನೋಡೋಣ ಎಂದು ಸವಾಲು ಹಾಕಿದರು. ರಾಜಕೀಯವೇ ಸಾಕೆಂದು ಕಣ್ಣೀರಿಟ್ಟಿದ್ದ ಸಿದ್ದರಾಮಯ್ಯಗೆ ಎಚ್.ಡಿ. ದೇವೇಗೌಡರು ಸಮಾಧಾನ ಪಡಿಸಿದ್ದರು. 1999ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಸೇರಿದಂತೆ ನಾವೆಲ್ಲರೂ ಸೋತಿದ್ದವು. ಆಗ ಸಿದ್ದರಾ ಮಯ್ಯ, ಡಾ.ಎಚ್.ಸಿ. ಮಹದೇವಪ್ಪ ಇಬ್ಬರೂ ಎಚ್.ಡಿ. ದೇವೇಗೌಡರ ಮನೆಗೆ ಬಂದಿದ್ದರು. ನನಗೆ ರಾಜಕೀಯವೇ ಸಾಕೆಂದು ಸಿದ್ದರಾಮಯ್ಯ ಕಣ್ಣೀರಿಟ್ಟಿದ್ದರು. ಅಂದು ಅವರಿಟ್ಟಿದ್ದ ಕಣ್ಣೀರಿಗೆ ಬಕೆಟ್ಟಿ ತುಂಬುತ್ತಿತ್ತು. ಆ ಘಟನೆಗೆ ನಾನೇ ಸಾಕ್ಷಿ. ಅವರಿಗೆ ಸಮಾಧಾನ ಮಾಡಿ, ಧೈರ್ಯ ತುಂಬಿ ಬೇರೆ ವ್ಯವಸ್ಥೆಯನ್ನು ದೇವೇಗೌಡರು ಮಾಡಿಕೊಟ್ಟಿದ್ದರು. ಅದನ್ನೆಲ್ಲ ಸಿದ್ದರಾಮಯ್ಯ ಮರೆತಿದ್ದಾರೆ ಎಂದರು.

2006ರಲ್ಲಿ ಸಿದ್ದರಾಮಯ್ಯ ಅಹಿಂದ ಹೆಸರಿನಲ್ಲಿ ನಮ್ಮ ಪಕ್ಷಕ್ಕೆ ಚೂರಿ ಹಾಕಿದರು. ಅವರು ನಮ್ಮ ಪಕ್ಷ ಬಿಟ್ಟಾಗ ಅವರೊಂದಿಗೆ ಹೋದವರು ಕೇವಲ 8 ಮಂದಿ. ಇದೆಲ್ಲಾ ಸಿದ್ದರಾಮಯ್ಯ ಅವರಿಗೆ ನೆನಪಿಲ್ಲವೇ ಎಂದು ಕೇಳಿದರು. ಸಿದ್ದರಾಮಯ್ಯ ಹಣ ವಸೂಲಿಗಾಗಿಯೇ ತಮ್ಮ ಮಗ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರರನ್ನು ನೇಮಿಸಿ ಕೊಂಡಿದ್ದಾರೆ ಎಂದರು.

ಸಿಎಂ ಆದದ್ದು ದೇವರ ಕೃಪೆಯಿಂದ

ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದು ದೇವರ ಕೃಪೆಯಿಂದ. ಒಮ್ಮೆಯೂ ನಮಗೆ ಬಹುಮತ ಬಂದಿರಲಿಲ್ಲ, ಕುಮಾರಸ್ವಾಮಿ ಸಿಎಂ ಆಗುತ್ತಾನೆಂದು ಯಾವ ಜ್ಯೋತಿಷಿಯೂ ಹೇಳಿರಲಿಲ್ಲ. ಆದರೂ ಎರಡು ಬಾರಿ ಮುಖ್ಯಮಂತ್ರಿಯಾದೆ. ಮುಂದೆಯೂ ದೇವರ ಕೃಪೆ ಇದ್ದರೆ ಆಗುತ್ತೇನೆ. ಅದು ನನ್ನ ಕೈಯಲ್ಲಿ ಇಲ್ಲ ಎಂದರು. ಶಾಸಕರು, ಕಾರ್ಯಕರ್ತರು ಪ್ರೀತಿಯಿಂದ ಮುಂದಿನ ಸಿಎಂ ಅಂತಾರೆ. ಸಿಎಂ ಆಗುವುದು ನನ್ನ ಕೈಯಲ್ಲಿಲ್ಲ ಭಗವಂತನ ಕೃಪೆ ಬೇಕು. ಹಿಂದೆ ಸಿಎಂ ಆದಾಗ ಯಾರೂ ಕೇಳಿರಲಿಲ್ಲ. ಮುಂದೆಯೂ ಅದೇ ರೀತಿ ಆಗುತ್ತದೆ ಎಂದರು.

ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

ನಾಯಕತ್ವ ಬದಲಾವಣೆ ವರಿಷ್ಠರ ತೀರ್ಮಾನ

ಮಂಗಳೂರು: ರಾಜ್ಯದಲ್ಲಿ ಉಪಚುನಾವಣೆ ಫಲಿತಾಂಶಕ್ಕೂ ನಾಯಕತ್ವ ಬದಲಾವಣೆಗೂ ಯಾವುದೇ ಸಂಬಂಧ ಇಲ್ಲ. ಈ ವಿಚಾರಗಳ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಮುಂತಾದ ವಿಚಾರಗಳ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ನಾವು ಚರ್ಚೆ ಮಾಡುವ ಅಗತ್ಯ, ಅನಿವಾರ್ಯತೆ, ಅವಶ್ಯಕತೆ ಇಲ್ಲ. ಉಪ ಚುನಾವಣೆ ನಡೆದ ಎರಡು ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲುವಿನ ಬಲವಾದ ನಿರೀಕ್ಷೆಗಳು ಇದೆ. ಒಳ್ಳೆಯ ಫಲಿತಾಂಶ ಬರುವ ಬಗ್ಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದರು.

ನಾವು ಎಲ್ಲ ವರ್ಗ, ಧರ್ಮದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತೇವೆ. ನಮ್ಮಲ್ಲಿ ಯಾರನ್ನು ದೂರ ಮಾಡುವ ಪ್ರಶ್ನೆ ಬರುವುದಿಲ್ಲ. ಒಂದು ಕೋಮು ಇನ್ನೊಂದು ಕೋಮು ಎಂದು ಸೀಮಿತ ಅಲ್ಲ. ಚುನಾವಣೆ ಸಂದರ್ಭ ಟಿಕೆಟ್ ಸಿಕ್ಕಿಲ್ಲ ಎಂದು ಕೆಲವು ಆಕಾಂಕ್ಷಿಗಳಿಗೆ ನೋವು ಇರಬಹುದು. ಅದರಿಂದ ದೊಡ್ಡ ಸಮಸ್ಯೆ ಆಗುವುದಿಲ್ಲ. ನಮ್ಮವರೆಲ್ಲಾ ಚುನಾವಣಾ ಪ್ರಚಾರದಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಿದ್ದಾರೆ. ಬಿಜೆಪಿಯಲ್ಲಿ ಲಿಂಗಾಯತರಿಗೆ ಟಿಕೆಟ್ ಕೊಟ್ಟಿಲ್ಲ. ಹಾಗೆಂದು ಲಿಂಗಾಯತರು ಯಾರು ಓಟು ಹಾಕಿಲ್ಲ ಎಂದು ಹೇಳಲು ಆಗುತ್ತಾ? ದಾವಣಗೆರೆಯಲ್ಲಿ ಹೆಚ್ಚಿನ ಅಂತರದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲುತ್ತಾರೆ ಎಂದರು.

ಯುದ್ಧದ ಸನ್ನಿವೇಶದಿಂದಾಗಿ ಮಧ್ಯಪ್ರಾಚ್ಯದಿಂದ ಭಾರತಕ್ಕೆ ಬರುತ್ತಿದ್ದ ಕೆಲವು ಔಷಧಗಳ ಪೂರೈಕೆ ಆಗುತ್ತಿಲ್ಲ. ಔಷಧ ಪೂರೈಕೆಗೆ ಸ್ವಲ್ಪ ಸಮಯ ಕೇಳುತ್ತಿದ್ದಾರೆ. ಈ ಹಿಂದೆ ಕೊಟ್ಟಿರುವ ಆರ್ಡರ್‌ಗಳ ಡೆಲಿವರಿ ಮಾಡಲು ಆಗುತ್ತಿಲ್ಲ. 30 ದಿನ ಸಮಯ ಕೊಡಿ ಎಂದು ಕೇಳುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಇದೆ

ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಇದೆ ಎಂದು ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ ಸಮಸ್ಯೆ ಇಲ್ಲ ಎಂದು ಹೇಳಬಾರದು. ಅನೇಕ ಕಡೆ ಆಹಾರ ತಯಾರಿಕೆ ಶೇ.50 ಕ್ಕೆ ಇಳಿಸಿದ್ದಾರೆ. ಕೋವಿಡ್ ಸಂದರ್ಭದ ಪರಿಸ್ಥಿತಿಯಂತಾಗಿದೆ ಈಗ. ಹಾಗೆಂದು ಸಮಸ್ಯೆ ಇಲ್ಲ ಎಂದು ಹೇಳಬಾರದು. ಜನರಿಗೆ ಸ್ಪಷ್ಟವಾಗಿ ವಿಷಯ ತಿಳಿಸಬೇಕು. ಎಲ್ಲ ಚೆನ್ನಾಗಿದೆ ಎಂದು ಹೇಳಿ ಜನರನ್ನು ದಾರಿ ತಪ್ಪಿಸಬಾರದು. ನಾವು ಕೇಂದ್ರ ಸರ್ಕಾರವೇ ಹೊಣೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಮಸ್ಯೆ ಇಲ್ಲ ಎಂದು ಯಾಕೆ ಹೇಳಬೇಕು. ಪರ್ಯಾಯ ಕ್ರಮ, ನಿಜಾಂಶವನ್ನು ಜನರ ಮುಂದೆ ಇಡಬೇಕು. ಎಲ್ಲ ಕಡೆ ಕಮರ್ಷಿಯಲ್ ಗ್ಯಾಸ್‌ಗೆ ತೊಂದರೆ ಇದೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಮಸ್ಯೆ ಇದ್ದಾಗ ಇಲ್ಲ ಎಂದು ಹೇಳಿದರೆ ಏನು ಪ್ರಯೋಜನ ಎಂದು ಅವರು ಪ್ರಶ್ನಿಸಿದರು.

ಸಂಪಾದಕೀಯ

ಮಾತುಕತೆ ಯಶಸ್ವಿಯಾದೀತೇ?

ಅಮೆರಿಕ-ಇರಾನ್ ಯುದ್ಧ ವಿರಾಮದ ಭವಿಷ್ಯ ಹಾಗೂ ಪಶ್ಚಿಮ ಏಷ್ಯಾದ ಸ್ಥಿರತೆಯನ್ನು ನಿರ್ಧರಿಸಬಲ್ಲ ಮಹತ್ವದ ಮಾತುಕತೆಗಳ ಹೊಣೆಗಾರಿಕೆಯನ್ನು ಹೊತ್ತು ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಕಿಸ್ತಾನದತ್ತ ಬರುತ್ತಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇಡೀ ಶಾಂತಿ ಮಾತುಕತೆಯ ಹೊಣೆಯನ್ನು ವ್ಯಾನ್ಸ್‌ಗೆ ವಹಿಸಿರುವುದು ಅಚ್ಚರಿಯ ವಿಚಾರವೇ.

ಆದರೂ, ಇವರಿಗೆ ವಹಿಸಿರುವುದು ಟ್ರಂಪ್ ಅವರ ತಂತ್ರಾತ್ಮಕ ನಡೆ ಎಂದೇ ಹೇಳಬೇಕು. ಇರಾನ್ ಜೊತೆಗಿನ ಉದ್ವಿಗ್ನತೆ ಆರು ವಾರಗಳ ಯುದ್ಧದ ಬಳಿಕ ತಾತ್ಕಾಲಿಕ ಯುದ್ಧ ವಿರಾಮಕ್ಕೆ ಬಂದಿದ್ದರೂ, ನೆಲಮಟ್ಟದ ವಾಸ್ತವಿಕತೆ ಇನ್ನೂ ಅತೀ ನಾಜೂಕಾಗಿದೆ. ಇಂತಹ ಸಂದರ್ಭದಲ್ಲಿ 'ಸದಭಿಪ್ರಾಯದಿಂದ ಮಾತುಕತೆಗೆ ಬನ್ನಿ; ಇಲ್ಲವಾದರೆ ಅಮೆರಿಕೆಯನ್ನು ಆಟವಾಡಲು ಯತ್ನಿಸಬೇಡಿ' ಎಂಬ ವ್ಯಾನ್ಸ್ ಎಚ್ಚರಿಕೆ, ವಾಷಿಂಗ್ಟನ್‌ನ ನಿಲುವು ಕಠಿಣವಾಗಿಯೇ ಉಳಿದಿದೆ ಎಂಬ ಸಂದೇಶ ನೀಡುತ್ತದೆ.

ಆದರೆ ಪ್ರಶ್ನೆಯೇನಂದರೆ ಮಾತುಕತೆಯಿಂದ ನಿಜವಾದ ಶಾಂತಿ ಸಾಧ್ಯವೇ? ಇರಾನ್‌ನ ಅಣು ಹಾಗೂ ಕ್ಷಿಪಣಿ ಕಾರ್ಯಕ್ರಮ, ಮಧ್ಯಪ್ರಾಚ್ಯದ ಪ್ರತಿನಿಧಿ ಸಶಸ್ತ್ರ ಗುಂಪುಗಳಿಗೆ ಅದರ ಬೆಂಬಲ, ಹಾರ್ಮುಜ್ ಜಲಸಂಧಿಯಂತಹ ತಂತ್ರಾತ್ಮಕ ಮಾರ್ಗಗಳ ಭದ್ರತೆ ಇವೆಲ್ಲವೂ ಮಾತುಕತೆ ಮೇಜಿನ ಮೇಲೆ ಒಂದೇ ಸಮಯದಲ್ಲಿ ಬಗೆಹರಿಯಬೇಕಾದ ಗಂಭೀರ ವಿಷಯಗಳು. ಈ ಸಮಸ್ಯೆಗಳಿಗೆ ತಾತ್ಕಾಲಿಕ ಒಪ್ಪಂದ ಸಾಲದು; ಪರಸ್ಪರ ವಿಶ್ವಾಸ ಮತ್ತು ಸ್ಪಷ್ಟ ಭದ್ರತಾ ಖಾತರಿ ಅಗತ್ಯ. ಆದರೆ, ಜಾಗತಿಕ ಭಯೋತ್ಪಾದನೆಯ ಕೇಂದ್ರ ಬಿಂದು ಎನ್ನಿಸಿಕೊಂಡಿರುವ ಪಾಕ್ ಅನ್ನು ಶಾಂತಿ ಮಾತುಕತೆಗೆ ಆಯ್ಕೆ ಮಾಡಿಕೊಂಡಿರುವುದೇ ವಿಚಿತ್ರವಾಗಿದೆ.

ವ್ಯಾನ್ಸ್ ಅವರ ರಾಜತಾಂತ್ರಿಕ ಅನುಭವ ಸೀಮಿತವಾಗಿರುವುದು ಈ ಮಾತುಕತೆಗಳ ಯಶಸ್ಸಿನ ಬಗ್ಗೆ ಅನುಮಾನ ಮೂಡಿಸುತ್ತದೆ. ಆದರೆ ಟ್ರಂಪ್ ಆಡಳಿತವು ಅವರನ್ನು ಮುಂಚೂಣಿಗೆ ತಂದುಕೊಂಡಿರುವುದು, ಕಠಿಣ ನಿಲುವು ಮತ್ತು ಸಂಧಾನ ಮನೋಭಾವ ಎರಡನ್ನೂ ಸಮತೋಲನಗೊಳಿಸುವ ಪ್ರಯತ್ನವೆಂದು ಕಾಣುತ್ತದೆ. ಈ ಮಾತುಕತೆಗಳು ವಿಫಲವಾದರೆ ಪಶ್ಚಿಮ ಏಷ್ಯಾ ಮತ್ತೊಮ್ಮೆ ದೊಡ್ಡ ಮಟ್ಟದ ಅಸ್ಥಿರತೆಯತ್ತ ಜಾರಬಹುದು; ಯಶಸ್ವಿಯಾದರೆ ಅದು ಕೇವಲ ಯುದ್ಧವಿರಾಮವಲ್ಲ, ಹೊಸ ಶಾಂತಿ ಸಮೀಕರಣಕ್ಕೂ ದಾರಿ ಮಾಡಬಹುದು.

ಆದರೆ, ಪಾಕಿಸ್ತಾನದಲ್ಲಿ ನಡೆಯುತ್ತಿರುವ ಮಾತುಕತೆಗೆ ಮುನ್ನವೇ ಹಲವಾರು ಸಂದೇಹಗಳು, ವಿಘ್ನಗಳು ಕಾಣಿಸಿಕೊಳ್ಳುತ್ತಿವೆ. ಲೆಬೆನಾನ್ ಮೇಲಿನ ಇಸ್ರೇಲ್ ದಾಳಿ, ಮಾತುಕತೆಯ ದಿಕ್ಕು ಬದಲಿಸಿದೆ. ವ್ಯಾನ್ಸ್, ಕದನ ವಿರಾಮದಲ್ಲಿ ಲೆಬೆನಾನ್ ದಾಳಿ ವಿಚಾರ ಸೇರಿಲ್ಲ ಎಂದಿದ್ದರೆ, ಪಾಕಿಸ್ತಾನ ಸೇರಿದೆ ಎನ್ನುತ್ತಿದೆ. ಇರಾನ್ ಕೂಡ ಲೆಬೆನಾನ್ ಮೇಲೆ ದಾಳಿ ನಿಲ್ಲಿಸಿದರಷ್ಟೇ ಮಾತುಕತೆ ಅಂತ ಹೇಳುತ್ತಿದೆ. ಒಟ್ಟಾರೆಯಾಗಿ ಈ ಮಾತುಕತೆ ಎತ್ತ ಸಾಗುತ್ತಿದೆ ಎಂಬುದೇ ಅರಿವಿಲ್ಲದ ಸಂಗತಿಯಾಗಿದೆ.

ಹೀಗಾಗಿ ಈ ಎಲ್ಲ ಮಾತುಕತೆಗಳು ಕೇವಲ ಅಮೆರಿಕಾಇರಾನ್ ಸಂಬಂಧಗಳ ವಿಷಯವಲ್ಲ; ಅವು ಜಾಗತಿಕ ಇಂಧನ ಭದ್ರತೆ, ಪಶ್ಚಿಮ ಏಷ್ಯಾದ ರಾಜಕೀಯ ಸಮತೋಲನ ಮತ್ತು ವಿಶ್ವಶಾಂತಿಯ ಭವಿಷ್ಯವನ್ನೇ ಸ್ಪರ್ಶಿಸುವ ಮಹತ್ವದ ಘಟ್ಟವಾಗಿವೆ.

ಹಸ್ತದಲ್ಲಿ ಸೂರ್ಯ ರೇಖೆ

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಹಸ್ತ ಸಾಮುದ್ರಿಕಾ ಶಾಸ್ತ್ರದ ಪ್ರಕಾರ, ಹಸ್ತದಲ್ಲಿರುವ ಸೂರ್ಯ ರೇಖೆಯನ್ನು ಅತ್ಯಂತ ಶ್ರೇಷ್ಠವಾದ ರೇಖೆ ಎನ್ನಲಾಗುತ್ತದೆ. ಇದು ಎಲ್ಲಾ ಕಾಲದಲ್ಲೂ ಶುಭದಾಯಕ. ಮಂಗಳದಾಯಕ. ಯಶಸ್ಸನ್ನು ನೀಡುವಂತಹಾ ರೇಖೆ. ಸನ್‌ಲೈನ್ ಅಥವಾ ಅಪೋಲೋ ಲೈನ್ ಎಂದು ಕರೆಯಲಾಗುವ ಇದು ನಿಮ್ಮ ಹಸ್ತದ ಉಂಗುರ ಬೆರಳಿನ ಕೆಳಗೆ ನೇರವಾಗಿದೆ. ಉಂಗುರ ಬೆರಳಿನ ಕೆಳಗೆ ಉಬ್ಬಿರುವ ಪ್ರದೇಶವನ್ನು ಸೂರ್ಯ ಪರ್ವತ ಎನ್ನಲಾಗುತ್ತದೆ. ಆದರೆ....ಈ ರೇಖೆಯು ನೀವು ಎಣಿಸಿದಂತೆ ಉಂಗುರ ಬೆರಳಿನಿಂದ ಕೆಳಗೆ ಇಳಿದಿದ್ದಲ್ಲ!! ನಿಮ್ಮ ಆಯುಸ್ಸು ರೇಖೆ, ಹೃದಯ ರೇಖೆ ಅಥವಾ ಬುದ್ಧಿ ರೇಖೆಯಿಂದ ಪ್ರಾರಂಭವಾಗಿ ಉಂಗುರ ಬೆರಳಿನ ಕಡೆ ಸಾಗಿದೆ. ಈ ರೇಖೆ ನಿಮ್ಮ ಯಶಸ್ಸನ್ನು, ಅದೃಷ್ಟವನ್ನು, ಕೀರ್ತಿಯನ್ನು ಮತ್ತು ಸಾಧನೆಯನ್ನು ಸೂಚಿಸುತ್ತದೆ.

ಕೆಲವರಿಗೆ ಈ ರೇಖೆಯು ಮಣಿಕಟ್ಟಿನಿಂದ ಸಾಗಿರುವುದೂ ಇದೆ. ಅಥವಾ ಅಂಗೈ ಮಧ್ಯದಿಂದ ಸಾಗಿರುತ್ತದೆ. ಹೀಗೆ ಸಾಗಿದ ರೇಖೆಯು ನೋಡಲು ಸ್ಪಷ್ಟವಾಗಿ, ದಪ್ಪಗೆ, ಎಲ್ಲೂ ತಡೆಗಳಿಲ್ಲದೇ ನೇರವಾಗಿ ಉಂಗುರ ಬೆರಳಿನವರೆಗೆ ಅಂದರೆ ಸೂರ್ಯ ಪರ್ವತವನ್ನು ಏರಿ ಸಾಗಿದರೆ, ಅಂತಹವರು ಗೌರವ, ಕೀರ್ತಿ, ಅದೃಷ್ಟ ಮತ್ತು ಉನ್ನತ ಸ್ಥಾನವನ್ನು ಪಡೆದುಕೊಂಡೇ ಹುಟ್ಟಿರುತ್ತಾರೆ.

ಹೀಗೆ ಸಾಗಿದ ರೇಖೆಯ ದಾರಿಯಲ್ಲಿ ತ್ರಿಕೋನಗಳು, ಚತುಷ್ಕೋನಗಳು ಇದ್ದರೆ ಅವರನ್ನು ಜೀವನ ಪೂರ್ತಿ ಯಶಸ್ಸಿನ ದಾರಿಯಲ್ಲಿ ಸಾಗುವುದನ್ನು ಯಾರಿಗೂ ತಡೆಯಲು ಆಗದು. ಅಥವಾ ಸೂರ್ಯ ಪರ್ವತವು ಏರಿದ್ದರೂ ಅಂದರೆ ಉಬ್ಬಿದ್ದರೂ ಸಾಕು ಅಂತಹಾ ವ್ಯಕ್ತಿಯ ಜೀವನದಲ್ಲಿ ಸದಾ ಒಳಿತೇ ಆಗುತ್ತದೆ. ಸರ್ಕಾರಿ ಉದ್ಯೋಗ, ಕಲೆ, ರಾಜಕೀಯ ಮತ್ತು ವ್ಯವಹಾರಗಳಲ್ಲಿ ಅವರಿಗೆ ತುಂಬಾ ಶ್ರೇಯಸ್ಸು ದೊರೆಯುತ್ತದೆ. ಸೂರ್ಯ ಪರ್ವತದ ಮೇಲೆ ತ್ರಿಕೋನಗಳು, ಚತುಷ್ಕೋನಗಳು ಇದ್ದರೆ ಆಗ ಉನ್ನತ ಶ್ರೇಣಿಯನ್ನು ಪಡೆಯುತ್ತಾರೆ. ಅವರಿಗೆ ಪ್ರತಿಷ್ಠೆ ಮತ್ತು ಸನ್ಮಾನಗಳು ಹುಡುಕಿಕೊಂಡು ಬರುತ್ತವೆ.

ಅದೇ ದಪ್ಪವಾಗಿ ಇದ್ದರೆ ಅವರು ಹೆಚ್ಚು ಆಲೋಚನೆ ಮಾಡುವುದಿಲ್ಲ. ತಕ್ಷಣದ ತೀರ್ಮಾನಗಳನ್ನು ತೆಗೆದುಕೊಳ್ಳುವವರಾಗಿರುತ್ತಾರೆ. ಪ್ರತ್ಯುತ್ಪನ್ನ ಮತಿಗಳು, ಮಾಡಿದ್ದಕ್ಕೆ ಪಶ್ಚಾತ್ತಾಪ ಪಡದಿರುವವರು ಆಗಿರುತ್ತಾರೆ. ಸೂರ್ಯ ರೇಖೆಯು ಬುದ್ಧಿ ರೇಖೆಯಿಂದ ಹೊರಟಿದ್ದರೆ, ಅಂತಹಾ ವ್ಯಕ್ತಿಗಳು ತಮ್ಮ ಎಲ್ಲಾ ಕೆಲಸಗಳಿಗೆ ಬುದ್ಧಿಯನ್ನು ಉಪಯೋಗಿಸುತ್ತಾರೆ. ಹೆಚ್ಚು ಓದದಿದ್ದರೂ ಮಹಾ ಬುದ್ಧಿಶಾಲಿ ಗಳಾಗಿರುತ್ತಾರೆ. ಸದಾ ಪರನಿಂದಕರು, ಯಾರು ಯಾವ ಕೆಲಸವನ್ನು ಮಾಡಿ ದರೂ ಅದು ಸರಿಯಾಗಿಲ್ಲ ಎಂದು ನಿಂದಿಸುವವರೂ, ಕುಹಕಿಗಳೂ ಸಹಾ ಆಗಿರುತ್ತಾರೆ.

ಸೂರ್ಯ ರೇಖೆಯು ಶಿಲುಬೆಯಂತೆ ಇದ್ದರೆ, ಅಂತಹವರು ಕಠಿಣ ಪರಿಶ್ರಮಿ ಗಳು ಆಗಿರುತ್ತಾರೆ. ಪಕ್ಕದ ಕಿರುಬೆರಳಿನ ಕೆಳಗಿರುವ ಬುಧ ಪರ್ವತಕ್ಕೆ ವಾಲಿದ್ದರೆ, ಅವರು ಉತ್ತಮ ವಾಗ್ಮಿಗಳು, ಯಶಸ್ವೀ ಉದ್ಯಮಿಗಳೂ, ಉನ್ನತ ಆಡಳಿತಾಧಿಕಾರಿಗಳೂ ಆಗಿರುತ್ತಾರೆ. ತೋರು ಬೆರಳಿನ ಕೆಳಗಿರುವ ಗುರು ಪರ್ವತವನ್ನು ತಲುಪಿದರೆ, ಅಂತಹಾ ವ್ಯಕ್ತಿಗಳು ರಾಜಕೀಯದಲ್ಲಿ ಬಲಾಢ್ಯರಾಗಿ ರುತ್ತಾರೆ. ಕೆಲಸ ಮಾಡುವುದರಲ್ಲಿ ಮತ್ತು ಮಾಡಿಸುವುದರಲ್ಲಿ ಮುಂದೆ. ತುಂಬಾ ಮಹತ್ವಾಕಾಂಕ್ಷಿಗಳು ಆಗಿರುತ್ತಾರೆ.

ಮಂಗಳ ಪರ್ವತವನ್ನು ಸೂರ್ಯ ರೇಖೆಯು ಮುಟ್ಟಿದ್ದರೆ, ಅಂತಹಾ ವ್ಯಕ್ತಿಗಳು ಧೈರ್ಯಶಾಲಿಗಳು ಮತ್ತು ಯಾವುದೇ ಕೆಲಸಕ್ಕೆ ಮುನ್ನುಗ್ಗುವವರು ಆಗಿರುತ್ತಾರೆ. ತಾವು ಸಾಧಿಸಲು ಬಯಸಿದ್ದನ್ನು ಹಠ ಹಿಡಿದು ಸಾಧಿಸುತ್ತಾರೆ. ಸೂರ್ಯನ ಪರ್ವತದಿಂದ ಯಾವುದೇ ರೇಖೆಯು ಮಧ್ಯದ ಬೆರಳಿನ ಕೆಳಭಾಗ ದಲ್ಲಿರುವ ಶನಿ ಪರ್ವತಕ್ಕೆ ಸಾಗಿದ್ದರೆ ಅಥವಾ ಶನಿ ಪರ್ವತದಿಂದ ಸೂರ್ಯ ಪರ್ವತಕ್ಕೆ ಯಾವುದಾದರೂ ರೇಖೆ ಬಂದಿದ್ದರೆ ಅಂಥಹಾ ವ್ಯಕ್ತಿಗಳು ವಿಶೇಷ ವ್ಯಕ್ತಿಗಳಾಗಿರುತ್ತಾರೆ. ಅವರಿಗೆ ಅನೇಕ ಸಿದ್ಧಿಗಳು ಲಭ್ಯವಾಗುತ್ತವೆ. ಜನರನ್ನು ನೋಡಿದಾಕ್ಷಣದಲ್ಲೇ ಅವರ ಮನದಲ್ಲಿ ಇರುವುದು ತಿಳಿಯುತ್ತದೆ. ಹಾಗೂ ಅದನ್ನು ತಿಳಿದುಕೊಂಡು ತಮ್ಮ ಮತ್ತು ಅವರೊಂದಿಗಿನ ವ್ಯವಹಾರ, ಸಂಬಂಧ ಗಳನ್ನು ನಿರ್ಧರಿಸುತ್ತಾರೆ. ಇವರು ವಕೀಲರಾಗುತ್ತಾರೆ. ನ್ಯಾಯಾಧೀಶರಂತೆ ವರ್ತಿಸುತ್ತಾರೆ. ಪ್ರಾಮಾಣಿಕರೂ, ನಂಬಿಕೆಗೆ ಯೋಗ್ಯರೂ ಆಗಿರುತ್ತಾರೆ.

ಹೆಬ್ಬೆರಳ ಕೆಳಗಿರುವ ಶುಕ್ರಪರ್ವತದಿಂದ ಸೂರ್ಯ ರೇಖೆಯು ಹೊರಟಿದ್ದರೆ, ಅವರು ತುಂಬಾ ಐಷಾರಾಮಿ ಜೀವನವನ್ನು ನಡೆಸುವವರಾಗಿರುತ್ತಾರೆ. ಸೌಂದರ್ಯಾರಾಧಕರು, ಕಾಮವನ್ನು ಅತಿಯಾಗಿ ಬಯಸುವವರೂ ಆಗಿರುತ್ತಾರೆ. ಅದೇ ಅದರ ಪಕ್ಕದಲ್ಲಿ ಇರುವ ಚಂದ್ರ ಪರ್ವತದಿಂದ ಸೂರ್ಯರೇಖೆಯು ಹೊರಟಿದ್ದರೆ, ಅವರು ಸದಾ ಪ್ರಯಾಣ ಮಾಡುವವರೂ, ಹೆಚ್ಚು ಹೆಚ್ಚು ಭ್ರಮಾಲೋಕದಲ್ಲಿ ಬದುಕುವವರೂ, ಮಾನಸಿಕವಾಗಿ ತುಂಬಾ ಪ್ರಬಲರೂ ಆಗಿರುತ್ತಾರೆ. ಚಂದ್ರ ರೇಖೆಯಿಂದ ಹೊರಟ ಸೂರ್ಯ ರೇಖೆಯ ಮಧ್ಯೆ ಯಾವುದಾದರೂ ದ್ವೀಪ ರಚನೆಯಾಗಿದ್ದರೆ, ಕತ್ತರಿಸಿದ್ದರೆ, ಮಚ್ಚೆಗಳೇನಾದರೂ ಇದ್ದರೆ ಅಂತಹಾ ವ್ಯಕ್ತಿಗಳು ಮಾನಸಿಕವಾಗಿ ಅಸ್ವಸ್ಥರಾಗುತ್ತಾರೆ. ಸೂರ್ಯ ಪರ್ವತ ಅಥವಾ ಸೂರ್ಯ ರೇಖೆಯ ಮೇಲೆ ಗುಣಾಕಾರದ ಚಿಹ್ನೆ ಇದ್ದರೆ ಅಂತಹಾ ವ್ಯಕ್ತಿಗಳಿಗೆ ಪ್ರತಿಯೊಂದು ವ್ಯವಹಾರದಲ್ಲೂ ನಷ್ಟವೇ ಆಗುತ್ತದೆ. ಬಿಂದು ಅಥವಾ ವೃತ್ತವಿದ್ದರೆ ಅವರಿಗೆ ಕಣ್ಣಿನ ದೋಷ ಉಂಟಾಗುತ್ತದೆ.



ಸೂರ್ಯ ರೇಖೆಯು ನೇರವಾಗಿ ಮತ್ತು ಸ್ಪಷ್ಟವಾಗಿ ನೋಡಿದ ಕೂಡಲೇ ಎದ್ದು ಕಾಣುವಂತೆ ಇದ್ದರೆ ಅಂತಹಾ ವ್ಯಕ್ತಿಗಳು ಸಾರ್ವಜನಿಕ ಜೀವನದಲ್ಲಿ ತುಂಬಾ ಹೆಸರು ಗಳಿಸುತ್ತಾರೆ. ಸೇವಾ ಕಾರ್ಯಗಳಲ್ಲಿ ಸದಾ ಮುಂದಿರುತ್ತಾರೆ. ಆರ್ಥಿಕ ವಾಗಿ ಸಮೃದ್ಧರಾಗಿರುತ್ತಾರೆ. ಆದರೆ ಅವರು ಮಕ್ಕಳ ವಿಷಯದಲ್ಲಿ ಅದೃಷ್ಟಹೀನ ರಾಗಿರುತ್ತಾರೆ. ಇವರಿಗೆ ಮಕ್ಕಳು ಇದ್ದರೂ ತುಂಬಾ ಐಷಾರಾಮಿ ಗಳೂ, ದುರಹಂ ಕಾರಿಗಳೂ ಮತ್ತು ಸಕಲ ದುಷ್ಟ ಚಟಗಳಿಂದ ಕೂಡಿರುವವರೂ ಆಗಿರುತ್ತಾರೆ.

ಅಂಗಾದಿತ್ಯ ಮತ್ತು ಸೂರ್ಯ ರೇಖೆ

ನಿಮ್ಮ ಭವಿಷ್ಯವನ್ನು ನಕ್ಷತ್ರಗಳು, ಗ್ರಹಗಳು, ವಾರ, ತಿಥಿ, ಮಾಸ, ಯೋಗ, ಕರಣ ಮುಂತಾದವುಗಳೊಂದಿಗೆ ಹಸ್ತ ರೇಖೆಗಳೂ ಸಹಾ ರೂಪಿಸುತ್ತವೆ. ಅಂಗಾದಿತ್ಯನ ಸ್ಥಾನವು ಯಾವುದು ಎನ್ನುವುದರ ಮೇರೆಗೆ ಅವೆಲ್ಲಾ ನಿರ್ಧಾರ ಗಳಾಗುತ್ತವೆ. ಅಂಗಾದಿತ್ಯ ತಲೆಯ ಮೇಲಿದ್ದರೆ ಸೂರ್ಯ ರೇಖೆಯು ಪ್ರಜ್ವಲಿಸು ತ್ತದೆ. ಅವರ ಕೆಲಸಗಳೆಲ್ಲಾ ಪ್ರಖರತೆಯಿಂದ ಕೂಡಿರುತ್ತದೆ. ಅದೇ ಅಂಗಾ ದಿತ್ಯನು ಮುಖದ ಮೇಲಿದ್ದರೆ ಅವರು ಹೊಳಪಿನಿಂದ ಸದಾ ಲವಲವಿಕೆಯಿಂದ ಕೂಡಿರುತ್ತಾರೆ. ಅದರಲ್ಲೂ ಸೂರ್ಯ ರೇಖೆ ಚೆನ್ನಾಗಿದ್ದರೆ ಅಂತಹಾ ವ್ಯಕ್ತಿಗಳು ಜೀವಮಾನ ಸಾಧನೆ ಮಾಡುತ್ತಾರೆ. ಅಂಗಾದಿತ್ಯನ ಸ್ಥಾನವು ಹೊಟ್ಟೆಯಾಗಿದ್ದರೆ, ಸೂರ್ಯ ರೇಖೆಯು ಸಹಾ ಸೂಕ್ತವಾದ ಸ್ಥಳದಲ್ಲಿ ಇದ್ದರೆ, ಅವರಿಗೆ ಸಂಪತ್ತಿನ ಧಾರೆಯೇ ಹರಿದು ಬರುತ್ತವೆ. ಹಿಂದೆ ಕೊಡಬೇಕಿದ್ದ ಸಾಲವೆಲ್ಲಾ ವಸೂಲಾಗುತ್ತದೆ.

ಕೆಲವು ಟಿಪ್ಪಣಿಗಳು

ಸೂರ್ಯ ರೇಖೆಯು ವಿಧಿ ರೇಖೆಯ ಸಹೋದರಿ

ಸೂರ್ಯ ರೇಖೆಯು ವಿಧಿ ರೇಖೆಯನ್ನು ಉತ್ತೇಜನಗೊಳಿಸುತ್ತದೆ.

ಮಣಿಕಟ್ಟಿನಿಂದ ಸೂರ್ಯ ರೇಖೆ ಪ್ರಾರಂಭವಾಗಿದ್ದರೆ, ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಪ್ರಖ್ಯಾತರಾಗುತ್ತಾರೆ. ಹೃದಯ ರೇಖೆಯಿಂದ ಸೂರ್ಯ ರೇಖೆ ಶುರುವಾಗಿದ್ದರೆ, ಅವರು ಪ್ರೀತಿಸಿಯೇ ಮದುವೆಯಾಗುವುದು. 40 ವರ್ಷಗಳ ಬಳಿಕ ಪ್ರಸಿದ್ಧ ವ್ಯಕ್ತಿಗಳಾಗುತ್ತಾರೆ.

ಸೂರ್ಯ ರೇಖೆಯು ದಪ್ಪವಾಗಿದ್ದರೆ, ಬರಹಗಾರರು, ಸಂಗೀತಗಾರರು, ಕಲಾವಿದರು, ಶ್ರೀಮಂತರು ಆಗಿರುತ್ತಾರೆ.

ಎರಡು ಸೂರ್ಯ ರೇಖೆಗಳು ಇದ್ದರೆ ಇವರು ಸವ್ಯಸಾಚಿಗಳಾಗುತ್ತಾರೆ. ಎರಡು ಸಂಗತಿಗಳಲ್ಲಿ ಒಂದೇ ರೀತಿಯ ಅತ್ಯುನ್ನತ ಪ್ರಖ್ಯಾತಿಯನ್ನು ಪಡೆಯುತ್ತಾರೆ. ಲಾಟರಿಯಲ್ಲಿ, ಶೇರು ಹೂಡಿಕೆಯಲ್ಲಿ, ಜೂಜಿನಿಂದ, ಹೆಂಡತಿಯ ಕಡೆಯಿಂದ, ಅಪ್ಪನ ಅಥವಾ ಅಮ್ಮನ ಕಡೆಯಿಂದ ಪ್ರತ್ಯೇಕವಾದ ಆಸ್ತಿ ಲಭ್ಯವಾಗುತ್ತದೆ.

ಸೂರ್ಯ ರೇಖೆಯು ಇಲ್ಲದಿದ್ದರೆ ಅದು ಅವರ ದುರದೃಷ್ಟವನ್ನು ಸೂಚಿಸು ತ್ತದೆ. ಜೀವನವು ಸಾಮಾನ್ಯವಾಗಿ ಕೊರತೆಗಳ ಮಧ್ಯೆ ಸಾಗುತ್ತದೆ.

ಸೂರ್ಯ ರೇಖೆಯ ಮೇಲೆ ದ್ವೀಪಗಳಿದ್ದರೆ ಅಂತಹವರು ಖಿನ್ನತೆಗೆ ಒಳಗಾಗುತ್ತಾರೆ. ಸೂರ್ಯ ರೇಖೆಯು ಕತ್ತರಿಸಿದ್ದರೆ ಅಂತಹಾ ವ್ಯಕ್ತಿಗಳ ಬದುಕು ತೊಡಕುಗಳಿಂದ ಕೂಡಿರುತ್ತದೆ. ಸೂರ್ಯ ರೇಖೆಯ ಮೇಲಿನ ನಕ್ಷತ್ರಗಳು ಅವರ ಭವಿಷ್ಯವನ್ನೂ ಸೂಚಿಸುತ್ತವೆ. ಸೂರ್ಯ ರೇಖೆಯು ನೇರವಾಗಿ ದಪ್ಪ ಇದ್ದರೆ, ಅವರಿಗೆ ಬಂದ ಖ್ಯಾತಿಯು ಶಾಶ್ವತವಾಗಿ ಉಳಿಯುತ್ತದೆ.

ಸೂರ್ಯರೇಖೆಯ ಮಧ್ಯದಲ್ಲಿ ಎಲ್ಲಿಯಾದರೂ ಮಚ್ಚೆಗಳಿದ್ದರೆ, ನಿಮ್ಮ ಖ್ಯಾತಿಗೆ ಅಸೂಯೆ ಪಡುವ ಶತೃಗಳನ್ನು ಸೂಚಿಸುತ್ತದೆ. ಸೂರ್ಯ ರೇಖೆಯು ಚಂದ್ರ ಪರ್ವತದ ಬಳಿ ಹೋದರೂ ಸಾಕು ಅದರ ಶಕ್ತಿಯು ನಿಮಗೇ ಅಂಟಿಕೊಳ್ಳುತ್ತದೆ. ಅವರು ಜನಪ್ರಿಯ ಭಾಷಣಕಾರನಾಗುತ್ತಾರೆ. ಗಾಯಕ, ಮತ್ತು ಚಿತ್ರ ಬಿಡಿಸುವುದರಲ್ಲಿ ಪರಿಣತರಾಗಿರುತ್ತಾರೆ.

ಸೂರ್ಯ ರೇಖೆಯ ಬುಡ ಮತ್ತು ತುದಿಗಳು ಕವಲೊಡೆದಿದ್ದರೆ ಅಥವಾ ಯಾವುದಾದರೊಂದು ಭಾಗ ಘಾಸಿಗೆ ಒಳಗಾಗಿದ್ದರೆ, ಆಗ ಸಂತೋಷಕ್ಕೆ ಮತ್ತು ಹಣಕ್ಕೆ ಯಾವುದೇ ಕೊರತೆಯಾಗುವುದಿಲ್ಲ.

ಸೂರ್ಯ ಮತ್ತು ಜೀವನ ರೇಖೆಗಳು ಸೇರಿದ್ದರೆ, ಅಂತಹಾ ವ್ಯಕ್ತಿಗಳು ಪ್ರಸಿದ್ಧರಾಗುತ್ತರೆ. ಸೂರ್ಯರೇಖೆಯು ಸರಪಳಿಯಂತೆ ರೂಪುಗೊಂಡಿದ್ದರೆ, ಶಿಕ್ಷಣದಲ್ಲಿ ಹಿನ್ನಡೆ ಉಂಟಾಗುತ್ತದೆ. ಸೂರ್ಯ ರೇಖೆಯ ಮೇಲಿರುವ ನಕ್ಷತ್ರಗಳು ಅವರ ಸಾಮರ್ಥ್ಯವನ್ನು, ಶಕ್ತಿಯನ್ನು, ಸಮೃದ್ಧಿ ಯನ್ನು ಹೀಗೆ ಎಲ್ಲವನ್ನೂ ಸೂಚಿಸುತ್ತದೆ. ಸೂರ್ಯ ರೇಖೆ ಮತ್ತು ವಿಧಿ ರೇಖೆಯು ಒಂದರ ಮೇಲೊಂದು ಕೂತಿದ್ದರೆ, ಮಹಡಿಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ..

ಸೂರ್ಯ ರೇಖೆಯು ಹಾವು ಹರಿದಂತೆ ಇದ್ದರೆ, ಅಂತಹಾ ವ್ಯಕ್ತಿಗಳು ಮೊಸರನ್ನು ದೂರ ಇಡುತ್ತಾರೆ. ಶುಕ್ರ ರೇಖೆಯು ಸೂರ್ಯ ರೇಖೆಯನ್ನು ತುಂಡರಿಸಿದರೆ, ಅಂತಹಾ ವ್ಯಕ್ತಿಗಳು, ಪ್ರೇಮಕ್ಕೆ ಒಳಗಾಗುತ್ತಾರೆ.

ಜ್ಯೋತಿರಾವ್ ಫುಲೆ: ಭಾರತಕ್ಕೆ ದಾರಿ ದೀಪವಾಗಿರುವ ಮಹಾನ್ ಚೇತನ

ಪುಟ ೧ ➔ ತಮ್ಮ ಶಾಲಾ ದಿನಗಳಿಂದಲೂ, ಯುವ ಜ್ಯೋತಿರಾವ್ ಅವರು ತೀವ್ರ ಕುತೂಹಲಿಗಳಾಗಿದ್ದರು ಮತ್ತು ಅತೀವ ಓದುಗರಾಗಿದ್ದರು; ಅವರು ತಮ್ಮ ವಯಸ್ಸಿನ ಮಕ್ಕಳು ಓದಬೇಕೆಂದು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಓದುತ್ತಿದ್ದರು. ನಾವು ಎಷ್ಟು ಹೆಚ್ಚು ಪ್ರಶ್ನೆಗಳನ್ನು ಹುಟ್ಟುಹಾಕುತ್ತೇವೆಯೋ, ಅಷ್ಟು ಹೆಚ್ಚು ಜ್ಞಾನವು ಅವುಗಳಿಂದ ಹೊರಹೊಮ್ಮುತ್ತದೆ ಎಂದು ಅವರು ಹೇಳುತ್ತಿದ್ದರು. ಬಾಲ್ಯದಿಂದಲೇ ಅವರಿಗೆ ಲಭಿಸಿದ್ದ ವಿಮರ್ಶಾ ಮನೋಭಾವವು ಅವರ ಪ್ರಯಾಣದುದ್ದಕ್ಕೂ ಸ್ಥಿರವಾಗಿ ಉಳಿದಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ತಮ್ಮ ಜೀವನದುದ್ದಕ್ಕೂ ಕಲಿಕೆ ಮತ್ತು ಶಿಕ್ಷಣವು ಮಹಾತ್ಮ ಫುಲೆ ಅವರ ಉದ್ದೇಶದ ಕೇಂದ್ರಬಿಂದುವಾಗಿತ್ತು. ಜ್ಞಾನವು ಕೇವಲ ಕೆಲವರ ಪಾಲಿನ ಸ್ವತ್ತಲ್ಲ, ಬದಲಾಗಿ ಅದು ಎಲ್ಲರಿಗೂ ಹಂಚಲ್ಪಡಬೇಕಾದ ಶಕ್ತಿ ಎಂಬುದನ್ನು ಅವರು ಬಹಳ ಸ್ಪಷ್ಟವಾಗಿ ಗುರುತಿಸಿದ್ದರು. ಕಲಿಕೆಯ ಅವಕಾಶವು ಅನೇಕರಿಗೆ ನಿರಾಕರಿಸಲ್ಪಟ್ಟಿದ್ದ ಕಾಲದಲ್ಲಿ, ಅವರು ಹೆಣ್ಣುಮಕ್ಕಳಿಗಾಗಿ ಮತ್ತು ಔಪಚಾರಿಕ ಶಿಕ್ಷಣದಿಂದ ಹೊರಗುಳಿದವರಿಗಾಗಿ ಶಾಲೆಗಳನ್ನು ತೆರೆದರು. ತಾಯಂದಿರ ಮೂಲಕ ಮಕ್ಕಳಲ್ಲಿ ಉಂಟಾಗುವ ಯಾವುದೇ ಸುಧಾರಣೆಯು ಅತ್ಯಂತ ಅಮೂಲ್ಯವಾದುದು. ಆದ್ದರಿಂದ, ಶಾಲೆಗಳನ್ನು ತೆರೆಯುವುದಾದರೆ, ಅವುಗಳನ್ನು ಮೊದಲು ಹೆಣ್ಣುಮಕ್ಕಳಿಗಾಗಿ ತೆರೆಯಬೇಕು ಎಂದು ಅವರು ಹೇಳುತ್ತಿದ್ದರು. ತರಗತಿಯು ನ್ಯಾಯ ಮತ್ತು ಸಮಾನತೆಯ ಸಾಧನವಾಗುವಂತಹ ಹೊಸ ಸಾಮಾಜಿಕ ಕಲ್ಪನೆಯನ್ನು ಸೃಷ್ಟಿಸಲು ಅವರು ಕೆಲಸ ಮಾಡಿದರು.

ಶಿಕ್ಷಣದ ಬಗ್ಗೆ ಅವರಿಗಿದ್ದ ದೂರದೃಷ್ಟಿಯು ನಮಗೆ ಹೆಚ್ಚಿನ ಸ್ಫೂರ್ತಿ ನೀಡುತ್ತದೆ. ಕಳೆದ ದಶಕದಲ್ಲಿ, ನಾವು ಸಂಶೋಧನೆ ಮತ್ತು ನಾವೀನ್ಯತೆಯನ್ನು ಭಾರತದ ಯುವಜನರ ಮೂಲಾಧಾರವನ್ನಾಗಿ ಮಾಡಲು ಕೆಲಸ ಮಾಡಿದ್ದೇವೆ. ಯುವ ಮನಸ್ಸುಗಳನ್ನು ಪ್ರಶ್ನಿಸಲು, ಅನ್ವೇಷಿಸಲು ಮತ್ತು ಆವಿಷ್ಕರಿಸಲು ಪ್ರೋತ್ಸಾಹಿಸುವ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ. ಜ್ಞಾನ, ಕೌಶಲ ಮತ್ತು ಅವಕಾಶಗಳಲ್ಲಿ ಹೂಡಿಕೆ ಮಾಡುವ ಮೂಲಕ, ಭಾರತವು ತನ್ನ ಯುವಜನತೆಯ ಸಮಸ್ಯೆಗಳನ್ನು ಬಗೆಹರಿಸುವವರನ್ನಾಗಿ ಮತ್ತು ರಾಷ್ಟ್ರೀಯ ಪ್ರಗತಿಯ ಚಾಲಕರನ್ನಾಗಿ ಸಬಲೀಕರಿಸುತ್ತಿದೆ.



ತಮ್ಮ ಜ್ಞಾನ ಮತ್ತು ಬುದ್ಧಿವಂತಿಕೆಯಿಂದಾಗಿ ಮಹಾತ್ಮ ಫುಲೆ ಅವರು ಕೃಷಿ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಬಲವಾದ ತಿಳುವಳಿಕೆಯನ್ನು ಬೆಳೆಸಿಕೊಂಡಿದ್ದರು. ನಮ್ಮ ರೈತರು ಮತ್ತು ಕಾರ್ಮಿಕರಿಗೆ ಆಗುವ ಅನ್ಯಾಯವು ನಮ್ಮ ಸಮಾಜವನ್ನು ದುರ್ಬಲಗೊಳಿಸುತ್ತದೆ ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು. ಸಾಮಾಜಿಕ ಅಸಮಾನತೆಗಳು ಹೊಲಗಳಲ್ಲಿ ಅಥವಾ ಹಳ್ಳಿಗಳಲ್ಲಿ ದೈನಂದಿನ ಜೀವನದಲ್ಲಿ ಹೇಗೆ ವ್ಯಕ್ತವಾಗುತ್ತವೆ ಎಂಬುದನ್ನು ಅವರು ಕಂಡಿದ್ದರು. ಆದ್ದರಿಂದ, ಅವರು ಬಡವರು, ತುಳಿತಕ್ಕೊಳಗಾದವರು ಮತ್ತು ಸಮಾಜದ ಅಂಚಿನಲ್ಲಿರುವವರಿಗೆ ಘನತೆಯನ್ನು ಖಚಿತಪಡಿಸಿಕೊಳ್ಳಲು ತಮ್ಮನ್ನು ತೊಡಗಿಸಿಕೊಂಡರು. ಅದೇ ಸಮಯದಲ್ಲಿ, ಸಾಮಾಜಿಕ ಸಾಮರಸ್ಯವನ್ನು ಕಾಪಾಡಲು ಅವರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು.

ಮಹಾತ್ಮ ಫುಲೆ ಅವರು ಅಭಿಪ್ರಾಯಪಟ್ಟಂತೆ, ಸಮಾಜದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ಸಿಗುವವರೆಗೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲ. ಆದಕ್ಕಾಗಿ, ಅವರು ಈ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತರುವಂತಹ ಸಂಸ್ಥೆಗಳನ್ನು ಕಟ್ಟಿದರು, ಸಮ ಸಮಾಜ ಕ್ಕೆ ಕೊಡುಗೆ ನೀಡಿದರು. ಅವರು ಸ್ಥಾಪಿಸಿದ 'ಸತ್ಯಶೋಧಕ ಸಮಾಜ'ವು ಆಧುನಿಕ ಭಾರತದ ಪ್ರಮುಖ ಸಮಾಜ ಸುಧಾರಣಾ ಚಳವಳಿಗಳಲ್ಲಿ ಒಂದಾಗಿದೆ. ಇದು ಸಮಾಜ ಸುಧಾರಣೆ, ಸಮುದಾಯ ಸೇವೆ ಮತ್ತು ಮಾನವ ಘನತೆಯನ್ನು ಹೆಚ್ಚಿಸುವಲ್ಲಿ ಮುಂಚೂಣಿಯಲ್ಲಿತ್ತು. ಇದು ಮಹಿಳೆಯರು, ಯುವಕರು ಮತ್ತು ಹಳ್ಳಿಗಳಲ್ಲಿ ವಾಸಿಸುವವರ ಪರಿಣಾಮಕಾರಿ ಧ್ವನಿಯಾಯಿತು. ನ್ಯಾಯ, ಪ್ರತಿಯೊಬ್ಬ ವ್ಯಕ್ತಿಯ ಗೌರವ ಮತ್ತು ಸಾಮೂಹಿಕ ಪ್ರಗತಿಯ ಮನೋಭಾವವನ್ನು ಕೇಂದ್ರದಲ್ಲಿ ಇರಿಸುವ ಮೂಲಕ ಸಮಾಜವನ್ನು ಬಲಪಡಿಸಬಹುದು ಎಂಬ ಮಹಾತ್ಮ ಫುಲೆ ಅವರ ಅಚಲ ನಂಬಿಕೆಯನ್ನು ಈ ಚಳವಳಿಯು ಪ್ರತಿಬಿಂಬಿಸಿತು.

ಅವರ ವೈಯಕ್ತಿಕ ಜೀವನವೂ ಸಹ ಧೈರ್ಯದ ಮಹಾನ್ ಪಾಠಗಳನ್ನು ಒಳಗೊಂಡಿದೆ. ಸದಾ ಜನರ ನಡುವೆ ಇರುತ್ತಾ, ಅವರಿಗಾಗಿ ಅಹೋರಾತ್ರಿ ಶ್ರಮಿಸಿದ್ದು ಫುಲೆ ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರಿತು. ಆದರೆ ಎಂತಹ ಗಂಭೀರ ಆರೋಗ್ಯ ಸವಾಲುಗಳೂ ಅವರ ಸಂಕಲ್ಪವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ. ಪಾರ್ಶ್ವವಾಯುವಿನಂತಹ ಕಠಿಣ ಸ್ಥಿತಿಗೆ ಒಳಗಾದ ನಂತರವೂ, ಅವರು ತಮ್ಮ ದೂರದೃಷ್ಟಿಯ ಗುರಿಗಳನ್ನು ಈಡೇರಿಸಲು ಕೆಲಸ ಮಾಡುವುದನ್ನು ಮುಂದುವರಿಸಿದರು. ಹೌದು, ಅವರ ದೇಹಕ್ಕೆ ಕಠಿಣ ಪರೀಕ್ಷೆ ಎದುರಾಗಿತ್ತು, ಆದರೆ ಸಮಾಜದ ಬಗೆಗಿನ ಅವರ ಬದ್ಧತೆ ಮಾತ್ರ ಕಿಂಚಿತ್ತೂ ಕದಲಲಿಲ್ಲ. ಇಂದಿಗೂ, ವಿಶೇಷವಾಗಿ ಸಂಘರ್ಷಗಳ ನಡುವೆ ಧೈರ್ಯವನ್ನು ಹುಡುಕುವ ಕೋಟ್ಯಂತರ ಜನರಿಗೆ ಅವರ ಜೀವನದ ಈ ಆಯಾಮವು ಅತ್ಯಂತ ಶಕ್ತಿಶಾಲಿ ಪ್ರೇರಣೆಯಾಗಿದೆ.

ಮಹಾತ್ಮ ಫುಲೆ ಅವರ ಸ್ಮರಣೆಯು ನಮ್ಮ ರಾಷ್ಟ್ರದ ಶ್ರೇಷ್ಠ ಸುಧಾರಕರಲ್ಲಿ ಒಬ್ಬರಾದ ಸಾವಿತ್ರಿಬಾಯಿ ಫುಲೆ ಅವರ ಉಲ್ಲೇಖವಿಲ್ಲದೆ ಎಂದಿಗೂ ಪೂರ್ಣಗೊಳ್ಳದು. ಭಾರತದ ಪ್ರವರ್ತಕ ಮಹಿಳಾ ಶಿಕ್ಷಕಿಯಾಗಿ, ಅವರು ಹೆಣ್ಣುಮಕ್ಕಳ ಶಿಕ್ಷಣದ ಕ್ರಾಂತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದರು ಮತ್ತು ಅವರ ಕನಸುಗಳಿಗೆ ರೆಕ್ಕೆ ಕಟ್ಟಿದರು. ಮಹಾತ್ಮ ಫುಲೆ ಅವರ ನಿಧನದ ನಂತರವೂ ಸಾವಿತ್ರಿಬಾಯಿ ಅವರು ಸುಧಾರಣೆಯ ಆ ಜ್ಯೋತಿಯನ್ನು ಎತ್ತಿ ಹಿಡಿದರು. 1897ರಲ್ಲಿ ಪ್ಲೇಗ್ ಸಾಂಕ್ರಾಮಿಕ ಹರಡಿದಾಗ, ಅವರು ರೋಗಪೀಡಿತರ ಸೇವೆಗೆ ಎಷ್ಟರಮಟ್ಟಿಗೆ ಸಮರ್ಪಿಸಿಕೊಂಡರೆಂದರೆ, ಅವರು ಸ್ವತಃ ಅದೇ ಕಾಯಿಲೆಗೆ ತುತ್ತಾಗಿ ಕೊನೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದರು.

ನಮ್ಮ ಪುಣ್ಯಭೂಮಿಯು ಕಾಲಕಾಲಕ್ಕೆ ಮಹಾನ್ ಪುರುಷರು ಮತ್ತು ಮಹಿಳೆಯರ ಆಶೀರ್ವಾದಕ್ಕೆ ಪಾತ್ರವಾಗಿದೆ; ಇವರು ತಮ್ಮ ಉದಾತ್ತ ಆಲೋಚನೆ, ಅಪ್ರತಿಮ ತ್ಯಾಗ ಮತ್ತು ಕರ್ತವ್ಯನಿಷ್ಠೆಯ ಮೂಲಕ ಸಮಾಜವನ್ನು ಬಲಪಡಿಸಿದ್ದಾರೆ. ಇವರು ಬದಲಾವಣೆಗಾಗಿ ಯಾರೋ ಬರುತ್ತಾರೆಂದು ಕಾಯಲಿಲ್ಲ, ಬದಲಾಗಿ ತಾವೇ ಆ ಬದಲಾವಣೆಯ ಮೂಲಶಕ್ತಿಯಾದರು. ನೂರಾರು ವರ್ಷಗಳಿಂದ ನಮ್ಮ ನಾಡಿನಲ್ಲಿ ಸಾಮಾಜಿಕ ಸುಧಾರಣೆಯ ಕರೆಯು ಸಮಾಜದ ಒಳಗಿನಿಂದಲೇ ಮೊಳಗುತ್ತಾ ಬಂದಿದೆ. ಜನಸಾಮಾನ್ಯರ ಕಷ್ಟ-ಕಾರ್ಪಣ್ಯಗಳನ್ನು ಕಣ್ಣಾರೆ ಕಂಡು, ಅದನ್ನು 'ಹಣೆಬರಹ' ಎಂದು ಒಪ್ಪಿಕೊಳ್ಳಲು ನಿರಾಕರಿಸಿದ ಧೀಮಂತ ವ್ಯಕ್ತಿಗಳಿಂದ ಈ ಕ್ರಾಂತಿ ಉದ್ಭವಿಸಿದೆ. ಮಹಾತ್ಮ ಜ್ಯೋತಿರಾವ್ ಫುಲೆ ಅಂತಹ ಕ್ರಾಂತಿಕಾರಿ ಧ್ವನಿಗಳಲ್ಲಿ ಒಬ್ಬರು.

2022ರಲ್ಲಿ ಪುಣೆಗೆ ಭೇಟಿ ನೀಡಿದಾಗ ಅಲ್ಲಿನ ಅವರ ಭವ್ಯ ಪ್ರತಿಮೆಗೆ ನಾನು ಗೌರವ ಸಲ್ಲಿಸಿದ್ದನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ನಾವು ಅವರ ದ್ವಿಶತಮಾನೋತ್ಸವದ ವರ್ಷದ ಆರಂಭವನ್ನು ಗುರುತಿಸುತ್ತಿರುವಾಗ, ಮಹಾತ್ಮ ಜ್ಯೋತಿರಾವ್ ಫುಲೆ ಅವರಿಗೆ ಸಲ್ಲಿಸುವ ಅತ್ಯಂತ ಸೂಕ್ತ ಗೌರವವೆಂದರೆ 'ನವೀಕರಣ'. ಅವರಿಗೆ ಹತ್ತಿರವಾದ ಶಿಕ್ಷಣದಂತಹ ವಿಷಯಗಳಿಗೆ ನಮ್ಮ ಬದ್ಧತೆಯನ್ನು ನವೀಕರಿಸುವುದು. ಅನ್ಯಾಯದ ಬಗ್ಗೆ ನಮ್ಮ ಸಂವೇದನಾಶೀಲತೆಯನ್ನು ನವೀಕರಿಸುವುದು. ಸಮಾಜವು ಒಳಗಿನಿಂದಲೇ ತನ್ನನ್ನು ತಾನು ಸುಧಾರಿಸಿಕೊಳ್ಳಬಲ್ಲದು ಎಂಬ ನಮ್ಮ ನಂಬಿಕೆಯನ್ನು ನವೀಕರಿಸುವುದು. ನೈತಿಕ ಸ್ಪಷ್ಟತೆ ಮತ್ತು ಸಾರ್ವಜನಿಕ ಉದ್ದೇಶದೊಂದಿಗೆ ಸೇರಿದಾಗ ಸಮುದಾಯದ ಶಕ್ತಿಯು ಭಾರತದಲ್ಲಿ ಅದ್ಭುತಗಳನ್ನು ಸಾಧಿಸಬಲ್ಲದು ಎಂದು ಅವರ ಜೀವನ ನಮಗೆ ಹೇಳುತ್ತದೆ. ಆದಕ್ಕಾಗಿಯೇ ಅವರು ಇಂದಿಗೂ ಲಕ್ಷಾಂತರ ಜನರಿಗೆ ಶಕ್ತಿ ನೀಡುತ್ತಾರೆ. ಆದಕ್ಕಾಗಿಯೇ ಅವರ ಮಾತುಗಳು ಮತ್ತು ಕೆಲಸಗಳು ಇಂದಿಗೂ ಭರವಸೆಯನ್ನು ನೀಡುತ್ತವೆ ಮತ್ತು ಆದಕ್ಕಾಗಿಯೇ, ಅವರು ಜನಿಸಿದ ಎರಡು ನೂರು ವರ್ಷಗಳ ನಂತರವೂ ಮಹಾತ್ಮ ಜ್ಯೋತಿರಾವ್ ಫುಲೆ ಅವರು ಕೇವಲ ಭೂತಕಾಲದ ವ್ಯಕ್ತಿಯಲ್ಲ, ಬದಲಾಗಿ ಭಾರತದ ಭವಿಷ್ಯಕ್ಕೆ ದಾರಿದೀಪವಾಗಿದ್ದಾರೆ.

ರಾಷ್ಟ್ರಹಿತ ಮರೆತ ಕಾಂಗ್ರೆಸಿನ ತುಷ್ಟೀಕರಣ ನೀತಿ

ಕಾಂಗ್ರೆಸಿನ ಅಲ್ಪಸಂಖ್ಯಾತ ತುಷ್ಟೀಕರಣ ನೀತಿಯಿಂದಾಗಿ ದೇಶಕ್ಕೆ ಬಹಳಷ್ಟು ಪ್ರತಿಕೂಲವಾಗಿದೆ.

ಒಳನೋಟ
• ಹೆ.ಬಾ. ಮಲ್ಯ



ಭಯೋತ್ಪಾದನೆ ಮತಾಂತರಗಳು ಭಾರತಕ್ಕೆ ಮಾತ್ರ ಸೀಮಿತವಲ್ಲ. ಜಗತ್ತಿನ ಹೆಚ್ಚುಕಮ್ಮಿ ಎಲ್ಲಾ ದೇಶಗಳು ಈ ಪೀಡೆಗೆ ಒಳಗಾಗಿವೆ. ಜಗತ್ತಿನಲ್ಲಿ ಕಳೆದ ಎರಡು ಸಹಸ್ರಮಾನಗಳಿಂದ ಈ ಬಗೆಯ ಅಶಾಂತಿ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿಗಳಿಂದ ಗ್ರೀಕ್, ರೋಮ್, ಈಜಿಪ್ಟ್ ಮೊದಲಾದ ನಾಗರಿಕತೆಗಳು ನಾಶವಾದಾಗ ಆ ದೇಶಗಳು ಕ್ರೈಸ್ತ ಮತ್ತು ಇಸ್ಲಾಮಿಕ್ ದೇಶಗಳಾದವು. ಜಿಹಾದ್ ಮತ್ತು ಕ್ರುಸೇಡ್ಸ್ ಯುರೋಪಿನಾದ್ಯಂತ ರಕ್ತದ ಕೋಡಿಯನ್ನು ಹರಿಸಿದ್ದು ಇತಿಹಾಸದಿಂದ ತಿಳಿದು ಬರುತ್ತದೆ. ನಂತರ ಪೋಪ್ ಹಾಗೂ ಕ್ರೈಸ್ತ ಅರಸೊತ್ತಿಗೆಗಳ ವಿರುದ್ಧ ಸಿಡಿದೆದ್ದ ಸಂಘರ್ಷದಿಂದ ಯುರೋಪಿನಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆದ ಪರಿವರ್ತನೆಯು ಬಂಡವಾಳಶಾಹಿ ವ್ಯವಸ್ಥೆ ಹಾಗೂ ಕ್ರಮೇಣ ಸಾಮ್ರಾಜ್ಯವಾದಕ್ಕೆ ಜನ್ಮ ನೀಡಿತು. ನಂತರ ಇದರ ವಿರುದ್ಧ ಕಮ್ಯುನಿಸಂ ಹುಟ್ಟಿಕೊಂಡಿತು. ಬಂಡವಾಳಶಾಹಿ ಮತ್ತು ಕಮ್ಯುನಿಸಂ ಈ ಎರಡು ವ್ಯವಸ್ಥೆಗಳು ಕೂಡಾ ಮತಕ್ಕೆ ಸಮಾನವಾಗಿವೆ. ಹೀಗೆ ಈ ನಾಲ್ಕು ಸಿದ್ಧಾಂತಗಳ ಮೂಲ ಉದ್ದೇಶ ಒಂದೇ. ಜಗತ್ತಿನ ಮೇಲೆ ಬಲಾತ್ಕಾರದಿಂದ ತಮ್ಮ ಅಧಿಕಾರ ಹೇರುವುದು. ಈ ನಾಲ್ಕು ಸಿದ್ಧಾಂತಗಳು ಕಳೆದ ಅನೇಕ ಶತಮಾನಗಳಿಂದ ಜಗತ್ತಿನ ನೆಮ್ಮದಿಯನ್ನು ಹಾಳು ಮಾಡಿದ್ದು, ಭಾರತವೂ ಈ ನಾಲ್ಕು ಪೀಡೆಗಳಿಂದ ನಲುಗಿದೆ. ಭಾರತದ ಆತ್ಮಜಾಗೃತಿಗೆ, ಪುನರುತ್ಥಾನಕ್ಕೆ ಈ ನಾಲ್ಕು ಸಿದ್ಧಾಂತಗಳು ಅಡ್ಡಿಯಾಗಿ ನಿಂತಿವೆ.

1947ರಲ್ಲಿ ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವೇನೊ ಸಿಕ್ಕಿತು. ಆದರೆ ಬಳಿಕವೂ ಭಾರತವು ಭಾರತವಾಗಿ ರೂಪುಗೊಳ್ಳಲಿಲ್ಲ. ಬ್ರಿಟಿಷರು ಬಿತ್ತಿದ ವಿಭಜನವಾದಿ ವಿಷಬೀಜ ಹಾಗೂ ಮೆಕಾಲೆ ಶಿಕ್ಷಣದಿಂದ ನಿರ್ಮಾಣವಾಗಿರುವ ಮಸ್ತಿಷ್ಕಕ್ಷಾಳನ (Brain washing)ದಿಂದ ಭಾರತೀಯರು ಭಾರತೀಯರಾಗಿ ಉಳಿದಿಲ್ಲ. ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಶಾಶ್ವತವಾಗಿ ನೆಲೆಗೊಳಿಸಲು ಅನುಸರಿಸಿದ ಒಡೆದಾಳುವ ನೀತಿಯನ್ನು ಹಾಗೂ ಮುಸ್ಲಿಂ ತುಷ್ಟಿಕರಣ ನೀತಿಯನ್ನು ಸ್ವಾತಂತ್ರ್ಯೋತ್ತರದಲ್ಲಿ ಅಧಿಕಾರಕ್ಕೆ ಬಂದ ನೆಹರು ಕಾಂಗ್ರೆಸ್ ಅನುಸರಿಸಿ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ 'ಜಾತ್ಯತೀತವಾದ', 'ಸೆಕ್ಯುಲರಿಸಂ' ಎಂಬ ಆಕರ್ಷಕ ಹೆಸರಿಟ್ಟಿತು.

ಸರ್ವಾಧಿಕಾರಿಗಳು ತಮ್ಮ ಅಧಿಕಾರವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಒಂದು ಕಾಲ್ಪನಿಕ ಭೂತವನ್ನು ನಿರ್ಮಿಸಿ ಒಂದು ವರ್ಗದ ಜನರಲ್ಲಿ ಶಾಶ್ವತವಾಗಿ ಭಯವನ್ನು ಹುಟ್ಟಿಸುತ್ತಾರೆ. ಹಿಟ್ಲರ್ ಯಹೂದಿಗಳ ಬಗ್ಗೆ ಅಂತಹ ಭಯ ಹುಟ್ಟಿಸಿದ. ಕಮ್ಯುನಿಸ್ಟ್ ನಾಯಕರು ಬಂಡವಾಳಶಾಹಿ ಅಮೆರಿಕನ್ನರ ಬಗ್ಗೆ ಭಯ ಹುಟ್ಟಿಸಿದರೆ, ಬಂಡವಾಳಶಾಹಿ ಅಮೆರಿಕಾ ತನ್ನ ಹಿಡಿತ ಉಳಿಸಿಕೊಳ್ಳಲು ಕಮ್ಯುನಿಸ್ಟ್ ಭೂತದ ಬಗ್ಗೆ ಭಯ ಹುಟ್ಟಿಸಿತು. ಆದರೆ ಕಾಂಗ್ರೆಸ್ ಪಕ್ಷವು ತನ್ನ ವಿರೋಧಿಯಾಗಿ ಬಳಸಿಕೊಂಡುದು ರಾಷ್ಟ್ರೀಯ ಸ್ವಯಂಸೇವಕ ಸಂಘ, ಜನಸಂಘ (ಇಂದಿನ ಬಿಜೆಪಿ) ಹಾಗೂ ಅವುಗಳ ನಾಯಕರನ್ನು. ಆರೆಸ್ಸೆಸ್ ಕೋಮುವಾದಿಯೆಂದೂ, ಅದರ ನಾಯಕರು ಹಿಟ್ಲರ್ ಎಂದೂ, ಮುಸ್ಲಿಂ ವಿರೋಧಿ ಗಳೆಂದೂ, ಗಾಂಧಿಯನ್ನು ಅವರು ಕೊಂದಿದ್ದಾರೆಂದೂ, ಇನ್ನು ಮುಸ್ಲಿಮರನ್ನು ಅವರು ಬಿಡುವರೇನು ಎಂಬುದಾಗಿ ಸುಳ್ಳು ಆರೋಪಗಳನ್ನು ಮಾಡುತ್ತಾ ಮುಸ್ಲಿಮರಲ್ಲಿ ಆರೆಸ್ಸೆಸ್, ಬಿಜೆಪಿ ಬಗ್ಗೆ ಇನ್ನಿಲ್ಲದ ಭಯ ಹುಟ್ಟಿಸುತ್ತಾ ಬಂತು. ಇತ್ತೀಚೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು "ವಿಷ ಸರ್ಪವನ್ನು ಕೊಂದಂತೆ ಆರೆಸ್ಸೆಸ್, ಬಿಜೆಪಿ ಎಂಬ ವಿಷ ಸರ್ಪವನ್ನು ಕೊಲ್ಲಿ" ಎಂದು ಬಹಿರಂಗವಾಗಿ ಅಸ್ಸಾಂನ ರ‍್ಯಾಲಿಯೊಂದರಲ್ಲಿ ದ್ವೇಷ ಭಾಷಣ ಮಾಡಿದ್ದು ಎಲ್ಲರೂ ಗಮನಿಸಿದ್ದಾರೆ. ನಾಮಾವಶೇಷವಾಗುತ್ತಿರುವ ಕಾಂಗ್ರೆಸ್‌ನ ಅಸ್ತಿತ್ವವನ್ನು ಹೇಗಾದರೂ ಮಾಡಿ ಉಳಿಸಿಕೊಂಡು ಮತ್ತೆ ಅಧಿಕಾರಕ್ಕೆ ಬರುವಂತೆ ಮಾಡಲು ಕಾಂಗ್ರೆಸಿಗರು ಕೋಮು ದ್ವೇಷಕ್ಕೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಿದ್ದಾರೆ.



ಪಾಕಿಸ್ತಾನ ನಿರ್ಮಾಣದ ನಂತರ ಭಾರತದಲ್ಲಿ ಉಳಿದ ಮುಸಲ್ಮಾನರ ಮನಸ್ಥಿತಿ ಹೆದರಿದ ಕುರಿಯಂತಾಗಿತ್ತು. ತಮ್ಮ ಬಗ್ಗೆ ಹಿಂದುಗಳಲ್ಲಿ ಆಕ್ರೋಶದ ಭಾವನೆ ಇದೆ ಎಂದು ಗುರುತಿಸಿದ ಮುಸ್ಲಿಮರು ಸ್ವಲ್ಪಕಾಲ ತೆಪ್ಪಗಿದ್ದರು.ಇಲ್ಲಿನ ಸರಕಾರ ಏನೇ ಷರತ್ತು ವಿಧಿಸಿದರೂ ಕೇಳುವ ಮನಸ್ಥಿತಿಯಲ್ಲಿದ್ದರು. ಅಂತಹ ಸಂದರ್ಭದಲ್ಲಿ ಭಾರತದ ನಾಯಕರು ಅವರನ್ನು ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿ ತರುವ ಪ್ರಯತ್ನ ಆರಂಭಿಸಬೇಕಾಗಿತ್ತು. ಅವರ ಪೂರ್ವಜರು ಅರೇಬಿಯಾ, ಮಕ್ಕಾದಿಂದ ಬಂದವರಲ್ಲವೆಂದೂ, ಅಲ್ಲಿಂದ ಬಂದ ಹಿಡಿಯಷ್ಟು ಮಂದಿ ಕ್ರೂರಿ ದೊರೆಗಳ ಬಲವಂತದಿಂದಲೋ, ಆಮಿಷದಿಂದಲೋ ಮತಾಂತರವಾದವರು ಎಂದು ತಿಳಿಹೇಳಬೇಕಾಗಿತ್ತು. ಅವರಿಗೆ ಮರಳಿ ಹಿಂದೂ ಧರ್ಮಕ್ಕೆ ಬರಲು ಅಥವಾ ತಮ್ಮ ಮನೆಗಳಲ್ಲಿ ತಮ್ಮ ಮತವನ್ನು ಪಾಲಿಸಿಕೊಂಡು ಹೋಗಲು ಅಡ್ಡಿಯಿಲ್ಲವೆಂದು ತಿಳಿಸಿ ಹೇಳಬೇಕಾಗಿತ್ತು. ಭಾರತವು ಮೂಲತಃ ಹಿಂದೂಗಳ ದೇಶವೆಂದೂ, ಹಿಂದು ಧರ್ಮ, ಸಂಸ್ಕೃತಿ, ಭಾಷೆ, ಮಹಾಪುರುಷರು, ಗ್ರಂಥಗಳೇ ಇಲ್ಲಿ ಪ್ರಧಾನವೆಂದೂ, ಅವುಗಳಿಗೆ ಗೌರವ ನೀಡುತ್ತಾ ತಮ್ಮ ಮತೀಯ ಆರಾಧನಾ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಲು ಅಡ್ಡಿಯಿಲ್ಲವೆಂದು ಭರವಸೆ ನೀಡಿ, ತಿಳಿಸಿಹೇಳಿದ್ದಲ್ಲಿ ಕ್ರಮೇಣ ಅವರಲ್ಲಿ ಒಂದು ಬಹು ದೊಡ್ಡ ಜನವರ್ಗ ಅರ್ಥ ಮಾಡಿಕೊಂಡು ಹಿಂದೂಗಳೊಡನೆ ಹೊಂದಿಕೊಂಡು ಬಾಳುವ ಸಾಧ್ಯತೆ ಇತ್ತು. ಆದರೆ ಕಾಂಗ್ರೆಸ್ ನಾಯಕರು ಹಾಗಾಗಲು ಬಿಡಲಿಲ್ಲ. ಅವರಿಗೆ ಹಿಂದು ಹಿತ, ರಾಷ್ಟ್ರ ಹಿತಕ್ಕಿಂತ ತಮ್ಮ ಸ್ವಾರ್ಥ, ಅಧಿಕಾರ ಲಾಲಸೆಗಳೇ ಮುಖ್ಯವಾದವು. ಹಿಂದೂ ರಾಷ್ಟ್ರೀಯತೆ ಬೆಳೆಯಲು ಬಿಟ್ಟರೆ ತಮ್ಮ ಬೇಳೆ ಬೇಯುವುದಿಲ್ಲ ಎಂಬುದು ಅವರ ಭಾವನೆಯಾಗಿತ್ತು. ಆದಕ್ಕಾಗಿ ಹಿಂದು ವಿರೋಧ, ಆರೆಸ್ಸೆಸ್ ವಿರೋಧ, ಬಿಜೆಪಿ ವಿರೋಧಗಳನ್ನೇ ತಮ್ಮ ಮುಖ್ಯ ಕಾರ್ಯಸೂಚಿಯನ್ನಾಗಿ ಮಾಡಿಕೊಂಡರು. ಜಾತಿವಾರು, ಭಾಷಾವಾರು, ಉತ್ತರ -ದಕ್ಷಿಣ, ಆರ್ಯ- ದ್ರಾವಿಡ, ಬ್ರಾಹ್ಮಣ-ದಲಿತ ಭೇದಭಾವಗಳಿಗೆ ಇಂಬು ಕೊಟ್ಟು ಹಿಂದು ಸಮಾಜ ದುರ್ಬಲವಾಗಿರುವಂತೆ ನೋಡಿಕೊಂಡರು.

ಚುನಾವಣೆಯಲ್ಲಿ ಗೆಲ್ಲಲು ಜನಗಳ ಮತಗಳೇ ಮುಖ್ಯ. ಆದಕ್ಕಾಗಿ ಅಲ್ಪಸಂಖ್ಯಾತರನ್ನು, ಅದರಲ್ಲೂ ಸಗಟು ಮತ ನೀಡುವ ಮುಸ್ಲಿಮರನ್ನು ಇನ್ನಿಲ್ಲದಂತೆ ತುಷ್ಟೀಕರಿಸಲು ಪ್ರಯತ್ನಶೀಲರಾದರು. ಜೊತೆಗೆ ಹಿಂದುಗಳಲ್ಲಿರುವ ಹಿಂದುಳಿದ ವರ್ಗಗಳವರ ಮನದಲ್ಲಿ ತಪ್ಪು ಭಾವನೆ ಬೆಳೆಸಿ ತಮ್ಮ ಮತಬ್ಯಾಂಕಿಗೆ ಸೇರಿಸಿಕೊಂಡರು. ಹೀಗೆ ಆರೆಸ್ಸೆಸ್ – ಬಿಜೆಪಿ ಏಕಾಂಗಿಯಾದವು.

ಆದರೆ ಸಂಘದ ನೂರು ವರ್ಷಗಳ ಸತತ ಪ್ರಯತ್ನ, ದೇಶ ಒಡೆಯುವವರ ವಿರುದ್ಧ ಹೋರಾಟದ ಫಲವಾಗಿ ಕ್ರಮೇಣ ಹಿಂದುಗಳಲ್ಲಿನ ಒಂದು ದೊಡ್ಡ ವರ್ಗವು ಹಿಂದು ಸಂಘಟನೆಯ ಬೆನ್ನಿಗೆ ನಿಂತಿತು. ವಾಜಪೇಯಿ, ಮೋದಿಯವರಂಥ ಆರೆಸ್ಸೆಸ್ ಪ್ರಚಾರಕರು ಪ್ರಧಾನಿಯಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಆದರೆ ಕಾಂಗ್ರೆಸ್ ನಿರಂತರ ಬ್ರೈನ್ ವಾಶ್ ಮಾಡಿಟ್ಟಂತಹ ಮುಸ್ಲಿಂ ಸಮುದಾಯ ಅವರ ಸುಳ್ಳುಗಳನ್ನು ನಂಬಿ ಮತ್ತೆ ಸಂಘಟಿತವಾಯಿತು. 70 ವರ್ಷ ಸತತ ಅಧಿಕಾರದಲ್ಲಿದ್ದ ಕಾಂಗ್ರೆಸಿನ ಓಲೈಕೆಯಿಂದಾಗಿ ಧೈರ್ಯ ತುಂಬಿಕೊಂಡ ಮುಸ್ಲಿಂ ಸಮುದಾಯದ ಒಂದು ವರ್ಗವು ಹಿಂದು ವಿರೋಧ, ಆರೆಸ್ಸೆಸ್ ವಿರೋಧದಲ್ಲಿ ಬಹಿರಂಗವಾಗಿ ತೊಡಗಿತು. ಮದರಸಾಗಳಲ್ಲಿ ಕೂಡಾ ಹಿಂದು ದ್ವೇಷವನ್ನು ಹರಡಲಾಯಿತು. ಇದೀಗ ಭಾರತದ ಮುಸ್ಲಿಮರ ಒಂದು ಸಣ್ಣ ವರ್ಗ, ವಿಶೇಷವಾಗಿ ಶಿಕ್ಷಿತ ಎಳೆಪೀಳಿಗೆಯವರು ಉಗ್ರವಾದಿ ಮನಸ್ಥಿತಿ ಬೆಳೆಸಿಕೊಳ್ಳುತ್ತಿದ್ದಾರೆ.

ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ ಸರಕಾರವು ಜಮ್ಮು ಕಾಶ್ಮೀರಕ್ಕೆ 370 ವಿಧಿ ಮೂಲಕ ವಿಶೇಷ ಸ್ಥಾನಮಾನ ನೀಡಿತು. ಕಾಶ್ಮೀರಿ ಪಂಡಿತರ ನರಮೇಧದ ನೋಡಿಯೂ ಕ್ರಮ ತೆಗೆದುಕೊಳ್ಳಲಿಲ್ಲ. ಓರ್ವ ಬಿಂದ್ರನ್‌ವಾಲೆಯನ್ನು ಸೃಷ್ಟಿಸಿ ಪಂಜಾಬಿನ ಸಿಕ್ಖರು ಮತ್ತು ಹಿಂದುಗಳ ಮಧ್ಯೆ ಒಡಕು ಸೃಷ್ಟಿಸಿತು. ಪಂಜಾಬಿನಲ್ಲಾದ ಖಲಿಸ್ಥಾನಿ ಭಯೋತ್ಪಾದನೆ ಬಗ್ಗೆ ಎಲ್ಲರಿಗೂ ಗೊತ್ತಿದೆ. ನಂತರ ದಿಲ್ಲಿಯಲ್ಲಿ ಸಾವಿರಾರು ಸಿಕ್ಖರ ನರಮೇಧ ನಡೆಯಿತು. ಇದಕ್ಕೆ ಕಾಂಗ್ರೆಸ್ ನಾಯಕರೇ ಕಾರಣ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಪಾಕಿಸ್ತಾನ ವಿಭಜನೆ, ಹಿಂದು ಮಾರಣ ಹೋಮ, ಕಾಶ್ಮೀರಿ ಪಂಡಿತರ ನರಮೇಧ ಇವುಗಳಿಂದ ಕಾಂಗ್ರೆಸ್ ನಾಯಕರ ಕೈ ರಕ್ತಸಿಕ್ತವಾಗಿದೆ.

ಈಗ ಕಾಂಗ್ರೆಸ್ ಪಕ್ಷವು ಅಧಿಕಾರ ಕಳೆದುಕೊಂಡರೂ ಅದರ ತುಷ್ಟೀಕರಣದಿಂದಾಗಿ ಬೆಳೆದ ಇಸ್ಲಾಮಿಕ್ ಭಯೋತ್ಪಾದನೆಯು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಪಾಕಿಸ್ತಾನ ಹಾಗೂ ವಿದೇಶಗಳಿಂದ ದೊಡ್ಡಮಟ್ಟದ ಹಣವೂ ಹರಿದು ಬರುತ್ತಿದೆ. ಜೊತೆಗೆ ಹಿಂದುಗಳ ಒಂದು ವರ್ಗ, ಅಂದರೆ ಕಾಂಗ್ರೆಸ್ ಮತ್ತು ಪ್ರಾದೇಶಿಕ ವಿರೋಧ ಪಕ್ಷಗಳ ಬೆಂಬಲವೂ ತಮಗಿದೆ ಎಂಬ ಭರವಸೆ ಈ ಭಯೋತ್ಪಾದಕರಿಗೆ ಇದೆ.

ಸದ್ಯ ಮೋದಿ ಸರಕಾರ ಇರುವುದರಿಂದ, ಅಮಿತ್ ಶಾ, ಅಜಿತ್ ದೋವಲ್‌ರಂತಹ ಸಮರ್ಥ ನಾಯಕರು ಇರುವುದರಿಂದ ಭಯೋತ್ಪಾದಕರನ್ನು ಮಟ್ಟ ಹಾಕಲಾಗುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪರಿವರ್ತನೆ ತರಲಾಗುತ್ತಿದೆ. ಅಲ್ಪಸಂಖ್ಯಾತರೂ ಹಿಂದುಗಳೇ ಎಂಬುದಾಗಿ ಹಿಂದು ನಾಯಕರು ಹೇಳಿಕೆ ನೀಡುತ್ತಿದ್ದಾರೆ.

ಯಾವ ರೀತಿಯಲ್ಲಿ ಹಿಂದು ಸಮಾಜದ ಅಸಂಘಟನೆಯಿಂದ ಹಿಂದುಗಳಲ್ಲಿ ದೌರ್ಬಲ್ಯ ಆವರಿಸಿತೋ ಅದನ್ನು ಮೊದಲು ದೂರ ಮಾಡಬೇಕಾಗಿದೆ. ಹಿಂದು ಸಮಾಜದಲ್ಲಿ ಐಕ್ಯತೆ ಮೂಡಿಸಿ, ಗುಲಾಮಿ ಮಾನಸಿಕತೆಯಿಂದ, ಸ್ವಾರ್ಥಪರತೆಯಿಂದ ಅವರನ್ನು ಹೊರತರಬೇಕಾಗಿದೆ. ಅದಕ್ಕೆ ಇಂದು ವಾತಾವರಣ ಅನುಕೂಲಕರವಾಗಿದೆ. ಸರಕಾರವೂ ಅನುಕೂಲಕರವಾಗಿದೆ.

ಲೆಬನಾನ್ ಜತೆ ಐತಿಹಾಸಿಕ ಶಾಂತಿ ಒಪ್ಪಂದ: ನೆತನ್ಯಾಹು

ಹೆಜ್ಬೊಲ್ಲಾ ನಾಶವೇ ಇಸ್ರೇಲ್‌ನ ಗುರಿ

ಟೆಲ್ ಅವೀವ್: ಇರಾನ್‌ನೊಂದಿಗೆ ಘೋಷಿಸಲಾದ ಕದನ ವಿರಾಮವು ಲೆಬನಾನ್ ವಿಚಾರದಲ್ಲಿ ಪರಿಣಾಮ ಬೀರುವುದಿಲ್ಲ. ಹೆಜ್ಬೊಲ್ಲಾ ಮೇಲೆ ಇನ್ನಷ್ಟು ಪ್ರಖರ ದಾಳಿ ನಡೆಸುತ್ತೇವೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಲೆಬನಾನ್ ಮನವಿ ಮಾಡಿಕೊಂಡರೆ ಅದರೊಂದಿಗೆ ಶಾಂತಿ ಮಾತುಕತೆ ನಾವು ಸಿದ್ಧರಿದ್ದೇವೆ ಎಂದು ನೆತನ್ಯಾಹು ಹೇಳಿದ್ದಾರೆ.

ಹೆಜ್ಬೊಲ್ಲಾ ನಿಷ್ಕ್ರಿಯಗೊಳಿಸುವುದೇ ನಮ್ಮ ಗುರಿ. ಲೆಬನಾನ್ ಸರ್ಕಾರದೊಂದಿಗಿನ ಐತಿಹಾಸಿಕ ಶಾಂತಿ ಒಪ್ಪಂದ ಸಾಧಿಸಲು ನೇರ ಮಾತುಕತೆಗಳನ್ನು ಆರಂಭಿಸಲು ಸಚಿವ ಸಂಪುಟಕ್ಕೆ ಸೂಚನೆ ನೀಡಿದ್ದೇನೆ ಎಂದು ನೆತನ್ಯಾಹು ಹೇಳಿದ್ದಾರೆ. ಲೆಬನಾನ್ ಸರ್ಕಾರದ ಮನವಿ ಹಿನ್ನೆಲೆ, ಕಳೆದ ರಾತ್ರಿ ನೇರ ಮಾತುಕತೆಗಳನ್ನು ಆರಂಭಿಸಲು ಸಚಿವ ಸಂಪುಟಕ್ಕೆ ಸೂಚನೆ ನೀಡಿದ್ದೇನೆ. ಹೆಜ್ಬೊಲ್ಲಾ ಉಗ್ರ ಸಂಘಟನೆ ನಿಷ್ಕ್ರಿಯಗೊಳಿಸುವುದು ನಮ್ಮ ಮೊದಲ ಗುರಿ. ಎರಡನೆಯದು ಇಸ್ರೇಲ್ ಮತ್ತು ಲೆಬನಾನ್ ನಡುವಿನ ಐತಿಹಾಸಿಕ ಶಾಂತಿ ಒಪ್ಪಂದ ಎಂದು ಹೇಳಿದರು. ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಹಿಜ್ಬುಲ್ಲಾ ಅಡಗುದಾಣಗಳ ಮೇಲೆ ಹೊಸ ದಾಳಿಗಳನ್ನು ಪ್ರಾರಂಭಿಸಿದೆ. ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾ ಉಗ್ರ ಸಂಘಟನೆಯ ಉಡಾವಣಾ ಕೇಂದ್ರಗಳ ಮೇಲೆ ದಾಳಿ ಆರಂಭಿಸಲಾಗಿದೆ ಎಂದು ಐಡಿಎಫ್ ತನ್ನ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಯುದ್ಧ ವಿರಾಮ ಏಕೈಕ




ಪರಿಹಾರವೆಂದ ಲೆಬನಾನ್: ದೇಶದ ಪ್ರಸ್ತುತ ಪರಿಸ್ಥಿತಿಗೆ ಯುದ್ಧ ವಿರಾಮವೇ ಏಕೈಕ ಪರಿಹಾರವೆಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹೇಳಿದ್ದಾರೆ. ಕದನ ವಿರಾಮದ ಪ್ರಸ್ತಾವನೆ ಹಾಗೂ ಇಸ್ರೇಲ್ ಜತೆ ನೇರ ಮಾತುಕತೆಯ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ ಮತ್ತು ಇದುವರೆಗೆ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ ಎಂದು ತಿಳಿಸಿದ್ದಾರೆ.

ಲೆಬನಾನ್‌ನಲ್ಲಿ ಶಾಂತಿ, ಸುರಕ್ಷತೆಗೆ ಭಾರತ ಕರೆ

ಲೆಬನಾನ್ ರಾಷ್ಟ್ರದಲ್ಲಿ ಸುಮಾರು 1,000ಕ್ಕೂ ಅಧಿಕ ಭಾರತೀಯರಿದ್ದಾರೆ. ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳಲು ಭಾರತ ತನ್ನ ಬದ್ಧತೆಯನ್ನು ಹೊಂದಿದೆ. ಲೆಬನಾನ್ ಮೇಲಿನ ಇಸ್ರೇಲ್ ಸೇನೆಯ ದಾಳಿಗಳು ಆತಂಕಕಾರಿ. ಭಾರತೀಯರ ಸುರಕ್ಷತೆ ನಮ್ಮ ಮೊದಲ ಆದ್ಯತೆಯೆಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.





ಅಮೆರಿಕದ ದುಬಾರಿ ಡ್ರೋನ್ ಹಾರ್ಮುಜ್ ಸಮೀಪ ಕಣ್ಮರೆ!

ಟೆಹ್ರಾನ್: ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಕಣ್ಗಾವಲು ನಡೆಸುತ್ತಿದ್ದ ಅಮೆರಿಕ ಸೇನೆಯ 200 ದಶಲಕ್ಷ ಡಾಲರ್ ಮೌಲ್ಯದ ಎಂಕ್ಯೂ-4ಸಿ ಟ್ರಿಟನ್ ಡ್ರೋನ್ ಕಾಣೆಯಾಗಿದೆ. ಇದು ಕೊನೆಯದಾಗಿ ಇರಾನ್ ವಾಯು ಪ್ರದೇಶದಲ್ಲಿ ಕಾಣಿಸಿಕೊಂಡಿದ್ದು, ಅಮೆರಿಕ-ಇರಾನ್ ನಡುವಿನ ಕದನ ವಿರಾಮ ಘೋಷಣೆಯ ಬಳಿಕ ಘಟನೆ ನಡೆದಿದೆ. ಡ್ರೋನ್ ಪತನಗೊಂಡಿತೋ ಅಥವಾ ಇರಾನಿಯನ್ನರು ಹೊಡೆದುರುಳಿಸಿದ್ದಾರೋ ಎಂಬ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಅಮೆರಿಕದ ದುಬಾರಿ ಎಂಕ್ಯೂ-4ಸಿ ಟ್ರಿಟನ್ ಡ್ರೋನ್, ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್‌ನ ಮೇಲೆ ಸುಮಾರು 3 ಗಂಟೆಗಳ ಕಾಲ ಕಣ್ಗಾವಲು ನಡೆಸಿದ ಬಳಿಕ ಇಟಲಿಯ ಸಿಗೊನೆಲ್ಲಾ ನೌಕಾನೆಲೆಗೆ ಹೋಗುತ್ತಿತ್ತು ಎಂದು ವರದಿಯಾಗಿದೆ. ಆದರೆ ಅದು ಸಿಗೊನೆಲ್ಲಾ ಸೇನಾನೆಲೆಯನ್ನು ತಲುಪಿಲ್ಲ. ಡ್ರೋನ್ ಕಾಣೆಯಾಗುವ ಮುನ್ನ ಸಹಾಯಕ್ಕಾಗಿ ತುರ್ತು ಪರಿಸ್ಥಿತಿ ಕೋಡ್ 7700 ಕಳುಹಿಸಿತ್ತು. ಹಾರ್ಮುಜ್‌ನಲ್ಲಿ ಅಮೆರಿಕ ಮತ್ತು ಇರಾನ್ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡ 2 ದಿನಗಳ ಬಳಿಕ ಡ್ರೋನ್ ಕಾಣೆಯಾಗಿದೆ. ಇದು ಸುಮಾರು 50,000 ಅಡಿ ಎತ್ತರದಲ್ಲಿ 24 ಗಂಟೆಗಳಿಗೂ ಅಧಿಕ ಕಾಲ 13,705 ಕಿ.ಮೀ. ದೂರದವರೆಗೆ ಕಣ್ಗಾವಲು ಸಾಮರ್ಥ್ಯವನ್ನು ಹೊಂದಿದೆ. 2025ರ ವರದಿಯ ಪ್ರಕಾರ, ಇಂತಹ 20 ಡ್ರೋನ್‌ಗಳನ್ನು ಹೊಂದಿರುವ ಅಮೆರಿಕ ನೌಕಾಪಡೆ ಇನ್ನೂ 7 ಖರೀದಿಸಲಿದೆ.

ಆಪರೇಷನ್ ರೋರಿಂಗ್ ಲಯನ್

ಇಸ್ರೇಲ್ ಸೇನೆ (ಐಡಿಎಫ್), ಇರಾನ್ ಮೇಲಿನ ತನ್ನ ಆಪರೇಷನ್ ರೋರಿಂಗ್ ಲಯನ್ ಅಂಕಿ ಸಂಖ್ಯೆಯನ್ನು ಶುಕ್ರವಾರ ಹಂಚಿಕೊಂಡಿದೆ.

4,000+ ಗುರಿಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ

18,000+ ಬಾಂಬ್‌ಗಳಿಂದ ಇರಾನ್ ಮೇಲೆ ದಾಳಿ

8,500+ ಇರಾನ್‌ನಲ್ಲಿ ನಡೆಸಿದ ಕಾರ್ಯಾಚರಣೆ ಹಾರಾಟ

1,000+ ಇಸ್ರೇಲ್ ಯುದ್ಧ ವಿಮಾನಗಳ ದಾಳಿ ಹಾರಾಟ

10,800+ ಇರಾನ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿ

6,700+ ಇರಾನ್ ಸೇನಾ ಮೂಲಸೌಕರ್ಯಗಳು, ವ್ಯವಸ್ಥೆಗಳ ನಾಶ



ಕದನ ವಿರಾಮ ಇನ್ನೂ ಅಸ್ಥಿರ!

ಕದನ ವಿರಾಮದ ಭವಿಷ್ಯ ಇನ್ನೂ ಅನಿಶ್ಚಿತವಾಗೇ ಉಳಿದುಕೊಂಡಿದೆ. ಯಾಕೆಂದರೆ ಹಲವು ಪ್ರಮುಖ ವಿಚಾರಗಳ ಬಗ್ಗೆ ರಾಷ್ಟ್ರಗಳ ನಡುವೆ ಯಾವುದೇ ಸ್ಪಷ್ಟತೆಯಿಲ್ಲ. ಪರಮಾಣು ಹಾಗೂ ಕ್ಷಿಪಣಿ ನಿರ್ಮಾಣ ಯೋಜನೆಯನ್ನು ಇರಾನ್ ಕೈಬಿಡುವುದು, ಹೆಚ್ಚುವರಿ ಯುರೇನಿಯಂ ಸಂಗ್ರಹಿಸುವುದನ್ನು ನಿಲ್ಲಿಸುವುದು ಅಮೆರಿಕ ಮತ್ತು ಇಸ್ರೇಲ್‌ನ ಪ್ರಮುಖ ಗುರಿಗಳಾಗಿವೆ. ಆದರೆ ತನ್ನ ಪರಮಾಣು ಬಾಂಬ್ ಯೋಜನೆ ಶಾಂತಿಯುತವಾಗಿದ್ದು, ಯುರೇನಿಯಂ ಸಂಸ್ಕರಣೆ ಹಕ್ಕನ್ನು ಉಳಿಸಿಕೊಳ್ಳುವುದು ಇರಾನ್ ಗುರಿಯಾಗಿದೆ. ಯುದ್ಧ ವಿರಾಮ ಘೋಷಿಸಲ್ಪಟ್ಟಿದ್ದರೂ, ಪರಿಸ್ಥಿತಿ ಇನ್ನೂ ಗಂಭೀರವಾಗಿದೆ ಮತ್ತು ಶಾಶ್ವತ ಶಾಂತಿ ಸಾಧಿಸಲು ಇನ್ನೂ ಬಹಳ ಪ್ರಯತ್ನ ಅಗತ್ಯವಿದೆ.

ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ಗುಂಡಿನ ಚಕಮಕಿ

ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ವಿರಾಮ ಅಸ್ಥಿರವಾದ ಹಿನ್ನೆಲೆ ಶುಕ್ರವಾರ ಉನ್ನತ ಮಟ್ಟದ ಮಾತುಕತೆಗೆ ಎರಡೂ ರಾಷ್ಟ್ರಗಳ ಸಂಧಾನಕಾರರು ಸಿದ್ಧತೆ ನಡೆಸುತ್ತಿದ್ದಾರೆ. ಈ ಅಸ್ಥಿರತೆಯ ಮಧ್ಯೆ ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ಗುಂಡಿನ ಚಕಮಕಿ ಏರ್ಪಟ್ಟಿದ್ದು, ಹಾರ್ಮುಜ್ ಜಲಸಂಧಿಯನ್ನು ತೆರೆಯದೆ ಇರಾನ್ ತನ್ನ ಹಿಡಿತ ಸಾಧಿಸಿದೆ. ಕದನ ವಿರಾಮ ಅನುಷ್ಠಾನಕ್ಕೆ ಹಲವು ಅಡೆತಡೆಗಳು ಇನ್ನೂ ಉಳಿದುಕೊಂಡಿವೆ. ಶಾಶ್ವತ ಕದನ ವಿರಾಮ ಒಪ್ಪಂದ ಮಾತುಕತೆಗೆ ಹಲವು ಸವಾಲುಗಳಿವೆ. ಇರಾನ್ ಮಾಧ್ಯಮಗಳ ಪ್ರಕಾರ, ಲೆಬನಾನ್ ಮೇಲೆ ಇಸ್ರೇಲ್ ದಾಳಿಗಳನ್ನು ನಿಲ್ಲಿಸದಿದ್ದರೆ ಮಾತುಕತೆ ನಡೆಯುವುದು ಸಂಶಯ.

ಇರಾನ್ ವಿರುದ್ಧ ಟ್ರಂಪ್ ಅಸಮಾಧಾನ

ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮುಕ್ತ ಸಂಚಾರವನ್ನು ನಿರ್ಬಂಧಿಸಿದ ಇರಾನ್ ಅನ್ನು ಟೀಕಿಸಿದ್ದಾರೆ. ಇರಾನ್ ತನ್ನ ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಿಲ್ಲ. ಇದರಿಂದ ಜಾಗತಿಕ ತೈಲ ಪೂರೈಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಹಡಗುಗಳ ಮುಕ್ತ ಸಂಚಾರಕ್ಕೆ ಇರಾನ್ ತಡೆಯೊಡ್ಡಿರುವುದು ಆರ್ಥಿಕ ಅಸ್ಥಿರತೆ ಉಂಟುಮಾಡುತ್ತಿದೆ ಎಂದು ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇರಾನ್ ಕದನ ವಿರಾಮ ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ.

ಕುವೈತ್ ಮೇಲೆ ಡ್ರೋನ್ ದಾಳಿ ಆರೋಪ

ಈ ಮಧ್ಯೆ ಕುವೈತ್ ಗುರುವಾರ ತಡರಾತ್ರಿ ಇರಾನ್ ಡ್ರೋನ್ ದಾಳಿ ನಡೆಸಿದೆಯೆಂದು ಆರೋಪಿಸಿದೆ. ಇರಾನ್ ಮತ್ತದರ ಸೇನಾ ಮೈತ್ರಿಗಳು ದಾಳಿ ನಡೆಸಿರುವುದಾಗಿ ಕುವೈತ್ ದೂರಿದೆ. ಆದರೆ ಈ ದಾಳಿಯಲ್ಲಿ ತಮ್ಮ ಪಾತ್ರವಿಲ್ಲವೆಂದು ಇರಾನ್ ಸೇನೆ (ಐಆರ್‌ಜಿಸಿ) ಸ್ಪಷ್ಟೀಕರಣವನ್ನು ನೀಡಿದೆ. ಈ ಹಿಂದಿನ ಕೆಲವೊಮ್ಮೆ ಐಆರ್ ಜಿಸಿ ದಾಳಿ ನಡೆಸಿದ್ದರೂ ಅಧಿಕೃತವಾಗಿ ಒಪ್ಪಿಕೊಂಡಿಲ್ಲ.

ಇಸ್ರೇಲ್ -ಲೆಬನಾನ್ ಮಧ್ಯೆ ನೇರ ಮಾತುಕತೆ

ಇಸ್ರೇಲ್ ಮತ್ತು ಲೆಬನಾನ್ ನಡುವಿನ ನೇರ ಮಾತುಕತೆಗಳು ಶೀಘ್ರದಲ್ಲೇ ಆರಂಭವಾಗುವ ನಿರೀಕ್ಷೆಯಿದೆ. ಅಮೆರಿಕದ ವಾಷಿಂಗ್ಟನ್‌ನಲ್ಲಿ ಇಸ್ರೇಲ್ ಮತ್ತು ಲೆಬನಾನ್ ನಡುವಿನ ಶಾಂತಿ ಮಾತುಕತೆಗಳು ನಡೆಯಲಿವೆ. ಸಭೆಯಲ್ಲಿ ಅಮೆರಿಕದ ಅಧಿಕಾರಿಗಳ ಉಪಸ್ಥಿತಿ ಇರಲಿದೆ ಎಂದು ಮೂಲಗಳು ತಿಳಿಸಿವೆ. ಲೆಬನಾನ್ ಜತೆಗಿನ ಶಾಂತಿ ಸಭೆಯಲ್ಲಿ ಹೆಜ್ಬೊಲ್ಲಾ ಮೇಲಿನ ಯುದ್ಧ ವಿರಾಮ ಒಳಗೊಂಡಿಲ್ಲ ಎಂಬ ವಾದ ಇಸ್ರೇಲ್‌ನದ್ದಾಗಿದೆ. ಅಮೆರಿಕ-ಇರಾನ್ ಕದನ ವಿರಾಮ ಘೋಷಿಸಿದ ದಿನವೇ ಬೈರುತ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದು, 300ಕ್ಕೂ ಅಧಿಕ ಜನರು ಬಲಿಯಾಗಿದ್ದರು. ಇದೇ ವೇಳೆ ದಾಳಿ ಕಡಿಮೆ ಮಾಡುವಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಮನವಿ ಮಾಡಿದ್ದಾರೆ. ಉತ್ತರ ಇಸ್ರೇಲ್ ಕಡೆಗೆ ಲೆಬನಾನ್ ಹಾರಿಸಿದ ರಾಕೆಟ್‌ಗಳಿಗೆ ಇಸ್ರೇಲ್ ಪ್ರತಿದಾಳಿ ನಡೆಸಿದೆ. ಹಿಜ್ಬುಲ್ಲಾ ಮೇಲೆ ದಾಳಿ ಮುಂದುವರಿದರೆ ಕಠಿಣ ಪ್ರತಿಕ್ರಿಯೆ ನೀಡುತ್ತೇವೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗಾರ್ ಖಾಲಿಬಫ್ ಎಚ್ಚರಿಕೆ ನೀಡಿದ್ದಾರೆ.

ಲೆಬನಾನ್ ಜತೆ ಸಂಬಂಧ ಮರುಸ್ಥಾಪನೆಗೆ ಪ್ರಯತ್ನ: ನೆತನ್ಯಾಹು

ಲೆಬನಾನ್ ಜೊತೆ ಶೀಘ್ರ ಮಾತುಕತೆ ಆರಂಭಿಸಲು ಸಿದ್ಧರಿದ್ದೇವೆ. ಹೆಜ್ಬೊಲ್ಲಾ ಉಗ್ರ ಸಂಘಟನೆಯನ್ನು ನಿಷ್ಕ್ರಿಯಗೊಳಿಸುವುದೇ ನಮ್ಮ ಪ್ರಮುಖ ಗುರಿ. ಇಸ್ರೇಲ್ ಮತ್ತು ಲೆಬನಾನ್ ನಡುವೆ ಸಂಬಂಧ ಪುನಃಸ್ಥಾಪನೆಗೆ ಪ್ರಯತ್ನಿಸುತ್ತೇವೆ ಎಂದು ನೆತನ್ಯಾಹು ಹೇಳಿದ್ದಾರೆ.

ಹಾರ್ಮುಜ್ ಜಲಸಂಧಿ: ವಿವಾದಗಳ ಕೇಂದ್ರಬಿಂದು

ಹಾರ್ಮುಜ್ ಜಲಸಂಧಿ ಮೇಲಿನ ಇರಾನ್ ನಿಯಂತ್ರಣವು ಜಾಗತಿಕ ಆರ್ಥಿಕತೆ, ಇಂಧನ ಪೂರೈಕೆ, ವ್ಯಾಪಾರದ ಮೇಲೆ ಪ್ರಭಾವ ಬೀರಿದೆ. ಜಾಗತಿಕ ತೈಲ ಪೂರೈಕೆಯ ಸುಮಾರು ಶೇ.20ರಷ್ಟು ಭಾಗ ಈ ಮಾರ್ಗದಲ್ಲಿ ಸಾಗುತ್ತದೆ. ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಶೇ.30ಕ್ಕಿಂತ ಅಧಿಕ (ಬ್ರೆಂಟ್ ಕಚ್ಚಾ ತೈಲ ಬ್ಯಾರೆಲ್‌ಗೆ 97 ಡಾಲರ್) ಏರಿಕೆ ಕಂಡಿದೆ. ಹಾರ್ಮುಜ್ ಮುಚ್ಚಿರುವುದರಿಂದ ಷೇರು ಮಾರುಕಟ್ಟೆ ಕುಸಿತ ಕಂಡಿದೆ.



ಕಿರುಸುದ್ದಿ

ಮಹಾಭಿಯೋಗ ಭೀತಿ: ನ್ಯಾ.ವರ್ಮಾ ರಾಜೀನಾಮೆ

ಹೊಸದಿಲ್ಲಿ: ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧ ಲೋಕಸಭಾ ಸ್ಪೀಕರ್ ಆರಂಭಿಸಿದ್ದ ಮಹಾಭಿಯೋಗ ಪ್ರಕ್ರಿಯೆ ಆರಂಭಿಸುವ ಭೀತಿಯಿಂದ ಅವರೇ ರಾಜೀನಾಮೆ ನೀಡಿದ್ದಾರೆ. ಯಶವಂತ ವರ್ಮಾ ರಾಜೀನಾಮೆ ನೀಡಿರುವುದರಿಂದ ಅವರನ್ನು ವಜಾಗೊಳಿಸುವ ಪ್ರಕ್ರಿಯೆ ನಿರರ್ಥಕವೆಂದು ಹಿರಿಯ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ನ್ಯಾಯಮೂರ್ತಿ ವರ್ಮಾ ಸಲ್ಲಿಸಿದ್ದಾರೆ. ದಿಲ್ಲಿ ಹೈಕೋರ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಸಮಯದಲ್ಲಿಯೇ ಅವರ ದಿಲ್ಲಿ ನಿವಾಸದಲ್ಲಿ ಸುಟ್ಟ ಕರೆನ್ಸಿ ನೋಟುಗಳು ಪತ್ತೆಯಾಗಿ ವಿವಾದಕ್ಕೆ ಸಿಲುಕಿಕೊಂಡಿದ್ದರು.

ಮಥುರಾ: ನದಿಯಲ್ಲಿ ದೋಣಿ ಮುಳುಗಿ 10 ಭಕ್ತರ ಸಾವು

ಲಖನೌ: ಉತ್ತರ ಪ್ರದೇಶದ ಮಥುರಾದ ಕೇಶಿ ಘಾಟ್ ಬಳಿ ಯಮುನಾ ನದಿಯಲ್ಲಿ ಶುಕ್ರವಾರ ದೋಣಿ ಮುಳುಗಿ ಕನಿಷ್ಠ 10 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಳೀಯ ಅಧಿಕಾರಿಗಳು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಪೊಲೀಸ್ ಅಧಿಕಾರಿಗಳ ಪ್ರಕಾರ, 22 ಮಂದಿಯನ್ನು ನದಿಯಿಂದ ರಕ್ಷಿಸಲಾಗಿದ್ದು, ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಮಥುರಾ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಚಂದ್ರ ರಾವತ್ ಈ ಘಟನೆಯನ್ನು ದೃಢಪಡಿಸಿದ್ದು, ಕೇಶಿ ಘಾಟ್ ಬಳಿಯ ಯಮುನಾ ನದಿಯಲ್ಲಿ ದೋಣಿ ಮುಳುಗಿದೆ.

ಪ.ಬಂಗಾಳ ಸಿಎಂ ದೀದಿ ಬಳಿ ಸ್ವಂತ ಕಾರು, ಮನೆ ಇಲ್ಲ!

ಕೋಲ್ಕತ್ತಾ: ಈ ಬಾರಿಯ ವಿಧಾನಸಭೆ ಚುನಾವಣೆಗೆ ಭವಾನೀಪುರ ವಿಧಾನಸಭಾ ಕ್ಷೇತ್ರದಿಂದ ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ನಾಮಪತ್ರ ಸಲ್ಲಿಸಿದ್ದಾರೆ. ಮಮತಾ ಬ್ಯಾನರ್ಜಿ ಅವರು ದೀರ್ಘಕಾಲ ರಾಜಕೀಯದಲ್ಲಿದ್ದರೂ ಮನೆ, ಕಾರು ಅಥವಾ ಯಾವುದೇ ಪ್ರಮುಖ ಸ್ಥಿರ ಆಸ್ತಿ ಹೊಂದಿಲ್ಲವೆಂದು ಅವರ ಚುನಾವಣಾ ಅಫಿಡವಿಟ್‌ನಲ್ಲಿ ಉಲ್ಲೇಖವಾಗಿದೆ. ದೇಶದ ಅತ್ಯಂತ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿಗಳಲ್ಲಿ ಒಬ್ಬರಾಗಿ ಗುರುತಿಸಲ್ಪಟ್ಟಿರುವ ಮಮತಾ ಬ್ಯಾನರ್ಜಿ ಅವರ ಒಟ್ಟು 15.4 ಲಕ್ಷ ರೂ ಮೌಲ್ಯದ ಆಸ್ತಿಯನ್ನು ಘೋಷಿಸಿದ್ದಾರೆ.



ಪಾಕ್ ಬೆಂಬಲಿತ 11 ಶಂಕಿತ ಉಗ್ರರ ಬಂಧನ

ಹೊಸದಿಲ್ಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಹಾಗೂ ಖಾಲಿಸ್ತಾನಿ ಉಗ್ರ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಶನಲ್ ಬೆಂಬಲ ಹೊಂದಿದೆ ಎನ್ನಲಾದ ಅಂತಾರಾಜ್ಯ ಗೂಢಚರ ಹಾಗೂ ಭಯೋತ್ಪಾದಕ ಜಾಲವನ್ನು ದಿಲ್ಲಿ ಪೊಲೀಸ್ ವಿಶೇಷ ದಳ ಭೇದಿ ಸಿದ್ದು, ದಿಲ್ಲಿ, ಪಂಜಾಬ್‌ನಲ್ಲಿ ಒಟ್ಟು 11 ಮಂದಿಯನ್ನು ಬಂಧಿಸಿದೆ.

ಬಂಧಿತರು ದೇಶದ ವಿವಿಧ ಸಂವೇದನಾಶೀಲ ರಕ್ಷಣಾ ಮತ್ತು ಭದ್ರತಾ ಕೇಂದ್ರಗಳ ಸುತ್ತ ನಿಗಾ ಸಾಧನಗಳನ್ನು ಅಳವಡಿಸಿ, ಅದರ ನೇರ ದೃಶ್ಯಗಳನ್ನು ಪಾಕಿಸ್ತಾನದಲ್ಲಿರುವ ಹ್ಯಾಂಡ್ಲರ್‌ಗಳಿಗೆ ರವಾನಿಸುತ್ತಿದ್ದರೆಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆರೋಪಿಗಳು ಎನ್‌ಕ್ರಿಪ್ಟ್ ಮಾಡಿದ ಮೆಸೇಜಿಂಗ್ ಆಪ್‌ಗಳ ಮೂಲಕ ಪಾಕ್ ಮೂಲದ ಸಂಚಾಲಕರೊಂದಿಗೆ ಸಂಪರ್ಕದಲ್ಲಿದ್ದು, ರಾಷ್ಟ್ರ ಭದ್ರತೆಗೆ ಧಕ್ಕೆ ಉಂಟುಮಾಡುವ ಚಟುವಟಿಕೆಗಳಿಗೆ ಸೂಚನೆ ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಆರು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ನಂತರ ಜಾಲದ ವಿಸ್ತೃತ ಸಂಪರ್ಕಗಳು ಪತ್ತೆಯಾಗಿದ್ದು, ಒಟ್ಟು 11 ಮಂದಿಯನ್ನು ಬಂಧಿಸಲಾಗಿದೆ. ಕಾರ್ಯಾಚರಣೆಯಲ್ಲಿ ಒಂಬತ್ತು ಸೌರಶಕ್ತಿ ಆಧಾರಿತ ಸಿಸಿಟಿವಿ ಘಟಕಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಸಾಧನಗಳನ್ನು ಸಂವೇದನಾಶೀಲ ಸೈನಿಕ ಹಾಗೂ ಭದ್ರತಾ ಕೇಂದ್ರಗಳ ಬಳಿ ಅಳವಡಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತರಲ್ಲಿ ಕೆಲವರು ಪಂಜಾಬ್‌ನಲ್ಲಿ ಸಕ್ರಿಯವಾಗಿದ್ದ ಉಗ್ರ ಹಾಗೂ ಶಸ್ತ್ರಾಸ್ತ್ರ ಕಳ್ಳಸಾಗಣೆ ಘಟಕಗಳೊಂದಿಗೆ ಸಂಪರ್ಕ ಹೊಂದಿದ್ದರೆಂಬ ಶಂಕೆಯೂ ವ್ಯಕ್ತವಾಗಿದೆ.

ಸಿಡಬ್ಲ್ಯುಸಿ ಸಭೆ: ಮಹಿಳಾ ಮೀಸಲು ಕಾಯ್ದೆ ಬಗ್ಗೆ ಚರ್ಚೆ

ಹೊಸದಿಲ್ಲಿ: ಮಹಿಳಾ ಮೀಸಲಾತಿ ಕಾನೂನು, ಕ್ಷೇತ್ರ ಮರುವಿಂಗಡಣೆ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಬಗ್ಗೆ ಕೇಂದ್ರ ಸರ್ಕಾರದ ಕ್ರಮದ ಬಗ್ಗೆ ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ(ಸಿಡಬ್ಲ್ಯುಸಿ) ಶುಕ್ರವಾರ ಸಭೆ ನಡೆಸಿದೆ.

ಕಾಂಗ್ರೆಸ್‌ನ ಇಂದಿರಾ ಭವನದ ಪ್ರಧಾನ ಕಚೇರಿಯಲ್ಲಿ ನಡೆದ ಈ ಸಭೆಯಲ್ಲಿ, ಮಹಿಳಾ ಮೀಸಲಾತಿ ಕಾಯ್ದೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ತಿದ್ದುಪಡಿ ಮಾಡುವ ಪ್ರಸ್ತಾಪವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಕಾರ್ಯತಂತ್ರವಾಗಿ ಬಳಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪಶ್ಚಿಮಬಂಗಾಳ ಮತ್ತು ತಮಿಳುನಾಡು ಚುನಾವಣೆಗಳಲ್ಲಿ ರಾಜಕೀಯ ಲಾಭ ಪಡೆಯಲು ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಮರುವಿಂಗಡಣೆ ಸಂಬಂಧಿಸಿದ ಮಸೂದೆಗಳನ್ನು ಅಂಗೀಕರಿಸಲು ಸರ್ಕಾರವು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಇದು ಮಾದರಿ ನೀತಿ ಸಂಹಿತೆಯ ಸಂಪೂರ್ಣ ಉಲ್ಲಂಘನೆ ಎಂದು ಆರೋಪಿಸಿದೆ.

ತರಾತುರಿಯಲ್ಲಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗೆ ಒತ್ತಾಯಿಸುವುದರಿಂದ ದೇಶದ ಬೆಳವಣಿಗೆಗೆ ಅಪಾಯಕಾರಿ ಪರಿಣಾಮಗಳು ಉಂಟಾಗುತ್ತವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಎಂದು ಆರೋಪಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಿರಿಯ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ವಾದ್ರಾ, ಕೆ.ಸಿ. ವೇಣುಗೋಪಾಲ, ಜೈರಾಮ್ ರಮೇಶ್, ಸಚಿನ್ ಪೈಲೆಟ್, ಕರ್ನಾಟಕದ ಸಿಎಂ ಸಿದ್ದರಾಮಯ್ಯ, ತೆಲಂಗಾಣ ಸಿಎಂ ಎ. ರೇವಂತ್ ರೆಡ್ಡಿ ಇದ್ದರು.

ಅಂತಿಮ ಪಟ್ಟಿಗೆ 84 ಲಕ್ಷ ಮತದಾರರು ಸೇರ್ಪಡೆ

ಲಖನೌ: ಉತ್ತರ ಪ್ರದೇಶದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಚುನಾವಣಾ ಆಯೋಗವು ಅಂತಿಮ ಮತದಾರರ ಪಟ್ಟಿ ಬಿಡುಗಡೆ ಮಾಡಿದೆ.

ಕರಡು ಪಟ್ಟಿಯಲ್ಲಿ ಇದ್ದ ಮತದಾರರ ಸಂಖ್ಯೆಗಿಂತ 84 ಲಕ್ಷ ಮಂದಿ ಹೆಚ್ಚುವರಿ ಮತದಾರರು ಅಂತಿಮ ಮತಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ. ಈ ಮೂಲಕ ಒಟ್ಟು ಮತದಾರರ ಸಂಖ್ಯೆ 13.39 ಕೋಟಿಗೆ ಏರಿಕೆಯಾಗಿದೆ. ಇಲ್ಲಿನ ಲೋಕಭವನ ಮಾಧ್ಯಮ ಕೇಂದ್ರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಉತ್ತರ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿ ನವದೀಪ್ ರಿನ್ವಾ, ಎಸ್‌ಐಆರ್ ಪ್ರಕ್ರಿಯೆಯನ್ನು 2025ರ ಅಕ್ಟೋಬರ್ 27ರಿಂದ 2026ರ ಏಪ್ರಿಲ್ 10ರವರೆಗೆ ನಡೆಸಲಾಗಿದೆ. ರಾಜ್ಯದಾದ್ಯಂತ ಎಲ್ಲಾ 75 ಜಿಲ್ಲೆಗಳು, 403 ವಿಧಾನಸಭಾ ಕ್ಷೇತ್ರಗಳು ಮತ್ತು ಮತದಾನ ಕೇಂದ್ರಗಳನ್ನು ಒಳಗೊಂಡಿದೆ.

75 ಜಿಲ್ಲಾ ಚುನಾವಣಾ ಅಧಿಕಾರಿಗಳು (ಡಿಇಒಗಳು), 403 ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒಗಳು), 12,758 ಸಹಾಯಕ ಇಆರ್‌ಒಗಳು (ಎಇಆರ್‌ಒಗಳು), 18,026 ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮೇಲ್ವಿಚಾರಕರು ಮತ್ತು 1,77,516 ಬಿಎಲ್‌ಒಗಳ ಕೊಡುಗೆಯೊಂದಿಗೆ 166 ದಿನಗಳ ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಜ.6ರಂದು ಪ್ರಕಟವಾದ ಕರಡು ಮತದಾರರ ಪಟ್ಟಿಯಲ್ಲಿ 6.88 ಕೋಟಿ ಪುರುಷ ಮತದಾರರು, 5.67 ಕೋಟಿ ಮಹಿಳಾ ಮತದಾರರು ಮತ್ತು 4,119 ತೃತೀಯ ಲಿಂಗಿ ಮತದಾರರು ಸೇರಿದಂತೆ 12,55,56,025 ಮತದಾರರಿದ್ದಾರೆ ಎಂದು ರಿನ್ವಾ ಹೇಳಿದರು.

ಗಗನಯಾನ ಯೋಜನೆ: ಏರ್ ಡ್ರಾಪ್ ಟೆಸ್ಟ್ ಯಶ

ಹೊಸದಿಲ್ಲಿ: ಭಾರತೀಯ ಬಾಹ್ಯಕಾಶ ಇತಿಹಾಸದಲ್ಲೇ ಅತ್ಯಂತ ಮಹತ್ವಾಕಾಂಕ್ಷೆಯ ಮಾನವ ಸಹಿತ ಗಗನಯಾನ್ ಯೋಜನೆ ಅಂಗವಾಗಿ ಎರಡನೇ ಇಂಟಿಗ್ರೇಟೆಡ್ ಏರ್ ಡ್ರಾಪ್ ಪರೀಕ್ಷೆಯನ್ನು (ಐಎಡಿಟಿ-02) ಆಂಧ್ರಪ್ರದೇಶದ ಶ್ರೀಹರಿಕೋಟಾ ಬಾಹ್ಯಾಕಾಶ ಕೇಂದ್ರದಲ್ಲಿ ಶುಕ್ರವಾರ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯಶಸ್ವಿಯಾಗಿ ಪೂರೈಸಿದೆ. 2027ರ ಮಾನವ ಸಹಿತ ಗಗನಯಾನ ಯೋಜನೆಯ ಕ್ಯಾಪ್ಸೂಲ್ ಅನ್ನು ಗಗನಯಾತ್ರಿಗಳಿಗೆ ಯಾವುದೇ ಅಪಾಯವಾಗದಂತೆ ಸುರಕ್ಷಿತವಾಗಿ ಭೂಮಿಯತ್ತ ಕೆಳಗಿಳಿಸುವ ಪರೀಕ್ಷೆ ಇದಾಗಿದ್ದು, 2ನೇ ಹಂತದ ಪರೀಕ್ಷೆಯನ್ನು ಶುಕ್ರವಾರ ಇಸ್ರೋ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಗಗನಯಾತ್ರಿಗಳು ಕುಳಿತುಕೊಳ್ಳುವ ಕ್ಯಾಪ್ಸೂಲ್ ಭೂಕಕ್ಷೆಯಿಂದ ಭೂಮಿಯತ್ತ ಮರಳುವ ವೇಳೆ ಭಾರೀ ವೇಗದಿಂದ ಧುಮುಕುವುದು ಸಾಮಾನ್ಯ. ಈ ಸಂದರ್ಭ ಕ್ಯಾಪ್ಸೂಲ್ ಯಾವುದೇ ಸಮಸ್ಯೆಯಿಲ್ಲದೆ, ಗಗನಯಾತ್ರಿಗಳಿಗೆ ಅಪಾಯವಿಲ್ಲದೆ ಭೂಮಿಗೆ ಮರಳುವುದನ್ನು ಖಚಿತಪಡಿಸಲು ಪರೀಕ್ಷೆಗಳನ್ನು ನಡೆಸುತ್ತದೆ.

ಮಹಾವೀರ ಚಕ್ರ ಪುರಸ್ಕೃತ ಯೋಧನಿಗೆ ದೇಶದ ವಂದನೆ

ಕಾರ್ಗಿಲ್ ಯೋಧ ಕರ್ನಲ್ ಸೋನಂ ವಾಂಗ್ಚುಕ್ ನಿಧನ

ಲೇಹ್: ಕಾರ್ಗಿಲ್ ಯುದ್ಧದ ಶೌರ್ಯಗಾಥೆಗೆ ಪ್ರತೀಕವಾಗಿದ್ದ ಮಹಾವೀರ ಚಕ್ರ ಪುರಸ್ಕೃತ ನಿವೃತ್ತ ಕರ್ನಲ್ ಸೋನಂ ವಾಂಗ್ಚುಕ್ ಅವರು ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಅವರು ಲಡಾಖ್‌ನಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಸೇನಾ ಮೂಲಗಳು ತಿಳಿಸಿವೆ.



ಕಾರ್ಗಿಲ್ ಯುದ್ಧದ ಸಮಯದಲ್ಲಿ ಅಸಾಧಾರಣ ಸಾಹಸ ತೋರಿದ ವಾಂಗ್ಚುಕ್ ಅವರನ್ನು ಭಾರತೀಯ ಸೇನೆಯಲ್ಲಿ 'ಲಯನ್ ಆಫ್ ಲಡಾಖ್' ಎಂದೇ ಕರೆಯಲಾಗುತ್ತಿತ್ತು. 1999ರ ಕಾರ್ಗಿಲ್ ಸಮರದ ವೇಳೆ ಬಟಾಲಿಕ್ ವಲಯದ ಚೋರ್ಬಟ್ ಲಾ ಪ್ರದೇಶದಲ್ಲಿ ಪಾಕಿಸ್ತಾನಿ ಅತಿಕ್ರಮಣಕಾರರ ವಿರುದ್ಧ ನಡೆಸಿದ ಧೈರ್ಯಶಾಲಿ ಕಾರ್ಯಾಚರಣೆಗೆ ಅವರಿಗೆ ಮಹಾವೀರ ಚಕ್ರ ಪ್ರದಾನಿಸಲಾಗಿತ್ತು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂತಾಪ ಸೂಚಿಸಿ, 'ಕರ್ನಲ್ ಸೋನಂ ವಾಂಗ್ಚುಕ್ ಭಾರತೀಯ ಸೇನೆಯ ಅತ್ಯಂತ ಶೌರ್ಯಶಾಲಿ ಅಧಿಕಾರಿಗಳಲ್ಲಿ ಒಬ್ಬರು. ಅವರ ಧೈರ್ಯ, ನಾಯಕತ್ವ ಮತ್ತು ಕರ್ತವ್ಯನಿಷ್ಠೆ ಸದಾ ಸ್ಮರಣೀಯ' ಎಂದು ಹೇಳಿದ್ದಾರೆ.

ಭಾರತೀಯ ಸೇನೆಯೂ ಅಧಿಕೃತವಾಗಿ ಸಂತಾಪ ಸೂಚಿಸಿ, 'ರಾಷ್ಟ್ರಕ್ಕಾಗಿ ಅಪಾರ ಸೇವೆ ಸಲ್ಲಿಸಿದ ವೀರ ಯೋಧನನ್ನು ನಾವು ಕಳೆದುಕೊಂಡಿದ್ದೇವೆ. ದುಃಖದ ಈ ಘಳಿಗೆಯಲ್ಲಿ ಅವರ ಕುಟುಂಬದೊಂದಿಗೆ ನಾವಿದ್ದೇವೆ' ಎಂದು ತಿಳಿಸಿದೆ. ಲಡಾಖ್‌ನ ಹೆಮ್ಮೆಯ ಪುತ್ರನಾಗಿದ್ದ ವಾಂಗ್ಚುಕ್ ಅವರ ನಿಧನಕ್ಕೆ ರಾಜಕೀಯ, ಸೇನಾ ಮತ್ತು ಸಾಮಾಜಿಕ ವಲಯಗಳಿಂದ ಶ್ರದ್ಧಾಂಜಲಿಗಳ ಮಹಾಪೂರವೇ ಹರಿದುಬಂದಿದೆ.

ಸೈಬರ್ ಅಪರಾಧ ತಡೆಯಲು ಚಿಂತನೆ | ಆನ್‌ಲೈನ್ ವಹಿವಾಟುಗಳಿಗೆ ಕಿಲ್ ಸ್ವಿಚ್ ವ್ಯವಸ್ಥೆ

ಆನ್‌ಲೈನ್ ಪಾವತಿ 1 ಗಂಟೆ ತಡ?

ಹೊಸದಿಲ್ಲಿ: ದೇಶದಲ್ಲಿ ವೇಗವಾಗಿ ಹೆಚ್ಚುತ್ತಿರುವ ಡಿಜಿಟಲ್ ಪಾವತಿ ಮೋಸ ಗಳನ್ನು ತಡೆಯಲು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಮಹತ್ವದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ. ಆನ್‌ಲೈನ್ ವಹಿವಾಟುಗಳಲ್ಲಿ ತಪ್ಪಾಗಿ ಹಣ ವರ್ಗಾವಣೆ ಆಗಿದ್ದರೆ ತಕ್ಷಣ ನಿಲ್ಲಿಸಲು ಕಿಲ್ ಸ್ವಿಚ್ ವ್ಯವಸ್ಥೆ ಪರಿಚಯಿಸುವ ಪ್ರಸ್ತಾವನೆ ಮುಂದಿಟ್ಟಿದೆ.



ಡಿಜಿಟಲ್ ಪಾವತಿಗಳ ಬಳಕೆ ಹೆಚ್ಚಿದಂತೆ, ಮೋಸ ಪ್ರಕರಣಗಳ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗಿದ್ದು, ಇದನ್ನು ನಿಯಂತ್ರಿಸುವುದು ಆರ್‌ಬಿಐಗೆ ದೊಡ್ಡ ಸವಾಲಾಗಿದೆ. 2021ರಿಂದ 2025ರವರೆಗೆ ಡಿಜಿಟಲ್ ಮೋಸ ಪ್ರಕರಣಗಳು ಲಕ್ಷಾಂತರ ಸಂಖ್ಯೆಯಲ್ಲಿ ಹೆಚ್ಚಾಗಿ ರುವುದಾಗಿ ವರದಿಗಳು ಸೂಚಿಸುತ್ತವೆ.

ಕಿಲ್ ಸ್ವಿಚ್ ಎಂದರೆ ಏನು? ಆರ್‌ಬಿಐ ಸೂಚಿಸಿರುವ ಕಿಲ್ ಸ್ವಿಚ್ ವ್ಯವಸ್ಥೆ ಮೂಲಕ, ಗ್ರಾಹಕರು ಮೋಸದ ಅನುಮಾನ ಬಂದ ಕೂಡಲೇ ತಮ್ಮ ಖಾತೆಯ ಎಲ್ಲಾ ಡಿಜಿಟಲ್ ಪಾವತಿಗಳನ್ನು ತಕ್ಷಣ ಸ್ಥಗಿತಗೊಳಿಸಬಹುದು. ಇದರಿಂದ ಹಣ ಕಳುವಾಗುವುದನ್ನು ತಡೆಯಲು ಸಾಧ್ಯವಾಗಲಿದೆ.

ಮೋಸಗಳ ವಿರುದ್ಧ ಕಠಿಣ ಕ್ರಮ

ಬ್ಯಾಂಕ್ ಖಾತೆಗಳ ದುರುಪಯೋಗ, ನಕಲಿ ಕಾಲ್ ಸೆಂಟರ್‌ಗಳು, ಡೀಪ್‌ಫೇಕ್ ತಂತ್ರಜ್ಞಾನಗಳ ಮೂಲಕ ನಡೆಯುವ ಮೋಸಗಳನ್ನು ತಡೆಯಲು ಆರ್‌ಬಿಐ ಬಹುಮುಖ ಕ್ರಮಗಳನ್ನು ರೂಪಿಸಿದೆ. ಈ ಕ್ರಮಗಳು ಗ್ರಾಹಕರಿಗೆ ಹೆಚ್ಚಿನ ನಿಯಂತ್ರಣ ಮತ್ತು ಸುರಕ್ಷತೆ ನೀಡುವ ಉದ್ದೇಶ ಹೊಂದಿವೆ.

ಒಂದು ಗಂಟೆ ವಿಳಂಬ ಯೋಜನೆ: ಇದರ ಜೊತೆಗೆ, 10,000 ರೂ.ಗಿಂತ ಹೆಚ್ಚಿನ ಮೊತ್ತದ ವಹಿವಾಟುಗಳಿಗೆ ಒಂದು ಗಂಟೆಯ ವಿಳಂಬ ನೀಡುವ ಯೋಜನೆಯನ್ನೂ ಆರ್‌ಬಿಐ ಪರಿಗಣಿಸಿದೆ. ಈ ಅವಧಿಯಲ್ಲಿ ಗ್ರಾಹಕರು ತಮ್ಮ ವ್ಯವಹಾರವನ್ನು ಮರುಪರಿಶೀಲಿಸಿ ರದ್ದುಪಡಿಸುವ ಅವಕಾಶ ಸಿಗುತ್ತದೆ.

ಹಿರಿಯ ನಾಗರಿಕರಿಗೆ ಹೆಚ್ಚುವರಿ ಭದ್ರತೆ: ಹಿರಿಯ ನಾಗರಿಕರು ಮತ್ತು ದಿವ್ಯಾಂಗರಿಗೆ ಹೆಚ್ಚುವರಿ ರಕ್ಷಣೆ ನೀಡಲು, 50,000 ರೂ.ಗಿಂತ ಹೆಚ್ಚಿನ ವಹಿವಾಟುಗಳಿಗೆ 'ನಂಬಿಕಸ್ತ ವ್ಯಕ್ತಿ ' ಅನುಮತಿ ಪಡೆಯುವ ವ್ಯವಸ್ಥೆಯನ್ನೂ ಆರ್‌ಬಿಐ ಯೋಚಿಸಿದೆ.

ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನ: ಈ ಎಲ್ಲಾ ಕ್ರಮಗಳ ಬಗ್ಗೆ ಆರ್‌ಬಿಐ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದ್ದು, ನಂತರ ಅಂತಿಮ ಮಾರ್ಗಸೂಚಿಗಳನ್ನು ಪ್ರಕಟಿಸುವ ನಿರೀಕ್ಷೆಯಿದೆ.

pnb Housing Finance Limited — Ghar Ki Baat

ಅನುಬಂಧ 4 ಎ ಇ-ಹರಾಜು- ಸ್ಥಿರಾಸ್ತಿ(ಗಳ) ಸಾರ್ವಜನಿಕ ಮಾರಾಟ ನೋಟಿಸ್

ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ-2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಾವಳಿ-2002ರ ನಿಯಮ 8(6)ರ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟಕ್ಕೆ ಇ-ಹರಾಜು ಮಾರಾಟ ನೋಟಿಸ್

ನೋಂದಾಯಿತ ಕಚೇರಿ: 9ನೇ ಮಹಡಿ, ಅಂತರಿಕ್ಷ ಭವನ, 22, ಕಸ್ತೂರ್ಬಾ ಗಾಂಧಿ ಮಾರ್ಗ, ನವದೆಹಲಿ- 110001 ದೂರವಾಣಿ: 011-23357171, 23357172, 23705414, ವೆಬ್‌ಸೈಟ್: www.pnbhousing.com

ಜಯನಗರ ಶಾಖೆ: # ನಂ. 40, ಜೋಧ್ ಟವರ್, 1ನೇ ಮಹಡಿ, 27ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು- 560011.

[illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
ಎಚ್‌ಓಯು/ಜೆಎನ್‌ಆರ್/ 1016/ 325294 [illegible]	ರೂ.22,29,269.75 & 19/11/2019	ಭೌತಿಕ ಸ್ವಾಧೀನ	[illegible] ಮಂಗಳೂರು, ಕರ್ನಾಟಕ, ಭಾರತ- 575001.	ರೂ. 21,70,000	ರೂ. 2,17,000	27/04/2026	ರೂ. 10,000	17.04.2026 ಬೆಳಗ್ಗೆ 11.00 ರಿಂದ ಸಂಜೆ 5.00	28-04-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ

[illegible]

... ಸಂಪರ್ಕಿಸಬಹುದು ಅಥವಾ www.auction@pnbhousing.com ವೀಕ್ಷಿಸಬಹುದು.

ಸ್ಥಳ: ಮಂಗಳೂರು ದಿನಾಂಕ: 11.04.2026

ಸಹಿ/- ಅಧಿಕೃತ ಅಧಿಕಾರಿ, ಮೆಸರ್ಸ್ ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಲಕ್ಕಿಡಿಪ್ ಡ್ರಾ ಫಲಿತಾಂಶ

ಅಂಬಿಲಡ್ಕ ಶ್ರೀ ಪೂಮಾಣಿ ಕಿನ್ನಿಮಾಣಿ ದೈವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ನವಸೇವಾ ಮಹಿಳಾ ವೃಂದ (ರಿ.) ಅಂಬಿಲಡ್ಕ ಇದರ ಲಕ್ಕಿಡಿಪ್ ಡ್ರಾ ಫಲಿತಾಂಶ

I-3549, II-1433, III-2885

ಪುತ್ತೂರು ಮಾರುಕಟ್ಟೆ ಧಾರಣೆ

10-04-2026

ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	455 - 495
ಚೋಲ್ ಅಡಿಕೆ	530 - 555
ಡಬಲ್ ಚೋಲ್	530 - 555
ಹೊಸ ಪಠೋರ	350 - 400
ಹಳೆ ಪಠೋರ	380 - 410
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	226.00
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	137.50
ಸ್ಕ್ರಾಪ್ 2	125.00

IN THE COURT OF THE PRINCIPAL JUDGE, FAMILY COURT KODAGU, MADIKERI.
G & WC NO. 5 /2026

Petitioner:
Smt. K.B. Anitha,
W/o Bheemaiah K.E.,
Aged 52 years,
R/o Nelji village & post,
Madikeri taluk

Vs

Respondent: Nil

COURT NOTICE

Whereas the petitioner above named has filed-a petition under sec.7 of Guardian and wards Act 1890 seeking to appoint her as a guardian to her minor niece **Darsha Dechamma M.E.**

Now the above case is posted to **27.04.2026.**

Any person who have objections for appointment of petitioner as guardian to her minor niece **Darsha Dechamma, M.E.,** may appear before the above mentioned hon'ble court on **27/04/2026 at 11 a.m.** either in person or through your pleader. Failing which the above case will be decided by on merits.

(BY THE ORDER OF THE COURT)
Sd/- Chief Ministrial Officer
Principal Family Court,
Kodagu-Madikeri

Sd/- Rudra Prasanna, B.AL., LL.B.,
Advocate, 'Sri shyla Krupa',
Mahadevpet, Madikeri
Advocate for the petitioner
Madikeri
04.04.2026

IN THE COURT OF THE PRINCIPAL SENIOR CIVIL JUDGE AND ACJM AT PUTTUR, DAKSHINA KANNADA
Crl Misc Case 130 Of 2026

Between:
Sri Prakash Thoras
47 years
Son of Mr Leo Thoras
Nelligeri House
#1-1074, Bedrala Road
Chikkamudnooru village and post , Puttur Taluk
Dakshina Kannada 574203
...Petitioner

And

The Tahasildar
The Registrar of Birth and Deaths
Puttur, DK 574 201
...Respondent

PUBLIC NOTICE

Take notice that the above-named petitioner has filed the said petition to obtain death certificate of his aunt viz., 'Gilly Seravo' who died on 02.04.2002 at her residence at Chikkamudnooru village and post, Puttur Dakshina Kannada district.

The said case stands posted to **22.05.2026 at 11.00 AM.** If anybody having any objections in respect of date of death of said 'Gilly Seravo', the same be done either in person or through a counsel on the above date and time before the aforesaid court, failing which the matter will be heard and decided on merit.

(By Order of the Court)
Sd/- Sheristedar
Principal Senior Civil Judge and ACJM at Puttur

Sd/- Veena M., M.A., LL.B.
Advocate for petitioner

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ. ದೂರವಾಣಿ ಸಂ:08194-200187 Email ID:ubpeediv07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2026-27/ 2 & 3 ದಿನಾಂಕ:08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಂ.148 ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರಸ್ತೆ ಬೆಂಗಳೂರು 560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್;ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳ ದ್ವಿ-ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದವರೆಗೆ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194-200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಲೆಕ್ಕಶೀರ್ಷಿಕೆ	ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಬಿಡ್ಡನ್ನು ತೆರೆಯುವ ದಿನಾಂಕ
1	VJNL/2025-26/BD/ WORK_INDENT 497	4701 V.V.Sagara	41,69,280.73	17.04.2026 @ 5.00 PM	18.04.2026 @ 5.30 PM
2	VJNL/2025-26/BD/ WORK_INDENT 496	4701 V.V.Sagara	41,44,032.78	17.04.2026 @ 5.00 PM	18.04.2026 @ 5.30 PM

DIPR/CHITRADURGA/KSMCA/17/2026-27

ಸಹಿ/- ಕಾರ್ಯಪಾಲಕ ಇಂಜಿನಿಯರ್ ವಿ.ಜ.ನಿ.ನಿ, ಭ.ಮೇ.ಯೋ, ವಿಭಾಗ ನಂ.07, ಹಿರಿಯೂರು.

ತಾಲೂಕಾ ಆಸ್ಪತ್ರೆ ಜೋಯಿಡಾ-581186

E-mail:- talukahospitaljoidaa@gmail.com Ph. No:- 08383-282703

ಸಂ.ತಾಆಜೋ/ಪಥ್ಯಾಹಾರ/347/2025-26 ದಿ: 09/04/2026

-: ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ :-

ಉತ್ತರ ಕನ್ನಡ ಜಿಲ್ಲೆಯ ರಾಜ್ಯ ವಲಯದ ತಾಲೂಕಾ ಆಸ್ಪತ್ರೆ ಜೋಯಿಡಾದಲ್ಲಿ 2026-27 ನೇ ಸಾಲಿಗೆ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ (ಕಡಿಜಕಿಚಿಡಿಜಜ ಒಜಚಿಟ) ಪದಾರ್ಥಗಳು ಹಾಗೂ ಬ್ರೆಡ್ ಪದಾರ್ಥಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರಮೆಂಟ್ ಪ್ಲಾಟಫಾರ್ಮನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31/03/2027 ರ ವರೆಗೆ ಅಥವಾ ಈ ಕಛೇರಿಯ ಮುಂದಿನ ಆದೇಶದ ವರೆಗೆ ಮಾತ್ರ ಇರುತ್ತದೆ. ಒಟ್ಟ ಬೆಂಡರಿನ ಅಂದಾಜು ಮೌಲ್ಯ 12 ತಿಂಗಳಿಗೆ ರೂ. 13,41,720/- ಇದ್ದು ವೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ. ದ್ವಿ-ಲಕೋಟಿ ಪದ್ಧತಿಯಲ್ಲಿ ಸಿದ್ಧಪಡಿಸಿದ ಪಥ್ಯಾಹಾರ (Prepared Meal) ಹಾಗೂ ಬ್ರೆಡ್ ಪೂರೈಕೆಗಾಗಿ Karnataka Public Procurement Portal (https://kppp.karnataka.gov.in)

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಂ:ತಾಆಜೋ/ಪಥ್ಯಾಹಾರ/347/2025-26,ದಿನಾಂಕ: 09/04/2026		
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಕ್ರ.ಸಂ.	ವಿವರ	ಟೆಂಡರ್ ಬಿಡ್ ಮೊತ್ತ (ರೂ. ಗಳಲ್ಲಿ)
		1	Group-A Prepaied Meal	ರೂ. 12,06,720/-
		2	Group-B Bread	ರೂ. 1,35,000/-
3	KPPP-Portal ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಪ್ರಾರಂಭಿಸುವ ದಿನಾಂಕ	10/04/2026		
4	KPPP-Portal ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ಪ್ರಾರಂಭಿಸುವ ದಿನಾಂಕ & ಸಮಯ	ದಿನಾಂಕ: 24-04-2026ರ ಸಂಜೆ 04-00 ವರೆಗೆ		
5	KPPP-Portal ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ದಿನಾಂಕ: 27-04-2026ರ ಮಧ್ಯಾಹ್ನ 03-00 ಗಂಟೆಗೆ		
6	ಮಾದರಿ ಸಲ್ಲಿಸುವ ದಿನಾಂಕ (Sample Submission Date)	30/04/2026 0 5 11:00 ಅಥವಾ ತಾಂತ್ರಿಕ ಬಿಡ್‌ನಲ್ಲಿ ಅರ್ಹ ಇರುವ ಸಂಸ್ಥೆಗಳಿಗೆ ದಿನಾಂಕ ಮತ್ತು ಸಮಯ ಇ-ಮೇಲ್ ಮೂಲಕ ಸೂಚಿಸಲಾಗುವುದು.		
7	KPPP-Portal ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ	ದಿನಾಂಕ : 04/05/2026 ರ ಅಪರಾಹ್ನ 3:00 ಗಂಟೆಗೆ ಅಥವಾ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ (KPPP-Portal ನಲ್ಲಿ)		
8	ಇಎಮ್‌ಡಿ (ಶೇ. 2.5%)	ಅನುಬಂಧ-1 ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವದು.		
9	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ 9 ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಆಸ್ಪತ್ರೆ, ಜೋಯಿಡಾ (ಉ.ಕ) ದೂ.ಸಂ. : 08383-282703 Email ID: talukahospitaljoida@gmail.com		

ಸಹಿ/- **ಆಡಳಿತ ವೈದ್ಯಾಧಿಕಾರಿ,**
ತಾಲೂಕಾ ಆಸ್ಪತ್ರೆ, ಜೋಯಿಡಾ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: 0836-2213838 Email: eedharwad@gmail.com

ನಂ.ಎಚ್.ಡಿಎಂಸಿ/66/07/02/2026-27 ದಿನಾಂಕ:- 10-04-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಜಾಹಿರಾತು ನಂ:- ದಿನಾಂಕ:

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಅಹ್ವಾನಿಸಲಾಗಿದ್ದು, PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ಹಾಗೂ ವಾರ್ಡ ಸದಸ್ಯರ ಅನುದಾನ :-

1) ಇಂಡೆಂಟ ನಂ. 42526/27.35 ಲಕ್ಷ/ಸಾಮಾನ್ಯ **2)** ಇಂಡೆಂಟ ನಂ. 48787/5.00ಲಕ್ಷ/ಸಾಮಾನ್ಯ **3)** ಇಂಡೆಂಟ ನಂ. 48794/ 25.00ಲಕ್ಷ/ಸಾಮಾನ್ಯ **4)** ಇಂಡೆಂಟ ನಂ. 48303/14.00ಲಕ್ಷ/ಸಾಮಾನ್ಯ **5)** ಇಂಡೆಂಟ ನಂ. 53110/6.20ಲಕ್ಷ/ಸಾಮಾನ್ಯ
6) ಇಂಡೆಂಟ ನಂ. 57163/22.00ಲಕ್ಷ/ಪ್ರವರ್ಗ-1 **7)** ಇಂಡೆಂಟ ನಂ. 57160/10.00ಲಕ್ಷ/ಸಾಮಾನ್ಯ **8)** ಇಂಡೆಂಟ ನಂ. 57162/ 10.00ಲಕ್ಷ/ಪರಿಶಿಷ್ಟ ಜಾತಿ **9)** ಇಂಡೆಂಟ ನಂ. 57161/8.00ಲಕ್ಷ/ಪ್ರವರ್ಗ-2ಎ **10)** ಇಂಡೆಂಟ ನಂ. 57190/6.00ಲಕ್ಷ/ಸಾಮಾನ್ಯ **11)** ಇಂಡೆಂಟ ನಂ. 57165/7.50ಲಕ್ಷ/ಸಾಮಾನ್ಯ **12)** ಇಂಡೆಂಟ ನಂ. 57166/40.00ಲಕ್ಷ/ಸಾಮಾನ್ಯ **13)** ಇಂಡೆಂಟ ನಂ. 56772/ 18.00ಲಕ್ಷ/ಸಾಮಾನ್ಯ **14)** ಇಂಡೆಂಟ ನಂ. 56758/4.80ಲಕ್ಷ/ಸಾಮಾನ್ಯ **15)** ಇಂಡೆಂಟ ನಂ. 57191/7.90ಲಕ್ಷ/ಸಾಮಾನ್ಯ
16) ಇಂಡೆಂಟ ನಂ. 57196/3.50ಲಕ್ಷ/ಪರಿಶಿಷ್ಟ ಪಂಗಡ **17)** ಇಂಡೆಂಟ ನಂ. 57197/5.70ಲಕ್ಷ/ಸಾಮಾನ್ಯ **18)** ಇಂಡೆಂಟ ನಂ. 57210/3.36ಲಕ್ಷ/ಸಾಮಾನ್ಯ **19)** ಇಂಡೆಂಟ ನಂ. 57212/1.70ಲಕ್ಷ/ಸಾಮಾನ್ಯ **20)** ಇಂಡೆಂಟ ನಂ. 57259/25.20ಲಕ್ಷ/ಪ್ರವರ್ಗ-2ಎ **21)** ಇಂಡೆಂಟ ನಂ. 57258/10.00ಲಕ್ಷ/ಪರಿಶಿಷ್ಟ ಜಾತಿ **22)** ಇಂಡೆಂಟ ನಂ. 52330/16.00ಲಕ್ಷ/ಸಾಮಾನ್ಯ **23)** ಇಂಡೆಂಟ ನಂ. 57256/94.30ಲಕ್ಷ/ಪರಿಶಿಷ್ಟ ಜಾತಿ **24)** ಇಂಡೆಂಟ ನಂ. DMA/2026-27/SE7670/47.72ಲಕ್ಷ/ಸಾಮಾನ್ಯ

ಒಟ್ಟು **24** ಕಾಮಗಾರಿಗಳು ಮೊತ್ತ **ರೂ. 419.23** ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: **0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://www.kppp.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರಮೆಂಟ್‌ನಲ್ಲಿ ಅ.ನಂ. **1** ರಿಂದ **24** ರವರೆಗೆ ದಿನಾಂಕ: **13-04-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (**1 ರಿಂದ 21**)
1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **02/05/2026 ಸಂಜೆ 04.00 ಗಂಟೆ**
2) ಟೆಂಡರ್ ತೆರೆಯುವ ದಿನಾಂಕ : **04/05/2026 ಬೆಳಗ್ಗೆ 10.30 ಗಂಟೆ**

ಈ ಮೇಲಿನ ಕಾಮಗಾರಿಗಳಿಗೆ (**22 ರಿಂದ 24**)
1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **23/04/2026 ಸಂಜೆ 04.00 ಗಂಟೆ**
2) ಟೆಂಡರ್ ತೆರೆಯುವ ದಿನಾಂಕ : **24/04/2026 ಸಂಜೆ 04.30 ಗಂಟೆ**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **29/04/2026 ಬೆಳಗ್ಗೆ 10.30 ಗಂಟೆ**

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ

ವಾ.ಸಾ.ಇ./ಧಾರವಾಡ/43/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ

ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

TOWN PLAINNING AUTHORITY BANTWAL

1ನೇ ಮಹಡಿ, ಬಂಟ್ವಾಳ ಪುರಸಭೆ ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ
E-mail: bantwal.buda@yahoo.in Phone: 08255 231130

ಕ್ರಮಾಂಕ:ಸ್ಥ.ಯೋ.ಪ್ರಾಬಂ./ವಾ.ಸಾ.ಇ./15/2026-27 ದಿನಾಂಕ: 08.04.2026

ಪ್ರಕಟಣೆ

ವಿಷಯ : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ ಬಂಟ್ವಾಳ ಮಹಾಯೋಜನೆಗೆ ಒಳಪಟ್ಟು ಗ್ರಾಮದ ಸ.ನಂ. ಗಳ ಜಾಗವನ್ನು ಉದ್ಯಾನವನ ಉಪಯೋಗ ವಲಯದ ಮಹಾಯೋಜನೆಯಲ್ಲಿ ಕಾಯ್ದಿರಿಸಲಾದ ಜಾಗವನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಮಾಡಲು ಸಂಬಂಧಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಜಮೀನಿನಲ್ಲಿ ವಸತಿ ಕಟ್ಟಡ ನಿರ್ಮಿಸಿ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಸಂಬಂಧಿಸಿರುವ ಅವಶ್ಯಕ ಮೂಲಭೂತ ಸೌಕರ್ಯವನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಈ ಕೆಳಕಂಡ ಜಮೀನಿನ ಭೂ ಉಪಯೋಗವನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕ ಆಕ್ಷೇಪಣೆ ಸಲಹೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಪುರಸಭಾ ವಾಣಿಜ್ಯ ಸಂಕೀರ್ಣ ಕಟ್ಟಡ, ಬಿ.ಸಿರೋಡ್ ಇವರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎಕ್ರೆ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1.	ಶ್ರೀ ಬಿ ಸುರೇಶ್ ಬಾಳಿಗ	ಬಂಟ್ವಾಳ ಮೂಡ	73/1ಬಿ2	0.17 ಎಕ್ರೆ	ಉದ್ಯಾನವನ	ವಸತಿ

ಸಹಿ/- ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

ಕರ್ನಾಟಕ ಸರಕಾರ

ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

TOWN PLAINNING AUTHORITY BANTWAL

1ನೇ ಮಹಡಿ, ಬಂಟ್ವಾಳ ಪುರಸಭೆ ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ
E-mail: bantwal.buda@yahoo.in Phone: 08255 231130

ಕ್ರಮಾಂಕ:ಸ್ಥ.ಯೋ.ಪ್ರಾಬಂ./ವಾ.ಸಾ.ಇ./18/2026-27 ದಿನಾಂಕ: 09.04.2026

ಪ್ರಕಟಣೆ

ವಿಷಯ : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ ಬಂಟ್ವಾಳ ಮಹಾಯೋಜನೆಗೆ ಒಳಪಟ್ಟು ಗ್ರಾಮದ ಸ.ನಂ. ಗಳ ಜಾಗವನ್ನು ಭಾಗಶಃ ವಸತಿ ಮತ್ತು ಭಾಗಶಃ ಕೃಷಿ ಉಪಯೋಗ ವಲಯದ ಮಹಾಯೋಜನೆಯಲ್ಲಿ ಕಾಯ್ದಿರಿಸಲಾದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಮಾಡಲು ಸಂಬಂಧಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಜಮೀನಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿ (ವಾಣಿಜ್ಯ ಮಳಿಗೆ) ಸ್ಥಳೀಯರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಸಂಬಂಧಿಸಿರುವ ಅವಶ್ಯಕ ಮೂಲಭೂತ ಸೌಕರ್ಯವನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಈ ಕೆಳಕಂಡ ಜಮೀನಿನ ಭೂ ಉಪಯೋಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕ ಆಕ್ಷೇಪಣೆ ಸಲಹೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಪುರಸಭಾ ವಾಣಿಜ್ಯ ಸಂಕೀರ್ಣ ಕಟ್ಟಡ, ಬಿ.ಸಿರೋಡ್ ಇವರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎಕ್ರೆ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1.	ಶ್ರೀ ಹಾಜಿ ಎನ್ ಸುಲೈಮಾನ್	ಬಂಟ್ವಾಳ ಮೂಡ	38/1	0.32 ಎಕ್ರೆ	ಭಾಗಶಃ ವಸತಿ ಮತ್ತು ಭಾಗಶಃ ಕೃಷಿ	ವಾಣಿಜ್ಯ

ಸಹಿ/- ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್, ಅಶೋಕನಗರ ಅಂಚೆ, ಮಂಗಳೂರು

No.: MUDAMG-TP0CLUE/25/2025-TPS (34150)

ತಿದ್ದುಪಡಿ ಪತ್ರಿಕಾ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961, ರ ಕಲಂ 14ಎ ರನ್ವಯ)

ಉಳ್ಳಾಲ ತಾಲೂಕು ತಲಪಾಡಿ ಗ್ರಾಮದ ಸ.ನಂ. 192/14 ರಲ್ಲಿನ 19.75 ಸೆಂಟ್ಸ್, 192/9 ರಲ್ಲಿನ 10.00 ಸೆಂಟ್ಸ್ ಒಟ್ಟು 29.75 ಸೆಂಟ್ಸ್ ವಿಸ್ತೀರ್ಣದ ಪ್ರದೇಶದಲ್ಲಿ ಸರ್ಕಾರದಿಂದ ಅನುಮೋದಿತವಾಗಿರುವ ಮಹಾಯೋಜನೆ (ಪ-II) ರಲ್ಲಿ ಕಾಯ್ದಿರಿಸಿದ **ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ** ಭೂ ಉಪಯೋಗ ಬದಲಾವಣೆ ಮಾಡಲು **ಶ್ರೀ ಮನ್ಮಥ್ ಜೆ. ಶೆಟ್ಟಿ, ಬಿನ್ ಜಯ ಶೆಟ್ಟಿ, ಶಿವಕೃಪಾ, ಅತ್ತೂರು, ನಿಟ್ಟೆ ಪೋಸ್ಟ್, ಉಡುಪಿ** ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಜಮೀನು ಪೂರ್ವದಲ್ಲಿ 12.0 ಮೀ. ಅಗಲದ ಸಂಪರ್ಕ ರಸ್ತೆ ಹೊಂದಿದೆ. ಜಮೀನಿನ ಸುತ್ತಮುತ್ತ ವಾಣಿಜ್ಯ ಬೆಳವಣಿಗೆಗಳು ಬಂದಿರುತ್ತವೆ.

ಅರ್ಜಿದಾರರು ಸದರಿ ಜಮೀನಿನಲ್ಲಿ ವಾಣಿಜ್ಯ ಮಳಿಗೆ ನಿರ್ಮಿಸಲು ಉದ್ದೇಶಿಸಿದ್ದು, ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿರುತ್ತಾರೆ. ಇದರಿಂದ ಸ್ಥಳೀಯ ಜನರಿಗೆ ಉದ್ಯೋಗಾವಕಾಶ ದೊರಕುವ ಸಾರ್ವಜನಿಕ ಹಿತಾಸಕ್ತಿ ಅಂಶ ಇದೆ ಎಂದು ತಿಳಿಸಿರುತ್ತಾರೆ. ಪ್ರಸ್ತಾವನೆಯನ್ನು ಕೆ.ಟಿ.ಸಿ.ಪಿ ಕಾಯ್ದೆ 14ಎ ರಂತೆ ಪರಿಗಣಿಸಿದ್ದು, ಕೃಷಿ ಉದ್ದೇಶದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ.

ಜಮೀನಿಗೆ ಚಿಕ್ಕುಬಂದಿ:

ಬೆಳವಣಿಗೆಗಳು		ಸರ್ವೆ ನಂಬ್ರ ಚಿಕ್ಕುಬಂದಿ	
ಪೂರ್ವಕ್ಕೆ:	ರಸ್ತೆ	ಪೂರ್ವಕ್ಕೆ:	ರಸ್ತೆ
ಪಶ್ಚಿಮಕ್ಕೆ:	ಖಾಲಿ ಜಾಗ	ಪಶ್ಚಿಮಕ್ಕೆ:	ಸ.ನಂ. 192/7
ಉತ್ತರಕ್ಕೆ:	ಖಾಲಿ ಜಾಗ	ಉತ್ತರಕ್ಕೆ:	ಸ.ನಂ.192/2
ದಕ್ಷಿಣಕ್ಕೆ:	ಖಾಲಿ ಜಾಗ	ದಕ್ಷಿಣಕ್ಕೆ:	ಸ.ನಂ. 192/7

ಮೇಲ್ಕಂಡ ಭೂಉಪಯೋಗ ಬದಲಾವಣೆಗೆ ಸಾರ್ವಜನಿಕರಿಂದ/ಸಂಸ್ಥೆಗಳಿಂದ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಲಿಖಿತವಾಗಿ, ಮುದ್ದಾಂ/ನೋಂದಣಿ ಅಂಚೆ ಮೂಲಕ ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಈ ಕೆಳಗೆ ಸಹಿ ಮಾಡಿದವರ ಮೇಲ್ಕಂಡ ವಿಳಾಸಕ್ಕೆ ತಲುಪಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಯಾವುದೇ ಆಕ್ಷೇಪಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/63/26-27 dt. 10.04.2026

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ, ಗದಗ ವಿಭಾಗ ಗದಗ. Phone No.: 08372-238782 Fax No.: 08372-237268
E-Mail: eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ-1 3 4 :ವಿವಿಧ: 2026-27/102 ದಿನಾಂಕ: 08-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1308.15** ಲಕ್ಷ ಮೊತ್ತದಲ್ಲಿ ಒಟ್ಟು **07** ಕಾಮಗಾರಿಗೆ (ಕನಿಷ್ಟ ಮೊತ್ತ ರೂ: **1.15** ಲಕ್ಷ ಹಾಗೂ ಗರಿಷ್ಟ ಮೊತ್ತ ರೂ: **900.00** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ-1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. kppp. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1 33839/Call-3, 32784 Category-2A, 32782 , 34835

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕಃ- 15-04-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ- 17-04-2026 ಮಧ್ಯಾಹ್ನ 4.00 ಗಂಟೆಯ ವರೆಗೆ , ತಾಂತ್ರಿಕ ಬಿಡ್ ತೆರೆಯುವ ದಿನಾಂಕಃ- 18-04-2026. ಆರ್ಥಿಕ ಬಿಡ್ ತೆರೆಯುವ ದಿನಾಂಕಃ- 21-04-2026.

Work Indent No:- Part-2 34882, 34849-SC, 30969/Call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕಃ- 27-04-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಃ- 28-04-2026 ಮಧ್ಯಾಹ್ನ 4.00 ಗಂಟೆಯ ವರೆಗೆ , ತಾಂತ್ರಿಕ ಬಿಡ್ ತೆರೆಯುವ ದಿನಾಂಕಃ- 29-04-2026. ಆರ್ಥಿಕ ಬಿಡ್ ತೆರೆಯುವ ದಿನಾಂಕಃ- 30-04-2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ , 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/-
ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ ಗದಗ

ವಾ.ಸಾ.ಇ./ಗದಗ/16/2026-27/ದೇಶಪಾಂಡೆಪಬ್ಲಿಸಿಟಿ

ಮಂಗಳೂರು ಮಹಾನಗರಪಾಲಿಕೆ

ಇ.ಎಸ್.ಟಿ.ಟೆಂಡರ್/75/2025-26 ದಿನಾಂಕ: 31.03.2026

ಟೆಂಡರ್ ಪ್ರಕಟಣೆ

ಮಹಾನಗರಪಾಲಿಕಾ ವ್ಯಾಪ್ತಿಯ ವಿಭಾಗ ನಂಬ್ರ 43, 45, 47 ರಲ್ಲಿ ಒಳಚರಂಡಿ ಕೊಳವೆ ವಿಸ್ತರಣೆ, ಆರ್.ಸಿ.ಸಿ ಚರಂಡಿ ರಚನೆ, ಕಾಂಕ್ರೀಟೀಕರಣ, ರಸ್ತೆ ಅಭಿವೃದ್ಧಿ ಇತ್ಯಾದಿ 11 ಕಾಮಗಾರಿಗಳ ಒಟ್ಟು ಮೊತ್ತ ರೂ. 49.19 ಲಕ್ಷವಾಗಿದ್ದು, ಸಾಮಾನ್ಯ ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 27.04.2026** ಮತ್ತು ಟೆಂಡರ್ ಫಾರಂ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 28.04.2026** (ಕಾಮಗಾರಿಗಳ ಸ್ಥಳ ವಿವರ ಅಂದಾಜು ಮೊತ್ತ ಇ.ಎಂ.ಡಿ ಮೊತ್ತ ಬಗ್ಗೆ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರ ವಿಭಾಗದಲ್ಲಿ ಪಡೆಯಬಹುದು).

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/62/26-27 dt: 10.04.2026

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಲೋ.ಇ. ಉಡುಪಿ ವಿಭಾಗ - ಉಡುಪಿ - 576101

ದೂರವಾಣಿ & ಫ್ಯಾಕ್ಸ್: (0820) 2531802

ನಂ. ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ: 60:2025-26: ಎಇ-2 ದಿನಾಂಕ: 09.04.2026

ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರೂ. 5.92 ಲಕ್ಷ ಮತ್ತು 12.32 ಲಕ್ಷದ -3054- ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಮತ್ತು 1-2059-ಇಲಾಖಾ ಕಟ್ಟಡಗಳ ನಿರ್ವಹಣೆ ಯೋಜನೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್ ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್‌ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆಕ್ಟ್ -2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೋಕ್ಯೂರ್ ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24.04.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ಸರಕಾರ

ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

TOWN PLAINNING AUTHORITY BANTWAL

1ನೇ ಮಹಡಿ, ಬಂಟ್ವಾಳ ಪುರಸಭೆ ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ
E-mail: bantwal.buda@yahoo.in Phone: 08255 231130

ಕ್ರಮಾಂಕ:ಸ್ಥ.ಯೋ.ಪ್ರಾಬಂ./ವಾ.ಸಾ.ಇ./16/2026-27 ದಿನಾಂಕ: 08.04.2026

ಪ್ರಕಟಣೆ

ವಿಷಯ : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ ಬಂಟ್ವಾಳ ಮಹಾಯೋಜನೆಗೆ ಒಳಪಟ್ಟು ಗ್ರಾಮದ ಸ.ನಂ. ಗಳ ಜಾಗವನ್ನು ಉದ್ಯಾನವನ ಉಪಯೋಗ ವಲಯದ ಮಹಾಯೋಜನೆಯಲ್ಲಿ ಕಾಯ್ದಿರಿಸಲಾದ ಜಾಗವನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಮಾಡಲು ಸಂಬಂಧಿಸಿದ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಜಮೀನಿನಲ್ಲಿ ವಸತಿ ಕಟ್ಟಡ ನಿರ್ಮಿಸಿ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಸಂಬಂಧಿಸಿರುವ ಅವಶ್ಯಕ ಮೂಲಭೂತ ಸೌಕರ್ಯವನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಈ ಕೆಳಕಂಡ ಜಮೀನಿನ ಭೂ ಉಪಯೋಗವನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕ ಆಕ್ಷೇಪಣೆ ಸಲಹೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಪುರಸಭಾ ವಾಣಿಜ್ಯ ಸಂಕೀರ್ಣ ಕಟ್ಟಡ, ಬಿ.ಸಿರೋಡ್ ಇವರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎಕ್ರೆ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1.	ಶ್ರೀಮತಿ ಪ್ರತಿಭಾ ಬಾಳಿಗ	ಬಂಟ್ವಾಳ ಮೂಡ	73/1ಬಿ2	0.17 ಎಕ್ರೆ	ಉದ್ಯಾನವನ	ವಸತಿ

ಸಹಿ/- ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ಬಂಟ್ವಾಳ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-48) ಡ್ರಾ ಏಪ್ರಿಲ್ 10ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RN 627618 (KOZHIKKODE)

Consolation Prize Rs.5,000/-
RO 627618 RP 627618 RR 627618 RS 627618
RT 627618 RU 627618 RV 627618 RW 627618
RX 627618 RY 627618 RZ 627618

2nd Prize Rs.30,00,000/- [30 Lakhs]
RV 336688 (GURUVAYOOR)

3rd Prize Rs.5,00,000/- [5 Lakhs]
RW 272529 (ATTINGAL)

FOR THE TICKETS ENDING WITH THE FOLLOWING NUMBERS

4th Prize Rs.5,000/-
0068 0248 1017 1219 2206 2433 2643 2666 3095 3480 4269 4793 6614 6952 7018 7294 7571 7944 9189

5th Prize Rs.2,000/-
0342 2886 3747 4315 8842 9529

6th Prize Rs.1,000/-
0077 0355 0606 0832 1612 1654 1729 1919 2504 3553 4420 4708 5195 5512 7215 7400 7601 7717 7817 8007 8417 8572 9131 9332 9833

7th Prize Rs.500/-
0051 0201 0249 0364 0589 0643 0696 0751 1115 1203 1225 1347 1412 1534 1588 1599 1602 1667 1832 1840 1963 2259 2337 2510 2536 2542 2565 2877 3004 3136 3160 3266 3446 3566 3588 3847 4482 4580 4597 4795 4805 4905 5127 5162 5202 5329 5368 5486 5589 5906 5940 6143 6161 6224 6473 6603 6863 6897 7073 7107 7299 7498 7519 7849 7869 8101 8132 8135 8712 8816 9212 9264 9602 9679 9827 9900

8th Prize Rs.200/-
0021 0545 0556 0584 0661 0701 0778 0806 1099 1140 1404 1490 1516 1590 1640 1652 1752 1783 2121 2397 2417 2419 2826 3180 3254 3255 3300 3426 3458 3509 3513 3534 3629 3642 3692 3826 3934 4034 4082 4108 4167 4220 4323 4350 4368 4670 4993 5092 5450 5518 5710 5743 5821 6007 6043 6060 6564 6611 6638 6807 7019 7050 7182 7199 7461 7580 7760 7796 7872 7922 8144 8145 8150 8189 8306 8348 8389 8748 8929 8970 9143 9203 9356 9487 9488 9549 9635 9751 9758 9798 9926 9970

9th Prize Rs.100/-
0063 0143 0246 0277 0373 0407 0428 0461 0537 0770 0809 0811 0949 1178 1186 1200 1317 1358 1571 1642 1717 1765 1774 1965 2018 2078 2119 2167 2338 2360 2363 2447 2474 2493 2696 2811 2922 3077 3082 3087 3103 3130 3215 3219 3233 3349 3359 3442 3526 3610 3711 3717 3732 3783 3969 4007 4023 4200 4207 4247 4389 4458 4535 4549 4619 4631 4647 4676 4813 4887 4935 5002 5034 5180 5333 5382 5408 5495 5505 5584 5667 5794 5912 6079 6090 6296 6585 6616 6628 6629 6644 6697 6725 6842 6955 6982 7012 7061 7127 7351 7527 7552 7602 7650 7679 7794 7856 7896 7898 7929 7961 7981 7986 8005 8191 8201 8222 8281 8393 8467 8552 8567 8608 8675 8837 8881 8936 8937 8967 9017 9156 9265 9281 9285 9295 9337 9362 9417 9575 9612 9745 9771 9876 9903

ಉಪ್ಪಿನಂಗಡಿಯಲ್ಲಿ ಶಾಲಾ ಬಳಿ ತಂಬಾಕು ಮಾರಾಟ: ಅಧಿಕಾರಿಗಳಿಂದ ಅಂಗಡಿಗಳಿಗೆ ದಂಡ

ಉಪ್ಪಿನಂಗಡಿ: ಇಲ್ಲಿನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಶಾಲಾ ಕಾಲೇಜುಗಳ ಬಳಿ ಸರಕಾರಿ ನಿಯಮಾವಳಿಯನ್ನು ಉಲ್ಲಂಘಿಸಿ ಸಿಗರೇಟು ಸಹಿತ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ಪತ್ತೆ ಹಚ್ಚಿ ದಂಡ ವಸೂಲಿ ಕಾರ್ಯಾಚರಣೆ ನಡೆದಿದೆ.

ತಂಬಾಕು ನಿಯಂತ್ರಣ ಕೋಶದ ಹಾಗೂ ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ಪಂಚಾಯತ್ ಹಾಗೂ ಪೊಲೀಸ್ ಇಲಾಖೆಯ ಸಹಕಾರದಲ್ಲಿ ನಡೆಸಲಾಯಿತು.

ಕಾರ್ಯಾಚರಣೆಯಲ್ಲಿ ದ.ಕ. ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿ ಡಾ. ದೀಪಾ ಪ್ರಭು, ಪುಂಡಲೀಕ ಲಕಾಟೆ, ಶ್ರುತಿ ಜೆ. ಸಾಲ್ಯಾನ್, ತಾಲೂಕು ತಂಬಾಕು ನಿಯಂತ್ರಣ ಕೋಶದ ಅಧಿಕಾರಿ ರವಿ ಶಂಕರ್, ಉಪ್ಪಿನಂಗಡಿ ಅಭಿವೃದ್ಧಿ ಅಧಿಕಾರಿ ವಿಲ್ಫ್ರೆಡ್ ಲಾರೆನ್ಸ್ ರೋಡ್ರಿಗಸ್ , ಆರೋಗ್ಯ ನಿಯಂತ್ರಣಾಧಿಕಾರಿ ಭರತೇಶ್ ಮತ್ತು ಉಪ್ಪಿನಂಗಡಿಯ ಪೊಲೀಸ್ ಠಾಣಾ ಅಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ) (ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ) ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ ಕ್ರಾಫರ್ಡ್ ಭವನ, ಮೈಸೂರು–570005

ಸಂಖ್ಯೆ: GL6/190/2023–24 ದಿನಾಂಕ: 09.04.2026

ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ಖರೀದಿಸಲು ವಾರ್ಷಿಕ ದರ ಒಪ್ಪಂದದ ಪ್ರಕಾರ ಒಂದು ವರ್ಷದ ಅವಧಿಗೆ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ **e-procurement portal** ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಇಂಡೆಂಟ್ ಸಂಖ್ಯೆ :**UOM/2025-26/IND0063/Call-2** ಹಾಗೂ ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:15.04.2026 ಸಂಜೆ 5:30.ರವರೆಗೆ.

ಸೂಚನೆ: ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ: 0821–2419361/222ರಲ್ಲಿ ಅಥವಾ ವೆಬ್ ಸೈಟ್ **(http://kppp.karnataka.gov.in)**ರಲ್ಲಿ ಪಡೆಯಬಹುದಾಗಿದೆ.

ಸಹಿ/– ಕುಲಸಚಿವರು

ವಾಸಾಸಂಇ/ಮೈಸೂರು/ಶಿರಡಿಸಾಯಿ/44/2026–27

ಕರ್ನಾಟಕ ಸರ್ಕಾರ–ಧಾರ್ಮಿಕ ದತ್ತಿ ಇಲಾಖೆ

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಟೀಲು, ದ.ಕ.

ದೂರವಾಣಿ: 7411534591, 8904905361 ಇ–ಮೇಲ್:kateelkateel@gmail.com

ಕ್ರಮಾಂಕ: ಕದುಪದೇ:ಟೆಂಡರು:ಸಿಆರ್: 1,11/2026–2027, ದಿನಾಂಕ: 10.04.2026

ಅಲ್ಪಾವಧಿ ಮರುಟೆಂಡರು ಪ್ರಕಟಣೆ (ಕೆಟಿಪಿಪಿ ಮುಖಾಂತರ)

ಶ್ರೀದೇವಳದ ಉಪಯೋಗಕ್ಕೆ ಬೇಕಾಗುವ ಉತ್ತಮ ಗುಣಮಟ್ಟದ ಈ ಕೆಳಗಿನ ಸಾಮಾಗ್ರಿಗಳನ್ನು ಸರಬರಾಜು ಮಾಡುವರೇ ಜಿಎಸ್‌ಟಿ ನೊಂದಾಯಿತ ಸರಬರಾಜುದಾರರಿಂದ ಅಲ್ಪಾವಧಿ ಟೆಂಡರು ಕರೆಯಲಾಗಿದೆ.

ಟೆಂಡರು ವಿವರ	ಟೆಂಡರು ಅವಧಿ	ಟೆಂಡರು ಸಲ್ಲಿಸಲು ಕೊನೆಯ ದಿನಾಂಕ
3ಪ್ಲೈ ಲ್ಯಾಮಿನೇಟೆಡ್ ಪೇಪರ್ ರೋಲು/ಪೌಚು ಸರಬರಾಜು	21.04.2026 ರಿಂದ 30.09.2026	18.04.2026, ಅಪರಾಹ್ನ 4.00 ಗಂಟೆಗೆ
ಕಾಂಪೋಸ್ಟೇಬಲ್ ಚೀಲ, ಪೌಚು ಸರಬರಾಜು	21.04.2026 ರಿಂದ 31.08.2026	

ಟೆಂಡರ್ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಟಿಪಿಪಿ ವೆಬ್‌ಸೈಟ್ www.kppp.karnataka.gov.in ಮುಖಾಂತರ / ಶ್ರೀದೇವಳದ ಕಚೇರಿಯಲ್ಲಿ ಪಡೆಯುವುದು.

ಸಹಿ/– ಅಸ್ರಣ್ಣ ಅನುವಂಶಿಕ ಮೊಕ್ತೇಸರ
ಸಹಿ/– ಕೊಡೆತ್ತೂರುಗುತ್ತು ಅನುವಂಶಿಕ ಮೊಕ್ತೇಸರ

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದೇವಕಿ ಕೆ. ಶೆಟ್ಟಿ, ಪರ್ತ ದೊಡ್ಡಮನೆ, ಪಜೀರು ವಯಾ ಕೋಣಾಜೆ ಯುನಿವರ್ಸಿಟಿ, ಉಳ್ಳಾಲ (ತಾ).
2. ಸತೀಶ್ ಶೆಟ್ಟಿ, ಪತ್ನಿ, ಮಕ್ಕಳು, ತಕಲ ಮೇಗಿನ ಮನೆ, ಕೋಲಂಬೆ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಬಯಲಾಟ ಸೇವಾ ಸಂಘ, ಅಳಪೆ, ಕಣ್ಣೂರು, ಕೊಡೆಕ್ಕಲ ಮುಂಡಿತ್ತಾಯ ದೇವಸ್ಥಾನ ವಠಾರದಲ್ಲಿ.
4. ದಿ ಲೋಲಮ್ಮ ಪಟ್ಟಾಡಿ ಸ್ಮರಣಾರ್ಥ ಮಕ್ಕಳು, ಮೊಮ್ಮಕ್ಕಳು, ಬಂಧುಮಿತ್ರರು, ಪಟ್ಟಾಡಿ ವಯಾ ಬೊಂದೇಲ್.
5. ಬೊಮ್ಮಣ್ಣ ಪೂಜಾರಿ ಮತ್ತು ಫ್ಯಾಮಿಲಿ, ಕುದ್ಮೇರು ಮನೆ, ಇರ್ವತ್ತೂರು, ನಾಯ್ಲಾಡು, ಬಂಟ್ವಾಳ (ತಾ).
6. ಹೇಮಾವತಿ ಭುಜಂಗ ಶೆಟ್ಟಿ 'ಮಾತೃಶ್ರೀ', ಅಂತರ, ಕಾಡಬೆಟ್ಟು, ಬಂಟ್ವಾಳ (ತಾ).
7. ಪ್ರಕಾಶ್ ಭಂಡಾರಿ, 'ಶ್ರೀ ಶಾರದಾ', ರೆಡ್‌ರಾಕ್ ಹಿಲ್ ಟೋಪ್ ಲೇಔಟ್, ಈಶ್ವರ ಕಟ್ಟೆ, ಚಿನ್ನಿಕಟ್ಟಲ್.

ಶ್ರೀ ಧರ್ಮಸ್ಥಳ ಮೇಳ
ವಕ್ವಾಡಿಯಲ್ಲಿ
ಶ್ರೀಮತಿ ಸರಳ ಜಯಕರ ಶೆಟ್ಟಿ, ರಕ್ಷೆ ನಿಲಯ ಚಿತ್ತೂಡಿ ಮನೆ

ಶ್ರೀ ಸಾಲಿಗ್ರಾಮ ಮೇಳ
ಮೇಲ್ ಹೊಸೂರಿನಲ್ಲಿ ಬಯಲಾಟ

ಶ್ರೀ ಪೆರ್ಡೂರು ಮೇಳ
ಆದಿ ಉಡುಪಿಯಲ್ಲಿ- **ಶೂದ್ರ ತಪಸ್ವಿನಿ**

ಶ್ರೀ ಹನುಮಗಿರಿ ಮೇಳ
ಕಿದೂರಿನಲ್ಲಿ

ಶ್ರೀ ಪಾವಂಜೆ ಮೇಳ
ಮಂಗಳೂರಿನ ಉರ್ವ ಬೋಳೂರಿನಲ್ಲಿ
-ಶ್ರೀ ದೇವಿ ಮಹಾತ್ಮೆ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಎಂ.ಪಿ.ವಿಭಾಗ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
ದೂರವಾಣಿ: 080–27271259 ಇ–ಮೇಲ್: eempdrmgm@gmail.com

ಸಂಖ್ಯೆ: ಕಾಇ/ಎಂ.ಪಿ.ವಿಭಾಗ/ರಾ.ನ/ಟೆಂ–01/2026–27 ದಿನಾಂಕ: 02.04.2026

ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ ಸಂಖ್ಯೆ: 01/26–27 ದಿನಾಂಕ: 09.04.2026
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರುಗಳಿಂದ **https://kppp.karnataka.gov.in** ಮುಖಾಂತರ ನೆಲಮಂಗಲ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಪ್ರಕಟಣೆಯನ್ನು ಕಾರಣಾಂತರದಿಂದ ವಿಸ್ತರಣೆ ಮಾಡಿ ಪ್ರಕಟಿಸಿದೆ. ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ:15.04.2026 ರ ಸಂಜೆ: 4.00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:16.04.2026 ರ ಸಂಜೆ:4.30 ಗಂಟೆ** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ:21.04.2026 ರ ಬೆಳಗ್ಗೆ:11.00 ಗಂಟೆ** ಉಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಎಂ.ಪಿ.ವಿಭಾಗ, ರಾಮನಗರ.

DIPR/BSD/05(A)/SA/2026-27

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2026–27/114 ದಿನಾಂಕ: 08/04/2026

ಅಲ್ಪಾವಧಿ ಇ–ಟೆಂಡರ್ /ಮರು ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಜಿಮುರ ಸುಧಾರಣೆ ಅಡಿ 1 ಕಾಮಗಾರಿ, 4059–ನ್ಯಾಯಾಲಯ ಕಟ್ಟಡ ನಿರ್ಮಾಣ ಅಡಿ 1 ಕಾಮಗಾರಿ ಹಾಗೂ 3054–ಜಿಮುರ ನಿರ್ವಹಣೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 4 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 240.00 ಲಕ್ಷ ಇರುವ ಕಾಮಗಾರಿಗಳಿಗೆ ಅಲ್ಪಾವಧಿ ಇ–ಟೆಂಡರ್ /ಮರುಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 1, 3 & 4 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:21–04–2026 ರಂದು (11.00 ಗಂಟೆಗೆ), 2) ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:22–04–2026 (ಸಾಯಂಕಾಲ 5.30 ಗಂಟೆಯ ವರೆಗೆ), 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:24–04–2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):27–04–2026 (ಸಾಯಂಕಾಲ 4.30 ಗಂಟೆಗೆ), 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ", 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:23–04–2026 ರಂದು (11.00 ಗಂಟೆಗೆ), 2) ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:24–04–2026 (ಸಾಯಂಕಾಲ 5.30 ಗಂಟೆಯ ವರೆಗೆ), 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:28–04–2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):30–04–2026 (ಸಾಯಂಕಾಲ 4.30 ಗಂಟೆಗೆ), 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ", 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-83/KSMCA/2026-27

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025–26/47

ದಿನಾಂಕ : 09–04–2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, 2, 3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1, 2, 3, ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 8 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2024–25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಯೋಜನೆ, 2025–26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos : 1) WORK_INDENT : 24860, 24858, 24856, 23927/CALL-2, 23897/CALL-2, 26070, 28788, 25787

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **6.70** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **75.47** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **10–04–2026** ರಿಂದ **24–04–2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **27–04–2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/12/2026–27

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು–577101
(Autonomous Medical Institution Government of Karnataka)
Phone : 08262-295347
E-Mail: directorcims 2020@gmail.com

ಸಂಖ್ಯೆ:ಸಿಮ್ಸ್/ಆಸ್ಪತ್ರೆ/ಡಯಟ್/ಫುಡ್ ಟೆಂಡರ್/ಪತ್ರಿಕಾ ಪ್ರಕಟಣೆ/02/2026–27 ದಿನಾಂಕ:06.04.2026

ಇ–ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಾಗುವ ಒಳರೋಗಿಗಳಿಗೆ ಸಿದ್ಧಪಡಿಸಿದ ಆಹಾರವನ್ನು ಸರಬರಾಜು ಪಡೆಯುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ನ್ನು ಆಹ್ವಾನಿಸಲು ಕ್ರಮವಹಿಸಲಾಗಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಹಾಗೂ ಈ ಕಛೇರಿಯಲ್ಲಿ ಕರ್ತವ್ಯದ ವೇಳೆಯಲ್ಲಿ ಪಡೆಯಬಹುದು.

ಸಹಿ/ – ನಿರ್ದೇಶಕರು
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಚಿಕ್ಕಮಗಳೂರು

IN THE COURT OF PRINCIPAL SR CIVIL JUDGE & ACJM AT PUTTUR, D.K.
Cr. Misc. Case No. 57/2026

B/W
SMT. SAROJA
W/o. Santhappa Poojary
Munglimajalu house
Bilinele, Nettana
KadabaTq D.K. ...Petitioner

And

The Registrar of Birth & Deaths (Thahasildar Puttur, D.K) Puttur D.K. ...Respondent

COURT NOTICE

It is hereby brought to the notice of Public that Smt. Saroja, W/o. Santhappa Poojary, Munglimajalu, Nettana, KadabaTq. D.K. has filed suit in O.S.No.57/2026 seeking declaration of death of her mother **Smt. Meenakshi** who died on **13.08.2007** Any person having objection may appear before the Principal Sr. civil Judge and ACJM at Puttur, D.K. on **15.05.2026 at 11 AM** without fail; otherwise the case will be disposed of by the Court as deems fit.

Sd/- Chief Administrative Officer
Pr. Sr. C.J. & ACJM Court
Puttur D.K.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಶ್ರೀ ಭಗಂಡೇಶ್ವರ – ತಲಕಾವೇರಿ ದೇವಾಲಯ
ಭಾಗಮಂಡಲ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ
E-mail: eo.sribhagandeshwara@gmail.com ದೂ. ಸಂಖ್ಯೆ : 83106 96003

ಕಡತ ಸಂಖ್ಯೆ:ಎಸ್‌ಬಿಟಿ:ಸಿಆರ್/18/5-6/2025–26 ದಿನಾಂಕ : 10-04-2026

ಇ- ಟೆಂಡರ್ ಪ್ರಕಟಣೆ

ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದ ಖಾಲಿ ಜಾಗದಲ್ಲಿ ಹಣ್ಣುಕಾಯಿ ಅಂಗಡಿ ಮಳಿಗೆಯನ್ನು ನಿರ್ಮಿಸಿಕೊಳ್ಳಲು ಸ್ಥಳದಲ್ಲಿ ಚಾಲ್ತಿಯಲ್ಲಿರುವ ಗೇಣಿ ದರಕ್ಕೆ ಅನುಗುಣವಾಗಿ **"ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ನಿಯಮಗಳು 2002 ರ ನಿಯಮ 31"** ರನ್ವಯ ಷರತ್ತುಗಳನ್ನು ವಿಧಿಸಿ **11 ತಿಂಗಳ ಅವಧಿಗೆ** (01-05-2026 ರಿಂದ 31-03-2027 ರವರೆಗೆ) ಗುತ್ತಿಗೆ ನೀಡಲು ಮರು ಇ-ಟೆಂಡರ್ ಪ್ರಕಟಣೆಯನ್ನು ಕರೆಯಲಾಗಿದೆ. ವಿವರ ಈ ಕೆಳಕಂಡಂತಿದೆ:

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಸಂಖ್ಯೆ
1.	ಶ್ರೀ ತಲಕಾವೇರಿ ದೇವಾಲಯದ ಖಾಲಿ ಜಾಗದಲ್ಲಿ ಹಣ್ಣುಕಾಯಿ ಅಂಗಡಿ ಮಳಿಗೆಯನ್ನು ನಿರ್ಮಿಸಿಕೊಂಡು ಅಂಗಡಿ ಮಳಿಗೆಯನ್ನು ಗುತ್ತಿಗೆಗೆ ಪಡೆಯುವ ಬಗ್ಗೆ	HRICE/2025-26/SE0558/CALL-2

ಆದುದರಿಂದ ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸವಾಲುದಾರರು ಅಗತ್ಯ ದಾಖಲಾತಿಗಳನ್ನು ಕರ್ನಾಟಕ ಸರ್ಕಾರ ಕರ್ನಾಟಕದ ಸಾರ್ವಜನಿಕ ಸಂಗ್ರಹಣೆಗಳ ಇ-ಪ್ರೊಕ್ಯೂರ್‌ಮೆಂಟ್ **(E-procurement Website https://kppp.karnataka.gov.in)** ಮೂಲಕ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಸಂಖ್ಯೆ: 83106 96003 ಮೂಲಕ ಮಾಹಿತಿ ಪಡೆಯಬಹುದಾಗಿದೆ.

(ಮಾನ್ಯ ಆಡಳಿತಾಧಿಕಾರಿಗಳ ಆದೇಶದ ಮೇರೆಗೆ)

ಸಹಿ/- ಕಾರ್ಯನಿರ್ವಹಣಾಧಿಕಾರಿಗಳು,
ಶ್ರೀ ಭಗಂಡೇಶ್ವರ – ತಲಕಾವೇರಿ ಮತ್ತು ಸಮೂಹ ದೇವಾಲಯಗಳು,
ಭಾಗಮಂಡಲ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,

ಗುಂಡ್ಲುಪೇಟೆ-571 111, ಚಾಮರಾಜನಗರ ಜಿಲ್ಲೆ

ಇ-ಮೇಲ್ : apmcgundlupet1997@gmail.com ದೂರವಾಣಿ ಸಂಖ್ಯೆ:08229-222215

ಕ್ರ.ಸಂ.ಉ.ಮಾ.ಸ(ಗುಂಪೇ): 05: 2026–27 ದಿನಾಂಕ:06/04/2026

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹದ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗಳಲ್ಲಿ ನೊಂದಾಯಿತ ಹಾಗೂ Standard Tender Documents KW-4 Clause 3 (with latest amendments)ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊಬಲಗು ರೂ. ಶೇ.1.50 ರಂತೆ ಅಥವಾ ಕನಿಷ್ಟ (ಇ ಪೇಮೆಂಟ್)	ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ (ಮಳೆಗಾಲ ಹೊರತುಪಡಿಸಿ)	ಅರ್ಹ ಗುತ್ತಿಗೆದಾರರ ದರ್ಜೆ	ಇ ಪ್ರೊಸೆಸಿಂಗ್ ಫೀ(ಇ ಪೇಮೆಂಟ್)
1	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಸಮಿತಿಯ ಮುಖ್ಯ ಮಾರುಕಟ್ಟೆ ಮತ್ತು ತೆರಕಣಾಂಬಿ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಿ.ಸಿ.ರಸ್ತೆ, ಸಿ.ಸಿ.ಚರಂಡಿ ಮತ್ತು ಡೆಕ್‌ಸ್ಲ್ಯಾಬ್‌ಗಳನ್ನು ನಿರ್ಮಿಸುವ ಕಾಮಗಾರಿ, (ಐಟಂವಾರು ಟೆಂಡರ್)	4,14,22,518=65	6,22,000=00	6 ತಿಂಗಳು	ಕೆ.ಡಬ್ಲ್ಯೂ-4 ಕ್ಲಾಸ್-3ರಲ್ಲಿ ಅರ್ಹರಿರುವ ಮತ್ತು ಲೋ.ಇ.ಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ

1. ಫ್ರೀ ಬಿಡ್ ಮೀಟಿಂಗ್ ದಿನಾಂಕ: 15.04.2026 ಬೆಳಿಗ್ಗೆ: 12.00 ಘಂಟೆಗೆ
2. ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ: 21.04.2026 ಮತ್ತು ವೇಳೆ: ಸಂಜೆ 5.00 ಗಂಟೆ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.04.2026 ಮತ್ತು ವೇಳೆ : ಮಧ್ಯಾಹ್ನ 5.00 ಗಂಟೆ
4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.04.2026 ಮತ್ತು ವೇಳೆ : ಮಧ್ಯಾಹ್ನ 3.00 ಗಂಟೆ

Tender documents may be downloaded from Government of Karnataka e-Procurement website https://kppp.karnataka.gov.in//portal/portal-home under login for Contractors

ಟೆಂಡರುಗಳನ್ನು ತೆರೆಯುವ ಸ್ಥಳ : ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ
ಪತ್ರ ವ್ಯವಹಾರದ ವಿಳಾಸ : ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಸಹಿ/-ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ

ಸಹಿ/- ಅಧ್ಯಕ್ಷರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ

ಸಂ.ವಾಸಾಸಂಇ: ಚಾ.ನಗರ:32;2026-27

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಶಿರಸಿ ಉಪ ವಿಭಾಗ, ಶಿರಸಿ–581401
ದೂರವಾಣಿ (PHONE): 08384-226445, e-mail: acfsirsi445@gmail.com

ಕ್ರ.ಸಂ.: ಎ2/ಟೆಂಡರ/KPPP/Out Source/ವಿವ–06(2)/2026–27/61 ದಿನಾಂಕ: 06–04–2026

ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಸಾರ್ವಜನಿಕರಿಗೆ ಹಾಗೂ ನೋಂದಾಯಿತ ಹೊರಸಂಪನ್ಮೂಲ ಏಜನ್ಸಿಯವರಿಂದ ವೃತ್ತ ಕಛೇರಿ, ವಿಭಾಗೀಯ ಕಛೇರಿ, ಉಪ–ವಿಭಾಗೀಯ ಕಛೇರಿ ಹಾಗೂ ವಲಯ ಅರಣ್ಯಾಧಿಕಾರಿಗಳ ಕಛೇರಿಗಳಲ್ಲಿ ಅಗತ್ಯವಿರುವ ಕಾವಲುಗಾರರು, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು, ಕ್ಯಾಂಪ್ ಕಾವಲುಗಾರರ ಸೇವೆಯನ್ನು ಒದಗಿಸುವ ಬಗ್ಗೆ ಪಾರದರ್ಶಕ ನಿಯಮಗಳನುಸಾರ KPPP ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದ್ದು, ಈ ಕಛೇರಿಯಲ್ಲಿ 2026–27ನೇ ಸಾಲಿಗೆ ಶಿರಸಿ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೋಂದಣಿ ಹೊಂದಿರುವವರು ಇ–ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 27–04–2026 ಆಗಿದ್ದು, ಹೆಚ್ಚಿನ ಮಾಹಿತಿ/ ವಿವರವಾದ ಟೆಂಡರ ಪ್ರಕಟಣೆಯನ್ನು, ಕಛೇರಿ ವೇಳೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿರಸಿ ಉಪ ವಿಭಾಗ, ಶಿರಸಿರವರನ್ನು ಸಂಪರ್ಕಿಸುವುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಉಪ ವಿಭಾಗ, ಶಿರಸಿ

DIPR/KWR/KSMCA/41/26-27 Dt.10.04.2026

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079,
ದೂರವಾಣಿ : +91–80–29619801 ಮಿಂಚ್ ಅಂಚೆ : md.ksmscl@gmail.com

No: KSMSCL/EQPT/HFW/CH/TND/47/2025-26 Date: 10.04.2026

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:
1. KSMSCL/EQPT/HFW/CH/TND/47/2025-26 (IND 0374) Date: 18.03.2026.
2. KSMSCL/EQPT/HFW/NCD/PD/TND/48/2025-26 (IND 0375) Date: 18.03.2026.
3. KSMSCL/EQPT/HFW/PMABHIM/IPHL/TND/49/2025-26 (IND 0376) Date: 18.03.2026.
4. KSMSCL/EQPT/HFW/MH/15TH FC /TND/50/2025-26 (IND 0377) Date: 18.03.2026.

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. ಮಕ್ಕಳ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ **- IND 0374**
2. **NCD** ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ **- IND 0375**
3. **PMABHIM** ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ **- IND 0376**
4. ತಾಯಿ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ **- IND 0377**

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ದಿನಾಂಕ: **04.02.2026** ರಿಂದ ಟೆಂಡಗಳನ್ನು ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆ&ಸ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/144/ಅಕಾರ್/2026–27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ.
ಇ–ಮೇಲ್: eemimandya@gmail.com

ಸಂಖ್ಯೆ:ಕಾ.ಇಂ/ಸ.ನೀ/ಮಂ/ತಾಂಶಾ/ಸ.ಇಂ–1/ಟೆ.ಪ್ರ–1/2026–27/1016 ದಿನಾಂಕ:09.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 01/2026–27 ದಿನಾಂಕ: 09.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401 ಇವರು ಕೆಪಿಪಿ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–1,2,3& 4 ರ ಪ್ರಕಾರ "ಕೆಪಿಪಿ" – ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಆಧಾರದ ಮೇಲೆ ಒಟ್ಟು 7 ಸಂಖ್ಯೆ ಕಾಮಗಾರಿಗಳು ಮತ್ತು "ಕೆಪಿಪಿ" ಮುಖಾಂತರ ನೇರ ಹರಾಜು ಪ್ರಕ್ರಿಯೆ ಮುಖಾಂತರ 7 ಕೆರೆಗಳ ಮೀನು ಪಾಶುವಾರು ಹಕ್ಕು ವಿಲೇವಾರಿ (7–ಕಾಮಗಾರಿಗಳು ಮತ್ತು 7–ಮೀನು ಪಾಶುವಾರು ಹಕ್ಕು ವಿಲೇವಾರಿ) ಟೆಂಡರ್ ಅನ್ನು ಟೆಂಡರಿಗಿಟ್ಟ ಅಂದಾಜು ಮೊತ್ತ ಕನಿಷ್ಠ ರೂ.17226.00 ಗಳಿಂದ ಗರಿಷ್ಠ ರೂ:310.00 ಲಕ್ಷಗಳವರೆಗೆ ಅಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

ಕ್ರ ಸಂ	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಬಿಡ್ ಅಪ್ಲೋಡ್ ಮಾಡಲು ಕಡೆಯ ದಿನಾಂಕ & ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ
1	4702– ಟಿ.ಎಸ್.ಪಿ–ಚೆಕ್ ಡ್ಯಾಂ	1	22.04.2026 17.29 ಗಂಟೆವರೆಗೆ	23.04.2026 17.30 ಗಂಟೆ	24.04.2026 17.30 ಗಂಟೆ
2	4702– ಎಸ್.ಸಿ.ಪಿ–ಕೊಳವೆಭಾವಿ	3	05.05.2026 17.29 ಗಂಟೆವರೆಗೆ	06.05.2026 17.30 ಗಂಟೆ	07.05.2026 17.30 ಗಂಟೆ
3	4702– ಟಿ.ಎಸ್.ಪಿ–ಕೊಳವೆಭಾವಿ	1			
4	4702– ಕೆರೆಗಳ ಆಧುನೀಕರಣ	2			

"ಕೆಪಿಪಿ" ಮುಖಾಂತರ ನೇರ ಹರಾಜು ಪ್ರಕ್ರಿಯೆ ಮುಖಾಂತರ ಕೆರೆಗಳ ಮೀನು ಪಾಶುವಾರು ಹಕ್ಕು ವಿಲೇವಾರಿ

ಕ್ರ ಸಂ	ಹಕ್ಕು ವಿಲೇವಾರಿ ವಿವರ	ಒಟ್ಟು ಕೆರೆಗಳು	ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಬಿಡ್ಡುದಾರರು ದೃಢೀಕರಿಸಲು ಕಡೆಯ ದಿನಾಂಕ & ಸಮಯ	ಹರಾಜು ಪ್ರಕ್ರಿಯೆ ಮಾಡಲು ನಿಗಧಿಯಾದ ದಿನಾಂಕ & ಸಮಯ	ಹರಾಜು ಬಿಡ್ ತೆರೆಯುವ ದಿನಾಂಕ ದಿನಾಂಕ & ಸಮಯ
1	ಮಂಡ್ಯ ಜಿಲ್ಲೆ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕು ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಇ–ಟೆಂಡರ್ ಮುಖೇನ ಮೀನುಪಾಶುವಾರು ಹಕ್ಕು ವಿತರಣೆ ಮದ್ದೂರು ತಾಲ್ಲೂಕು ಕೆರೆಗಳು: (1) ಕೆಸ್ತೂರು ಕೆರೆ, (2) ಮಾಚಹಳ್ಳಿ ಕೆರೆ (3) ದುಂಡನಹಳ್ಳಿ ಕೆರೆ (4) ಆತಗೂರು ಕೆರೆ (5) ಚಾಕನಕೆರೆ ಕೆರೆ (6) ಕೂಳಗೆರೆ ಕೆರೆ ಮಳವಳ್ಳಿ ತಾಲ್ಲೂಕು ಕೆರೆ: (7) ನಿಟ್ಟೂರು ಕೆರೆ	7	ದಿ:16.05.2026 17.29 ಗಂಟೆವರೆಗೆ	ಹರಾಜು ಪ್ರಕ್ರಿಯೆ ಪ್ರಾರಂಭ: ದಿ:18.05.2026 10.00 ಗಂಟೆಯಿಂದ ಮುಕ್ತಾಯ: ದಿ:24.05.2026 17.30 ಗಂಟೆವರೆಗೆ	ದಿ:25.05.2026 17.30 ಗಂಟೆ

ಗುತ್ತಿಗೆದಾರರು ಟೆಂಡರ್‌ನ ನಿಗದಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಅವಶ್ಯ ದಾಖಲೆಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಮೇಲ್ಕಂಡ ಕಾಲಂಗಳನ್ವಯ ಬಿಡ್ಡನ್ನು ಅಪ್ ಲೋಡ್ ಮಾಡಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ದಾಖಲೆ/ಮಾಹಿತಿಯನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯ ಬಹುದು. ಮಂಡ್ಯ ಜಿಲ್ಲಾ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆ/ಜಲಸಂಪನ್ಮೂಲಗಳ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in). ಕೆರೆ/ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ–ಟೆಂಡರ್ ಮೂಲಕ ವಿಲೇವಾರಿ ಮಾಡಲು ಇ–ಟೆಂಡರ್ ದಸ್ತಾವೇಜು ಅನ್ನು ಈ ಕಚೇರಿಯಲ್ಲಿ ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in). ವಿ.ಸೂ: ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ರವರು ಕಾಯ್ದಿರಿಸಿರುತ್ತಾರೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಕೆಪಿಪಿ" – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ/ದಿನಾಂಕಗಳನ್ನು ಮುಂದೂಡುವ ಬಗ್ಗೆ ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳನ್ನು ಪ್ರತಿ ಇಂಡೆಂಟ್‌ಗೆ ಪ್ರತ್ಯೇಕವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಪ್ರತ್ಯೇಕ ಪತ್ರಿಕೆ ಪ್ರಕಟಣೆ ನೀಡಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸ.ನೀ. ಮತ್ತು ಅಂ.ಅ. ವಿಭಾಗ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/036/2026–27

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 11 ಏಪ್ರಿಲ್ 2026
ಮಂಗಳೂರು


ಸಾರಸ್ವತ ಲೋಕದ ಧೀಮಂತ
ಎಸ್.ಆರ್.ರಾಮಸ್ವಾಮಿ

ದು.ಗು. ಲಕ್ಷ್ಮಣ, ಹಿರಿಯ ಪತ್ರಕರ್ತ

ಅವರದು ಯಾವಾಗಲೂ ಪಂಚೆ ಹಾಗೂ ಜುಬ್ಬದ ಅಪ್ಪಟ ಖಾದಿ ಉಡುಪು. ಹೆಗಲಿಗೊಂದು ನೇತಾಡುವ ಭಾರವಾದ ಚೀಲ. ಆ ಚೀಲದಲ್ಲಿ ಕಾಫಿ ಫ್ಲಾಸ್ಕ್, ಸುಗಂಧಭರಿತ ಅಡಿಕೆಪುಡಿ, ಒಂದಷ್ಟು ಪುಸ್ತಕಗಳು ಇತ್ಯಾದಿ. ಕಣ್ಣಿಗೊಂದು ದಪ್ಪ ಕನ್ನಡಕ. ಅವರು ನಮ್ಮನ್ನು ನೋಡುತ್ತಿದ್ದಾರೋ ಅಥವಾ ಬೇರೆ ಯಾರನ್ನಾದರೂ ದೃಷ್ಟಿಸುತ್ತಿದ್ದಾರೋ ಎಂಬ ಗೊಂದಲದ ನೋಟ. ಅವರು ನೋಡುತ್ತಿದ್ದುದೇ ಹಾಗೆ. ಅದೊಂದು ಗಂಭೀರ ನೋಟ. ಅವರ ಪರಿಚಯ ಇಲ್ಲದಿರುವವರಿಗೆ ಇವರೊಬ್ಬ ಗಂಭೀರ ಸ್ವಭಾವದ ವ್ಯಕ್ತಿ ಎನಿಸುತ್ತಿತ್ತು. ಪರಿಚಯವಿರುವವರಿಗೆ ಮಾತ್ರ ಸ್ನೇಹಮಯ ವ್ಯಕ್ತಿಯಾಗಿ ಕಾಣುತ್ತಿದ್ದರು. ಗಾಂಧಿ ಬಜಾರಿನ ತರಕಾರಿ ಅಂಗಡಿಯ ಬಳಿ ಅಥವಾ ಬುಲ್‌ಟೆಂಪಲ್ ರಸ್ತೆಯಲ್ಲಿ ಹೆಗಲಿಗೆ ಚೀಲ ಏರಿಸಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಇಳಿವಯಸ್ಸಿನಲ್ಲೂ ನಡೆದುಕೊಂಡೇ ಓಡಾಡುತ್ತಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

'ಹೇಗಿದ್ದೀರಿ ಸಾರ್ ?' ಎಂದು ಆತ್ಮೀಯರು ಪ್ರಶ್ನಿಸಿದರೆ, ಅಷ್ಟೇ ಗಂಭೀರವಾಗಿ "better than to-morrow' ಎಂಬ ಉತ್ತರ. ಈ ಉತ್ತರದಲ್ಲಿ ಒಂದು ಬಗೆಯ ತಿಳಿಹಾಸ್ಯ. ನಾಳೆಗಿಂತ ಇಂದು ಆರೋಗ್ಯ ಉತ್ತಮ ಎಂಬುದು ಅದರ ಅರ್ಥ. ಆದರೆ, ಅವರ ಈ ಮಾತನ್ನು ಅರ್ಥ ಮಾಡಿಕೊಳ್ಳಲು ಪ್ರಶ್ನೆ ಕೇಳಿದವರಿಗೆ ಒಂದೆರಡು ನಿಮಿಷಗಳಾದರೂ ಬೇಕಾಗುತ್ತಿತ್ತು. ತನಗಿಂತ ಕಿರಿಯರು ಭೇಟಿಯಾದಾಗ ಹೆಗಲ ಮೇಲೆ ಕೈಹಾಕಿ ಪ್ರೀತಿಯಿಂದ ಮಾತನಾಡಿಸುವ ಸ್ವಭಾವ. ಗಣ್ಯರು, ಹಿರಿಯರೊಂದಿಗಾದರೆ ಅಷ್ಟೇ ಗೌರವ. ಗಂಭೀರ ವರ್ತನೆ. ತನ್ನ ವಯಸ್ಸಿನ ಕಾಲು ಭಾಗವೂ ಆಗಿರದ ಪ್ರಾಯದ ಪಡ್ಡೆ ಹುಡುಗರೊಂದಿಗೆ ನಗುನಗುತ್ತಾ ಕೆಲವೊಮ್ಮೆ ಮಸಾಲೆಭರಿತ ನಾಟಕ, ಸಿನೆಮಾ ನೋಡಲು ಹೋಗುತ್ತಿದ್ದ ಅವರು, ಉಳಿದ ವೇಳೆಯಲ್ಲಿ ಶ್ರೀಮದ್ಗಾಂಭೀರ್ಯದ ಮೂರ್ತಿ. ಅನೇಕರಿಗೆ ಇವರು ಹೀಗೇಕೆ ಎಂಬ ಪ್ರಶ್ನೆ. ಆದರೆ, ಅವರ ಅಂತರಂಗವನ್ನು ಅರಿತವರಿಗೆ ಅವರೆಷ್ಟು ಹೃದಯವಂತರು, ಆತ್ಮೀಯರು ಎಂಬ ಉಲ್ಲಾಸದ ಆಪ್ತ ಅನುಭವ.

ಶುಕ್ರವಾರ ಬೆಳಗ್ಗೆ ನಿಧನರಾದ ಎಸ್.ಆರ್. ರಾಮಸ್ವಾಮಿ ಅವರನ್ನು ಹತ್ತಿರದಿಂದ ಬಲ್ಲವರಿಗೆ ಮೇಲಿನ ಮಾತುಗಳು ಅದೆಷ್ಟು ಅನ್ವರ್ಥವೆಂದು ಅನಿಸದಿರದು. ಅವರೊಬ್ಬ ಅಸಾಧಾರಣ ಪಾಂಡಿತ್ಯದ ಗಣಿ. ಪ್ರಬುದ್ಧ ವಿದ್ವಾಂಸ. ಜ್ಞಾನದ ಭಂಡಾರ. ಅವರ ಅರಿವಿಗೆ ನಿಲುಕದ ವಿಷಯಗಳೇ ಬಹುಶಃ ಇದ್ದಿರಲಿಕ್ಕಿಲ್ಲ. ಸಂಸ್ಕೃತ, ಹಿಂದಿ, ಕನ್ನಡ, ತೆಲುಗು, ಮರಾಠಿ, ಗುಜರಾತಿ, ಬಂಗಾಳಿ, ಇಂಗ್ಲಿಷ್... ಹೀಗೆ ಹಲವು ಭಾಷೆಗಳ ಮೇಲೆ ಹಿಡಿತ. ಅಧ್ಯಯನದ ಕ್ಷೇತ್ರಗಳು ಹತ್ತಾರು. ಆದರೂ ಅವರು ತಮ್ಮನ್ನು ವಿಶೇಷವಾಗಿ ಗುರುತಿಸಿಕೊಂಡದ್ದು ಅಭ್ಯುದಯ ಅರ್ಥಶಾಸ್ತ್ರ, ಪತ್ರಿಕೋದ್ಯಮ ಮತ್ತು ಭಾರತೀಯ ಸಂಸ್ಕೃತಿಯ ವಿವಿಧ ರಂಗಗಳಲ್ಲಿ. ಈ ಕಾರಣಕ್ಕಾಗಿಯೇ ಅವರ ಓದು – ಬರಹಗಳಿಗೆ ಎಣೆಯಿಲ್ಲದ ಆಳ– ಅಗಲ, ಅಧಿಕೃತತೆ ಮತ್ತು ಸಮಗ್ರತೆಗಳ ಹದ. ಅವರ ಕನ್ನಡ – ಇಂಗ್ಲಿಷ್ ಭಾಷಾಶೈಲಿ ಗಂಭೀರವಾದ ವಿಷಯಗಳನ್ನು ದೀರ್ಘಕಾಲ ನಿಲ್ಲುವಂತೆ ಹೇಗೆ ಹೇಳಬಹುದೆಂಬ ಕಲೆಗೆ ನಿದರ್ಶನ.





ರಾಮಸ್ವಾಮಿಗಳು ಸುಪ್ರಸಿದ್ಧ ಪಂಡಿತವಂಶವಾದ ಮೋಟಗಾನ ಹಳ್ಳಿಯ ಕುಟುಂಬಕ್ಕೆ ಸೇರಿದವರು. ಸೊಂಡೇಕೊಪ್ಪದ ಮೂಲದವರು. ಅವರ ಕುಟುಂಬದ ಹಿರಿಯರಲ್ಲಿ ವಿದ್ವತ್ತು, ಪಾಂಡಿತ್ಯ, ಕಲಾಸಕ್ತಿ ಮತ್ತು ಸಾಹಸ ಸಾಮಾನ್ಯವೆಂಬಂತೆ ಸದ್ಗುಣಗಳಾಗಿದ್ದವು. ಚತುಶ್ಶಾಸ್ತ್ರ ಪಂಡಿತರು, ವೇದ ಪಾರಂಗತರು, ಸೋಮಯಾಜಿಗಳು, ಪಂಡಿತ ಕವಿಗಳು, ಗೀತ ನಾಟಕ ಪ್ರವೀಣರು.... ಹೀಗೆ ಹಲವರು ಅವರ ತಾಯಿ – ತಂದೆಯ ವಂಶದಲ್ಲಿ ಆಗಿ ಹೋದವರು. ಅದೇ ಸದ್ಗುಣಗಳು ರಾಮಸ್ವಾಮಿ ಅವರಲ್ಲೂ ಹರಿದು ಬಂದಿರಬಹುದು. ರಾಮಸ್ವಾಮಿ ಅವರು ಚಿಕ್ಕ ವಯಸ್ಸಿಗೇ ವೇದಾಧ್ಯಯನ ಮಾಡಿದವರು. ವ್ಯಾಕರಣ ಕಲಿಕೆ, ಜೊತೆಗೆ ಜರ್ಮನ್, ಫ್ರೆಂಚ್, ಸ್ಪಾನಿಶ್, ಇಟಾಲಿಯನ್ ಭಾಷೆಗಳ ಪರಿಚಯ ಪಡೆದಿದ್ದರು. ಇವೆಲ್ಲಕ್ಕಿಂತ ಮುಖ್ಯವಾಗಿ ಅವರು ಡಿವಿಜಿ ಅವರ ಕಣ್ಣು ಹಾಗೂ ಕೈ ಆಗಿದ್ದರು. ಡಿವಿಜಿ ಅವರು ಉಕ್ತ ಲೇಖನದ ರೂಪದಲ್ಲಿ ಹೇಳುತ್ತಿದ್ದುದನ್ನು ಅಚ್ಚುಕಟ್ಟಾಗಿ ಬರೆದು, ಪ್ರತಿಮಾಡಿ, ಅಚ್ಚಿನ ಮನೆಯ ಎಲ್ಲ ಹಂತಗಳ ಕರಡನ್ನು ತಿದ್ದಿ ಅದಕ್ಕೊಂದು ಅಂತಿಮರೂಪವನ್ನು ನೀಡುತ್ತಿದ್ದವರು ಇವರೇ. ಡಿವಿಜಿ ಅವರ ಪ್ರತಿ ಪುಸ್ತಕದ ಮುನ್ನುಡಿಯಲ್ಲಿ ಸಾಮಾನ್ಯವಾಗಿ ತಪ್ಪದೇ ಇಣುಕುತ್ತಿದ್ದ ಹೆಸರು ರಾಮಸ್ವಾಮಿ ಅವರದು. ಡಿವಿಜಿ ಅವರಷ್ಟೇ ಅಲ್ಲ, ವಿ.ಸೀ., ಮಾಸ್ತಿ, ರಾಳ್ಳಪಲ್ಲಿ, ವೀರಕೇಸರಿ ಸೀತಾರಾಮಶಾಸ್ತ್ರಿ, ದೇವುಡು ನರಸಿಂಹ ಶಾಸ್ತ್ರಿ, ರಾಜರತ್ನಂ, ಪಿ. ಕೋದಂಡರಾವ್, ಯಾದವ ರಾವ್ ಜೋಶಿ ಮುಂತಾದ ಪ್ರಾತಃಸ್ಮರಣೀಯರೊಂದಿಗೂ ನಿರಂತರ ಸಾಹಚರ್ಯ. ಜೊತೆಗೆ ಎನ್. ಚನ್ನಕೇಶವಯ್ಯ, ವೀಣಾ ರಾಜಾರಾವ್, ಮಲ್ಲಿಕಾರ್ಜುನ ಮನ್ಸೂರ್, ಪಂಡಿತ ಶೇಷಾದ್ರಿ ಗವಾಯಿ, ರಾಮರಾವ್ ನಾಯಕ್ ಮುಂತಾದ ಅಸಂಖ್ಯ ಸಂಗೀತ ದಿಗ್ಗಜರೊಂದಿಗೆ ಸ್ನೇಹದ ಒಡನಾಟ.

ಇಷ್ಟೆಲ್ಲ ಮೇರು ವ್ಯಕ್ತಿಗಳ ಒಡನಾಟದಲ್ಲಿ ಅರಳಿದ ರಾಮಸ್ವಾಮಿ ಅವರಿಗೆ ಶಾಲಾ ಕಾಲೇಜುಗಳ ಶಿಕ್ಷಣ ನೀರಸವೆನಿಸಿದ್ದರೆ ಆಶ್ಚರ್ಯವಿಲ್ಲ. ಅವರು ಕಾಲೇಜು ವಿಶ್ವವಿದ್ಯಾಲಯಗಳ ಮೆಟ್ಟಲು ತುಳಿದಿದ್ದು ಡಿಗ್ರಿಗಳ ಪ್ರಾಪ್ತಿಗಾಗಿ ಅಲ್ಲ. ಆದರೆ, ವಿಶೇಷ ಉಪನ್ಯಾಸಕರಾಗಿ ಅಥವಾ ಇನ್ನುವುದೋ ಗೌರವ ಡಾಕ್ಟರೇಟ್, ಡಿ.ಲಿಟ್ ಪದವಿ ಸ್ವೀಕರಿಸುವುದಕ್ಕಾಗಿ ವಿವಿಗಳಿಗೆ ಎಡತಾಕಿದ್ದು ಉಂಟು.

1972 ರಿಂದ 1979ರ ವರೆಗೆ 'ಸುಧಾ' ಕನ್ನಡ ವಾರ ಪತ್ರಿಕೆಯಲ್ಲಿ ಪ್ರಧಾನ ಉಪಸಂಪಾದಕರಾಗಿ ದುಡಿಮೆ. ಆನಂತರ 1979ರಿಂದ ಇದುವರೆಗೂ ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ 'ಉತ್ಥಾನ' ಕನ್ನಡ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾಗಿ ಅಹರ್ನಿಶಿ ಸೇವೆ. ನಿಜಕ್ಕೂ ಅದು ಸೇವೆಯೆ. ಏಕೆಂದರೆ ರಾಷ್ಟ್ರೋತ್ಥಾನ ಪರಿಷತ್ತಿಗೆ ಕಾಲಿಟ್ಟಾಗ ನನಗೆಷ್ಟು ವೇತನ ಕೊಡುತ್ತೀರಿ ಎಂದು ಅವರು ಯಾರನ್ನೂ ಕೇಳಿರಲಿಲ್ಲ.

ಪರಿಷತ್ತಿನ ಕಾರ್ಯ ನಿರ್ವಹಿಸುತ್ತಲೇ ಅವರು ಐವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿದ್ದು ಅವರ ಅದ್ಭುತ ಲೇಖನ ಸಾಮರ್ಥ್ಯಕ್ಕೆ ಸಾಕ್ಷಿ. ಗ್ರಂಥ ಸಂಪಾದನೆ, ಹಸ್ತಪ್ರತಿ ಪರಿಷ್ಕರಣೆ, ವಿವಿಧ 'ನಾಗರಿಕತೆಗಳ ಸಂಘರ್ಷ', 'ಭಾರತದಲ್ಲಿ ಸಮಾಜ ಕಾರ್ಯ: ಹಿನ್ನೆಲೆ –ಮುನ್ನೋಟ', 'ಸ್ವದೇಶಿ ಜಾಗೃತಿ' 'ಆರ್ಯರ ಆಕ್ರಮಣ: ಬುಡವಿಲ್ಲದ ವಾದ' ಹೀಗೆ ಹಲವು ಮೌಲಿಕ ಕೃತಿಗಳ ಅಸಾಮಾನ್ಯ ದಾಖಲೆ.

ರಾಮಸ್ವಾಮಿ ಎಂದರೆ ಶಿಸ್ತಿಗೆ ಇನ್ನೊಂದು ಹೆಸರು. ನಿಗದಿತ ಸಮಯಕ್ಕಿಂತ ಮೊದಲೇ ಕೆಲಸ ನಿರ್ವಹಿಸುವುದು ಅವರ ಸ್ವಭಾವ. ಯಾವುದೇ ಕೆಲಸ ಇರಲಿ ಪೂರ್ವ ಸಿದ್ಧತೆ ಇಲ್ಲದೆ ಅವರು ಹೋಗುತ್ತಿರಲಿಲ್ಲ. ಸಭೆಯಲ್ಲಿ ಒಬ್ಬರ ಪರಿಚಯ ಮಾಡಿಕೊಡುವುದಿದ್ದರೂ ಅವರ ಬಗ್ಗೆ ವಿವರಗಳನ್ನು ಸಂಗ್ರಹಿಸಿ, ಆನಂತರ ಅದನ್ನು ಅಚ್ಚುಕಟ್ಟಾಗಿ ಬರೆದು, ಸೊಗಸಾಗಿ ನಿರೂಪಿಸುತ್ತಿದ್ದರು. ಬರವಣಿಗೆ, ಭಾಷಣ, ಲೇಖನ ಪರಿಷ್ಕರಣೆ, ಅಧ್ಯಯನ –ಎಲ್ಲದರಲ್ಲೂ ಈ ಶಿಸ್ತು ಎದ್ದು ಕಾಣುತ್ತಿತ್ತು.

ಗುರುವಾರ ರಾತ್ರಿ ಊಟ ಮುಗಿಸಿ ಐಪಿಎಲ್ ಪಂದ್ಯ ವೀಕ್ಷಿಸಿ, ಆ ಪಂದ್ಯದ ಬಗ್ಗೆ ತಮ್ಮದೇ ಕೆಲವು ಅಭಿಪ್ರಾಯ ತಿಳಿಸಿ ಮಲಗಿದ ರಾಮಸ್ವಾಮಿ ಅವರು ಎಷ್ಟು ಹೊತ್ತಿಗೆ ಉಸಿರು ನಿಲ್ಲಿಸಿದರೋ ಯಾರಿಗೂ ಗೊತ್ತಾಗಲಿಲ್ಲ. ಬೆಳಗ್ಗೆ ಅವರು 5ಕ್ಕೆ ಏಳದಿದ್ದಾಗಲೇ ಮನೆಯವರಿಗೆ ಅವರಿಲ್ಲವೆಂಬುದು ತಿಳಿದದ್ದು. ಕೊನೆಯುಸಿರಿನವರೆಗೂ ಅವರದು ಸಕ್ರಿಯ ಬದುಕು.

1999 ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ 'ಕಾರ್ಗಿಲ್ ಕಂಪನ' ಕೃತಿ ರಚನೆಯಲ್ಲಿ ರಾಮಸ್ವಾಮಿ ಅವರ ಜೊತೆ ಕೈಜೋಡಿಸುವ ಭಾಗ್ಯ ನನ್ನದಾಗಿತ್ತು. ಪ್ರತ್ಯಕ್ಷ ರಣರಂಗದ ವಿದ್ಯಮಾನ, ಸೈನಿಕರ ವೀರಾವೇಶದ ಹೋರಾಟ ಕುರಿತು ಬರೆಯುವ ಹೊಣೆ ನನಗೆ ವಹಿಸಿದ್ದರು. ಒಂದು ವಾರದಲ್ಲೇ 90 ಪುಟಗಳ ಪುಸ್ತಕ ಸಿದ್ಧಪಡಿಸಿ ಅವರಿಗೆ ನೀಡಿದಾಗ, ರಾಮಸ್ವಾಮಿ ಅವರ ಮುಖದಲ್ಲಿ ಕಂಡೂಕಾಣದಂತೆ ತೇಲಿ ಹೋದ ಸಣ್ಣದೊಂದು ನಗು ನನಗೆ ಸ್ಫೂರ್ತಿ ನೀಡಿತ್ತು. ಸಾರಸ್ವತ ಲೋಕದ ಉಜ್ವಲ ನಕ್ಷತ್ರವಾಗಿದ್ದ ರಾಮಸ್ವಾಮಿ ಅವರಿಗೆ ಯಾವುದೇ ವಶೀಲಿಬಾಜಿ ಇಲ್ಲದೆ, ಅವರ ಅಗಾಧ ವಿದ್ವತ್ತನ್ನು ಪರಿಗಣಿಸಿ ನಾಡೋಜ, ಗೌರವ ಡಾಕ್ಟರೇಟ್, ಡಿ.ಲಿಟ್ ಇತ್ಯಾದಿ ಉನ್ನತ ಪದವಿಗಳು ಅರಸಿಕೊಂಡು ಬಂದಿವೆ. ಆದರೆ, ಅವರೆಂದೂ ತಮ್ಮ ಹೆಸರಿನ ಹಿಂದೆ ನಾಡೋಜ ಎಂದಾಗಲಿ, ಡಾ. ರಾಮಸ್ವಾಮಿ ಎಂದಾಗಲಿ ಉಪಾಧಿಗಳನ್ನು ಅಂಟಿಸಿಕೊಳ್ಳಲಿಲ್ಲ. ಯಾರೋ ಒಬ್ಬರು ಕಾರ್ಯಕ್ರಮದ ಆಮಂತ್ರಣ ಪತ್ರದಲ್ಲಿ 'ಡಾ.ಎಸ್.ಆರ್. ರಾಮಸ್ವಾಮಿ' ಎಂದು ಪ್ರಕಟಿಸುವ ಮಾತನಾಡಿದಾಗ "ಖಂಡಿತ ಕೂಡದು. ಹಾಗೆಲ್ಲ ಪ್ರಕಟಿಸಬೇಡಿ" ಎಂದು ಖಡಕ್ಕಾಗಿ ಎಚ್ಚರಿಕೆ ನೀಡಿದ್ದರು.

ರಾಮಸ್ವಾಮಿ ಅವರ ಸರಳತೆ, ಪ್ರಾಮಾಣಿಕತೆ, ಹಮ್ಮುಬಿಮ್ಮುಗಳಿಲ್ಲದ ನೇರವಂತಿಕೆ, ವಿನೋದ ಸ್ವಭಾವವನ್ನು ಬಲು ಹತ್ತಿರದಿಂದ ಗಮನಿಸಿದವರಿಗೆ ಇವರು ಅಷ್ಟು ದೊಡ್ಡ ವಿದ್ವಾಂಸರೆ ಎಂಬ ಸಂಶಯ ಬರುತ್ತಿದ್ದುದು ಸಹಜ. ಆದರೆ, ಅವರೊಬ್ಬ ಸಾರಸ್ವತ ಲೋಕದ ಉಜ್ವಲ ನಕ್ಷತ್ರ ಎಂಬುದರಲ್ಲಿ ಅನುಮಾನವೇ ಇಲ್ಲ. ಕಣ್ಣು ಮಂಜಾಗಿದ್ದರೂ, ಕೈಗಳು ನಡುಗುತ್ತಿದ್ದರೂ ರಾಮಸ್ವಾಮಿ ಅವರ ಬರವಣಿಗೆ ಕಾರ್ಯಕ್ಕೆ ವಿಶ್ರಾಂತಿಯೇ ಇರಲಿಲ್ಲ. ಮುಂದಿನ ಪೀಳಿಗೆಯವರಿಗೆ ಅವರೊಬ್ಬ ಅದ್ಭುತ ಪ್ರೇರಣಾಸ್ರೋತ. ಹೌದು, ಅವರ ಹೆಸರಿನಲ್ಲೇ ಇರುವಂತೆ ಅವರು ಎಂದೆಂದ 'ಎಸ್ಸಾರ್!' 'ನೋ ಸರ್' ಎಂಬುದು ಅವರ ಬರವಣಿಗೆಗಿಲ್ಲ. ಇಂಥವರೊಬ್ಬರು ನಮ್ಮ ನಡುವೆ ಬದುಕಿದ್ದರು ಎಂಬುದೇ ನಮ್ಮೆಲ್ಲರ ಪುಣ್ಯವಿಶೇಷ.



ಪರಿಸರ ಆಂದೋಲನಗಳಲ್ಲಿ ಸಕ್ರಿಯ

ಬೆಂಗಳೂರು: ಎಸ್.ಆರ್. ರಾಮಸ್ವಾಮಿ ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಜನಪರ–ಆರ್ಥಿಕ–ಸಾಮಾಜಿಕ ನಿಲುವನ್ನೂ; ಪರಿಸರ, ಸ್ವಾಸ್ಥ್ಯ ಪೋಷಕ ಚಿಂತನೆಯನ್ನೂ ಪ್ರತಿಪಾದಿಸಿ, ಪರಿಸರ ಆಂದೋಲನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಅರಣ್ಯ ಇಲಾಖೆ ನೀತಿಗಳಿಂದ ರೈತರಿಗೆ ಭೂಮಿ ಮೇಲಿನ ಹಕ್ಕು ಕೈತಪ್ಪುವುದನ್ನು ಖಂಡಿಸಿ ಸುಮಾರು ಮೂರು ದಶಕಗಳ ಕಾಲ ಹೋರಾಡಿದವರು. ಸರ್ಕಾರದ ಅರಣ್ಯ ನೀತಿಯ ವಿರುದ್ಧ, ಸುಮಾರು 30,000 ಹೆಕ್ಟೇರ್ ಮೀಸಲು ಅರಣ್ಯ ರಕ್ಷಣೆಗಾಗಿ ಪ್ರಸಿದ್ಧ ಕನ್ನಡ ಲೇಖಕ ಶಿವರಾಮ ಕಾರಂತರ ಜೊತೆ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಹೋರಾಟ ನಡೆಸಿದರು. 'ಸಮಾಜ ಪರಿವರ್ತನ ಸಮುದಾಯ' ಎಂಬ ಸ್ವಯಂಸೇವಾ ಸಂಘಟನೆಯನ್ನು ಕಟ್ಟಿ ಗ್ರಾಮೀಣ ಅಭಿವೃದ್ಧಿ, ಬುಡಕಟ್ಟು ಜನರ ಉನ್ನತಿ ಮತ್ತು ನಾಗರಿಕ ಹಕ್ಕುಗಳ ಸಬಲೀಕರಣಕ್ಕಾಗಿ ಅವರು ದುಡಿದರು.

ಕನ್ನಡ ಸಾಹಿತ್ಯಲೋಕಕ್ಕೆ ಅವರು 55 ಗ್ರಂಥಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅನೇಕ ಹಿರಿಯ ಸಾಹಿತಿಗಳ ಒಡನಾಟದಲ್ಲಿದ್ದ ರಾಮಸ್ವಾಮಿ ಅವರು ಡಿ.ವಿ. ಗುಂಡಪ್ಪ, ವಿ. ಸೀತಾರಾಮಯ್ಯ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ವೀರಕೇಸರಿ ಸೀತಾರಾಮಶಾಸ್ತ್ರ ಮೊದಲಾದ ಧೀಮಂತರನ್ನು ಕುರಿತು ಬರೆದ ದೀವಟಿಗೆಗಳು ಹಾಗೂ ಪತ್ರಕರ್ತ ತಿ.ತಾ. ಶರ್ಮ, ತೋಟಗಾರಿಕೆ ಋಷಿ ಎಂ.ಎಚ್. ಮರಿಗೌಡ ಮೊದಲಾದ ಆರು ಮಂದಿ ಸಾಧಕರನ್ನು ದೀಪ್ತಿಮಂತರು ಮೂಲಕ ಪರಿಚಯಿಸಿದ್ದಾರೆ. ಸುಭಾಷಚಂದ್ರ ಬೋಸ್ ಅವರ ಸಮಗ್ರ ಜೀವನಚರಿತ್ರೆ ಕೋಲ್ಮಿಂಚು, ಜಯಪ್ರಕಾಶ್ ನಾರಾಯಣ್ ಸಹಿತ 12 ಜನರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಭಾರತದಲ್ಲಿ ಸಮಾಜಕಾರ್ಯ, ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ಆರ್ಥಿಕತೆಯ ಎರಡು ಧ್ರುವ, ಶತಮಾನದ ತಿರುವಿನಲ್ಲಿ ಭಾರತ, ಕೆಲವು ಇತಿಹಾಸ- ಪರ್ವಗಳು ಸಹಿತ ಅನೇಕ ಸ್ವತಂತ್ರ ಅವಲೋಕನ ಪ್ರಬಂಧಗಳನ್ನು ರಚಿಸಿದ್ದಾರೆ.



ರಾಮಸ್ವಾಮಿ ನಿಧನಕ್ಕೆ ಆರ್‌ಎಸ್‌ಎಸ್ ಸಂತಾಪ

ಬೆಂಗಳೂರು: ನಾಡಿನ ಹಿರಿಯ ಸಾಹಿತಿ, ಸಂಶೋಧಕ, ವಿದ್ವಾಂಸ, ಪತ್ರಕರ್ತ, ಪರಿಸರವಾದಿಯೂ ಆಗಿದ್ದ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರ ನಿಧನಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ತೀವ್ರ ಸಂತಾಪ ವ್ಯಕ್ತಪಡಿಸಿದೆ. ರಾಮಸ್ವಾಮಿ ಅವರ ನಿಧನದ ಸುದ್ದಿ ಅತ್ಯಂತ ದುಃಖವನ್ನುಂಟುಮಾಡಿದೆ ಎಂದು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮತ್ತು ಕ್ಷೇತ್ರೀಯ ಸಂಘಚಾಲಕ ಡಾ. ಪಿ. ವಾಮನ್ ಶೆಣೈ ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ನಾಡಿನ ಸಾಂಸ್ಕೃತಿಕ, ವೈಚಾರಿಕ ಹಾಗೂ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆಯನ್ನು ನೀಡಿದ ಅವರು ಕಳೆದ 6 ದಶಕಗಳ ಕಾಲ ಪತ್ರಿಕೋದ್ಯಮ ಹಾಗೂ ಬರವಣಿಗೆಯ ಕ್ಷೇತ್ರದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿದವರು. 1966ರಿಂದ ವರ್ತಮಾನದವರೆಗೂ ರಾಷ್ಟ್ರೋತ್ಥಾನ ಪರಿಷತ್‌ನ ಜೊತೆಗೆ 60 ವರ್ಷಗಳ ಸುದೀರ್ಘ ಒಡನಾಟ. ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾಗಿ, 1979ರಿಂದ ಉತ್ಥಾನ ಮಾಸಪತ್ರಿಕೆ ಮತ್ತು ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಧಾನ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದವರು. ಅನೇಕ ಪ್ರಕಲ್ಪಗಳನ್ನು ನೀರೆರೆದು ಬೆಳೆಸಿದವರು ಎಂದು ಸ್ಮರಿಸಿದ್ದಾರೆ.

ತಮ್ಮ 50ಕ್ಕೂ ಹೆಚ್ಚು ವಿದ್ವತ್ ಪೂರ್ಣ ಗ್ರಂಥಗಳು, ಸಾವಿರಕ್ಕೂ ಅಧಿಕ ಲೇಖನಗಳಲ್ಲಿ ಭಾರತೀಯ ವೈಚಾರಿಕ ಪರಂಪರೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ತಮ್ಮ ಬರಹದ ಶಕ್ತಿಯನ್ನು ಸಮಾಜಮುಖಿಯಾಗಿ ಬಳಸಿಕೊಂಡು ಸಾಹಿತ್ಯ, ಆರ್ಥಿಕತೆ, ಸಮಾಜ, ಪರಿಸರ, ಪತ್ರಿಕೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಚಿಂತನೆಯನ್ನು ಮೂಡಿಸಿದವರು. ಡಿ.ವಿ.ಜಿ. ಅವರ ಶಿಷ್ಯರಾಗಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಚಟುವಟಿಕೆಗಳ ಮೂಲಕ ವೈಚಾರಿಕ ಕಾರ್ಯಗಳಿಗೆ ಬಲತುಂಬಿದವರು. ಡಿವಿಜಿ ಮತ್ತಿತರ ಹಿರಿಯ ಸಾಹಿತಿಗಳು, ಚಿಂತಕರ ಶ್ರೇಷ್ಠ ಪೀಳಿಗೆಯ ಸಮರ್ಥ ವಾರಸಿಕೆಯ ಪ್ರತಿನಿಧಿ, ನಾಡು ನುಡಿಗಳ ಅನನ್ಯ ಸೇವಕ, ಸಾಮಾಜಿಕ ಸಂವೇದನೆಯ ಕ್ರಿಯಾಶೀಲ ಸಾಧಕ, ರಾಷ್ಟ್ರೀಯ ಜಾಗರಣದ ದಣಿವರಿಯದ ಯೋಧ, ಸರಳ ಜೀವನದ ಆದರ್ಶ, ರಾಮಸ್ವಾಮಿ ಅವರ ವ್ಯಕ್ತಿತ್ವ ಕರ್ತೃತ್ವಗಳು ಚಿರಕಾಲ ನೆನಪುಳಿಯುತ್ತವೆ ಎಂದು ನುಡಿನಮನ ಸಲ್ಲಿಸಿದ್ದಾರೆ. ಸ್ವಯಂ ಸಂಘವನ್ನು ಒಪ್ಪಿ ಪ್ರವೇಶಿಸಿ ಸಂಘದ ಎಲ್ಲ ಆಯಾಮಗಳನ್ನು ಆಳವಾಗಿ ಅರಿತಿದ್ದಲ್ಲದೇ ಸಂಘದ ಕಾರ್ಯಕರ್ತರಿಗೂ ಸಮಾಜದ ಜನತೆಗೂ ಸಂಘವನ್ನು ವಿವರಿಸಿದ ನಿಷ್ಠಾವಂತ ಸ್ವಯಂಸೇವಕ.

ಅವರ ಸರಳ ಜೀವನ, ಕ್ರಿಯಾಶೀಲ ಬದುಕು, ಅಧ್ಯಯನಪೂರ್ಣ ಬರಹ ಮುಂದಿನ ಪೀಳಿಗೆಗೆ ಸದಾ ಆದರ್ಶ ಎಂದು ಬಣ್ಣಿಸಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರವಾಗಿ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರ ನಿಧನಕ್ಕೆ ಸಂತಾಪಗಳನ್ನು ವ್ಯಕ್ತಪಡಿಸುತ್ತಾ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇವೆ. ಅವರ ಕುಟುಂಬ ಮತ್ತು ಅಸಂಖ್ಯ ಅಭಿಮಾನಿಗಳಿಗೆ ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲಿ ಹಾಗೂ ಅಗಲಿದ ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ ಎಂದು ಉಭಯರು ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.





ರಾಷ್ಟ್ರೋತ್ಥಾನ ಪರಿಷತ್ತಿನಿಂದ ಶ್ರದ್ಧಾನಮನ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಾರಂಭದಿಂದಲೂ ಪ್ರಕಾಶನ ವಿಭಾಗದ ವಿವಿಧ ಕೆಲಸಗಳಲ್ಲಿ ಸಹಕಾರ ನೀಡಿ, 48 ವರ್ಷಗಳ ಕಾಲ ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಉತ್ಥಾನ ಮಾಸಪತ್ರಿಕೆಗಳ ಗೌರವ ಪ್ರಧಾನ ಸಂಪಾದಕರಾಗಿ, ಕೆಲಕಾಲ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಡಾ. ಎಸ್. ಆರ್. ರಾಮಸ್ವಾಮಿ ಅವರ ನಿಧನಕ್ಕೆ ಪರಿಷತ್ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಮನೆಯ ಹಿರಿಯರಂತೆ ಅವರು ಪರಿಷತ್ತಿನ ಕಾರ್ಯಕರ್ತರೆಲ್ಲರಿಗೂ ಮಾರ್ಗದರ್ಶಕರಾಗಿದ್ದರು; ಮಾದರಿಯಾಗಿದ್ದರು. ಸಾಹಿತ್ಯ, ಸಂಗೀತ, ಪತ್ರಿಕೋದ್ಯಮ, ಸಮಾಜ ಸಂಘಟನೆ, ಗ್ರಾಮೀಣಾಭಿವೃದ್ಧಿ, ಗ್ರಾಹಕ ಚಳವಳಿ, ಪರಿಸರ ರಕ್ಷಣೆ, ಫೋಟೋಗ್ರಫಿ, ಸಂಸ್ಥೆಗಳ ನಿರ್ವಹಣೆ ಸೇರಿದಂತೆ ಜೀವನದ ಹಲವು ಕ್ಷೇತ್ರಗಳಲ್ಲಿ, ಹಲವು ಮುಖಗಳಲ್ಲಿ ನಿರಂತರ ಕೆಲಸ ಮಾಡಿದ ರಾಮಸ್ವಾಮಿ ಅವರು ಓರ್ವ ಶ್ರೇಷ್ಠ ಸಾಮಾಜಿಕ ಕಾರ್ಯಕರ್ತರಾಗಿದ್ದರು. ಅವಶ್ಯಕತೆ ಇರುವಲ್ಲಿ ಯಾರದೋ ಯಾಚನೆಗೋ ಅಥವಾ ಇನ್ನಾರದೊ ಸಲಹೆಗೋ ಕಾಯದೆ, ಸದ್ದುಗದ್ದಲವೂ ಇಲ್ಲದೆ, ಶಕ್ತಿಮೀರಿ ನೆರವಿಗೆ ನಿಲ್ಲುವುದು ಅವರ ಸಹಜ ಸ್ವಭಾವವಾಗಿತ್ತು; ಅದರಲ್ಲೇ ಅವರು ನೆಮ್ಮದಿ ಕಾಣುತ್ತಿದ್ದರು.

ಸರಳ ಜೀವನ; ಉನ್ನತ ಚಿಂತನೆ ಎಂಬುದರ ಮೂರ್ತರೂಪರಾಗಿದ್ದ ರಾಮಸ್ವಾಮಿ ಅವರ ದೂರದೃಷ್ಟಿ, ಸಮಾಜದ ಸ್ಥಿತಿಗತಿಗಳನ್ನು ಕುರಿತ ಸೂಕ್ಷ್ಮ ಒಳನೋಟಗಳು, ಸಾಮಾಜಿಕ ಅಗತ್ಯಗಳನ್ನು ಅವರು ಗ್ರಹಿಸುತ್ತಿದ್ದ ರೀತಿ ಮತ್ತು ಅದಕ್ಕಾಗಿ ನಾವೇನು ಮಾಡಬೇಕಾಗಬಹುದು ಎಂಬುದನ್ನು ಪ್ರತಿ ಹಂತದಲ್ಲೂ ನಮಗೆಲ್ಲ ವಿವರಿಸುತ್ತಿದ್ದ ಕ್ರಮ – ಇವು ಸದಾ ಮಾರ್ಗದರ್ಶಿಯಾದಂಥವು. ಅವರ ಹಠಾತ್ ನಿರ್ಗಮನ ಅತ್ಯಂತ ದುಃಖದಾಯಕ ಸಂಗತಿ. ಇಂತಹ ಸಮಯದಲ್ಲಿ ನಮಗೆ ಸ್ಥೈರ್ಯ– ಸಮಾಧಾನ ನೀಡಲೆಂದೇ ಆದರ್ಶಮಯ ಬದುಕನ್ನು ಬಾಳಿದ್ದ ರಾಮಸ್ವಾಮಿ ಅವರು ಅದರ ಮಧುರ ಸ್ಮೃತಿಯನ್ನು ನಮ್ಮೆಲ್ಲರಲ್ಲಿ ಬಿತ್ತಿ ಹೋಗಿದ್ದಾರೆ. ಈ ನೆನಪುಗಳೇ ನಮಗೆಲ್ಲ ಮುಂದಿನ ಪಯಣಕ್ಕೆ ದಾರಿದೀಪವಾಗಿದೆ. ಆ ಮೂಲಕ ಅವರು ನಮ್ಮೆಲ್ಲರಲ್ಲೂ ಜೀವಂತವಾಗಿರುತ್ತಾರೆ. ಪರಿಷತ್ತಿನ ಎಲ್ಲ ಕಾರ್ಯಕರ್ತರ ಪರವಾಗಿ ರಾಮಸ್ವಾಮಿ ಅವರಿಗೆ ಶ್ರದ್ಧಾನಮನಗಳನ್ನು ಅರ್ಪಿಸುತ್ತಿದ್ದೇವೆ ಎಂದು ಪರಿಷತ್ತಿನ ಅಧ್ಯಕ್ಷ ಎಂ.ಪಿ. ಕುಮಾರ್ ಮತ್ತು ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ತಿಳಿಸಿದ್ದಾರೆ.





ಕಿರುಸುದ್ದಿ

ವೀಣೆಯಲ್ಲಿ ಶ್ರೀರಾಮ ಭಜನೆ



ಮಂಗಳೂರು : ಸಾಮಾನ್ಯವಾಗಿ ಶಾಸ್ತ್ರೀಯ ಸಂಗೀತ ಕೀರ್ತನೆಗಳನ್ನು ಮಾತ್ರ ವೀಣಾವಾದನದಲ್ಲಿ ಕೇಳುವವರಿಗೆ ಒಂದು ವಿನೂತನವಾದ ವೀಣಾವಾದನ ಕಾರ್ಯಕ್ರಮ ಇಲ್ಲಿನ ಸುಬ್ರಹ್ಮಣ್ಯ ಸದನದಲ್ಲಿ ನಡೆಯಿತು. ವೀಣಾವಾದನದಲ್ಲಿ ಭಜನೆಗಳನ್ನು ನುಡಿಸುತ್ತಾ ಪ್ರಸಿದ್ಧ ರಾಮ ಭಜನೆಗಳನ್ನು ಪ್ರೇಕ್ಷಕರಿಂದ ಹಾಡಿಸಿದ ಕಾರ್ಯಕ್ರಮ ಮಣಿಪಾಲದ ವಿಪಂಚಿ ಬಳಗದ ವೀಣಾವಾದಕರೂ , ನಿರ್ದೇಶಕಿಯೂ ಆಗಿರುವ ಪಾವನಾ ಆಚಾರ್ಯರ ನೇತೃತ್ವದಲ್ಲಿ ನಡೆಯಿತು. ಅವರು ಈ ಭಜನಾ ವೀಣಾ ಸಂಗೀತೋತ್ಸವದಲ್ಲಿ ಶ್ರೀರಾಮೋತ್ಸವವನ್ನು ಆಕರ್ಷಕವಾದ ಜನಭಾಗಿ ಉತ್ಸವವನ್ನಾಗಿಸಿದರು. ಶ್ರೀರಾಮ ಭಕ್ತರು ನಿತ್ಯವೂ ಮನೆಗಳಲ್ಲಿ ಹೇಳುವ ಶ್ರೀರಾಮ ಸ್ತುತಿ ಗೀತೆಗಳನ್ನೂ , ರಾಮಮಂಗಳವನ್ನೂ ಪ್ರೇಕ್ಷಕರು ಹೇಳುವಾಗ ಉಚ್ಚ ಸ್ವರದಲ್ಲಿ ವೀಣಾವಾದನವನ್ನು ಕೇಳುವಂತಾಯಿತು.

ಮಂಗಳೂರಿನ ಸದ್ಬೋಧ ಗುರುಕುಲದ ಸಂಚಾಲಕತ್ವದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಮತ್ತು ನಮ್ಮವರು ಬಳಗದ ಸಹಯೋಗದಲ್ಲಿ ನಡೆದ ರಾಮೋತ್ಸವದಲ್ಲಿ ಸಂಕ್ಷೇಪ ರಾಮಾಯಣದ ಸಾಮೂಹಿಕ ಪಾರಾಯಣ ವಿಶೇಷವಾಗಿತ್ತು.

ಸದ್ಬೋಧಗಾನ ಕಲಾಕೇಂದ್ರದ ಉದ್ಘಾಟನೆ

ಇದೇ ಸಂದರ್ಭದಲ್ಲಿ ಕೋಡಿಕಲ್ಲಿನ ಸಂಸ್ಕೃತ ವಿದ್ಯಾರ್ಥಿಗಳೆಲ್ಲರೂ ಸೇರಿಕೊಂಡು ಯಕ್ಷಗಾನ ಮತ್ತು ಭಜನೋತ್ಸವವನ್ನು ನಡೆಸಲು ಸದ್ಬೋಧ ಗಾನಕಲಾ ಕೇಂದ್ರವನ್ನು ಆರಂಭಿಸಿದ್ದು, ಸಂಗೀತಜ್ಞ ಶ್ರೀ ಕೃಷ್ಣರಾಜರಾಯರು ತಮ್ಮ ಭಜನಾ ಸಂಘದೊಡನೆ ಹಾಡುತ್ತಾ ಈ ಕೇಂದ್ರವನ್ನು ಉದ್ಘಾಟಿಸಿದರು.

ಶೃಂಗೇರಿ ಶಾಂಕರ ಅಭಿಯಾನದ ಸಂಚಾಲಕ ಶ್ರೀಧರ ಶಾಸ್ತ್ರಿಗಳು ಕಲಾವಿದರನ್ನು ಸಂಮಾನಿಸಿದರು.ಡಾ.ಶಿಕಾರಿಪುರ ಕೃಷ್ಣಮೂರ್ತಿ ಕಾರ್ಯಕ್ರಮವನ್ನು ನಿರೂಪಿಸಿದರು.

ಡೀಸೆಲ್ ಪೂರೈಕೆ ಸಮಸ್ಯೆ ಪರಿಹರಿಸಲು ಆಗ್ರಹ

ಮಂಗಳೂರು: ಮಂಗಳೂರಿನ ಮೀನುಗಾರಿಕಾ ಧಕ್ಕೆಯಲ್ಲಿ ಕಾರ್ಯಾಚರಿಸುತ್ತಿರುವ ಮಂಗಳೂರು ಕರಾವಳಿ ಅಲ್ಪಸಂಖ್ಯಾತ ಪ್ರಾಥಮಿಕ ಮೀನುಗಾರರ ಸಂಘದ ಪೆಟ್ರೋಲ್ ಪಂಪ್‌ನಲ್ಲಿ ಮೀನುಗಾರಿಕಾ ದೋಣಿಗಳಿಗೆ ವ್ಯವಸ್ಥಿತ ರೀತಿಯಲ್ಲಿ ಡೀಸೆಲ್ ಪೂರೈಕೆಯಾಗದೆ ತೊಂದರೆಯಾಗಿದೆ. ಈ ಸಮಸ್ಯೆ ಶೀಘ್ರ ಬಗೆಹರಿಯಬೇಕು ಎಂದು ಟ್ರಾಲ್‌ಬೋಟ್ ಮಾಲಕರ ಸಂಘದ ಕೋಶಾಧಿಕಾರಿ ಅಬೂಬಕರ್ ಅಶ್ರಫ್ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟೋಕನ್ ವ್ಯವಸ್ಥೆಯಡಿ ಸಮರ್ಪಕವಾಗಿ ಡೀಸೆಲ್ ಪೂರೈಸುವ ಮೂಲಕ ಮೀನುಗಾರರಿಗೆ ನೆರವಾಗಬೇಕು. ಮೀನುಗಾರರ ಸಮಸ್ಯೆ ಬಗೆಹರಿಯಬೇಕು ಎಂದರು. ಟ್ರಾಲ್‌ಬೋಟ್ ಮಾಲಕರ ಸಂಘದಡಿ 500 ಮೀನುಗಾರಿಕಾ ದೋಣಿಗಳು ಕಾರ್ಯ ನಿರ್ವಹಿಸುತ್ತಿವೆ. ಮೀನುಗಾರಿಕಾ ದೋಣಿಗಳಿಗೆ ಟೋಕನ್ ವ್ಯವಸ್ಥೆಯಡಿ ಡೀಸೆಲ್ ಪೂರೈಸಲಾಗುತ್ತದೆ. ಆದರೆ ಕಳೆದ ಎರಡು ವಾರಗಳಿಂದ ಟೋಕನ್‌ನಂತೆ ಪೂರೈಕೆಯಾಗದೆ ತೊಂದರೆಯಾಗಿದೆ. ಈಗಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರವು ತೈಲ ಪೂರೈಕೆಯಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲ ಎಂದು ಹೇಳಿದ್ದರೂ ಅಲ್ಪಸಂಖ್ಯಾತ ಮೀನುಗಾರಿಕಾ ದೋಣಿಗಳ ಪಂಪ್‌ನಲ್ಲಿ ಜತೆಗೆ ಲೀಟರೊಂದಕ್ಕೆ 8 ರೂ. ಹೆಚ್ಚುವರಿ ಹಣವನ್ನು ಪಡೆಯಲಾಗುತ್ತಿದೆ ಎಂದು ಆರೋಪಿಸಿದರು.

ಬೋಟು ಮಾಲಕರಾದ ಶ್ವಾಯಿಬ್ ಅಹಮ್ಮದ್, ಅಬ್ದುಲ್ ರೆಹಮಾನ್ ಝೂಹಿರ್, ಫೈಝುಲ್ ಅಬ್ದುಲ್ ರೆಹಮಾನ್, ಅಬ್ದುಲ್ ಗಫೂರ್, ಮುಹಮ್ಮದ್ ಅಜ್ಮಲ್ ಸುದ್ದಿಗೋಷ್ಠಿಯಲ್ಲಿದ್ದರು.

ಏ.18-19: ಅಹ್ಲೆ ಹದೀಸ್ ಸಮ್ಮೇಳನ

ಮಂಗಳೂರು: ಜಮೀಯತೇ ಅಹ್ಲೆ ಹದೀಸ್ ದ.ಕ. ಜಿಲ್ಲಾ ಸಮಿತಿ ವತಿಯಿಂದ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಏ. 18 ಮತ್ತು 19ರಂದು ಅಹ್ಲೆ ಹದೀಸ್ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಅಬ್ದುಸ್ಸಲಾಂ ಕಾಟಿಪಳ್ಳ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಏ.18ರಂದು ಪೂರ್ವಾಹ್ನ 10 ಗಂಟೆಗೆ ಉದ್ಘಾಟನೆ ನಡೆಯಲಿದೆ. ಅಖಿಲ ಭಾರತ ಜಮೀಯತೇ ಅಹ್ಲೆ ಹದೀಸ್ ಅಧ್ಯಕ್ಷ ಅಸ್ಗರ್ ಅಲಿ ಇಮಾಮ್ ಮೆಹ್ದಿ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯಾಧ್ಯಕ್ಷ ಅಬ್ದುಲ್ ವಹ್ಹಾಬ್ ಜಾಮಈ ಅಧ್ಯಕ್ಷತೆಯಲ್ಲಿ ಸಮ್ಮೇಳನ ನಡೆಯಲಿದೆ. ಕರ್ನಾಟಕ ರಾಜ್ಯ ಜಮೀಅತೆ ಅಹ್ಲೆ ಹದೀಸ್‌ನ ಪ್ರಧಾನ ಕಾರ್ಯದರ್ಶಿ ಅಸ್ಲಮ್ ಖಾನ್ ಮತ್ತು ಕೋಶಾಧಿಕಾರಿ ಕೆ.ಜೆ. ಮನ್ಸೂರ್ ಅಹ್ಮದ್ ಖುರೇಶಿ ಮುಖ್ಯ ಅತಿಥಿಗಳಾಗಿ ಭಾಗಹಿಸಲಿದ್ದಾರೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ನಜ್ಮುದ್ದೀನ್ ಅಸದಿ, ಕೋಶಾಧಿಕಾರಿ ಮುಹಮ್ಮದ್ ನದೀಂ, ಮುಖ್ಯ ಸಲಹೆಗಾರ ಅಬ್ದುಸ್ಸಲಾಂ ಮದನಿ, ಸಂಘಟನಾ ಕಾರ್ಯದರ್ಶಿ ಅಬ್ದುಸ್ಸಮದ್ ಬಜಾಲ್, ಹಾಫಿಝುಲ್ ಯಾಸೀನ್, ಅರ್ಷದ್ ಅಮೀನ್ ಉಪಸ್ಥಿತರಿದ್ದರು.



ತಲಪಾಡಿ ಶಾರದಾ ಕಾಲೇಜಿನಿಂದ ವಾಣಿಜ್ಯ ಮತ್ತು ನಿರ್ವಹಣಾ ಸಂಘ ಮತ್ತು ಆಂತರಿಕ ಗುಣಮಟ್ಟದ ಭರವಸೆ ಕೋಶ ವತಿಯಿಂದ ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನವನ್ನು ವೃದ್ಧಿಸಲು ಚೌಗುಲೆ ಶಿಪ್ ಯಾರ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕೈಗಾರಿಕಾ ಭೇಟಿಯನ್ನು ಮಾಡಲಾಯಿತು. ಒಟ್ಟು 30 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳೊಂದಿಗೆ ಉಪನ್ಯಾಸಕ ವೃಂದದವರು ಜೊತೆಗಿದ್ದು ಮಾಹಿತಿಯನ್ನು ತಿಳಿಸಿಕೊಟ್ಟರು.

ಮಗು ಕೊಲೆ ಆರೋಪ: ತಾಯಿ ಖುಲಾಸೆ

ಉಡುಪಿ: ಮಲ್ಪೆ ಠಾಣಾ ವ್ಯಾಪ್ತಿಯ ಕೊಡವೂರು ಗ್ರಾಮದ ಮನೆಯೊಂದರಲ್ಲಿ ಮಗುವನ್ನು ಕೊಲೆ ಮಾಡಿರುವ ಆರೋಪವನ್ನು ಎದುರಿಸುತ್ತಿದ್ದ ತಾಯಿ ಹಸೀನಾ ಅವರ ವಿರುದ್ಧ ಅಭಿಯೋಜನೆ (ಪ್ರಾಸಿಕ್ಯೂಶನ್) ಆರೋಪವನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂದು ಉಡುಪಿಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಸಮೀವುಲ್ಲಾ ಅವರು ಅಭಿಪ್ರಾಯಪಟ್ಟು ಆರೋಪಿಯನ್ನು ಖುಲಾಸೆಗೊಳಿಸಿ ಆದೇಶಿಸಿದ್ದಾರೆ.

ಕೋವಿಡ್ ಸಂದರ್ಭದಲ್ಲಿ 2020 ರ ಏ.4 ರಂದು ಹಸೀನಾ ಅವರ ಕಿರಿಯ ಪುತ್ರ ಹಾಗೂ ಏ. 7 ರಂದು ಎರಡನೇ ಪುತ್ರಿಯೂ ನಿಧನರಾಗಿದ್ದರು. ಪುತ್ರ ನ್ಯೂಮೋನಿಯಾದಿಂದ ಮೃತಪಟ್ಟಿದ್ದಾರೆ ಎಂದು ಹೇಳಲಾಗಿತ್ತು. ಮಗಳನ್ನು ಸ್ನಾನಗೃಹದ ಬಕೆಟ್‌ನಲ್ಲಿ ಮುಳುಗಿಸಿ ಕೊಲೆ ಮಾಡಲು ಯತ್ನಿಸಲಾಗಿತ್ತು ಎಂದು ದೂರಲಾಗಿತ್ತು.

ಹಾವೇರಿಯ ಹೊಟೇಲೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಮಕ್ಕಳ ತಂದೆಯೂ ಕೋವಿಡ್‌ನಿಂದಾಗಿ ಪುತ್ರನ ಅಂತ್ಯಸಂಸ್ಕಾರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಇದಾದ ಮೂರು ದಿನಗಳ ನಂತರ (ಏ.7) ಅವರು ಮಲ್ಪೆಯ ಮನೆಗೆ ಆಗಮಿಸಿದ್ದರು. ಏ.7 ರಂದು ತಾಯಿ ಹಸೀನಾ ಅವರು ಮಗಳಿಗೆ ಸ್ನಾನ ಮಾಡಿಸಿದ್ದು, ರಾತ್ರಿ ಸುಮಾರು 1 ಗಂಟೆಯ ವೇಳೆಗೆ ಮಗಳಿಗೆ ಅನಾರೋಗ್ಯ ಕಾಡಿತ್ತು. ಪತ್ನಿಯನ್ನು ವಿಚಾರಿಸಿದಾಗ ಮಗಳಿಗೆ ಕುತ್ತಿಗೆ ನೋವು ಎಂದು ಹೇಳಿದ್ದು, ತಕ್ಷಣ ಸಂಬಂಧಿಕರ ಕಾರಿನಲ್ಲಿ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದಾಗ, ಮಗಳು ಮೃತಪಟ್ಟಿದ್ದಾಳೆ ಎಂದು ವೈದ್ಯರು ದೃಢಪಡಿಸಿದ್ದರು.

ಏ.13 ರಂದು ಪ್ರಕರಣ ದಾಖಲು

ಮೂರು ದಿನದ ಅವಧಿಯಲ್ಲಿ ಇಬ್ಬರು ಮಕ್ಕಳನ್ನು ಕಳೆದುಕೊಂಡ ತಂದೆಗೆ ಮಕ್ಕಳ ಸಾವಿನಲ್ಲಿ ಅನುಮಾನ ಬಂದು ಪತ್ನಿ ವಿರುದ್ಧ ಮಲ್ಪೆ ಠಾಣೆಯಲ್ಲಿ ದೂರು ನೀಡಿದ್ದರು.

10 ತಿಂಗಳ ಬಳಿಕ ಬಂಧನ

ಪ್ರಕರಣದ ತನಿಖೆಯಲ್ಲಿ ಆರಂಭಿಸಿದ ಪೊಲೀಸರು ಘಟನೆ ನಡೆದ 10 ತಿಂಗಳ ಬಳಿಕ ಎಫ್‌ಎಸ್‌ಎಲ್ ವರದಿಯನ್ನು ಆಧರಿಸಿ, ತಾಯಿಯೇ ಮಗುವನ್ನು ಕೊಂದಿರಬಹುದು ಎಂಬ ಊಹೆಯಲ್ಲಿ ತಾಯಿ ಹಸೀನಾಳನ್ನು 2021 ರ ಫೆ.17 ರಂದು ಬಂಧಿಸಿತ್ತು. ನ್ಯಾಯಾಲಯವು ಅವರಿಗೆ ನ್ಯಾಯಾಂಗ ಬಂಧನ ವಿಧಿಸಿತ್ತು. ಆರೋಪಿಯ ಪರವಾಗಿ ಹಿರಿಯ ವಕೀಲ ಎಮ್.ಶಾಂತಾರಾಮ್ ಶೆಟ್ಟಿ ವಾದಿಸಿದ್ದರು.

ನೂತನ ಕಲಾಭವನ ನಿರ್ಮಾಣಕ್ಕೆ ಡಾ.ಮಂಥರ್ ಗೌಡ ಭೂಮಿಪೂಜೆ

ಇತಿಹಾಸ ಪುಟಕ್ಕೆ ಮಡಿಕೇರಿಯ ಟೌನ್‌ಹಾಲ್

ಮಡಿಕೇರಿ: ನಗರದ ನಗರಸಭೆ ಆವರಣದಲ್ಲಿರುವ ಹಳೆಯ ಟೌನ್ ಹಾಲ್ (ಕಾವೇರಿ ಕಲಾಕ್ಷೇತ್ರ) ಕಟ್ಟಡವನ್ನು ತೆರವುಗೊಳಿಸಿ ಸುಸಜ್ಜಿತವಾದ ಎರಡು ಅಂತಸ್ತಿನ ವಾಹನ ನಿಲುಗಡೆ ಹಾಗೂ 450 ಆಸನಗಳುಳ್ಳ ಸಭಾಭವನ ಕಟ್ಟಡ ನಿರ್ಮಾಣಕ್ಕೆ ಶಾಸಕ ಡಾ.ಮಂಥರ್ ಗೌಡ ಅವರು ಗುರುವಾರ ಭೂಮಿ ಪೂಜೆ ನೆರವೇರಿಸಿದರು.

ನೂತನಕಾವೇರಿಕಲಾಕ್ಷೇತ್ರದಲ್ಲಿತಳಮಹಡಿಯಲ್ಲಿ ಎರಡು ಅಂತಸ್ತಿನಲ್ಲಿ 150 ಕಾರುಗಳು ಮತ್ತು 100 ಬೈಕ್‌ಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗುತ್ತದೆ. ಹಾಗೆಯೇ 500 ಜನರು ಕುಳಿತುಕೊಳ್ಳುವ ಸಭಾಭವನವನ್ನು ನಿರ್ಮಿಸಲಾಗುತ್ತದೆ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ಭದ್ರತಾ ಕೊಠಡಿ, ವಾಣಿಜ್ಯ ಮಳಿಗೆಗಳನ್ನು ಒಳಗೊಂಡಿರುತ್ತದೆ ಎಂದು ಡಾ.ಮಂಥರ್ ಗೌಡ ವಿವರಿಸಿದರು.

ಮಡಿಕೇರಿಯಲ್ಲಿ ಹೆಚ್ಚಿನ ಮಳೆಯಾಗುವುದರಿಂದ ಗುಣಮಟ್ಟದ ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದೆ.ಮುಂದಿನ ದಿನಗಳಲ್ಲಿ ಈಗಿರುವ ನಗರಸಭೆ ಕಟ್ಟಡವನ್ನು ಮೇಲ್ದರ್ಜೆಗೇರಿಸಲು ಪ್ರಯತ್ನಿಸ ಲಾಗುವುದೆಂದೂ ಶಾಸಕ ಡಾ.ಮಂಥರ್ ಗೌಡ ನುಡಿದರು.

ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಅವರು ಮಾತನಾಡಿ, ಕೊಡಗು ಜಿಲ್ಲೆಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಆದ್ದರಿಂದ ಮಡಿಕೇರಿ ನಗರದಲ್ಲಿ ವಾಹನ ನಿಲುಗಡೆ,



ಸುಗಮ ಸಾರಿಗೆ ಸಂಚಾರ, ಮತ್ತಿತರ ಮೂಲ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಆ ನಿಟ್ಟಿನಲ್ಲಿ ಕಾವೇರಿ ಕಲಾಕ್ಷೇತ್ರ ಹಳೇ ಕಟ್ಟಡದ ಜಾಗದಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿರುವುದು ಶ್ಲಾಘನೀಯ ಎಂದರು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚುರಂಜನ್ ಅವರು ಮಾತನಾಡಿ, ಕಾವೇರಿ ಕಲಾಕ್ಷೇತ್ರ ಹಳೇ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡ ನಿರ್ಮಾಣಕ್ಕೆ ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಬಸವರಾಜು ಬೊಮ್ಮಾಯಿ ಅವರು 2023ರ ಮಾ.18 ರಂದು ಭೂಮಿ ಪೂಜೆ ನೆರವೇರಿಸಿದ್ದರು. ಹಿಂದಿನ ಸರ್ಕಾರದ ಅವಧಿಯಲ್ಲಿಯೇ 9.50 ಕೋಟಿ ರೂ.ವನ್ನು ಬಿಡುಗಡೆ ಮಾಡಿ ಭೂಮಿ ಪೂಜೆ ನೆರವೇರಿಸಲಾಗಿತ್ತು. ಉಳಿದಂತೆ 7 ಕೋಟಿ ರೂ.ವನ್ನು ಶಾಸಕರು ಬಿಡುಗಡೆ ಮಾಡಿಸಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡುವಂತಾಗಲಿ ಆಶಿಸಿದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯಡಿ 40 ಕೋಟಿ ರೂ. ವನ್ನು ಬಿಡುಗಡೆ ಮಾಡಿಸಲಾಗಿತ್ತು ಎಂದು ಇದೇ ಸಂದರ್ಭದಲ್ಲಿ ಎಂ.ಪಿ.ಅಪ್ಪಚ್ಚುರಂಜನ್ ಸ್ಮರಿಸಿದರು.

ಮಾಜಿ ಸಚಿವ ಹಾಗೂ ಮಡಿಕೇರಿ ಪುರಸಭೆ ಮಾಜಿ ಅಧ್ಯಕ್ಷ ಎಂ.ಸಿ.ನಾಣಯ್ಯ ಅವರು ಮಾತನಾಡಿ,ಕೊಡಗುರಾಜ್ಯವಾಗಿದ್ದಸಂದರ್ಭದಲ್ಲಿ 1952ರಲ್ಲಿ ಟೌನ್‌ಹಾಲ್‌ನ್ನು ನಿರ್ಮಿಸಲಾಗಿತ್ತು. 1963 ರಲ್ಲಿ ಪುರಸಭೆ ಸದಸ್ಯನಾಗಿ, 1969 ರಲ್ಲಿ ಪುರಸಭೆ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. 1974ರಲ್ಲಿ ಟೌನ್‌ಹಾಲ್‌ನಲ್ಲಿಯೇ ನನ್ನ ಮದುವೆ ಆಗಿರುವುದು ವಿಶೇಷ ಎಂದು ಸ್ಮರಿಸಿಕೊಂಡರು.

> ಅಂದಾಜು 9.50 ಕೋಟಿ ರೂ. ವೆಚ್ಚದಲ್ಲಿ ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಡಿ ಹಳೆ ಕಾವೇರಿ ಕಲಾಕ್ಷೇತ್ರ ಕಟ್ಟಡ ತೆರವುಗೊಳಿಸಿ ನೂತನ ಕಟ್ಟಡ ನಿರ್ಮಾಣ ಮಾಡಲಾಗುತ್ತದೆ. 1953ರಲ್ಲಿ ಆರಂಭವಾದ ಟೌನ್‌ಹಾಲ್ ಅಂದಿನ ಕಾಲದಲ್ಲಿ ಉನ್ನತ ಕಟ್ಟಡವಾಗಿತ್ತು. ಕಾಲ ಕ್ರಮೇಣ ಎಲ್ಲವೂ ಬದಲಾವಣೆ ಅನಿವಾರ್ಯ. ಆ ನಿಟ್ಟಿನಲ್ಲಿ ಟೌನ್‌ಹಾಲ್ ಇತಿಹಾಸ ಪುಟ ಸೇರುತ್ತಿದೆ
>
> ■ ಡಾ.ಮಂಥರ್ ಗೌಡ, ಶಾಸಕ

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರು ಮಾತನಾಡಿ, ತಮಿಳುನಾಡಿನ ಊಟಿಯಲ್ಲಿ ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸ್ವಚ್ಛತೆಗೆ ಮತ್ತು ವಾಹನ ನಿಲುಗಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಊಟಿ ಮಾದರಿಯಲ್ಲೇ ಮಡಿಕೇರಿ ನಗರವನ್ನು ಅಭಿವೃದ್ಧಿಪಡಿಸುವಂತಾಗಬೇಕು ಎಂದು ಸಲಹೆ ಮಾಡಿದರು. ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ನಗರಸಭೆ ಸದಸ್ಯ ಅಮೀನ್ ಮೊಹಿಸಿನ್, ಪೌರಾಯುಕ್ತ ಎಚ್.ಆರ್.ರಮೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ನಗರಸಭೆ ಸದಸ್ಯೆ ಅನಿತಾ ಪೂವಯ್ಯ ಸ್ವಾಗತಿಸಿದರು. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸದಸ್ಯ ವಿನೋದ್ ಮೂಡಗದ್ದೆ ನಿರೂಪಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ರೇವತಿ ರಮೇಶ್, ಚೊಕ್ಕಾಡಿ ಪ್ರೇಮಾ ರಾಘವಯ್ಯ ಮತ್ತು ಸುಶೀಲಾ ವಾಸುದೇವ್ ನಾಡಗೀತೆ ಹಾಡಿದರು, ಸ್ವಾತಿ ಮತ್ತು ತಂಡದವರು ಪ್ರಾರ್ಥಿಸಿದರು, ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ವಂದಿಸಿದರು.

ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ವೀಣಾ ಅಚ್ಚಯ್ಯ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಮಂದ್ರೀರ ಮೋಹನ್‌ದಾಸ್, ಕಾಳಚಂಡ ಅಪ್ಪಣ್ಣ, ಎಸ್.ಸಿ.ಸತೀಶ್, ಅರುಣ್ ಶೆಟ್ಟಿ, ಶಾರದಾ ನಾಗರಾಜ್, ಸದಸ್ಯರಾದ ಸವಿತಾ ರಾಕೇಶ್, ಉಮೇಶ್ ಸುಬ್ರಮಣಿ, ಚಂದ್ರಶೇಖರ್, ಸಬಿತಾ, ಶ್ವೇತಾ ಪ್ರಶಾಂತ್, ಚಿತ್ರಾವತಿ, ಜಗದೀಶ್, ಸದಾ ಮುದ್ದಪ್ಪ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಕೇಶವ ಕಾಮತ್, ಜಾನಪದ ಪರಿಷತ್ತು ಜಿಲ್ಲಾಧ್ಯಕ್ಷ ಬಿ.ಜಿ.ಅನಂತಶಯನ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ರಾಣಿ ಮಾಚಯ್ಯ ಮೊದಲಾದವರಿದ್ದರು.

ರಾಮಕುಂಜ: ಸಾಂಪ್ರದಾಯಿಕ ಹಳ್ಳಿಮದ್ದುಗಳ ಮಾಹಿತಿ ಕಾರ್ಯಾಗಾರ

ಆಟಿದ ಆವಾರ-ಪುಲಮದ್ದ್ ದ ಕಜ್ಜಕೊಟ್ಯ

ಕಡಬ: ರಾಮಕುಂಜದ ಶ್ರೀ ರಾಮ ಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆ, ನೇತ್ರಾವತಿ ತುಳುಕೂಟ ರಾಮ ಕುಂಜ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗೋಳಿ ತೊಟ್ಟು ಹಾಗೂ ಆಲಂಕಾರು ವಲಯದ ಸಹಯೋಗದೊಂದಿಗೆ ಆವಾರ- ಪುಲಮರ್ದ್‌ದ ಕಜ್ಜಕೊಟ್ಯ (ಸಾಂಪ್ರದಾಯಿಕ ಹಳ್ಳಿಮದ್ದುಗಳ ಮಾಹಿತಿ ಕಾರ್ಯಾಗಾರ) ಕಾರ್ಯಕ್ರಮ ಶಾಲಾ ಸಭಾಂಗಣದಲ್ಲಿ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ದ.ಕ. ಜಿಲ್ಲೆಯ ನಿರ್ದೇಶಕ ಬಾಬು ನಾಯ್ಕ, ಬಹುತೇಕ ಅನಾರೋಗ್ಯಗಳಿಗೆ ನಮ್ಮ ಹಿತ್ತಲಲ್ಲಿ ಬೆಳೆಯುವ ಹಸಿರು ಸೊಪ್ಪುಗಳು ಮತ್ತು ಬೇರುಗಳೇ ಔಷಧಿಯಾಗಿದೆ. ಆದರೆ, ಅವುಗಳ ಮಾಹಿತಿ ನಮಗೆ ತಿಳಿದಿಲ್ಲ. ಆದುದರಿಂದ ಈ ರೀತಿಯ ಶಿಬಿರಗಳ ಮೂಲಕ ನಮ್ಮ ಮುಂದಿನ ಪೀಳಿಗೆಯಾಗಿರುವ ವಿದ್ಯಾರ್ಥಿಗಳಿಗೆ ಹಳ್ಳಿ ಮದ್ದುಗಳ ಮಹತ್ವದ ಕುರಿತು ಅರಿವು ಮೂಡಿಸುತ್ತಿರುವುದು ಶ್ಲಾಘನಾರ್ಹ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಕಾರ್ಯದರ್ಶಿ ಕೆ. ಸೇಸಪ್ಪ ರೈ, ಅವಿಭಕ್ತ ಕುಟುಂಬದಲ್ಲಿದ್ದ ಬಾಂಧವ್ಯ, ಸಂಪ್ರದಾಯ, ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮಲ್ಲಿದೆ. ನಮ್ಮ ಸಂಸ್ಥೆಯು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಎಲ್ಲಾ ಚಟುವಟಿಕೆಗಳು ಮುಂದುವರಿಯಬೇಕಾದರೆ ಎಲ್ಲರ ಸಹಕಾರ ಅಗತ್ಯ ಎಂದರು.



> **ಮಾಹಿತಿ ಕಾರ್ಯಾಗಾರ**
>
> ಸಭಾ ಕಾರ್ಯಕ್ರಮದ ಬಳಿಕ ಪುತ್ತೂರಿನ ಕೇಶವನ ಚಾರಿಟೇಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಡಾ. ರವೀಂದ್ರನಾಥ್ ಐತಾಳ್ ಅವರಿಂದ ಸರ್ರೊದ ಆರೋಗ್ಯ ಬೊಕ್ಕ ಪುಲಮರ್ದ್ ಹಾಗೂ ಉಪ್ಪಿನಂಗಡಿಯ ಧನ್ವಂತರಿ ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ. ನಿರಂಜನ್ ರೈ ಅವರಿಂದ ತಿನ್ಪಿ ಸೊತ್ತುಲೆ ಪ್ರಯೋಜನ ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಾಗಾರ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಜನಜಾಗೃತಿ ವೇದಿಕೆ ಕಡಬ ತಾಲೂಕು ಅಧ್ಯಕ್ಷ ಮಹೇಶ್ ಕೆ. ಸವಣೂರು ಮಾತನಾಡಿ, ತುಳುನಾಡು ವಿಶೇಷ ಸಂಸ್ಕೃತಿಯನ್ನು ಒಳಗೊಂಡಿದ್ದು, ನಮ್ಮ ಸಂಪ್ರದಾಯ, ಸಂಸ್ಕೃತಿ ಉಳಿಯಬೇಕಾದರೆ ವಿದ್ಯಾರ್ಥಿಗಳು ಆ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು ಎಂದರು.

ಗೋಳಿತೊಟ್ಟು ವಲಯ ಜನಜಾಗೃತಿ ವೇದಿಕೆ ಸದಸ್ಯ ವೀರೇಂದ್ರ ಪಾಲತಡ್ಕ ಶುಭ ಹಾರೈಸಿದರು. ರಾಮಕುಂಜ ಪ್ರಗತಿ ಬಂಧು ಒಕ್ಕೂಟದ ಅಧ್ಯಕ್ಷ ಪ್ರದೀಪ್ ಬಿ., ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗೋಳಿತೊಟ್ಟು ವಲಯದ ಮೇಲ್ವಿಚಾರಕಿ ಜಯಶ್ರೀ, ಆಲಂಕಾರು ವಲಯದ ಮೇಲ್ವಿಚಾರಕಿ ಸುಜಾತ ಉಪಸ್ಥಿತರಿದ್ದರು.

ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್. ಸ್ವಾಗತಿಸಿ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಲೋಹಿತಾ ಎ. ವಂದಿಸಿದರು. ಸಹ ಶಿಕ್ಷಕಿ ಸರಿತಾ ಕಾರ್ಯಕ್ರಮ ನಿರ್ವಹಿಸಿದರು. ಸಂಸ್ಥೆಯ ವ್ಯವಸ್ಥಾಪಕ ರಮೇಶ್ ರೈ ಸಹಕರಿಸಿದರು.

ರಾಜಕಾಲುವೆ ತೆರವಿಗೆ ಪಿಐಎಲ್ : ಹೈಕೋರ್ಟ್ ಮೊರೆ ಹೋದ ಸ್ಥಳೀಯರು

ಮಂಗಳೂರು: ಉಳ್ಳಾಲ ತಾಲೂಕಿನ ಉಳ್ಳಾಲ ಗ್ರಾಮದಲ್ಲಿರುವ ರಾಜ ಕಾಲುವೆಯ ಸಮಸ್ಯೆ ಪರಿಹಾರಕ್ಕಾಗಿ ಸ್ಥಳೀಯರು ಕರ್ನಾಟಕ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಹಿಂದಿನ ಕಾಲದಿಂದಲೂ ರಾಜಕಾಲುವೆ ಊರಿನ ಚರಂಡಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದು, ಎಲ್ಲಾ ಋತುಗಳಲ್ಲಿ ಸುತ್ತಮುತ್ತಲಿನ ನಿವಾಸಿಗಳಿಗೆ ಯಾವುದೇ ತೊಂದರೆಯಾಗದಂತೆ ನಿರ್ಮಾಣಗೊಂಡಿತ್ತು. ಉಳ್ಳಾಲ ನಗರಸಭೆಯ ವ್ಯಾಪ್ತಿಯ ಉಳ್ಳಾಲಬೈಲ್ ಪ್ರದೇಶದಲ್ಲಿರುವ ಈ ರಾಜಕಾಲುವೆಗೆ ತೊಕ್ಕೊಟ್ಟು ಒಳಪೇಟೆ, ಭಟ್ನಗರ, ಕಾಪಿಕಾಡ್ ಅಬ್ಬಂಜರ, ಗಣೇಶ ಮಂದಿರ, ಬಂಗೇರ ಕಾಲನಿ, ಅನಿಲ್ ಕಂಪೌಂಡ್, ಬೈದರಪಾಲ್, ಧರ್ಮನಗರ, ಸುಂದರಿಬಾಗ್, ಕೃಷ್ಣನಗರ, ಮೇಲಂಗಡಿ, ಅಕ್ಕರೆಕೆರೆ ಸೇರಿದಂತೆ ಹಲವು ಪ್ರದೇಶಗಳಿಂದ ಮಳೆಯ ನೀರು ಹರಿದು ಬಂದು ಮುಂದಕ್ಕೆ ಹಳೇಕೋಟೆ, ಬಂಡಿಕೊಟ್ಯ, ಪಾಂಡೇಲ ಪಕ್ಕ, ಭಂಡಶಾಲೆ ಆಗಿ ಉಳಿಯದಲ್ಲಿ ನೇತ್ರಾವತಿ ಹಿನ್ನೀರು ಕಾಲುವೆಗೆ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತದೆ. ಆದರೆ, ಇತ್ತೀಚೆಗೆ ಉಳ್ಳಾಲ ಪೇಟೆ, ಮುಕ್ಕಚೇರಿ,



ಮಾಸ್ತಿಕಟ್ಟೆ, ಒಂಭತ್ತುಕೆರೆ ಇನ್ನಿತರ ಉಳ್ಳಾಲ ಪ್ರದೇಶದ ಎಲ್ಲಾ ಮಳೆ ನೀರನ್ನು ಪಿ.ಡಬ್ಲ್ಯು.ಡಿ ಇಲಾಖೆಯು ನಿರ್ಮಿಸಿರುವ ಹೊಸ ಚರಂಡಿಯಲ್ಲಿ ಹರಿಯ ಬಿಟ್ಟಿರುವುದರಿಂದ ಸಮರ್ಪಕ ರಾಜಕಾಲುವೆಯ ನಿರ್ವಹಣೆ ಇಲ್ಲದಿರುವುದರಿಂದಲೂ ಉಳ್ಳಾಲಬೈಲಿನಲ್ಲಿ ಕೃತಕ ನೆರೆ ಉಂಟಾಗುತ್ತದೆ. ಅಲ್ಲದೆ, ಈ ರಾಜ ಕಾಲುವೆಗೆ ಉಳ್ಳಾಲನಗರ ಎಲ್ಲಾ ವಾಣಿಜ್ಯ ಸಂಕೀರ್ಣ ಅಪಾರ್ಟ್‌ಮೆಂಟ್, ವಾಹನ ಸರ್ವಿಸ್ ಸ್ಟೇಶನ್ ತ್ಯಾಜ್ಯ ನೀರನ್ನು ನೇರ ರಾಜಕಾಲುವೆಗೆ ಬಿಡುತ್ತಿದ್ದಾರೆ. ಜೊತೆಗೆ ಅನಧಿಕೃತ ತಡಗೋಡೆ ನಿರ್ಮಾಣ, ಕುಡಿಯುವ ನೀರಿನ ಕೊಳವೆ, ಯು.ಜಿ.ಡಿ ಕೊಳವೆ ಅಳವಡಿಕೆಯಿಂದ ನೀರಿನ ಸರಾಗ ಹರಿಯುವಿಕೆಗೆ ಅಡಚಣೆಗೊಳಗಾಗಿ ಸುತ್ತಮುತ್ತಲಿನ ಮನೆಗೆ ನೆರೆ ನುಗ್ಗಿ ಜನರ ಜೀವನ ದುಸ್ತರವಾಗಿದೆ.

ಈ ಸಮಸ್ಯೆಗೆ ಪರಿಹಾರ ಕೋರಿ ಸ್ಥಳೀಯರು ಸಂಬಂಧಿತ ಇಲಾಖೆಗಳ ಮೊರೆ ಹೋದರೂ ಸಮರ್ಪಕ ಪರಿಹಾರ ದೊರಕದ ಹಿನ್ನೆಲೆಯಲ್ಲಿ ಬೇಸತ್ತು ಕೊನೆಗೆ ಕರ್ನಾಟಕ ಹೈಕೋರ್ಟ್ ನನ್ನು ಮೆಟ್ಟಿಲೇರಿದ್ದಾರೆ. ವಕೀಲ ರಂಜನ್‌ಕುಮಾರ್ ಅವರ ಮೂಲಕ ಸಾರ್ವಜನಿಕ ಹಿತಾಸಕ್ತಿ ದೂರು ಸಲ್ಲಿಸಲಾಗಿದ್ದು ಸಂಬಂಧಿತ ಇಲಾಖೆಗಳಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಲಾಗಿದೆ. ಮುಂದಿನ ವಿಚಾರಣೆ ಜೂನ್ 16ರಂದು ನಡೆಸಲಾಗುವುದೆಂದು ನಿಗದಿಪಡಿಸಲಾಗಿದೆ.

ಕುಡಿಯುವ ನೀರು ಯೋಜನೆಗಳನ್ನು ತ್ವರಿತ ಪೂರ್ಣಗೊಳಿಸಿ: ಸಚಿವ ಗುಂಡೂರಾವ್

ಮಂಗಳೂರು: ಜಿಲ್ಲೆಯಲ್ಲಿ ನಡೆಯುತ್ತಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಶೀಘ್ರವಾಗಿ ನೀರು ಪೂರೈಕೆಗೆ ಒತ್ತು ನೀಡಬೇಕೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದ್ದಾರೆ.



ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಸಿಗೆಯ ಸಂದರ್ಭದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಜಿಲ್ಲೆಯಲ್ಲಿ ಬೇಸಿಗೆಯಿಂದ ತಲೆದೋರಬಹುದಾದ ಸಮಸ್ಯೆಗಳ ಪರಿಹಾರಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ 5 ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿಗಳು ನಡೆಯುತ್ತಿವೆ. ಈ ಕಾಮಗಾರಿ ಪೂರ್ಣಗೊಂಡರೆ ಜಿಲ್ಲೆಯ ಬಹುತೇಕ ಗ್ರಾಮೀಣ ಪ್ರದೇಶಗಳಕುಡಿಯುವನೀರಿನಸಮಸ್ಯೆ ಪರಿಹಾರಗೊಳ್ಳಲಿದೆ. ಕೆಲವೆಡೆ ಅರಣ್ಯ ಭೂಮಿ ಸಮಸ್ಯೆ ಕಂಡುಬಂದಿದ್ದು, ಅರಣ್ಯ ಇಲಾಖೆಯೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕೆಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿನರ್ವಾಡೆ ವಿನಾಯಕ ಕಾರ್ಬಾರಿ ಮಾತನಾಡಿ, ಬೆಳ್ತಂಗಡಿ ತಾಲೂಕಿನ ಇಳಂತಿಲ, ಕಡಬ ತಾಲೂಕಿನ ಆಲಂಕಾರು, ಮತ್ತು ಕುಟ್ರುಪ್ಪಾಡಿ, ಬಂಟ್ವಾಳ ತಾಲೂಕಿನ ಅಳಿಕೆ, ಉಳ್ಳಾಲ ತಾಲೂಕಿನ ಕೈರಂಗಳದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿ ನಡೆಯುತ್ತಿದೆ. ಕಾಮಗಾರಿತ್ವರಿತಗೊಳಿಸಲು ಸೂಚಿಸಲಾಗಿದ್ದು, ಮುಂದಿನ 6-7 ತಿಂಗಳಲ್ಲಿ ಯೋಜನೆ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.ಮರವೂರು ಅಣೆಕಟ್ಟಿನ ಗೇಟ್‌ಗಳನ್ನು ಬದಲಾಯಿಸಲು 1 ಕೋ. ರೂ ವೆಚ್ಚದ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮಹಾನಗರಪಾಲಿಕೆ ಆಯುಕ್ತ ರವಿಚಂದ್ರನಾಯಕ್ ಮಾತನಾಡಿ, ನಗರಕ್ಕೆ ನೀರು ಪೂರೈಸುವ ತುಂಬೆ ಅಣೆಕಟ್ಟಿನಲ್ಲಿ ಪ್ರಸ್ತುತ 5.5 ಮೀಟರ್ ನೀರು ಲಭ್ಯವಿದೆ. ನಗರದಲ್ಲಿ ನೀರು ಸರಬರಾಜು ಉತ್ತಮ ಸ್ಥಿತಿಯಲ್ಲಿದೆ. ಎತ್ತರದ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಗ್ರಾಮೀಣ ಪ್ರದೇಶದ ಹಾಗೂ ನಗರ ಪಟ್ಟಣ ಪ್ರದೇಶಗಳ ಕುಡಿಯುವ ನೀರಿನ ಪರಿಸ್ಥಿತಿ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಯಾವುದೇ ಕಾರಣಕ್ಕೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಬಾರದು. ನೀರು ಪೂರೈಕೆಗೆ ಆದ್ಯತೆ ನೀಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಆ್ಯಂಟನಿ ಮರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

> **ಜಲಸಿರಿ ಕಾಮಗಾರಿ: ಸಚಿವರ ಅಸಮಾಧಾನ**
>
> ಮಂಗಳೂರು ನಗರದಲ್ಲಿ ನಡೆಯುತ್ತಿರುವ ಜಲಸಿರಿ ಯೋಜನೆಯ ಕಾಮಗಾರಿ ಅನುಷ್ಠಾನ ಶೈಲಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಉಸ್ತುವಾರಿ ಸಚಿವರು, ಪಪ್‌ಗಳನ್ನು ಅಳವಡಿಸಲು ಮುಖ್ಯ ರಸ್ತೆಗಳನ್ನು ಅಗೆದು, ದೀರ್ಘ ಕಾಲ ರಸ್ತೆಯನ್ನು ಯಥಾಸ್ಥಿತಿಗೆ ತಾರದೆ, ಸಂಚಾರ ವ್ಯವಸ್ಥೆಗೆ ತೀವ್ರ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ.
>
> ಅಗೆದಿರುವ ರಸ್ತೆಗಳನ್ನು ಕೂಡಲೇ ಆದ್ಯತೆಯಲ್ಲಿ ಪುನಶ್ಚೇತನಗೊಳಿಸಬೇಕು ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೆ.ಯು.ಐ.ಡಿ.ಎಫ್.ಸಿ. ಅಧಿಕಾರಿಗಳು, ರಸ್ತೆಯನ್ನು ಯಥಾಸ್ಥಿತಿಗೆ ತರಲು ಅಭಿಯಾನ ಮಾಡಿ ಕಾಮಗಾರಿ ನಡೆಸಲಾಗುವುದು ಎಂದು ತಿಳಿಸಿದರು.

ಬೆಳುವಾಯಿ: ಅಪರೂಪದ ಗುಡ್ಡಿ ನೇಮ

ಮೂಡುಬಿದಿರೆ: ಬೆಳುವಾಯಿ ಗ್ರಾಮದಲ್ಲಿ 45 ವರ್ಷಗಳ ಬಳಿಕ ಗ್ರಾಮಸ್ಥರ ಸಹಭಾಗಿತ್ವದಲ್ಲಿ ಗುಡ್ಡಿ ನೇಮವು ಶ್ರೀ ಕುಕ್ಕಿನಂತ್ತಾಯ, ಕೊಡಮಣಿತ್ತಾಯ, ವ್ಯಾಘ್ರಚಾಮುಂಡಿ-ಪಂಜುರ್ಲಿ ಹಾಗೂ ಬ್ರಹ್ಮಬೈದರ್ಕಳ ದೈವಸ್ಥಾನ ಕಲ್ಲೋಳಿ ಪಾದೆ ಬಾಕಿಮಾರು ಗದ್ದೆಯಲ್ಲಿ ಮಂಗಳವಾರ ರಾತ್ರಿ ನಡೆಯಿತು.

ಬಾಕಿಮಾರು ಗದ್ದೆಯಲ್ಲಿ ವಿಶಾಲವಾದ ಚಪ್ಪರ, ದೈವಗಳ ಹೊಸ ಮಂಚ, 4 ಕಂಬಗಳಿಂದ 9 ಅಂತಸ್ತುಗಳನ್ನು ಒಳಗೊಂಡ ಗುಡ್ಡಿಯನ್ನು ನಿರ್ಮಿಸಲಾಗಿತ್ತು. ಎಲ್ಲಾ ಹೊಸ ಪರಿಕರಗಳಿಂದಲೇ ಗುಡ್ಡಿ ನೇಮ ನಡೆಸುವುದು ವಿಶೇಷತೆಯಾಗಿದೆ.

ಬೆಳಿಗ್ಗೆ ಭಂಡಾರ ಆಗಮನದ ಬಳಿಕ ಗಣಪತಿ ಹೋಮ ನಡೆಯಿತು. ರಾತ್ರಿ ರಾಜನ್‌ದೈವ ಕುಕ್ಕಿನಂತಾಯಿ-ಕೊಡಮಣಿತ್ತಾಯ, ಬ್ರಹ್ಮಬೈದರ್ಕಳ, ಪಿಲಿಚಾಮುಂಡಿ, ಪಂಜುರ್ಲಿ ದೈವಗಳ ನೇಮ ನಡೆಯಿತು. ಸಾರ್ವಜನಿಕ ಅನ್ನಸಂತರ್ಪಣೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡರು.

ಗುತ್ತಿನಾರ್ ನರೇಶ್ ಶೆಟ್ಟಿ ಬರಕಳಗುತ್ತು ನೇತೃತ್ವದಲಲ್ಲಿ ನಡೆದ ಈ ಗುಡ್ಡಿ ನೇಮದಲ್ಲಿ ಊರಿನ ಗಣ್ಯರು ಪಾಲ್ಗೊಂಡರು.



ಕಿರುಸುದ್ದಿ

ಮುಲ್ಕಿ: ಕೊಲಕಾಡಿ ಬಳಿ ಕಾರುಗಳಿಗೆ ಆಕಸ್ಮಿಕ ಬೆಂಕಿ

ಮುಲ್ಕಿ: ಸಮೀಪದ ಕೊಲಕಾಡಿ ಶ್ರೀ ಕಾಳಿಕಾಂಬ ದೇವಸ್ಥಾನದ ಎದುರು ಭಾಗದಲ್ಲಿ ಪಾರ್ಕಿಂಗ್ ಮಾಡಿದ್ದ ಕಾರಿನಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಹಾನಿ ಸಂಭವಿಸಿದೆ ಸ್ಥಳೀಯರ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದೆ. ಮುಲ್ಕಿ ಸಮೀಪದ ಕೊಲಕಾಡಿ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ಕಾರ್ಯಕ್ರಮಕ್ಕೆ ಬಂದಿದ್ದ ಕಟಪಾಡಿ ಮೂಲದ ಎಂ. ಕೆ.ಆಚಾರ್ಯ ಎಂಬವರು ಜಾಗ್ವಾರ್ ಕಾರನ್ನು ಪಾರ್ಕಿಂಗ್ ಮಾಡಿ ತೆರಳಿದ್ದರು. ಸ್ವಲ್ಪ ಹೊತ್ತಿನಲ್ಲಿ ಕಾರಿನಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಧಗಧಗನೆ ಹೊತ್ತಿ ಉರಿಯಲಾರಂಭಿಸಿದೆ ಏಕಾಏಕಿ ಕಾಣಿಸಿದ ಬೆಂಕಿಯಿಂದ ಜಾಗ್ವಾರ್ ಕಾರಿಗೆ ಸಂಪೂರ್ಣ ಹಾನಿಯಾಗಿದ್ದು , ಬದಿಯಲ್ಲಿ ನಿಲ್ಲಿಸಿದ್ದ ಸುರತ್ಕಲ್ ಸಮೀಪದ ಮುಂಚೂರು ನಿವಾಸಿ ರಾಜೇಶ್ ಎಂಬವರ ಇನ್ನೋವಾ ಕಾರಿಗೆ ಕೂಡಾ ಬೆಂಕಿ ತಗಲಿ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ. ಕಾರಿಗೆ ತಗಲಿದ ಬೆಂಕಿ ಬಳಿಕ ಗುಡ್ಡೆಗೆ ಕೂಡ ಹತ್ತಿಕೊಂಡಿದ್ದು ಈ ಸಂದರ್ಭ ಅವಿಭಾಜಿತ ದಕ ಹಾಗೂ ಉಡುಪಿ ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಮಧು ಆಚಾರ್ಯ ಮತ್ತಿತರರು ಸೇರಿಕೊಂಡು ಸ್ಥಳೀಯ ಉದ್ಯಮಿ ಹಾಗೂ ಸಾಮಾಜಿಕ ಕಾರ್ಯಕರ್ತ ಅನಿಲ್ ಕೊಲಕಾಡಿ ಸಹಾಯದಿಂದ ಕಾರಿಗೆ ನೀರು ಹಾಯಿಸಿ ಬೆಂಕಿ ನಂದಿಸಿ ಭಾರೀ ಪ್ರಮಾಣದ ಅನಾಹುತವನ್ನು ತಪ್ಪಿಸಿದ್ದಾರೆ

ನಿಧನ ಸುದ್ದಿ


ಫಾ.ಮೆಲ್ವಿನ್ ಜೆ ಪಿಂಟೊ



ಮಂಗಳೂರು: ನಗರದ ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಪ್ರೊ–ಚಾನ್ಸೆಲರ್, ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಮತ್ತು ಮಂಗಳೂರು ಜೆಸ್ವಿಟ್ ಎಜುಕೇಷನಲ್ ಸೊಸೈಟಿ (ಎಂಜೆಇಎಸ್) ಉಪಾಧ್ಯಕ್ಷ ಫಾ.ಮೆಲ್ವಿನ್ ಜೆ ಪಿಂಟೊ ಎಸ್‌ಜೆ (63) ಅನಾರೋಗ್ಯದಿಂದ ಶುಕ್ರವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮಂಗಳೂರಿನ ಸಂತ ಅಲೋಶಿಯಸ್‌ನಲ್ಲಿ ತಮ್ಮ ಶಾಲಾ ಮತ್ತು ಕಾಲೇಜು ಶಿಕ್ಷಣವನ್ನು ಪೂರ್ಣಗೊಳಿಸಿದ ಬಳಿಕ ಜೆಸ್ವಿಟ್ ಪಾದ್ರಿಯಾಗಿ ಸೇರ್ಪಡೆಗೊಂಡರು. ಅವರು 1996 ಮತ್ತು 1999 ರ ನಡುವೆ ಹಾಸನದ ಸೇಂಟ್ ಜೋಸೆಫ್ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ನಂತರ ಸೇಂಟ್ ಜೋಸೆಫ್ ಇಂಡಿಯನ್ ಪಿಯು ಕಾಲೇಜನ್ನು ಸ್ಥಾಪಿಸಿದರು. ಅಲ್ಲಿ ಅವರು 2007 ರವರೆಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ನಂತರ ಅವರು 2007 ರಿಂದ 2011 ರವರೆಗೆ ಮಂಗಳೂರಿನ ಸೇಂಟ್ ಅಲೋಶಿಯಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಮತ್ತು 2012 ರವರೆಗೆ ಹಾಸನದ ಸೇಂಟ್ ಜೋಸೆಫ್ ಪಿಯು ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು.

ರಾಮಕೃಷ್ಣ ರಾವ್



ಉಪ್ಪಿನಂಗಡಿ: ಇಲ್ಲಿಗೆ ಸಮೀಪದ ಇಳಂತಿಲ ನಿವಾಸಿ ಎಂ. ರಾಮಕೃಷ್ಣ ರಾವ್ (70) ಮಂಗಳವಾರ ಮಧ್ಯಾಹ್ನ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ವೃತ್ತಿಯಲ್ಲಿ ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ ಮಹಾಕಾಳಿ ಅಮ್ಮನವರ ದೇವಳದಲ್ಲಿ ಕಳೆದ 30 ವರ್ಷಗಳಿಂದ ಅಡುಗೆ ಪಾಕಪ್ರವೀಣರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪತ್ನಿ, ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

ಯುವರಾಜ ಜೈನ್



ಸುಳ್ಯ: ಮರ್ಕಂಜ ಬಲ್ನಾಡು ಪೇಟೆ ಬಸದಿ ಆಡಳಿತ ಮೊಕ್ತೇಸರ, ನೆಲ್ಲೂರು ಕೆಮ್ರಾಜೆ ಮತ್ತು ಮರ್ಕಂಜ ಗ್ರಾಮಗಳ ಪಂಚಸ್ಥಾಪನೆಗಳ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ, ಯಕ್ಷಗಾನ ಕಲಾವಿದ, ಬಲ್ನಾಡು ಪೇಟೆ ಯುವರಾಜ ಜೈನ್ (80) ಶುಕ್ರವಾರ ನಿಧನರಾದರು. ಅವರು ಮರ್ಕಂಜ ಮಿನುಂಗೂರು, ಕಾವೂರು ಸೇರಿದಂತೆ ಧಾರ್ಮಿಕ ಕೇಂದ್ರಗಳನ್ನು ಜೀರ್ಣೋದ್ಧಾರಗೊಳಿಸಿದ ಕೀರ್ತಿ ಇವರದ್ದಾಗಿತ್ತು. ಮರ್ಕಂಜದಲ್ಲಿ ಯಕ್ಷಗಾನ ಮೇಳ ಕಟ್ಟಿ ಹಲವು ವರ್ಷ ನಡೆಸಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಕುಟುಂಬಸ್ಥರನ್ನು ಅಗಲಿದ್ದಾರೆ.

ವಿಠಲ್ ಬಂಗೇರ



ಮುಲ್ಕಿ: ಇಲ್ಲಿಗೆ ಸಮೀಪದ ಚಿತ್ರಾಪು ನಿವಾಸಿ ವಿಠಲ್ ಬಂಗೇರ (78) ಅನಾರೋಗ್ಯದಿಂದ ಬುಧವಾರ ರಾತ್ರಿ ನಿಧನರಾದರು ಅವರು ಪತ್ನಿ, ಮೂವರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಅವರು ಚಿತ್ರಾಪು ವಿಠೋಬ ಮಂದಿರದ ಅಧ್ಯಕ್ಷರಾಗಿ ಹಾಗೂ ಸಮಿತಿಯ ಸದಸ್ಯರಾಗಿ ಮಂದಿರದ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸಿದ್ದರು.

ರಾಮ ಟಿ.ಕಾಂಚನ್



ಮುಲ್ಕಿ: ಹಳೆಯಂಗಡಿ ಸಮೀಪದ ಪಾವಂಜೆ ನಿವಾಸಿ ರಾಮ ಟಿ.ಕಾಂಚನ್ (83) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರು ಪತ್ನಿ ಮೂವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅವರು ಹಳೆಯಂಗಡಿಯ ಪ್ರತಿಷ್ಠಿತ ಶ್ರೀ ವಿದ್ಯಾವಿನಾಯಕ ಯುವಕ ಮಂಡಲದ ಆಜೀವಸದಸ್ಯರಾಗಿ, ಸಂಸ್ಥೆಯ ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಶ್ರೀ ವಿದ್ಯಾವಿನಾಯಕ ರಜತ ಸೇವಾ ಟ್ರಸ್ಟ್‌ನ ಟ್ರಸ್ಟಿಯಾಗಿ, ಧಾರ್ಮಿಕ ಕ್ಷೇತ್ರದಲ್ಲಿ ದುಡಿದ ಧರ್ಮಿಷ್ಠರಾಗಿ ಸಮಾಜ ಸೇವಕರಾಗಿ, ನಾಟಕ ಕಲಾವಿದರಾಗಿ, ನಿರ್ದೇಶಕರಾಗಿ, ಗೀತಾ ರಚನಕಾರರಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡಿದ ಕಲಾ ಸೇವಕರು. ಅಪಘಾತಗಳ ತುರ್ತು ಸಂದರ್ಭದಲ್ಲಿ ಪ್ರಾಣ ಭಯವನ್ನು ಲೆಕ್ಕಿಸದೆ ಹೋರಾಡಿದ ಆಪದ್ಬಾಂಧವರಾಗಿದ್ದರು ಸಜ್ಜನ, ಧೀಮಂತ, ಸಮಾಜ ಸೇವಕರಾಗಿದ್ದರು

ರಾಧಾಕೃಷ್ಣ ಗೌಡ



ಪುತ್ತೂರು: ಚಿಕ್ಕಮುನ್ನೂರು ಗ್ರಾಮದ ಬೀರಹಿತ್ತು ದರ್ಖಾಸ್ ದಿ.ನಾಗಪ್ಪ ಗೌಡರ ಪುತ್ರ ರಿಕ್ಷಾ ಚಾಲಕ ರಾಧಾಕೃಷ್ಣ ಗೌಡ (46) ಅವರು ಅನಾರೋಗ್ಯದಿಂದ ಮಂಗಳೂರಿನ ಆಸ್ಪತ್ರೆಯಲ್ಲಿ ಏ.4ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಸಹೋದರ, ಸಹೋದರಿಯರನ್ನು ಅಗಲಿದ್ದಾರೆ.

ಲೀಲಾ



ಕೊಣಾಜೆ: ಉಳ್ಳಾಲ ತಾಲೂಕಿನ ನರಿಂಗಾನ ಗ್ರಾಮದ ಮೊಂಟೆಪದವು ನಿವಾಸಿ ದಿ. ಮೋನಪ್ಪ ಪೂಜಾರಿಯವರ ಪತ್ನಿ ಲೀಲಾ (95) ವಯೋ ಸಹಜ ಕಾಯಿಲೆಯಿಂದ ಬುಧವಾರ ನಿಧನರಾದರು. ಮೃತರು 4 ಪುತ್ರಿ, 3 ಪುತ್ರರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಶಾರದಾ

ಪೆರ್ಲ: ಮೂಲತಃ ಕಾನತ್ತೂರು ಓಟೆಕ್ಕಾಡು ನಿವಾಸಿ ಪ್ರಸ್ತುತ ಪೆರ್ಲ ಬಜಕೂಡ್ಲುವಿನಲ್ಲಿ ವಾಸಿಸುತ್ತಿದ್ದ ಶಂಕರನಾರಾಯಣ ಭಟ್‌ರ ಪತ್ನಿ ಶಾರದಾ (70) ನಿಧನ ಹೊಂದಿದರು. ಅವರು ತಿರುವನಂತಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತಿ ಅಲ್ಲದೆ ಮಕ್ಕಳಾದ ಶಿವಪ್ರಸಾದ್, ಬಾಲಕೃಷ್ಣ ಶ್ರುತಿ ಅವರನ್ನು ಅಗಲಿದ್ದಾರೆ.

ಲೋಕನಾಥ ಮುಜುಂಗಾವು



ಕುಂಬಳೆ: ಕುಂಬಳೆಯಲ್ಲಿ ಹಲವಾರು ವರ್ಷಗಳಿಂದ ಪ್ಲೈವುಡ್ ವ್ಯಾಪಾರ ಮತ್ತು ಸಾಗರ್ ಮೋಟಾರ್ಸ್ ಎಂಬ ಬಸ್ ಉದ್ದಿಮೆ ನಡೆಸಿ ಜನಪ್ರಿಯರಾಗಿದ್ದ ಲೋಕನಾಥ ಮುಜುಂಗಾವು (65) ನಿಧನ ಹೊಂದಿದರು. ಅಲ್ಪಕಾಲದ ಅಸೌಖ್ಯದಿಂದಿದ್ದ ಅವರು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ವ್ಯಾಪಾರ ನಿಮಿತ್ತ ಪ್ರಸ್ತುತ ಮೈಸೂರಿನಲ್ಲಿ ಕುಟುಂಬದ ಜೊತೆ ವಾಸವಾಗಿದ್ದರು. ಮೃತರು ಪತ್ನಿ ಪ್ರಮೀಳಾ, ಪುತ್ರಿಯರಾದ ಕೃತಿಕಾ, ಅಂಜಲಿ ಅವರನ್ನು ಅಗಲಿದ್ದಾರೆ.

ಐತಪ್ಪ ಗೌಡ ಪಂಜಿಕಲ್ಲು



ಬಂಟ್ವಾಳ: ಪಂಜಿಕಲ್ಲು ಗ್ರಾಮದ ಗಂಪದಡ್ಡ ನಿವಾಸಿ, ಹಿರಿಯ ಪ್ರಗತಿಪರ ಕೃಷಿಕ ಐತಪ್ಪ ಗೌಡ ಗಂಪದಡ್ಡ (80) ಅಸೌಖ್ಯದಿಂದ ಸ್ವಗೃಹದಲ್ಲಿ ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಪ್ರಗತಿಪರ ಕೃಷಿಕರಾಗಿ, ಹೈನುಗಾರರಾಗಿ, ಏಲಕ್ಕಿ ಬೆಳೆ ಬಗ್ಗೆ ವಿಶೇಷ ಪರಿಣತಿ ಹೊಂದಿದ್ದರು. ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಯಲ್ಲಿ ಗುರುತಿಕೊಂಡಿದ್ದರು. ಕಳೆದ 10 ವರ್ಷಗಳಿಂದ ರಾಯಿ ಸಮೀಪದ ಕಾರಂಬಡೆ ಎಂಬಲ್ಲಿ ಅಡಿಕೆ ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದರು.

ಮಾಧವ ಸುವರ್ಣ



ಉಪ್ಪಳ: ಐಲ ಪಾರಕಟ್ಟೆ ನಿವಾಸಿ, ಮುಂಬೈ ಜೋಗೇಶ್ವರಿಯಲ್ಲಿ ಪ್ರಕಾಶ್ ವಾಚ್ ವರ್ಕ್ಸ್ ಮಾಲಕರಾಗಿದ್ದ ಮಾಧವ ಸುವರ್ಣ (87) ಅಲ್ಪಕಾಲದ ಅಸೌಖ್ಯದಿಂದ ಗುರುವಾರ ಬೆಳಗ್ಗೆ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಸಜಿಪ ಕೊಳಕೆ ತರವಾಡಿನ ಹಿರಿಯರಾಗಿದ್ದರು. ಮೃತರು ಪತ್ನಿ ಲೀಲಾವತಿ, ಮಕ್ಕಳಾದ ಪ್ರಕಾಶ್, ಗಣೇಶ್, ಸುಜಾತ, ಭಾರತಿ ಅವರನ್ನು ಅಗಲಿದ್ದಾರೆ.

ಹನುಮಗಿರಿ ಶ್ರೀಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ | ರಾಜ್ಯಪಾಲರಿಂದ ಮುಖಗೋಪುರ ಉದ್ಘಾಟನೆ

ಸೇವೆ, ಸಮರ್ಪಣೆ ಜೀವನದ ನಿಜವಾದ ಮಾರ್ಗ

ಪುತ್ತೂರು: ಸೇವೆ, ಸಮರ್ಪಣೆ ಜೀವನದ ನಿಜವಾದ ಮಾರ್ಗ. ಇದಕ್ಕೆ ಪ್ರೇರಣಾರೂಪವಾಗಿರುವ ಹನುಮ ಕಠಿಣ ಸಂದರ್ಭದಲ್ಲೂ ಸತ್ಯ, ವಿಧೇಯತೆಯ ಹಾದಿಯಲ್ಲಿ ಸಾಗಿದವನು. ಹನುಮ ಅಖಂಡ ಭಕ್ತಿಯ ಪ್ರತೀಕವಾದರೆ, ಶ್ರೀರಾಮ ಆದರ್ಶಪ್ರಾಯನು. ವಿಶ್ವ ಕಲ್ಯಾಣ, ಶಾಂತಿ ನಮ್ಮ ಸಂಸ್ಕೃತಿಯಾಗಿದ್ದು, ನಮ್ಮಲ್ಲಿನ ಆಧ್ಯಾತ್ಮಿಕತೆ ಅದಕ್ಕೆ ಶಕ್ತಿ ತುಂಬುತ್ತದೆ ಎಂದು ಕರ್ನಾಟಕ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ನಡೆಯುತ್ತಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವದಲ್ಲಿ ಶುಕ್ರವಾರ ಕ್ಷೇತ್ರದ ಮುಖಗೋಪುರವನ್ನು ಉದ್ಘಾಟಿಸಿದ ಅವರು ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪವಿತ್ರ ಆಚರಣೆಗಳು ಮತ್ತು ವೇದ ಪಠಣದೊಂದಿಗೆ ಬ್ರಹ್ಮಕಲಶೋತ್ಸವವು ಈ ಪ್ರದೇಶವನ್ನು ನವೀಕೃತ ಆಧ್ಯಾತ್ಮಿಕ ಶಕ್ತಿಯನ್ನು ತುಂಬುತ್ತಿದೆ ಮತ್ತು ಸಮಾಜದಲ್ಲಿ ನೈತಿಕ ಮೌಲ್ಯಗಳು, ಏಕತೆ ಮತ್ತು ಸಾಮರಸ್ಯವನ್ನು ಪುನಃ ಸ್ಥಾಪಿಸುವ ಸಂದೇಶವನ್ನು ಸಹ ನೀಡುತ್ತದೆ. ದೇವಾಲಯವು ಭಾರತೀಯ ಸಂಸ್ಕೃತಿ ಮತ್ತು ನಂಬಿಕೆಯ ಪ್ರಮುಖ ಕೇಂದ್ರವಾಗಿದೆ. ಈ ದೇವಾಲಯಗಳು ಪೂಜಾ ಸ್ಥಳಗಳು ಮಾತ್ರವಲ್ಲದೆ ಆಧ್ಯಾತ್ಮಿಕ ಶಾಂತಿ ಮತ್ತು ಸಕಾರಾತ್ಮಕ ಶಕ್ತಿಯ ಮೂಲವಾಗಿದೆ. ಸಮಾಜವನ್ನು ಮಾರ್ಗದರ್ಶಿಸುವ, ಮೌಲ್ಯಗಳನ್ನು ಸಂರಕ್ಷಿಸುವ ಮತ್ತು ಪೀಳಿಗೆಗಳನ್ನು ಸಂಪರ್ಕಿಸುವ ಕೇಂದ್ರಗಳಾಗಿವೆ. ಅವು ನಮಗೆ ಸತ್ಯ, ಸದಾಚಾರ, ಸೇವೆ ಮತ್ತು ಸಮರ್ಪಣೆಯ ಮಾರ್ಗವನ್ನು ತೋರಿಸುತ್ತವೆ ಮತ್ತು ಜೀವನವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ನಮ್ಮನ್ನು ಪ್ರೇರೇಪಿಸುತ್ತವೆ ಎಂದು ಹೇಳಿದರು.

ಕೋದಂಡ ರಾಮ ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ನಡೆದ ಮುಖಗೋಪುರ ಮತ್ತು ಬ್ರಹ್ಮಕಲಶ ಕಾರ್ಯವು ನಮ್ಮ ಪರಂಪರೆಯನ್ನು ಎತ್ತಿ ಹಿಡಿಯುವ ಜೀವಂತಿಕೆಯನ್ನು ಸಾರುವಂತಿದೆ. ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದು ಉಳಿಸುವ ಕಾರ್ಯವನ್ನು ಅನಾದಿ ಕಾಲದಿಂದಲೂ ಸಾಧು ಸಂತರು ಮಾಡಿಕೊಂಡು ಬಂದಿರುತ್ತಾರೆ. ನದಿ ಪರ್ವತ, ಪಶು ಪಕ್ಷಿಗಳು ಎಲ್ಲವೂ ಪೂಜನೀಯವಾಗಿರುವಂತ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ. ಧರ್ಮ ಸಂಸ್ಕೃತಿಯನ್ನು ಉಳಿಸುವ ಕರ್ತವ್ಯ ಮಾಡುವ ಜೊತೆಗೆ ಸರ್ವ ಲೋಕವು ಸುಖಮಯವಾಗಿರಬೇಕು ಎಂದು ಆಶಯ ವ್ಯಕ್ತಪಡಿಸಿದರು.



ಅರ್ಥಪೂರ್ಣ ಬ್ರಹ್ಮಕಲಶ

ಆಶೀರ್ವಚನವಿತ್ತ ಶ್ರೀ ಸಂಸ್ಥಾನ ಗೋಕರ್ಣ ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ, ದೇವ ಭಕ್ತಿ, ದೇಶ ಭಕ್ತಿ ಎರಡೂ ಹನುಮಗಿರಿ ಕ್ಷೇತ್ರದಲ್ಲಿ ಮೇಳೈಸಿದೆ. ಕಾರ್ಯ ಶಾಶ್ವತವಾದರೆ, ಕಾರ್ಯಕ್ರಮ ಅರ್ಥಪೂರ್ಣವೆನ್ನುವಂತೆ ಬ್ರಹ್ಮಕಲಶ ಉತ್ಸವವನ್ನು ಉತ್ತಮ ಸಮಾಜ ನಿರ್ಮಾಣಕ್ಕೆ ಪೂರಕವಾಗಿ ಇಲ್ಲಿ ಸಂಯೋಜಿಸಲಾಗಿದೆ. ಇದಕ್ಕೆ ಸಂಘದ ಪ್ರೇರಣೆ, ಸಂತರ ಆಶೀರ್ವಾದವೂ ಇದೆ ಎಂದು ಹೇಳಿದರು.

> **ದಕ್ಷಿಣ ಅಯೋಧ್ಯೆ**
> ತ್ರೇತಾಯುಗದಲ್ಲಿ, ಹನುಮನು ಸಂಜೀವಿನಿ ಪರ್ವತವನ್ನು ಹೊತ್ತೊಯ್ಯುತ್ತಿದ್ದಾಗ, ಪರ್ವತದ ಒಂದು ಭಾಗವು ಇಲ್ಲಿ ಬಿದ್ದಿದೆ ಎನ್ನಲಾದ ಸ್ಥಳವು ಇಂದು ಹನುಮಗಿರಿ ಎಂದು ಪ್ರಸಿದ್ಧವಾಗಿದೆ. ಹನುಮಗಿರಿಯು ಭಗವಾನ್ ಶ್ರೀರಾಮ ಮತ್ತು ಹನುಮಂತ ನಡುವಿನ ವಿಶಿಷ್ಟ ಬಾಂಧವ್ಯವನ್ನು ಸಂಕೇತಿಸುತ್ತದೆ. ಇದನ್ನು 'ದಕ್ಷಿಣ ಅಯೋಧ್ಯೆ' ಎಂದೂ ಪರಿಗಣಿಸಲಾಗಿದೆ. ಈ ಪವಿತ್ರ ಭೂಮಿ ಭಗವಾನ್ ಶ್ರೀರಾಮನ ಆದರ್ಶಗಳು ಮತ್ತು ಹನುಮಂತ ಅಚಲ ಭಕ್ತಿಯನ್ನು ಸಂಕೇತಿಸುತ್ತದೆ.
> ■ ಥಾವರ್ ಚಂದ್ ಗೆಹ್ಲೋಟ್

ರಾಮ, ಹನುಮ ಅದ್ವೈತ ಜ್ಯೋತಿ ಇಲ್ಲಿಗೆ ಬಂದಿದೆ. ಉತ್ತರದಿಂದ ರಾಮ, ದಕ್ಷಿಣದಿಂದ ಹನುಮ ಕ್ಷೇತ್ರದ ಬೆಳಕು ಹನುಮಗಿರಿಯಲ್ಲಿ ಸಮಾಗಮವಾಗಿದೆ. ಕ್ಷೇತ್ರದಲ್ಲಿ ಗೋಶಾಲೆ, ವನ, ಶಿಲ್ಪರಾಮಾಯಣ, ಭಾರತ್ ಮಾತಾ ಮಂದಿರ ಮೊದಲಾದವು ಉತ್ತಮ ಸಂದೇಶ ನೀಡುತ್ತಿದೆ.

> **ಎಲ್ಲರಿಗೂ ನಮಸ್ಕಾರ**
> ಸರಿಯಾಗಿ 11.30 ಕ್ಕೆ ಹನುಮಗಿರಿ ಕ್ಷೇತ್ರಕ್ಕೆ ಆಗಮಿಸಿದ ರಾಜ್ಯಪಾಲರು ನೇರವಾಗಿ ಕೋದಂಡರಾಮ ಮಂದಿರಕ್ಕೆ ತೆರಳಿದರು. ಅಲ್ಲಿ ದೀಪ ಬೆಳಗಿಸುವ ಮೂಲಕ ಸಾಂಕೇತಿಕವಾಗಿ ಕ್ಷೇತ್ರದ ಮುಖಗೋಪುರವನ್ನು ಉದ್ಘಾಟಿಸಿದರು. ಬಳಿಕ ರಾಮತಾರಕ ಜಪಯಜ್ಞ ನಡೆಯುವಲ್ಲಿ ಪ್ರಾರ್ಥನೆ ಸಲ್ಲಿಸಿದರು. ಸಭಾ ಕಾರ್ಯಕ್ರಮದಲ್ಲಿ 'ಎಲ್ಲರಿಗೂ ನಮಸ್ಕಾರ, ಎಲ್ಲರನ್ನೂ ಸ್ವಾಗತಿಸುತ್ತೇನೆ' ಎಂದು ಕನ್ನಡದಲ್ಲಿ ಹೇಳುವ ಮೂಲಕ ಗಮನಸೆಳೆದರು. ಕೊನೆಯಲ್ಲಿ ಅಮರಗಿರಿಯ ಭಾರತ್ ಮಾತಾ ಮಂದಿರಕ್ಕೆ ಭೇಟಿ ನೀಡಿ ವೀಕ್ಷಿಸಿದರು.

ಭಾರತ ವಿಶ್ವಗುರುವಾಗುತ್ತಿರುವ ಸಂದರ್ಭದಲ್ಲಿ ನಾವೆಲ್ಲರೂ ಅದಕ್ಕೆ ಸಾಕ್ಷಿಯಾಗುತ್ತಿರುವುದು ಅತ್ಯಂತ ಪುಣ್ಯದಾಯಕ ಎಂದರು.

ಪ್ರಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದ ಹನುಮಗಿರಿ ಕ್ಷೇತ್ರ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷರಾದ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಭಾರತ ಮಾತೆಯ ಮಂದಿರವಿರುವ ಏಕೈಕ ಕ್ಷೇತ್ರ ಹನುಮಗಿರಿ. ಇಲ್ಲಿ ರಾಷ್ಟ್ರ, ಧರ್ಮ ಜಾಗೃತಿ ಇದೆ. ಅಯೋಧ್ಯೆಯಿಂದ ಜ್ಯೋತಿ, ರಾಮ ಜಪದೀಕ್ಷೆ ಮೊದಲಾದ ಕಾರ್ಯಕ್ರಮಗಳ ಸಂಯೋಜನೆಯೊಂದಿಗೆ ಕ್ಷೇತ್ರದ ಬ್ರಹ್ಮಕಲಶೋತ್ಸವ ವಿಶ್ವ ಕಲ್ಯಾಣದ ಅಂಕಲ್ಪದೊಂದಿಗೆ ಅರ್ಥಪೂರ್ಣವಾಗಿ ನಡೆಯುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಉಪಸ್ಥಿತರಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಶಾಸಕ ಅಶೋಕ್ ಕುಮಾರ್ ರೈ ರಾಜ್ಯಪಾಲರನ್ನು ಗೌರವಿಸಿದರು. ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಶ್ಯಾಂ ಭಟ್, ಮಾಜಿ ಶಾಸಕರಾದ ಸಂಜೀವ ಮಠಂದೂರು, ಶಕುಂತಳಾ ಟಿ. ಶೆಟ್ಟಿ ಮತ್ತಿತರರಿದ್ದರು.

ಕ್ಷೇತ್ರದ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ ವಂದಿಸಿದರು. ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ರಾಕೇಶ್ ರೈ ಕೆಡೆಂಜಿ ಕಾರ್ಯಕ್ರಮ ನಿರ್ವಹಿಸಿದರು.

> **ಇಂದಿನ ಅಗತ್ಯ**
> ಭಾರತೀಯ ಸಂಸ್ಕೃತಿಯು ಪ್ರಕೃತಿಯನ್ನು ಪವಿತ್ರವೆಂದು ಪರಿಗಣಿಸುತ್ತದೆ. ನದಿಗಳು, ಪರ್ವತಗಳು, ಮರಗಳು, ಪ್ರಾಣಿಗಳು ಮತ್ತು ಪಕ್ಷಿಗಳು ಎಲ್ಲವೂ ಜೀವನ ಚಕ್ರದ ಭಾಗವಾಗಿದೆ. ಇಂದಿನ ಪರಿಸರ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಈ ವಿಧಾನವು ಹೆಚ್ಚು ಪ್ರಸ್ತುತವಾಗಿದೆ ಮತ್ತು ಸುಸ್ಥಿರ ಅಭಿವೃದ್ಧಿಯ ತತ್ವಗಳಿಗೆ ಅನುಗುಣವಾಗಿದೆ ಎಂದು ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯಿಸಿದರು.

ಹನುಮಗಿರಿ : ಇಂದು ಶ್ರೀರಾಮ ತಾರಕ ಯಾಗ

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.9ರಿಂದ ಆರಂಭಗೊಂಡಿದ್ದು, ಶುಕ್ರವಾರ ಬೆಳಗ್ಗಿನಿಂದಲೇ ವಿವಿಧ ವೈದಿಕ ಕಾರ್ಯಕ್ರಮಗಳು ನಡೆದವು. ಬೆಳಗ್ಗೆ 5 ಗಂಟೆಯಿಂದ ಸಾಮೂಹಿಕ ಪ್ರಾರ್ಥನೆ, ಯಾಗ ಶಾಲಾ ಪ್ರವೇಶ, ಬಳಿಕ ಮಹಾ ಸಂಕಲ್ಪ, ಕ್ರಚ್ಛಾಚರಣೆ, ಪುಣ್ಯಾಹ, ದೇವತಾ ನಾಂದಿ, ಕಂಕಣ ಬಂಧನ, ಪ್ರಧಾನ ಪೀಠದಲ್ಲಿ ಕಲಶ ಸ್ಥಾಪನೆ, 100 ವೈದಿಕರಿಂದ ಜಪ ಪ್ರಾರಂಭಗೊಂಡಿತು. ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು. ಬೆಳಗ್ಗೆ 8ರಿಂದ ಅಷ್ಟೋತ್ತರ ಶತನಾರಿಕೇಳ (108) ಗಣಹವನ, ಪೂರ್ಣಾಹುತಿ, ಮಹಾಪೂಜೆ (ಯಾಗ ಮಂಟಪದಲ್ಲಿ) ಪ್ರಸಾದ ವಿತರಣೆ, ಸಂಜೆ ಜಪ ಮುಂದುವರಿಕೆ ದೇವತಾಪ್ರಾರ್ಥನೆ, ಆಚಾರ್ಯವರಣ, ಪುಣ್ಯಾಹವಾಚನ, ಪ್ರಾಸಾದಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತುಬಲಿ, ವಾಸ್ತು ಪುಣ್ಯಾಹಂತ, ಅಷ್ಟಾವಧಾನ ಸೇವೆ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ ಸಾವಿರಾರು ಮಂದಿ ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು. ಏ.11ರಂದು ಬೆಳಗ್ಗೆ ಗಂಟೆ 5ರಿಂದ ಗಣಪತಿ ಹೋಮ, ಪ್ರಾಯಶ್ಚಿತ್ತ ಹೋಮ, ಶಾಂತಿ ಹೋಮ, ತತ್ವಹೋಮ, ತತ್ವ ಕಲಶ ಪೂಜೆ, ಕುಂಭೇಶಕರ್ಕರಿ ಪೂಜೆ, ಶಯ್ಯಾಪೂಜೆ, ತತ್ವಕಲಶಾಭಿಷೇಕ, ಜೀವೋದ್ವಾಸನೆ, ಜೀವಕಲಶ, ಶಯ್ಯೋನ್ನಯನ, ಮಹಾಪೂಜೆ, ಪ್ರಾರ್ಥನೆ, ಪುಣ್ಯಾಹ, ಅರಣೀಮಥನ ಪ್ರಧಾನ ಕುಂಡದಲ್ಲಿ ಅಗ್ನಿ ಸ್ಥಾಪನೆ, ಅಗ್ನಿವಿಹರಣ, ಶ್ರೀರಾಮ ತಾರಕ ಯಾಗ ಆರಂಭ, ಪ್ರಾಯಶ್ಚಿತ್ತಾದಿಗಳು ಮಹಾಪೂರ್ಣಾಹುತಿ, ಮಹಾಪೂಜೆ, ಮಂತ್ರಾಕ್ಷತೆ, ಪ್ರಸಾದ ವಿತರಣೆ ನಡೆಯಲಿದೆ. ಬೆಳಗ್ಗೆ ಪ್ರಮುಖ ಶಂಕರಾಚಾರ್ಯ ಮಠಗಳಲ್ಲಿ ಒಂದಾದ ಕಂಚಿ ಕಾಮಕೋಟಿ ಮಠದ ಸ್ವಾಮೀಜಿ, ಹಲವು ಮಂದಿ ಸಂತರು ಭಾಗವಹಿಸಲಿದ್ದಾರೆ.

'90 ಎಂಎಲ್' ತುಳು ಸಿನಿಮಾ ಕರಾವಳಿ ಜಿಲ್ಲೆಯಾದ್ಯಂತ ತೆರೆಗೆ

ಮಂಗಳೂರು: ಡಿಡಿ ಪ್ರೊಡಕ್ಷನ್ ಲಾಂಛನದಲ್ಲಿ ರಂಜಿತ್ ಸಿ. ಬಜಾಲ್ ನಿರ್ದೇಶನದಲ್ಲಿ ಡೋಲ್ಫಿ ಡಿಸೋಜ ನಿರ್ಮಾಣದಲ್ಲಿ ತಯಾರಾದ '90 ಎಂಎಲ್' ತುಳು ಚಲನಚಿತ್ರ ನಗರದ ಭಾರತ್ ಸಿನಿಮಾಸ್‌ನಲ್ಲಿ ಶುಕ್ರವಾರ ತೆರೆ ಕಂಡಿತು.



ಸಿನಿಮಾ ಪ್ರದರ್ಶನ ಉದ್ಘಾಟನೆ ನೆರವೇರಿಸಿ ಮಾತನಾಡಿದ ಬೆಂಜನಪದವು ಕೊರಗಜ್ಜ ಕ್ಷೇತ್ರದ ವಿಜಯ ಅವರು 'ತುಳುವಿನಲ್ಲಿ ಸದಭಿರುಚಿಯ ಸಿನಿಮಾಗಳು ಬಿಡುಗಡೆಯಾಗುತ್ತಿರುವುದು ಖುಷಿಯ ವಿಚಾರ. 90 ಎಂಎಲ್ ಸಿನಿಮಾ ತುಳು ಪ್ರೇಕ್ಷಕರ ಮನೆ, ಮನ ಮುಟ್ಟುವ ಕೆಲಸ ಮಾಡಲಿ. ಇಡೀ ಚಿತ್ರತಂಡಕ್ಕೆ ಶುಭವಾಗಲಿ' ಎಂದರು.

ಚಿತ್ರ ನಿರ್ಮಾಪಕ ಪ್ರಕಾಶ್ ಪಾಂಡೇಶ್ವರ್ ಮಾತನಾಡಿ, 'ಸಿನಿಮಾದ ಟ್ರೈಲರ್ ನೋಡಿದೆ. ಮಲಯಾಳಂ ಚಿತ್ರದಂತೆ ಇದೆ. ಟೈಟಲ್ ಕೂಡ ಸಖತ್ತಾಗಿದೆ' ಎಂದರು.

ಉದ್ಯಮಿ ಲಾಂಚುಲಾಲ್ ಕೆ.ಎಸ್. ಮಾತನಾಡಿ, '90 ಎಂಎಲ್ ಸಿನಿಮಾ ಟೈಟಲ್ ಡಿಫರೆಂಟ್ ಆಗಿದೆ. ತುಳುವರು ಸಿನಿಮಾ ನೋಡಿದರೆ ಖಂಡಿತ ಸಿನಿಮಾ ಗೆಲ್ಲಲಿದೆ. ಸಿನಿಮಾಕ್ಕೆ ಶುಭ ಹಾರೈಕೆಗಳು' ಎಂದರು.

ನಟ ಅರ್ಜುನ್ ದೇವ್ ಮಾತನಾಡಿ, '90 ಎಂಎಲ್ ನಿಜ ಜೀವನದಿಂದ ದೂರವಿರಲಿ. ಆದರೆ, ಸಿನಿಮಾ ನಮಗೆಲ್ಲರಿಗೂ ಹತ್ತಿರವಿರಲಿ. ಚಿತ್ರತಂಡಕ್ಕೆ ದೊಡ್ಡ ಯಶಸ್ಸು ಸಿಗಲಿ' ಎಂದರು.

ನಿರ್ಮಾಪಕ ಡೋಲ್ಫಿ ಡಿಸೋಜ, ಸ್ವರಾಜ್ ಶೆಟ್ಟಿ, ಸಿದ್ಧಾರ್ಥ್, ತ್ರಿಶೂಲ್ ಶೆಟ್ಟಿ, ಆನಂದ್ ಕುಂಪಲ, ಜಗನ್ನಾಥ ಶೆಟ್ಟಿ ಬಾಳ, ಮೋಹನ್ ಕೊಪ್ಪಲ, ವಿನೀತ್ ಕುಮಾರ್, ರುಹಾನಿ ಶೆಟ್ಟಿ, ರೋಶನ್ ಶೆಟ್ಟಿ, ಶೈಲಶ್ರೀ, ಧೃತಿ, ನಿರ್ದೇಶಕ ರಂಜಿತ್ ಸಿ. ಬಜಾಲ್, ತುಳಸಿದಾಸ್ ಮಂಜೇಶ್ವರ್ ಮತ್ತಿತರರು ಉಪಸ್ಥಿತರಿದ್ದರು.

ವಿಜೆ ಮಧುರಾಜ್ ಕಾರ್ಯಕ್ರಮ ನಿರೂಪಿಸಿದರು.

ಸಂಜೆ ಒಂದೆರಡು ಗಂಟೆಗಳ ಕಾಲ ಮಾತ್ರ ನೀರು | ಕಕ್ಕೆಬೆಟ್ಟು, ಕಾರ್ಮಿಕ ಕಾಲನಿಯಲ್ಲಿ ನೀರಿನ ಸಮಸ್ಯೆ

ಮನಪಾ ಪೈಪ್‌ಲೈನ್‌ನಲ್ಲಿ ನೀರು ಪೂರೈಕೆಯೇ ಕಡಿಮೆ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ನಮ್ಮಲ್ಲಿ ಈ ಹಿಂದೆ ಬೆಳಗ್ಗೆ 5.30ರಿಂದ 8.30ರವರೆಗೆ ಉತ್ತಮ ಪ್ರೆಶರ್‌ನೊಂದಿಗೆ ಮನಪಾ ಪೈಪ್‌ಲೈನ್‌ನಲ್ಲಿ ನೀರು ಪೂರೈಕೆಯಾಗುತ್ತಿತ್ತು. ಸಂಜೆ ವೇಳೆಯೂ ನೀರು ಬರುತ್ತಿತ್ತು. ಕಳೆದ ಎರಡು ತಿಂಗಳಿನಿಂದ ಸಂಜೆ ಮಾತ್ರ ಒಂದೆರಡು ಗಂಟೆಗಳ ಕಾಲ ನೀರು ಬರುತ್ತಿದೆ. ಹೀಗಾಗಿ ನಾವು ನೀರಿನ ಸಮಸ್ಯೆ ಎದುರಿಸುತ್ತಿದ್ದೇವೆ..

ಇದು ಪದವು ಸೆಂಟ್ರಲ್ ವಾರ್ಡ್‌ನ ಜನತೆಯ ಮಾತು.

ಕುಲಶೇಖರ ಕಲ್ಪನೆ, ಶಕ್ತಿನಗರ ಕಾರ್ಮಿಕ ಕಾಲನಿ, ಕಕ್ಕೆಬೆಟ್ಟು, ಕುಚ್ಚಿಕಾಡು, ಕೊಂಗೂರು, ರಾಜೀವನಗರ, ನೀತಿನಗರ ಪ್ರದೇಶಗಳನ್ನು ಒಳಗೊಂಡಿರುವ ಪದವು ಸೆಂಟ್ರಲ್ ವಾರ್ಡ್ ಅತಿ ಹೆಚ್ಚು ಜನವಸತಿ ಇರುವ ಪ್ರದೇಶ. ಗ್ರಾಮಾಂತರ ಪರಿಸರವನ್ನು ಹೋಲುವ ಮಹಾನಗರ ಪಾಲಿಕೆಯ ಈ ವಾರ್ಡ್‌ನ ಕೆಲವೆಡೆ ನೀರಿನ ಸಮಸ್ಯೆ ಇದೆ. ಮನಪಾ ಪೈಪ್‌ಲೈನ್‌ನಲ್ಲಿ ಪೂರೈಕೆಯಾಗುವ ನೀರಿನ ಪ್ರಮಾಣ ಮತ್ತು ಅವಧಿ ಕಡಿತದ ಕಾರಣದಿಂದ ಇಲ್ಲಿನ ನೀರಿನ ಕೊರತೆ ಉಂಟಾಗಿದೆ.

ಪದವು ಸೆಂಟ್ರಲ್ ವಾರ್ಡ್‌ಗೆ ಶಕ್ತಿನಗರ ಟ್ಯಾಂಕ್‌ನಿಂದ ಎರಡು ಲೈನ್‌ಗಳಲ್ಲಿ ನೀರಿನ ಸರಬರಾಜು ಆಗುತ್ತಿದೆ. ಈ ವಾರ್ಡ್‌ನ ಕಕ್ಕೆಬೆಟ್ಟು, ಕಾರ್ಮಿಕ ಕಾಲನಿ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಿದೆ. ಇಲ್ಲಿ ಸಂಜೆ ವೇಳೆ 5ರಿಂದ 6 ಗಂಟೆವರೆಗೆ ನೀರು ಬರುತ್ತಿದೆ. ಆದರೆ, ಪ್ರೆಶರ್ ಇಲ್ಲ. ಮನೆಗಳ ನೀರಿನ ತೊಟ್ಟಿಗಳು ಮಾತ್ರ ತುಂಬುತ್ತಿವೆ. ಮಹಡಿ ಮೇಲಿನ ನೀರಿನ ಟ್ಯಾಂಕ್‌ಗೆ ನೀರು ಹತ್ತುತ್ತಿಲ್ಲ. ಕೆಲವೊಮ್ಮೆ ತಳಭಾಗದಲ್ಲಿರುವ ನೀರಿನ ತೊಟ್ಟಿಯೂ ತುಂಬುತ್ತಿಲ್ಲ. ಮನಪಾ ಪೈಪ್‌ಲೈನ್‌ನಲ್ಲಿ ಒದಗಿಸುವ ನೀರಿನ ಪ್ರಮಾಣ ಕಳೆದ ಒಂದೆರಡು ತಿಂಗಳಿನಿಂದ ತೀರಾ ಕಡಿಮೆಯಾಗಿದೆ. ಇದರಿಂದಾಗಿ ನಾವು ನೀರಿನ ಸಮಸ್ಯೆ ಎದುರಿಸುತ್ತಿದ್ದೇವೆ ಎನ್ನುತ್ತಾರೆ ಸ್ಥಳೀಯರು.

ಅಗತ್ಯ ಇರುವಲ್ಲಿ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. ಕೆಲವರು ಖಾಸಗಿ ಟ್ಯಾಂಕರ್ ಮೂಲಕವೂ ನೀರು ತರಿಸಿಕೊಳ್ಳುತ್ತಿದ್ದಾರೆ. ಕಾರ್ಮಿಕ ಕಾಲನಿ, ಕುಚ್ಚಿಗುಡ್ಡೆ ಪ್ರದೇಶಕ್ಕೆ ಕೊಳವೆಬಾವಿ ಮೂಲಕ ನೀರು ನೀಡಲಾಗುತ್ತಿದೆ.

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್



ಕಕ್ಕೆಬೆಟ್ಟು ಪ್ರದೇಶದಲ್ಲಿ ರಾಜಕಾಲುವೆಯಲ್ಲಿ ಹೂಳು ತುಂಬಿದ್ದು, ಪೊದೆಗಳಿಂದ ಆವರಿಸಿದೆ

> **ರಾಜಕಾಲುವೆ ಹೂಳು ತೆಗೆದಿಲ್ಲ**
> ಈ ವಾರ್ಡ್‌ನ ಕಕ್ಕೆಬೆಟ್ಟು –ಕುಚ್ಚಿಕಾಡು ಪ್ರದೇಶದಿಂದ ಬಿಕರ್ನಕಟ್ಟೆ ಕಡೆಗೆ ರಾಜ ಕಾಲುವೆ ಇದೆ. ರಾಜಕಾಲುವೆಯ ಸಮರ್ಪಕ ನಿರ್ವಹಣೆ ನಡೆಸದ ಕಾರಣ ಮಳೆಗಾಲದಲ್ಲಿ ಸ್ಥಳೀಯರು ತೊಂದರೆಗೆ ಒಳಗಾಗುತ್ತಿದ್ದಾರೆ. ಕುಚ್ಚಿಕಾಡು, ಕಲ್ಪನೆ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ರಾಜಕಾಲುವೆಯಿಂದ ನೀರು ಉಕ್ಕಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಸುತ್ತಲಿನ ಮನೆಗಳಿಗೆ ನೆರೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ಈ ಬಾರಿಯೂ ರಾಜಕಾಲುವೆ ಹೂಳು, ಪೊದೆಗಳಿಂದ ತುಂಬಿಕೊಂಡಿದ್ದು, ಮನಪಾ ವತಿಯಿಂದ ಇದುವರೆಗೆ ಕ್ಲೀನ್ ಮಾಡುವ ಕೆಲಸ ಆಗಿಲ್ಲ. ತಕ್ಷಣ ರಾಜಕಾಲುವೆಯ ಹೂಳು ತೆಗೆದು ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುವುದನ್ನು ತಪ್ಪಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕುಚ್ಚಿಕಾಡು ಪ್ರದೇಶಗಳಲ್ಲಿ ಎರಡು ಬೋರ್‌ವೆಲ್‌ಗಳ ಪೈಕಿ ಒಂದು ಹಾಳಾಗಿದೆ. ಹಾಳಾದ ಬೋರ್‌ವೆಲ್‌ನ್ನು ಮನಪಾ ವತಿಯಿಂದ ದುರಸ್ತಿಗೊಳಿಸಬೇಕಿದೆ. ನೀತಿನಗರ, ಕಾರ್ಮಿಕ ಕಾಲನಿಯಲ್ಲಿ ಸರಕಾರಿ ಬಾವಿ ಇದೆ. ಆದರೆ, ಇವೆರಡು ಬಾವಿಗಳು ಹೂಳು, ಕಸ ತುಂಬಿಕೊಂಡಿದ್ದು, ಮನಪಾ ವತಿಯಿಂದ ಶುಚಿಗೊಳಿಸಿದರೆ ಸ್ಥಳೀಯರು ಇದರ ನೀರು ಬಳಸಬಹುದು ಎನ್ನುವುದು ಇಲ್ಲಿನವರ ಅಭಿಪ್ರಾಯ.

ಪದವು ಸೆಂಟ್ರಲ್ ವಾರ್ಡ್‌ನಲ್ಲಿ ಜಲಸಿರಿ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಆದರೆ, ಮುಖ್ಯ ಪೈಪ್‌ಲೈನ್ ಆಗಿಲ್ಲ. ಶಕ್ತಿನಗರದಲ್ಲಿ 10 ಲಕ್ಷ ಲೀಟರ್ ಸಾಮರ್ಥ್ಯದ ಹೊಸ ಟ್ಯಾಂಕ್ ನಿರ್ಮಾಣಗೊಂಡಿದೆ.

> **ಡ್ರೈನೇಜ್ ಸಮಸ್ಯೆ**
> ಪದವು ಸೆಂಟ್ರಲ್ ವಾರ್ಡ್‌ನ ಕಕ್ಕೆಬೆಟ್ಟು, ಬೇಕಲ್‌ಕರ್ ಲೈನ್, ಕುಚ್ಚಿಕಾಡು, ಕಾರ್ಮಿಕ ಕಾಲನಿ ಪ್ರದೇಶದಲ್ಲಿ ಡ್ರೈನೇಜ್ ಸಮಸ್ಯೆಯಿದೆ. ಇಲ್ಲಿ ಮಳೆಗಾಲದಲ್ಲಿ ಡ್ರೈನೇಜ್ ಉಕ್ಕೇರಿ ಹರಿದು ಸುತ್ತಲಿನ ಪ್ರದೇಶಗಳ ಜನತೆ ತೊಂದರೆ ಅನುಭವಿಸುತ್ತಿದ್ದಾರೆ. ಮನಪಾ ವತಿಯಿಂದ ಈ ಸಮಸ್ಯೆ ಸರಿಪಡಿಸಬೇಕು ಎಂಬುದು ಸ್ಥಳೀಯರ ಆಗ್ರಹ.

ನಾಳೆ ವಾರ್ಡ್ -36
ಪದವು ಪೂರ್ವ ಪರಿಸರದ ಸ್ಥಿತಿಗತಿ



> ಪದವು ಸೆಂಟ್ರಲ್ ವಾರ್ಡ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಪಾಲಿಕೆ ವತಿಯಿಂದ ನೀರಿನ ಪೂರೈಕೆ ಕಡಿಮೆಯಾದ ಕಾರಣ ಕೆಲವೆಡೆ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಕುಚ್ಚಿಕಾಡು ಪ್ರದೇಶದಲ್ಲಿ ಕೊಳವೆಬಾವಿ ನಿರ್ಮಿಸುವಂತೆ ವರ್ಷದ ಹಿಂದೆ ಪಾಲಿಕೆಗೆ ಮನವಿ ಮಾಡಲಾಗಿದೆ. ಆದರೆ, ಇದುವರೆಗೆ ಇಲ್ಲಿ ಕೊಳವೆಬಾವಿ ನಿರ್ಮಿಸಿಲ್ಲ. ವಾರ್ಡ್‌ನ ಎಲ್ಲ ಪ್ರದೇಶಗಳಿಗೆ ನೀರಿನ ಪೈಪ್‌ಲೈನ್ ಅಳವಡಿಸಲಾಗಿದೆ. ಕೊಂಗೂರು ಮಠಕ್ಕೆ ತೆರಳುವ ರಸ್ತೆ ಕಳೆದ 60 ವರ್ಷಗಳಿಂದ ಡಾಮರೀಕರಣ ಆಗಿರಲಿಲ್ಲ. ಇಲ್ಲಿನ 1100 ಮೀಟರ್ ರಸ್ತೆಗೆ ಇದೀಗ ಡಾಮರೀಕರಣ ನಡೆಸಲಾಗಿದೆ. 8 ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಅಳವಡಿಸಲಾಗಿದೆ. ರಸ್ತೆಗಳಲ್ಲಿ ಬೆಳಕಿನ ವ್ಯವಸ್ಥೆಗೆ ಎಲ್‌ಇಡಿ ಬಲ್ಬ್ ಹಾಕಲಾಗಿದೆ. ಕುಲಶೇಖರ – ಶಕ್ತಿನಗರ ರಸ್ತೆ ಅಗಲೀಕರಣ ನಡೆಸಿ, ಕಾಂಕ್ರೀಟ್ ಹಾಕಲಾಗಿದೆ. ಕಾರ್ಮಿಕ ಕಾಲನಿ, ನೀತಿನಗರ, ಕಕ್ಕೆಬೆಟ್ಟುವಿನಲ್ಲಿ ಅಂಗನವಾಡಿಗೆ ಹೊಸ ಕಟ್ಟಡ ನಿರ್ಮಿಸಲಾಗಿದೆ. ಮುತ್ತಪ್ಪ ಗುಡಿ ಹಿಂಭಾಗ ಕಾಲುದಾರಿಯನ್ನು 12 ಅಡಿಯ ರಸ್ತೆಯನ್ನಾಗಿಸಿ ಡ್ರೈನೇಜ್, ಕಾಂಕ್ರೀಟ್ ಅಳವಡಿಸಲಾಗಿದೆ.
> ■ ಕಿಶೋರ್ ಕೊಟ್ಟಾರಿ, ಪದವು ಸೆಂಟ್ರಲ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

> ಕಕ್ಕೆಬೆಟ್ಟು ಪ್ರದೇಶದಲ್ಲಿ ಮಳೆಗಾಲದಲ್ಲಿ ರಾಜಕಾಲುವೆಯಿಂದ ನೀರು ಉಕ್ಕಿ ಹರಿದು ಸ್ಥಳೀಯರು ಸಮಸ್ಯೆ ಅನುಭವಿಸುತ್ತಿದ್ದಾರೆ. ಇಲ್ಲಿ ಅಗಲ ಕಿರಿದಾದ ತೋಡು ಇದೆ. ಮಣ್ಣು, ಕಸಕಡ್ಡಿ ತೆಗೆಯದ ಕಾರಣ ಸಮಸ್ಯೆಯಾಗುತ್ತಿದೆ. ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ರಾಜಕಾಲುವೆಗಳ ಹೂಳು ತೆಗೆದು ಮಳೆಗಾಲದಲ್ಲಿ ಜನರಿಗೆ ಆಗುವ ತೊಂದರೆ ತಪ್ಪಿಸಬೇಕು.
> ■ ಕರುಣಾಕರ ಆಚಾರ್ಯ ಕಕ್ಕೆಬೆಟ್ಟು, ಪದವು ಸೆಂಟ್ರಲ್ ವಾರ್ಡ್ ನಿವಾಸಿ

ಕಿರುಸುದ್ದಿ

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ಯಶಸ್ವಿ ಜೈಸ್ವಾಲ್ (ರಾಜಸ್ಥಾನ ರಾಯಲ್ಸ್)	ರವಿ ಬಿಷ್ಣೋಯ್ (ರಾಜಸ್ಥಾನ)
170 ರನ್	9 ವಿಕೆಟ್



ಜೂ. ಹಾಕಿ ತಂಡಕ್ಕೆ ವೈಟ್ ಕೋಚ್

ಹೊಸದಿಲ್ಲಿ: ಭಾರತೀಯ ಮಹಿಳೆಯರ ಜೂನಿಯರ್ ಹಾಕಿ ತಂಡಕ್ಕೆ ಟೀಮ್ ವೈಟ್ ಅವರನ್ನು ಮುಖ್ಯ ತರಬೇತುದಾರರನ್ನಾಗಿ ಮಾಡಲಾಗಿದೆ. ಶುಕ್ರವಾರದಂದು ಈ ಬಗ್ಗೆ ಭಾರತೀಯ ಹಾಕಿ ಸಂಸ್ಥೆ ಅಧಿಕೃತವಾಗಿ ತಿಳಿಸಿದ್ದು, ಆಸ್ಟ್ರೇಲಿಯಾದ ಹೈಪರ್ಫಾರ್ಮನ್ಸ್ ತರಬೇತುದಾರರಾದ ವೈಟ್ ಅವರ ನೇತೃತ್ವದಲ್ಲಿ ನಮ್ಮ ತಂಡ ಇನ್ನಷ್ಟು ಸದೃಢಗೊಳ್ಳಲಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ಹಾಕಿ ಇಂಡಿಯನ್ ಲೀಗ್ ಪಂದ್ಯಾವಳಿಯಲ್ಲಿ ತಮಿಳು ನಾಡು ತಂಡದ ತರಬೇತುದಾರರಾಗಿದ್ದ ಅವರು, ಬೆಲ್ಜಿಯಂ ತಂಡಕ್ಕೆ ತರಬೇತಿ ನೀಡಿದ್ದರು. ಅವರದ್ದೇ ನೇತೃತ್ವದಲ್ಲಿ ಅಲ್ಲಿನ ಅಂಡರ್-21 ತಂಡವು 2025ರ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿತು. 2001ರಿಂದ 2004ರವರೆಗೂ ಅವರು ಬೆಲ್ಜಿಯಂ ಮಹಿಳಾ ಹಾಕಿ ತಂಡದ ತರಬೇತುದಾರರ ತಂಡದಲ್ಲಿದ್ದರು. ಅಲ್ಲದೆ, ಆಸ್ಟ್ರೇಲಿಯಾ ಜೂನಿಯರ್ ತಂಡದ ಮುಖ್ಯ ಕೋಚ್ ಕೂಡ ಅವರು ಆಗಿದ್ದರು. ಕೋಚ್ ಆದ ಬಗ್ಗೆ ಮಾತನಾಡಿರುವ ಅವರು, ಇತ್ತೀಚಿಗೆ ನಾನು ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿಯಲ್ಲಿ ತಮಿಳುನಾಡು ತಂಡದ ಭಾಗವಾಗಿದ್ದೆ. ನಾನು ಭಾರತದಲ್ಲಿ ಕಾಲ ಕಳೆದಿದ್ದೇನೆ. ಅಲ್ಲಿನ ಹಾಕಿ ಉತ್ಸಾಹ ಮೆಚ್ಚುವಂಥದ್ದು. ಭಾರತದಲ್ಲಿ ಜನರು ಕೌಶಲ ಹೊಂದಿದ್ದಾರೆ. ತಂಡವನ್ನು ಸದೃಢಗೊಳಿಸಿ ಚಾಂಪಿಯನ್ ಆಗಿಸುವುದೇ ನನ್ನ ಉದ್ದೇಶ ಎಂದು ಹೇಳಿದ್ದಾರೆ.

ಹೈರಾಕ್ಸ್ ಸ್ಪರ್ಧೆಗೆ ಕೌರ್, ಸಿಂಧು



ಬೆಂಗಳೂರು: ಭಾರತದ ಅತಿ ದೊಡ್ಡ ಫಿಟ್ನೆಸ್ ರೇಸ್ ಆಗಿ ಹೊರಹೊಮ್ಮುತ್ತಿರುವ ಅಲ್ಟ್ರಾಹ್ಯೂಮನ್ ಹೈರಾಕ್ಸ್ ಬೆಂಗಳೂರು ಸ್ಪರ್ಧೆಗೆ ಈ ಬಾರಿ ತಾರೆಯರ ಕಳೆ ಸೇರ್ಪಡೆಯಾಗಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ. ವಿ. ಸಿಂಧು ಹಾಗೂ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸಿದ್ಧರಾಗಿದ್ದಾರೆ. ಶನಿವಾರ ಮತ್ತು ಭಾನುವಾರದಂದು ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಈ ಸ್ಪರ್ಧೆಯಲ್ಲಿ 8,200ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಇದು ಭಾರತದಲ್ಲಿ ಮೊದಲ ಎರಡು ದಿನಗಳ ಹೈರಾಕ್ಸ್ ಸ್ಪರ್ಧೆಯಾಗಿದ್ದು, ಮುಂಬೈ ಮತ್ತು ದೆಹಲಿಯ ಬಳಿಕ ಬೆಂಗಳೂರು ಮೂರನೇ ನಗರವಾಗಿ ಆತಿಥ್ಯ ವಹಿಸುತ್ತಿದೆ. ಹೈರಾಕ್ಸ್ ಸ್ಪರ್ಧೆಯ ವಿನ್ಯಾಸ ಜಾಗತಿಕ ಮಟ್ಟದಲ್ಲಿ ಒಂದೇ ರೀತಿಯಾಗಿದೆ. 8 ಬಾರಿ 1 ಕಿಮೀ ಓಟದ ಜೊತೆಗೆ 8 ವಿಧದ ಶಾರೀರಿಕ ವ್ಯಾಯಾಮಗಳನ್ನು ಒಳಗೊಂಡಿದೆ. ಸ್ಕೀ ಎರ್ಗ್, ಸ್ಲೆಡ್ ಪುಶ್, ಸ್ಲೆಡ್ ಪುಲ್, ಬರ್ಪಿ ಬ್ರಾಡ್ ಜಂಪ್ಸ್, ರೋಯಿಂಗ್, ಫಾರ್ಮರ್ಸ್ ಕ್ಯಾರಿ, ಸ್ಯಾಂಡ್‌ಬ್ಯಾಗ್ ಲಂಜಸ್ ಮತ್ತು ವಾಲ್ ಬಾಲ್ಸ್ ಮೊದಲಾದ ವ್ಯಾಯಾಮಗಳು ಸ್ಪರ್ಧಿಗಳ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಅಲ್ಟ್ರಾಹ್ಯೂಮನ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹಿತ್ ಕುಮಾರ್ ಮಾತನಾಡಿ, ದೇಹದ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳುವುದು ಉತ್ತಮ ಪ್ರದರ್ಶನದ ಮೂಲ. ನಿದ್ರೆ ಮತ್ತು ಪುನಶ್ಚೇತನದ ಮಾಹಿತಿಯನ್ನು ಉಪಯೋಗಿಸಿ ಜನರು ಆರೋಗ್ಯ ಸುಧಾರಿಸಬಹುದು ಎಂದು ಹೇಳಿದರು.

ಬಿಲ್ಲಿ ಜೀನ್ ಕಪ್: ಭಾರತಕ್ಕೆ ಸೋಲು

ಹೊಸದಿಲ್ಲಿ: ಇಂಡೋನೇಷ್ಯಾ ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಭಾರತ ಮಹಿಳೆಯರ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಪಂದ್ಯಾವಳಿ ಪ್ಲೇಆಫ್‌ಗೇರುವ ಅವಕಾಶ ಕಳೆದುಕೊಂಡಿದೆ. ದಿಲ್ಲಿಯಲ್ಲಿ ಶುಕ್ರವಾರದಂದು ನಡೆದ ಪಂದ್ಯದಲ್ಲಿ ಭಾರತ ಎದುರಾಳಿ ಇಂಡೋನೇಷ್ಯಾದೊಂದಿಗೆ ಸೋತಿತು. ಬುಧವಾರ ನಡೆದಿದ್ದ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆದ್ದಿದ್ದ ಭಾರತ ಪ್ಲೇಆಫ್‌ಗೇರುವ ಅವಕಾಶ ಉಳಿಸಿಕೊಂಡಿತು. ಆದರೆ ಶುಕ್ರವಾರ 3-0ರಿಂದ ಸೋತು ಹೊರನಡೆಯಿತು. ಆರಂಭಿಕ ಪಂದ್ಯದಲ್ಲಿ ಸಹಜಾ, ಜಾನಿಸ್ ವಿರುದ್ಧ 6-2, 6-1ರಿಂದ ಗೆದ್ದರು. ನಂತರ ವೈಷ್ಣವಿ, ಪ್ರೀಕ್ಷಾ ಅವರೊಂದಿಗೆ ಸೋತರು. ಮೂರನೇ ಪಂದ್ಯದಲ್ಲಿ ಜುನಿಲ್ ಮತ್ತು ಅಲ್ದಿಲ್ಲಾ ಅಂಕಿತಾ ಹಾಗೂ ರುತುಜಾ ಅವರನ್ನು ಸೋಲಿಸಿದೆ.

ಕುಸಿದ ಆರ್‌ಸಿಬಿಗೆ ನಾಯಕ ಆಸರೆ | ರಾಜಸ್ಥಾನಕ್ಕೆ ಸ್ಪರ್ಧಾತ್ಮಕ ಗುರಿ

ರಜತ್ ಪಾಟಿದಾರ್ ಆರ್ಭಟ

ಗುವಾಹಟಿ: ಒಂದು ಬದಿಯಲ್ಲಿ ವಿಕೆಟ್ ಬಿದ್ದರೂ ಮತ್ತೊಂದು ಬದಿಯಲ್ಲಿ ಗಟ್ಟಿಯಾಗಿ ನಿಂತುಕೊಂಡ ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್(63) ಆರ್‌ಸಿಬಿ ತಂಡವನ್ನು ಕುಸಿಯಲು ಬಿಡಲಿಲ್ಲ. ಅತ್ಯಂತ ಅವಶ್ಯ ಸಮಯದಲ್ಲಿ ತಮ್ಮ ಅರ್ಧ ಶತಕದೊಂದಿಗೆ ರಾಜಸ್ಥಾನಕ್ಕೆ ಸ್ಪರ್ಧಾತ್ಮಕ ಗುರಿ ಕೊಟ್ಟರು.

ರನ್ ಗಳಿಸಿದ್ದರೂ ವಿಕೆಟ್‌ಗಳನ್ನು ಬೇಗನೆ ಕಳೆದುಕೊಂಡ ಆರ್‌ಸಿಬಿ ತಂಡವನ್ನು ರಾಜಸ್ಥಾನ ಅಂದುಕೊಂಡ ಮೊತ್ತದಲ್ಲಿ ಕಟ್ಟಿಹಾಕಲಿಲ್ಲ. ಏಳು ಬೀಳುಗಳ ಮಧ್ಯೆ ಮತ್ತೊಮ್ಮೆ ಮಿಂಚಿದ ಆರ್‌ಸಿಬಿ ಕಟ್ಟಿಹಾಕಬಹುದಾದ ಗುರಿ ನಿರ್ಮಿಸಿದ ನಂತರ ಶುಕ್ರವಾರದ ಗೆದ್ದವರ ನಡುವಿನ ಪಂದ್ಯ ಮೊದಲ ಇನ್ನಿಂಗ್ಸ್ ಭಾರೀ ಪೈಪೋಟಿಗೆ ಸಾಕ್ಷಿಯಾಯಿತು. ಪಾಟಿದಾರ್ ಅವರ ನಾಯಕನಾಟದ ಬಲದೊಂದಿಗೆ 20 ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ರಾಯಲ್ ಬೆಂಗಳೂರು 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿದೆ.

ಕೊಹ್ಲಿ ಕಿಕ್-ಸ್ಟಾರ್ಟ್: ಮೊದಲು ಬ್ಯಾಟಿಂಗ್‌ಗಿಳಿದ ಬೆಂಗಳೂರು ಮೊದಲನೇ ಎಸೆತದಲ್ಲೇ ಫಿಲಿಪ್ ಸಾಲ್ಟ್ ಅವರ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂಕದಲ್ಲಿ ಬಂದ ದೇವದತ್ತ ಪಡಿಕ್ಕಲ್ ಎಂದಿನಂತೆ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಇತ್ತ ಕೊಹ್ಲಿ ಮೊದಲಿಗೆ ಎರಡು ಬಾರಿ ಜೀವದಾನ ಪಡೆದರು. ಮುಂದಿನ 10 ಬಾಲ್‌ಗಳಲ್ಲಿ 7 ಬೌಂಡರಿ ಬಾರಿಸಿದ ಅವರು, 32 ರನ್ ಗಳಿಸಿದರು. ಕ್ರಮೇಣ ಆರ್‌ಸಿಬಿ ದಂಡಿಸಲಾರಂಭಿಸಿತು. ತೀರಾ ಅಬ್ಬರಿಸುವ ಹೊತ್ತಲ್ಲಿ ಅನಿರೀಕ್ಷಿತವಾಗಿ ಬಂದ ರವಿ ಬಿಷ್ಣೋಯ್ ತಮ್ಮ ಕರಾರುವಾಕ್ ಗೂಗ್ಲಿಯೊಂದಿಗೆ ಕೊಹ್ಲಿ ವಿಕೆಟ್ ಪಡೆದರು. ಇದಕ್ಕೂ ಮುನ್ನವೇ ಪಡಿಕ್ಕಲ್ 14 ರನ್‌ಗೆ ವಿಕೆಟ್ ಒಪ್ಪಿಸಿದ್ದರು.

ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಕೃಣಾಲ್ ಪಾಂಡ್ಯ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಳ್ಳುವಷ್ಟರಲ್ಲಿ 1 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಆರ್‌ಆರ್ 62 ರನ್‌ಗಳಿಗೆ 4 ವಿಕೆಟ್ ಕಬಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಬಂದ ಜಿತೇಶ್ ಶರ್ಮ, 5 ರನ್‌ಗೆ ವಿಕೆಟ್ ಒಪ್ಪಿಸಿದರು. ಆರ್‌ಸಿಬಿ 80 ರನ್ ದಾಟುವ ಮೊದಲೇ 5 ವಿಕೆಟ್ ಕಳೆದುಕೊಂಡಿತು. ಕಳೆದ ಪಂದ್ಯದಲ್ಲಿ ವಿಸ್ಫೋಟಕ ಬ್ಯಾಟಿಂಗ್ ಮಾಡಿದ್ದ ಟೀಮ್ ಡೇವಿಡ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಪಾಟಿದಾರ್ ನಾನ್‌ಸ್ಟ್ರೈಕ್‌ನಲ್ಲಿ ನಿಂತವರೆ ನಿಂತರು ಇನ್ನುಳಿದ ಬ್ಯಾಟಿಗರು ವಿಕೆಟ್ ಒಪ್ಪಿಸುತ್ತಾ ಬಂದರು.



ಆರ್‌ಸಿಬಿ ಪಡೆಗೆ ಜೋಶ್

ಗೆಲುವಿನ ಹಾದಿಯಲ್ಲಿರುವ ಬೆಂಗಳೂರು ತಂಡಕ್ಕೆ ಆಸೀಸ್ ವೇಗಿ ಹ್ಯಾಜೆಲ್ವುಡ್ ಜೋಶ್ ತಂದರು. ಗಾಯದಿಂದ ಚೇತರಿಸಿಕೊಳ್ಳುತ್ತಿದ್ದ ಹ್ಯಾಜೆಲ್ವುಡ್ ಶನಿವಾರದಂದು ಮೈದಾನಕ್ಕಿಳಿದರು. ಕಳೆದ ಎರಡು ಪಂದ್ಯಗಳಲ್ಲಿ ಹೊರಗುಳಿದಿದ್ದ ಅವರು, ಸಂಪೂರ್ಣ ಚೇತರಿಸಿಕೊಂಡಿದ್ದರೂ ಫಿಟ್ನೆಸ್‌ನಿಂದಾಗಿ ಪ್ರಮಾಣಪತ್ರಕ್ಕಾಗಿ ಕಾಯುತ್ತಿದ್ದರು. ಹ್ಯಾಜೆಲ್ವುಡ್ ಆ್ಯಶಸ್ ಸಮಯದಲ್ಲೇ ಗಾಯದಿಂದಾಗಿ ಹೊರಗುಳಿದಿದ್ದರು. ಕಾರಣ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲೂ ಆಡಿರಲಿಲ್ಲ. ಹೈದರಾಬಾದ್ ವಿರುದ್ಧ ಆರ್‌ಸಿಬಿ ಆಡಿದ್ದಾಗಲೇ ತಂಡ ಸೇರಿಕೊಂಡರೂ ಕಳೆದ ಎರಡು ಪಂದ್ಯಗಳಲ್ಲಿ ಅವರು ಕಣಕ್ಕಿಳಿದಿರಲಿಲ್ಲ. ರಾಜಸ್ಥಾನ ವಿರುದ್ಧದ ಪಂದ್ಯಕ್ಕೆ ಅವರು ಜೋಕಬ್ ಡಫಿ ಬದಲಾಗಿ ಆಡಿದರು. ಇದರೊಂದಿಗೆ ಬಲಿಷ್ಠ ಪಡೆಗೆ ಅನುಭವದ ಬಲ ತಂದಿದ್ದಾರೆ.

ಅಯ್ಯರ್ ಕಣಕ್ಕೆ

ರೋಮಾರಿಯೊ ಶೇಫರ್ಡ್ ಕೆಲ ಹೊತ್ತು ತಮ್ಮ ಬ್ಯಾಟಿಂಗ್ ಮಾಡಿದರು. ಆದರೆ ಜಡೇಜಾ ತೋಡಿದ ಖೆಡ್ಡಾಗೆ ಕ್ಯಾಚ್ ಆದರು. ಅವರ ವಿಕೆಟ್ ಬಿದ್ದಂತೆ ಇದೇ ಮೊದಲ ಬಾರಿಗೆ ವೆಂಕಟೇಶ್ ಅಯ್ಯರ್ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದರು. ಒಂದಿಷ್ಟು ಸಮಯ ಪಿಚ್‌ಗೆ ಹೊಂದಿಕೊಳ್ಳುತ್ತಿದ್ದಂತೆ ಇತ್ತ ಸೆಟ್ ಆಗಿದ್ದ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಂದು ಹಂತದಲ್ಲಿ ನೂರಕ್ಕೂ ಕಡಿಮೆ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಅವರು, ಸ್ಲಾಗ್ ಓವರ್‌ಗಳಲ್ಲಿ 250 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡತೊಡಗಿದರು. ಇದರೊಂದಿಗೆ 40 ಬಾಲ್‌ಗಳಲ್ಲಿ 63 ರನ್ ಬಾರಿಸಿದರು. ಇದರಲ್ಲಿ 4 ಸಿಕ್ಸರ್ ಮತ್ತು ಬೌಂಡರಿಗಳಿವೆ. ಕೊನೆಯ ಓವರ್‌ಗಳಲ್ಲಿ ವೆಂಕಟೇಶ್ ಅಯ್ಯರ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು.

ಚೆನ್ನೈ-ದಿಲ್ಲಿ ಪೈಪೋಟಿ

ಚೆನ್ನೈ: ಗೆಲುವಿನ ಹಾದಿಯಲ್ಲಿರುವ ಪಂಜಾಬ್ ಕಿಂಗ್ಸ್ ಮತ್ತು ಎರಡು ಸೋಲುಗಳೊಂದಿಗೆ ಹಿನ್ನಡೆ ಅನುಭವಿಸಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಶನಿವಾರದ ಡಬಲ್ ಹೇಡರ್‌ನ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕೊನೆಯ ಕ್ಷಣದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಸೋತು ಗೆಲುವಿನ ಹಳಿ ತಪ್ಪಿಸಿಕೊಂಡಿರುವ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶನಿವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ವಿಕೆಂಡ್‌ನ ಸೂಪರ್ ಪಂದ್ಯಗಳು ಅಭಿಮಾನಿಗಳಿಗೆ ಮನರಂಜನಾ ರಸದೌತಣ ನೀಡುವುದಕ್ಕೆ ಸಿದ್ಧವಾಗಿವೆ.

ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಪಂಜಾಬ್ ಕಿಂಗ್ಸ್ ತಂಡವು ಕಳೆದ ಪಂದ್ಯದಲ್ಲಿ ಕೆಕೆಆರ್‌ನೊಂದಿಗೆ ಅಂಕ ಹಂಚಿಕೊಂಡಿದೆ. ಇತ್ತ ಹೈದರಾಬಾದ್ ಕಳೆದ ಪಂದ್ಯದಲ್ಲಿ ಸೋಲನುಭವಿಸಿದೆ. ಹೀಗಿರುವಾಗ ಮೊದಲನೇ ಪಂದ್ಯದಲ್ಲಿ ಭಾರೀ ಪೈಪೋಟಿ ನೋಡಲು ಸಿಗುವುದು ಖಚಿತ ಎನ್ನಬಹುದು. ಇನ್ನು ಎರಡನೇ ಪಂದ್ಯದಲ್ಲಿ ಆಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸೋಲಿನಿಂದ ಹೊರಬರುವ ಯೋಜನೆ ಹಾಕಿಕೊಂಡರೆ, ದಿಲ್ಲಿ ಮತ್ತೆ ಲಯಕ್ಕೆ ಬರಲು ಸಿದ್ಧವಾಗಿದೆ.

ಪಂಜಾಬ್-ಹೈದರಾಬಾದ್ ಪೈಪೋಟಿ: ಪಂಜಾಬ್ ಕಿಂಗ್ಸ್ ಮೆಗಾ ಹರಾಜಿನಲ್ಲಿ ತಂಡವನ್ನು ಬದಲಾಯಿಸಿಕೊಂಡು ಹೊಸ ರೂಪ ಪಡೆದಿಕೊಂಡಿದೆ. ಕಳೆದ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು. ಈ ಬಾರಿಯೂ ತನ್ನ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದೆ. ಬ್ಯಾಟಿಂಗ್ ಬಲ ಹೊಂದಿರುವ ತಂಡವು ಪ್ರಿಯಾಂಶ್, ಕೊನೊಲಿ, ಶ್ರೇಯಸ್ ಅಯ್ಯರ್ ಅವರಿಂದ ಬಲಗೊಂಡಿದೆ. ಅಲ್ಲದೆ ಶಶಾಂಕ್ ಸಿಂಗ್, ಸ್ಟೋನಿಸ್, ಪ್ರಭಸಿಮ್ರನ್ ಅಂಥವರೂ ತಂಡದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್, ವೈಶಾಖ್, ಯಾನ್ಸನ್ ಅಂಥವರು ಲಯದಲ್ಲಿದ್ದಾರೆ. ಮುಖ್ಯವಾಗಿ ಸ್ಪಿನ್ ವಿಭಾಗದಲ್ಲಿ ಚಾಹಲ್ ಕೂಡ ವಿಕೆಟ್ ಕಿತ್ತಿದ್ದಾರೆ. ಇನ್ನು ಕಿಶನ್ ನೇತೃತ್ವದಲ್ಲಿ ಆಡುತ್ತಿರುವ ಹೈದರಾಬಾದ್ ಕೂಡ ವಿಶ್ವಾಸದಲ್ಲಿ



ಪಂದ್ಯಗಳ ವಿವರ

ಹೈದರಾಬಾದ್-ಪಂಜಾಬ್, ಎಲ್ಲಿ: ಚಂಡೀಗಢ ಸಮಯ: ಮಧ್ಯಾಹ್ನ 3:30, ಚೆನ್ನೈ-ದಿಲ್ಲಿ, ಎಲ್ಲಿ: ಚೆನ್ನೈ, ಸಮಯ: ಸಂಜೆ 7:30, ಉಭಯ ಪಂದ್ಯಗಳು ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್‌ನಲ್ಲಿ ಪ್ರಸಾರವಾಗಲಿವೆ.

ಕಾಣಿಸಿಕೊಂಡಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ. ಹೆಡ್, ಅಭಿಷೇಕ್ ಲಯಕ್ಕೆ ಮರಳಿದ್ದಾರೆ. ಲಖನೌ ವಿರುದ್ಧದ ಪಂದ್ಯದಲ್ಲಿ ರನ್ ಮಾಡದಿದ್ದರೂ, ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಹೈದರಾಬಾದ್ ಹೊಂದಿದೆ. ಆದರೆ ಒಂದು ಕಡೆ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ.

ಚೆನ್ನೈ-ದಿಲ್ಲಿ ಹಣಾಹಣಿ: ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗುತ್ತಿರುವ ದಿಲ್ಲಿ ಹಾಗೂ ಚೆನ್ನೈ ಎರಡೂ ಪಂದ್ಯಗಳು ಲಯ ಕಳೆದುಕೊಂಡಿವೆ. ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರೂ ಕಳೆದ ಪಂದ್ಯದಲ್ಲಿ ಸೋತಿತ್ತು ದಿಲ್ಲಿ. ಚೆನ್ನೈ ಆಡಿರುವ ಮೂರೂ ಪಂದ್ಯಗಳಲ್ಲಿ ಸೋತಿದೆ. ಮುಖ್ಯವಾಗಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಸಮತೋಲಿತ ತಂಡ ದಿಲ್ಲಿ ಹೊಂದಿದ್ದರೆ ಚೆನ್ನೈನಲ್ಲಿ ಅನುಭವದ ಕೊರತೆ ಕಾಣಿಸಿಕೊಳ್ಳುತ್ತಿದೆ. ಇತ್ತ ದಿಲ್ಲಿ ಕಡೆ ಉತ್ತಮ ಬೌಲಿಂಗ್ ಪಡೆಯಿದ್ದರೂ ಬ್ಯಾಟಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ. ರಾಹುಲ್ ಲಯಕ್ಕೆ ಬಂದಿರುವುದು ಬಲ ತಂದರೂ ಮಧ್ಯಮ ಕ್ರಮಾಂಕದಲ್ಲಿ ಹಿನ್ನಡೆ ಅನುಭವಿಸುತ್ತಿದೆ.

ಸೆಮಿಫೈನಲ್‌ಗೆ ಆಯುಷ್ ಶೆಟ್ಟಿ

ಹೊಸದಿಲ್ಲಿ: ಕನ್ನಡಿಗರಾದ ಆಯುಷ್ ಶೆಟ್ಟಿ ಅವರ ಬಲಿಷ್ಠ ಆಟ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಮುಂದುವರಿದಿದೆ. ನಾಕೌಟ್ ಪಂದ್ಯಗಳಲ್ಲಿ ಅಚ್ಚಳಿಯದ ಪ್ರದರ್ಶನ ನೀಡುತ್ತಿರುವ ಅವರು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಜೋನಾಥನ್ ಕ್ರಿಸ್ಟಿ ಅವರನ್ನು ಸೋಲಿಸಿ ಸೆಮಿಫೈಲ್‌ಗೇರಿದರು.

ವಿಶ್ವ ಬ್ಯಾಡ್ಮಿಂಟನ್ ಆಟಗಾರರಲ್ಲಿ ನಾಲ್ಕನೇ ಸ್ಥಾನ ಹೊಂದಿರುವ ಜೋನಾಥನ್ ಎದುರು ಮಾಜಿ ಜೂನಿಯರ್ ಚಾಂಪಿಯನ್‌ಶಿಪ್ ಪಂದ್ಯಾವಳಿಯ ವಿನ್ನರ್ ಆಯುಷ್ ಮೊದಲಿನಿಂದಲೂ ಆಕ್ರಮಣಕಾರಿ ಆಟ ಆಡಿದರು. ಮೊದಲನೇ ಸೆಟ್‌ನಲ್ಲಿ ಉಭಯ ಆಟಗಾರರು ಪೈಪೋಟಿ ನಡೆಸಿದರು. ಆರಂಭದಲ್ಲಿ ಜೋನಾಥನ್ ಮುನ್ನಡೆ ಸಾಧಿಸಿದರೂ ಆಯುಷ್ ಸ್ಥೈರ್ಯದೊಂದಿಗೆ ಎದುರಿಸಿದರು. ತಮ್ಮ ಆಕ್ರಮಣಕಾರಿ ಮನಸ್ಥಿತಿಯೊಂದಿಗೆ ಚಾಣಾಕ್ಷ್ಯ ಆಟ ಜೋಡಿಸಿ ಎದುರಾಳಿ ಮೇಲೆ ಭಾರೀ ಒತ್ತಡ ಹೇರಿದರು. ಮಧ್ಯಮ ಪಂದ್ಯದಲ್ಲಿ ಸ್ಕೋರ್ ಸಮಗೊಂಡವು. ಮತ್ತೆ ಜೋನಾಥನ್ ಮುನ್ನಡೆ ಸಾಧಿಸಿದರು. ಆದರೆ ಇದೆಲ್ಲದಕ್ಕೂ ತಕ್ಕ ಉತ್ತರ ನೀಡಿದ ಆಯುಷ್ ಸ್ಕೋರ್ ಅನ್ನು ಸಮಗೊಳಿಸಿದರು. ಗೇಮ್ ಪಾಯಿಂಟ್‌ಗಳಿಗಾಗಿ ಉಭಯ ಆಟಗಾರರು ಹೋರಾಡಬೇಕಾಯಿತು.

ಗೇಮ್ ಪಾಯಿಂಟ್‌ನಲ್ಲಿ ಆಯುಷ್ ಮುನ್ನಡೆ ಸಾಧಿಸಿದರೂ ಗೆಲ್ಲಲು ಬಿಡಲಿಲ್ಲ ಜೋನಾಥನ್. ಆದರೆ ಈ ಹಂತದಲ್ಲಿ ಮತ್ತೊಮ್ಮೆ ಆಕ್ರಮಣಕಾರಿ ಪ್ರದರ್ಶನ ನೀಡಿದ ಆಯುಷ್ ಸೆಟ್ ಅನ್ನು 23-21ರಿಂದ ಗೆದ್ದರು. ಎರಡನೇ ಸೆಟ್ ಈಗ ನಿರ್ಣಾಯಕ. ಅಲ್ಲಿಯೂ ಆಯುಷ್ ಮುನ್ನಡೆ ಸಾಧಿಸಿದರು. ಆದರೆ ತ್ವರಿತ ಕಂಬ್ಯಾಕ್ ಮಾಡಿದ ಎದುರಾಳಿ ಜೋನಾಥನ್ ಪಂದ್ಯವನ್ನು ರೋಚಕ ಹಂತಕ್ಕೆ ಕೊಂಡೊಯ್ದರು.



» ನಾಲ್ಕನೇ ಶ್ರೇಯಾಂಕಿತ ಜೋನಾಥನ್ ಸೋಲಿಸಿದ ಕನ್ನಡಿಗ

» ರೋಚಕ ಪಂದ್ಯದಲ್ಲಿ ನೇರ ಸೆಟ್ ಗೆಲುವು

ಆದಾಗ್ಯೂ ಎದುರಾಳಿಗೆ ಮುನ್ನಡೆ ಬಿಟ್ಟುಕೊಡದೆ 21-17ರಿಂದ ಗೆಲುವು ಸಾಧಿಸಿದ ಆಯುಷ್ ಸೆಮಿಫೈನಲ್‌ಗೇರಿದರು.

ದಿನದ ಮತ್ತಷ್ಟು ಪಂದ್ಯಗಳಲ್ಲಿ ಚೀನಾದ ವೆಂಗ್ ವಿರುದ್ಧ ವಿಟಿದಾಸ್ರಾನ್ ಗೆಲುವು ಸಾಧಿಸಿದರು. ಕೋರಿಯಾದ ನರಾವೂಕಾ ವಿರುದ್ಧದ ಪಂದ್ಯದಲ್ಲಿ ಶಿ ಗೆಲುವು ಸಾಧಿಸಿದರು. ಲೋಹ್ ವಿರುದ್ಧ ಚೌ ಗೆಲುವು ಸಾಧಿಸಿದರು. ಸೆಮಿಫೈನಲ್ ಪಂದ್ಯಗಳು ಶನಿವಾರ ನಡೆಯಲಿವೆ. ಅಲ್ಲಿ ಅವರು ಕುನ್ಲಾವಟ್ ವಿಟಿಸ್ರಾನ್ ಅವರನ್ನು ಎದುರಿಸಲಿದ್ದಾರೆ. ಇನ್ನುಳಿದಂತೆ ಯಾವುದೇ ವಿಭಾಗದಲ್ಲೂ ಭಾರತೀಯರು ಭಾಗವಹಿಸುತ್ತಿಲ್ಲ. ಏಕೆಂದರೆ ಸಿಂಧು-ಹೂಡಾ ಹೊರಬಿದ್ದ ನಂತರ ಮಹಿಳಾ ವಿಭಾಗದಲ್ಲಿ ಅಭಿಯಾನ ಅಂತ್ಯಗೊಂಡರೆ, ಉಳಿದ ವಿಭಾಗಗಳಲ್ಲಿ ಭಾರತೀಯರು ಪರಾಭವಗೊಂಡಿದ್ದಾರೆ.

ಬೆಂಗಳೂರಿಗೆ ಕೇರಳ ಬ್ಲಾಸ್ಟರ್ಸ್ ಸವಾಲು!

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡವು ಕೇರಳ ಬ್ಲಾಸ್ಟರ್ಸ್ ವಿರುದ್ಧದ ಮಹತ್ವದ ಹಣಾಹಣಿಗೆ ಸಜ್ಜಾಗುತ್ತಿದ್ದು, ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರದಂದು ಪಂದ್ಯ ನಡೆಯಲಿದೆ.

ಈ ಪಂದ್ಯಕ್ಕೆ ಇನ್ನಷ್ಟು ಉತ್ಸಾಹ ತುಂಬುತ್ತಿರುವುದು ಆಶ್ಲೇ ವೆಸ್ಟ್‌ವುಡ್ ಅವರ ಮರಳುವಿಕೆ. ಬೆಂಗಳೂರು ತಂಡದ ಆರಂಭಿಕ ಯಶಸ್ಸಿನ ರೂವಾರಿ ಹಾಗೂ ಎರಡು ಐ-ಲೀಗ್ ಪ್ರಶಸ್ತಿಗಳ ಹರಿಕಾರನಾಗಿದ್ದ ಅವರು, ಈಗ ಪ್ರತಿಸ್ಪರ್ಧಿ ತಂಡದ ಮುಖ್ಯ ತರಬೇತುದಾರನಾಗಿ ಮರಳುತ್ತಿದ್ದಾರೆ. ಹಾಂಗ್ ಕಾಂಗ್ ಮತ್ತು ಅಫ್ಘಾನಿಸ್ತಾನ ತಂಡಗಳೊಂದಿಗೆ ಅಂತಾರಾಷ್ಟ್ರೀಯ ಅನುಭವ ಪಡೆದಿರುವ ವೆಸ್ಟ್‌ವುಡ್, ಈಗ ಅಂಕಪಟ್ಟಿಯಲ್ಲಿ 13ನೇ ಸ್ಥಾನದಲ್ಲಿರುವ ಕೇರಳ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಇನ್ನೊಂದೆಡೆ, ಗೋವಾ ವಿರುದ್ಧ 2-0 ಅಂತರದ ಭರ್ಜರಿ ಜಯ ಸಾಧಿಸಿರುವ ಪೆಪ್ ಮುನಿಯೊಜ್ ನೇತೃತ್ವದ ಬೆಂಗಳೂರು ತಂಡ, ತನ್ನ ತವರು ಮೈದಾನದ ಪ್ರಾಬಲ್ಯವನ್ನು ಮುಂದುವರಿಸುವ ವಿಶ್ವಾಸದಲ್ಲಿದೆ. ಕಂಠೀರವ ಕ್ರೀಡಾಂಗಣದಲ್ಲಿ ಕೇರಳ ಬ್ಲಾಸ್ಟರ್ಸ್ ವಿರುದ್ಧ ಆಡಿದ 9 ಐಎಸ್‌ಎಲ್ ಪಂದ್ಯಗಳಲ್ಲಿ ಬೆಂಗಳೂರು ಎಫ್‌ಸಿ ಈಗಾಗಲೇ 7 ಗೆಲುವುಗಳನ್ನು ದಾಖಲಿಸಿ ಐತಿಹಾಸಿಕ ಮೇಲುಗೈ ಹೊಂದಿದೆ. ಪಂದ್ಯಕ್ಕೂ ಮುನ್ನ ಕ್ಲಬ್‌ನ ದಂತಕಥೆ ಸುನಿಲ್ ಛೆತ್ರಿ ಮಾತನಾಡಿ, ಡರ್ಬಿ ಪಂದ್ಯಗಳಲ್ಲಿ ಅಂಕಪಟ್ಟಿಯ ಸ್ಥಾನಕ್ಕೆ ಮಹತ್ವವಿಲ್ಲ. ಕೇರಳ ತಂಡವು ಯಾವಾಗಲೂ ಹೋರಾಟದ ಮನೋಭಾವದೊಂದಿಗೇ ಕಣಕ್ಕಿಳಿಯುತ್ತದೆ. ನಾವು ಪಂದ್ಯದ ಆರಂಭದಿಂದಲೇ ಚುರುಕಾಗಿರಬೇಕು.ಪೂರ್ಣ 90 ನಿಮಿಷಗಳ ಕಾಲ ಏಕಾಗ್ರತೆಯನ್ನು ಕಾಯ್ದುಕೊಳ್ಳಬೇಕು. ನಮ್ಮ ಆಟದ ಮೇಲೆ ಮಾತ್ರ ಗಮನ ಹರಿಸಬೇಕು, ಎಂದು ಹೇಳಿದರು.

ಲಖನೌಗೆ ಎರಡನೇ ಗೆಲುವು, ಕೋಲ್ಕತ್ತಾಗೆ ಮೂರನೇ ಸೋಲು

ಕೆಕೆಆರ್‌ನಿಂದ ಗೆಲುವು ಕಸಿದ ಮುಕುಲ್

ಕೋಲ್ಕತ್ತಾ: ಕೋಲ್ಕತ್ತಾ ನೈಟ್ ರೈಡರ್ಸ್ ಬಾಯಿಯಿಂದ ಗೆಲುವು ಕಸಿದ 21 ವರ್ಷದ ಯುವಕ ಮುಕುಲ್ ಚೌದರಿ ನಿಬ್ಬೆರಗಾಗಿರುವ ಬ್ಯಾಟಿಂಗ್‌ನೊಂದಿಗೆ ಲಖನೌ ಸೂಪರ್ ಜೇಂಟ್ಸ್‌ಗೆ ಎರಡನೇ ಜಯ ತಂದರು.

ಕೋಚ್ ಜಸ್ಟಿನ್ ಲ್ಯಾಂಗರ್, ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಹೇಳಿಕೆಯನ್ನು ಅವಲೋಕಿಸುವಂತೆ ಮಾಡಿದ ಮಧ್ಯಮ ಕ್ರಮಾಂಕದ ಬ್ಯಾಟರ್ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ನೆನಪಿಡಲೇಬೇಕಾದ ಇನ್ನಿಂಗ್ಸ್ ಆಡಿಬಿಟ್ಟರು. ಕೆಕೆಆರ್ ನೀಡಿದ್ದ 182 ರನ್ ಗುರಿ ಬೆನ್ನತ್ತುವಾಗ ಲಖನೌ ಬೇಗನೆ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿಕೊಂಡಿತ್ತು, ಬದೋನಿ ಆಸರೆಯಾದರು. ಆದರೆ ಅವರೂ 54 ರನ್ ಗಳಿಸಿ ವಿಕೆಟ್ ಕೊಟ್ಟ ನಂತರ ಲಖನೌ ತೀರಾ ಹಿನ್ನಡೆಯಲ್ಲಿತ್ತು. ಆದರೆ ಮುಕುಲ್ ಚೌದರಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ಲಖನೌ 3 ವಿಕೆಟ್‌ಗಳ ಗೆಲುವು ಸಾಧಿಸಿದೆ. ಪಂದ್ಯದ ರೂವಾರಿ ಮುಕುಲ್ ಶ್ರೇಷ್ಠ ಆಟಗಾರ ಅನ್ನಿಸಿಕೊಂಡರು. ಬೆಸ್ಟ್ ಬೌಲರ್ ಪಟ್ಟ ಅಂಕುಲ್ 2 ವಿಕೆಟ್ ಪಡೆದರೂ ಅದು ಲಖನೌನ ದಿಗ್ವೇಶ್ ರಾಥಿ ಅವರ ಎಕನಾಮಿಗೆ ಹೋಯಿತು. ಈ ಗೆಲುವಿನೊಂದಿಗೆ ಲಖನೌ ಎರಡನೇ ಗೆಲುವು ಸಾಧಿಸಿದರೆ ಕೆಕೆಆರ್ ಮೂರನೇ ಸೋಲನುಭವಿಸಿದೆ.

ಸಂಕ್ಷಿಪ್ತ ಸ್ಕೋರ್

ಕೆಕೆಆರ್: 20 ಓವರ್‌ಗಳಲ್ಲಿ 181/4; ರಘುವಂಶಿ 45, ರಹಾನೆ 41; ದಿಗ್ವೇಶ್ 25/1
ಲಖನೌ: 20 ಓವರ್‌ಗಳಲ್ಲಿ 182/7; ಮುಕುಲ್ 54★, ಆಯುಷ್ 54; ಅಂಕುಲ್ 32/2



ಪಂದ್ಯದ ದಿಕ್ಕನ್ನೇ ಬದಲಾಯಿಸಿದ ಮುಕುಲ್

ಲಖನೌ ತಂಡದ ಪ್ರಮುಖ ಬ್ಯಾಟರ್‌ಗಳು 104 ರನ್ ಆಗುವಷ್ಟರಲ್ಲಿ ಕಳೆದುಕೊಂಡಿದ್ದರು. ಸುನಿಲ್ ನರೈನ್ ತಮ್ಮ ಮಾರಕ ದಾಳಿಯಿಂದಾಗಿ ಪಂದ್ಯದ ದಿಕ್ಕು ದಸೆ ಬದಲಾಯಿಸಿದ್ದರು. ವೈಭವ್ ಆರೋರಾ ಕರಾರುವಾಕ್ ದಾಳಿಯೊಂದಿಗೆ ಮಿಂಚಿದ್ದರು. ಇತ್ತ ಲಖನೌ ಪಡೆಯಲ್ಲಿ ಹೋರಾಟ ಮಾಡುತ್ತಿದ್ದ ಆಯುಷ್ ಬದೋನಿ ಕೂಡ ಔಟಾದರು. ಅಲ್ಲಿಂದ ಕೆಕೆಆರ್‌ನ ಗೆಲುವಿನ ಶೇ. 85ಕ್ಕೇರಿತ್ತು. ಲಖನೌ ಗೆಲುವಿನಾಸೆ ಕೈಚೆಲ್ಲುವ ಹಂತಕ್ಕೇರಿತು. ಮೊದಲಿಗೆ ಭಾರೀ ಪರದಾಟ ನಡೆಸಿದ್ದ ಮುಕುಲ್ 8 ಬಾಲ್‌ನಲ್ಲಿ ಗಳಿಸಿದ್ದು 2 ರನ್. ಒಂದೊಂದು ರನ್‌ಗೂ ಪರದಾಡುತ್ತಿದ್ದ ಮುಕುಲ್ ಪಂದ್ಯವನ್ನೇ ಗೆಲ್ಲಿಸುತ್ತಾರೆ ಎಂಬ ಊಹೆ ಇರಲೇ ಇಲ್ಲ. ಕೊನೆಯ 3 ಓವರ್‌ಗಳಲ್ಲಿ ಲಖನೌಗೆ 43 ರನ್ ಬೇಕಿದ್ದವು. ಅಲ್ಲಿಂದ ಸಿಕ್ಸರ್‌ಗಳನ್ನು ಬಾರಿಸಿದ ಮುಕುಲ್ ಭರವಸೆಯ ಬೆಳಕಾದರು. ಮುಂದಿನ ಕೆಲವು ಬಾಲ್‌ಗಳು ಡಾಟ್ ಆದಂತೆ ಲಖನೌಗೆ ಬೇಕಾಗಿದ್ದದ್ದು 10 ಬಾಲ್‌ಗಳಲ್ಲಿ 30 ರನ್. 19ನೇ ಓವರ್ ಮಾಡಲು ಬಂದ ಗ್ರೀನ್ 16 ರನ್ ಬಿಟ್ಟುಕೊಟ್ಟರು. ಅದರಲ್ಲಿ ಒಂದು ಹೇಲಿಕಾಪ್ಟರ್ ಹಾಗೂ ಒಂದು ಸ್ಫೋಟಕ ಸಿಕ್ಸರ್ ಸೇರಿದೆ. ಕೊನೆಯ ಓವರ್‌ನಲ್ಲಿ ಬೇಕಾಗಿರುವುದು 14 ರನ್. ಮುಖ್ಯವಾಗಿ ವೇಗಿ ಆವೇಶ್ ಖಾನ್ ಸ್ಟ್ರೈಕ್‌ಗೆ ಬಂದರು. ಮೊದಲನೇ ಬಾಲ್ ಸಿಂಗಲ್ ತೆಗೆದಂತೆ ಇತ್ತ ಎರಡನೇ ಬಾಲ್‌ನಲ್ಲಿ ಮತ್ತೊಂದು ಸಿಕ್ಸರ್ ಬಾರಿಸಿದ ಮುಕುಲ್ ಪಂದ್ಯದ ಗೆಲುವಿನ ರೇಖೆ ಎಳೆದರು. ಮೂರು ಮತ್ತು ನಾಲ್ಕನೇ ಬಾಲ್ ಡಾಟ್ ಆದರೂ, ಐದನೇ ಬಾಲ್ ಮತ್ತೊಂದು ಸಿಕ್ಸರ್ ಬಾರಿಸಿದ ಅವರು ಒಂದು ಬಾಲ್ ಒಂದು ರನ್‌ಗೆ ತಂದಿಟ್ಟರು. ಕೊನೆಯ ಬಾಲ್ ಕೂಡ ಡಾಟ್ ಆಯಿತು. ಆದರೆ ರನ್ ಕದ್ದ ಲಖನೌ ಪಂದ್ಯ ಗೆದ್ದುಕೊಂಡಿತು. ಮುಕುಲ್ ಸಾಹಸದಲ್ಲಿ 54 ರನ್ ಸೇರಿವೆ. 7 ಬಾನೆತ್ತರದ ಸಿಕ್ಸರ್‌ಗಳು ಸೇರಿವೆ.

ಆರ್ಚರಿ: ಭಾರತಕ್ಕೆ ಕಂಚಿನ ನಿರೀಕ್ಷೆ

ಹೊಸದಿಲ್ಲಿ: ಮ್ಯಾಕ್ಸಿಕೋದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನ ಮೊದಲನೇ ಹಂತದ ಕೂಟದಲ್ಲಿ ಪ್ರಗತಿ ಮತ್ತು ಓಜಸ್ ಇರುವ ಕಾಂಪೌಂಡ್ ತಂಡವು ಉತ್ತಮ ಪ್ರದರ್ಶನದೊಂದಿಗೆ ಮಿಂಚಿದ್ದು, ಕಂಚಿನ ಸ್ಪರ್ಧೆಗೆ ಅರ್ಹತೆ ಪಡೆದುಕೊಂಡರು.

ಮೊದಲನೇ ಸುತ್ತಿನ ಪಂದ್ಯದಲ್ಲಿ ಬೈ ಪಡೆದ ಅವರು, ಎರಡನೇ ಹಂತದಲ್ಲಿ ತೈವಾನ್‌ನೊಂದಿಗೆ ಉತ್ತಮ ಪ್ರದರ್ಶನ ನೀಡಿ 155-151ರಿಂದ ಗೆದ್ದಿತು. ಮೂರನೇ ಸುತ್ತಿನಲ್ಲಿ ಟರ್ಕಿ ತಂಡವನ್ನ 154-152ರಿಂದ ಸೋಲಿಸಿ ಸೆಮಿಫೈನಲ್‌ಗೇರಿತು. ಇಬ್ಬರ ಪ್ರದರ್ಶನ ಚಿನ್ನದ ಪದಕದ ನಿರೀಕ್ಷೆ ಮೂಡಿಸುತ್ತಿದ್ದಂತೆ ಡೆನ್ಮಾರ್ಕ್ ಜೋಡಿ ಎದುರು ಸೆಮಿನಲ್ಲಿ ಸೋತಿತು. ಆದರೆ ಕಂಚಿನ ಪದಕ ಗೆಲ್ಲುವ ಅವಕಾಶವನ್ನು ಹೊಂದಿದ್ದು ಅದರಲ್ಲಿ ಅಮೆರಿಕ ತಂಡವನ್ನು ಎದುರಿಸಲಿದೆ. ಇತ್ತ ರಿಕರ್ವ್ ವಿಭಾಹದಲ್ಲಿ ಧೀರಜ್ ಮತ್ತು ಯಶದೀಪ್ ಜೋಡಿ ಸ್ಪೇನ್ ವಿರುದ್ಧ ಸೋತರೆ, ಕುಂಕುಮ್ ಹಾಗೂ ದೀಪಿಕಾ ಕುಮಾರಿ ಗ್ರೇಟ್ ಬ್ರಿಟನ್ ವಿರುದ್ಧ ಗೆದ್ದರೂ ಎರಡನೇ ಸುತ್ತಿನ ಪಂದ್ಯದಲ್ಲಿ ಟರ್ಕಿ ವಿರುದ್ಧ 4-5 ರಿಂದ ಸೋತಿತು. ಮಿಶ್ರ ತಂಡ ಕೂಡ ಬ್ರೆಜಿಲ್ ವಿರುದ್ಧ ಸೋತಿದೆ.

ಏಷ್ಯನ್ ಬಾಕ್ಸಿಂಗ್: ವಿಶ್ವನಾಥ್ ಸುರೇಶ್‌ಗೆ ಚಿನ್ನ

ಹೊಸದಿಲ್ಲಿ: ಪುರುಷರ 50 ಕೆಜಿ ವಿಭಾಗದಲ್ಲಿ ವಿಶ್ವನಾಥ್ ಸುರೇಶ್ ಜಪಾನ್‌ನ ಡೈಚಿ ಇವೈ ವಿರುದ್ಧ 5-0 ಅಂತರದಲ್ಲಿ ಭರ್ಜರಿ ಜಯ ಸಾಧಿಸಿ ಚಿನ್ನದ ಪದಕ ಗೆದ್ದಿದ್ದು, ಮಂಗೋಲಿಯಾದ ಉಲಾನ್‌ಬಾತರ್‌ನಲ್ಲಿ ನಡೆದ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತನ್ನ ಅಭಿಯಾನವನ್ನು 16 ಪದಕಗಳೊಂದಿಗೆ ಸಮಾಪ್ತಿಗೊಳಿಸಿದೆ.

ಭಾರತಕ್ಕೆ ಒಟ್ಟು 16 ಪದಕ

ಈ ಆವೃತ್ತಿಯಲ್ಲಿ ವಿಶ್ವನಾಥ್ ಚಿನ್ನ ಗೆದ್ದ ಏಕೈಕ ಭಾರತೀಯ ಪುರುಷ ಬಾಕ್ಸರ್ ಆಗಿ ಅವರು ಹೊರಹೊಮ್ಮಿದರು. ಪುರುಷರ 60 ಕೆಜಿ ವಿಭಾಗದ ಫೈನಲ್‌ನಲ್ಲಿ ಸಚಿನ್ ಸಿವಾಚ್ ಕಜಕಸ್ತಾನದ ವಿಶ್ವ ಚಾಂಪಿಯನ್ ಒರಾಜ್ಬೇಕ್ ಅಸ್ಸಿಲ್ಕುಲೊವ್ ವಿರುದ್ಧ 2-3 ಅಂತರದಲ್ಲಿ ಸೋಲು ಕಂಡರು.

ನಾಲ್ವರಿಗೆ ಕಂಚಿನ ಪದಕ: ಇನ್ನೂ ನಾಲ್ವರು ಭಾರತೀಯ ಪುರುಷರು ಹರ್ಷ್ ಚೌಧರಿ (90 ಕೆಜಿ), ಆಕಾಶ್ (75 ಕೆಜಿ), ಲೋಕೇಶ್ (85 ಕೆಜಿ) ಮತ್ತು ನರೇಂದ್ರ (+90 ಕೆಜಿ) ಕಂಚಿನ ಪದಕಗಳಿಗೆ ತೃಪ್ತಿಪಟ್ಟರು. ಮಹಿಳೆಯರ ವಿಭಾಗದಲ್ಲಿ ಎಲ್ಲಾ 10 ಭಾರತೀಯ ಬಾಕ್ಸರ್‌ಗಳು ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಮೀನಾಕ್ಷಿ ಹೂಡಾ (48 ಕೆಜಿ), ಪ್ರೀತಿ ಪವಾರ್ (54 ಕೆಜಿ), ಪ್ರಿಯಾ ಘಂಘಾಸ್ (60 ಕೆಜಿ) ಮತ್ತು ಅರುಂಧತಿ ಚೌಧರಿ (70 ಕೆಜಿ) ಚಿನ್ನದ ಪದಕ ಗೆದ್ದರು. ಜೈಸ್ಮಿನ್ ಲಾಂಬೋರಿಯಾ (57 ಕೆಜಿ) ಮತ್ತು ಅಲ್ಫಿಯಾ ಪಠಾಣ್ (+80 ಕೆಜಿ) ಬೆಳ್ಳಿ ಪದಕ ಪಡೆದುಕೊಂಡರು.

ಕಂಚಿನ ಪದಕ ವಿಜೇತರಾಗಿ ನಿಖತ್ ಜರೀನ್ (51 ಕೆಜಿ), ಅಂಕುಶಿತಾ ಬೊರೋ (65 ಕೆಜಿ), ಲವ್ಲಿನಾ ಬೊರ್ಗೊಹೈನ್ (75 ಕೆಜಿ) ಮತ್ತು ಪೂಜಾ ರಾಣಿ (80 ಕೆಜಿ) ತಮ್ಮ ತಮ್ಮ ವಿಭಾಗಗಳಲ್ಲಿ ಮಿಂಚಿದರು.



ಪದಬಂಧ 5950

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

3.ಶ್ರೇಷ್ಠವಾದ ನೆಲೆಯಾದ ಸ್ವರ್ಗ ಪತಿಯ ನಡುವೆ ಇದೆ (5)
5.ಆಹಾರ ಕೆಡದಂತೆ ಸಂರಕ್ಷಿಸುವ ಉಪಕರಣ (5)
6.ಬೆಳದಿಂಗಳನ್ನುಂಡು ಬದುಕುವ ಪಕ್ಷಿ (4)
7.ರಾಜೀವನಿಗಿರುವ ಪ್ರಾಣ (2)
8.ಸೋಮಾರಿ ಗುಣವಿಲ್ಲಿ ತಿರುಗಿದೆ (4)
10.ನಗುವಿನ ನಡುವೆ ಕನಸು ಸಾಕಾರಗೊಂಡಿದೆ (4)
12.ಆಭರಣವಾಗಿ ಬಳಸುವ ಕಲ್ಲು (2)
13.ರಾಮಸೀತೆಯರು ವನವಾಸದಲ್ಲಿ ಧರಿಸಿದ ಬಟ್ಟೆ (4)
15.ಹಿಂದೂಗಳ ಪ್ರಸಿದ್ಧ ಧಾರ್ಮಿಕ ಗ್ರಂಥ (5)
16.ವಿಷವನ್ನು ಧರಿಸಿದ ಕೊರಳುಳ್ಳವನು-ಶಿವ (5)

ಮೇಲಿನಿಂದ ಕೆಳಕ್ಕೆ

1.ಪ್ರಭಾವ ಬಳಸಿಕೊಂಡು ವಿಷಯ ಸಾಧಿಸುವುದು (3)
2.ಶಿವ-ಪತಿ ಸೇರಿ ಜೋಳವಾದರು (5)
3.ಸಮಾಚಾರ ಬರೆದು ಕಳಿಸುವ ಕಾಗದ (2)
4.ಭಿಕ್ಷುಕ-ಯಾಚಕನೀತ (3)
6.ಅಶ್ವಿನಿ ದೇವತೆಗಳಿಂದ ಯೌವನ ಮರಳಿ ಪಡೆದ ಋಷಿ (3)
9.ಧಾನ್ಯ ಸ್ವಚ್ಛಗೊಳಿಸುವ ಸಾಧನ (3)
11.ಅಸ್ಥಿರ ಚಿತ್ತವಿಲ್ಲಿ ತಲೆಕೆಳಗಾಗಿದೆ (5)
13.ಸ್ವರ್ಗದಲ್ಲಿರುವವನು-ದೇವತೆ (3)
14.ಕಟ್ಟು ಮೊದಲಿರುವ ವಿರಾಗಿ (3)
15.ಪ್ರಾಪಂಚಿಕ ವ್ಯವಹಾರ-ಅಸ್ತಿತ್ವ (2)

5949 ಉತ್ತರ

ಎಡದಿಂದ ಬಲಕ್ಕೆ:
1.ಪತ್ತೇದಾರ 5.ಆಧಾರ
6.ಮಂದಿರ 8.ಸನಾದಿ
9.ಜಹಜು 10.ಪ್ರತಾಪ
14.ವಜೀರ 16.ಪದಕ
17.ಸುಗತಿ 18.ಪರಿಪಾಕ

ಮೇಲಿನಿಂದ ಕೆಳಕ್ಕೆ :
2.ದಾವರ 3.ವಿರಸ
4.ದೈನಂದಿನ 5.ಆಸ್ಪತ್ರೆ
7.ದಿವಿಜ 11.ಪರದ
12.ಶಿವಗಣ 13.ವದಂತಿ
15.ಅಸುರ 16.ಪರಾರಿ

ಕಿರುಸುದ್ದಿ

ಇಂದಿನಿಂದ ವಾಹನ ಸಂಚಾರ ಸಂಪೂರ್ಣ ನಿಷೇಧ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ 66ರ ನಿರ್ಮಾಣ ಕಾರ್ಯದ ಭಾಗವಾಗಿ ತೆಕ್ಕಿಲ್ ಮತ್ತು ಬೇವಿಂಜೆ ವಿಭಾಗಗಳಲ್ಲಿ ಗುಡ್ಡೆ ಅಗೆತ ಕಾರ್ಯ ನಡೆಯಲಿರುವುದರಿಂದ ಏ.11ರಂದು ಬೆಳಗ್ಗೆ 8 ಗಂಟೆಯಿಂದ ಎರಡು ವಾರಗಳ ಕಾಲ ಈ ರಸ್ತೆ ಮೂಲಕ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕಣ್ಣೂರು ಮತ್ತು ಕಾಞಂಗಾಡು ಭಾಗದಿಂದ ಕೆಎಸ್‌ಟಿಪಿ ರಸ್ತೆ ಮೂಲಕ ಕಾಸರಗೋಡಿಗೆ ಹೋಗುವ ವಾಹನಗಳು ಮತ್ತು ಪೆರಿಯ ಪೊಯಿನಾಚಿಯಿಂದ ಕಾಸರಗೋಡಿಗೆ ಹೋಗುವ ವಾಹನಗಳು ಚಟ್ಟಂಚಾಲ್ ಮೇಲ್ಸೇತುವೆಯನ್ನು ಪ್ರವೇಶಿಸಬಾರದು. ಅದರ ಬದಲು ಸರ್ವೀಸ್ ರಸ್ತೆಯನ್ನು ಪ್ರವೇಶಿಸಿ ಚಟ್ಟಂಚಾಲ್ – ಪರವನಡ್ಕ – ದೇಳಿ ರಸ್ತೆ ಮತ್ತು ಕೆಎಸ್‌ಟಿಪಿ ರಸ್ತೆ ಮೂಲಕ ವಾಹನ ಸಂಚಾರ ನಡೆಸಬೇಕಾಗಿದೆ. ಮಂಗಳೂರಿನಿಂದ ಕಣ್ಣೂರು ಕಡೆಗೆ ಹೋಗುವ ವಾಹನಗಳು ಕಾಸರಗೋಡು ಬಳಿಯ ಸರ್ವೀಸ್ ರಸ್ತೆಯನ್ನು ಪ್ರವೇಶಿಸಿ ಹಳೆಯ ಪ್ರೆಸ್ ಕ್ಲಬ್ ಜಂಕ್ಷನ್‌ನಿಂದ ಕೆಎಸ್‌ಟಿಪಿ ರಸ್ತೆ ಮೂಲಕ ಕಣ್ಣೂರು ಕಡೆಗೆ ಸಾಗಬೇಕು. ಸಾರ್ವಜನಿಕರು ಸಂಚಾರ ವ್ಯವಸ್ಥೆಗಳನ್ನು ಪಾಲಿಸುವ ಮೂಲಕ ಸಹಕರಿಸಬೇಕು ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಿಗೆ ಕಿರುಕುಳ: ಆರೋಪಿ ಬಂಧನ

ಕುಂಬಳೆ: ಬಸ್ ಪ್ರಯಾಣ ಮಧ್ಯೆ ಬಾಲಕಿಗೆ ಉಪಟಳ ನೀಡಿದ ಯುವಕನನ್ನು ಪ್ರಯಾಣಿಕರು ಮತ್ತು ಸ್ಥಳೀಯರು ಸೇರಿ ಸೆರೆಹಿಡಿದು ಕುಂಬಳೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಬಾಲಕಿಗೆ ಉಪಟಳ ನೀಡಿದ ಹಿನ್ನೆಲೆಯಲ್ಲಿ ಆತನ ವಿರುದ್ಧ ಸ್ವತಹ ಪೊಲೀಸರು ಕೇಸು ದಾಖಲಿಸಿ ಬಂಧಿಸಿದ ಬಳಿಕ ಜಾಮೀನಿನ ಮೂಲಕ ಬಿಡುಗಡೆಗೊಳಿಸಿದ್ದಾರೆ. ಚೆಮ್ನಾಡು ಆಯಿನ್‌ಕುಟ್ಟಿ ವಳಪ್ ನಿವಾಸಿ ಮೊಹಮ್ಮದ್ ಅಬ್ದುಲ್ ನಾಸರ್ (35) ಬಂಧಿತ ಆರೋಪಿಯಾಗಿದ್ದು, ಗುರುವಾರ ರಾತ್ರಿ ಕುಂಬಳೆ ಪೇಟೆಯಲ್ಲಿ ಈ ಘಟನೆ ನಡೆದಿತ್ತು.

ಚಿನ್ನ ಕದ್ದು ಪರಾರಿಯಾದ ಮಹಿಳೆ ಬಂಧನ

ಸುಳ್ಯ: ಕೆಲ ದಿನಗಳ ಹಿಂದೆ ಬೀರಮಂಗಲದಲ್ಲಿ ನಡೆದ ಚಿನ್ನ ಕಳ್ಳತನ ಪ್ರಕರಣದ ಆರೋಪಿಯನ್ನು ಸುಳ್ಯ ಪೊಲೀಸರು ಬಂಧಿಸಿ ಶುಕ್ರವಾರ ಕರೆತಂದಿದ್ದು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಕಳ್ಳತನ ಮಾಡಿ ಮೈಸೂರಿನಲ್ಲಿದ್ದ ಆರೋಪಿ ಶೃತಿ ಯಾನೆ ವಿಸ್ಮಿತಾಳನ್ನು (37) ಹಾಗೂ ಮಂಡ್ಯ ಮೂಲದ ಪ್ರದೀಪ (44) ಎಂಬವರನ್ನು ಸುಳ್ಯ ಪೊಲೀಸರ ತಂಡ ಪತ್ತೆ ಹಚ್ಚಿ ಕಳ್ಳತನ ಮಾಡಿದ್ದ ಚಿನ್ನಾಭರಣದೊಂದಿಗೆ ಕರೆತಂದು ಸುಳ್ಯ ನ್ಯಾಯಾಲಯಕ್ಕೆ ಒಪ್ಪಿಸಿದ್ದು ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. ಮಹಿಳೆಯು ಸಾಲ ಪಡೆದ ಹಣವನ್ನು ಹಿಂತಿರುಗಿಸಲು ಬೀರಮಂಗಲ ನಿವಾಸಿ ಜಯರಾಮ ಮನೆಗೆ ಬಂದು ಅಲ್ಲಿಂದ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಲಾಗಿತ್ತು. ಸುಳ್ಯ ವೃತ್ತ ನಿರೀಕ್ಷಕ ತಿಮ್ಮಪ್ಪ ನಾಯ್ಕ ಮಾರ್ಗದರ್ಶನದಲ್ಲಿ ಸುಳ್ಯ ಪೊಲೀಸ್ ಠಾಣಾ ಉಪನಿರೀಕ್ಷಕ ಸಂತೋಷ್ ಬಿ. ಪಿ. ನೇತೃತ್ವದಲ್ಲಿ ಸಿಬ್ಬಂದಿಗಳಾದ ಅನೂ ಕುಮಾರ್, ಪ್ರಕಾಶ್, ನವೀನ್ ಮಹಿಳಾ ಸಿಬ್ಬಂದಿ ಪದ್ಮಾವತಿ ಹಾಗೂ ವೃತ್ತನಿರೀಕ್ಷಕರ ಕಚೇರಿಯ ಸಿಬ್ಬಂದಿಗಳಾದ ಮಂಜುನಾಥ್, ವಿಶ್ವನಾಥ್ ಇವರುಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.




ತೋಟದ ಕೆಲಸಕ್ಕಿದ್ದ ಕೇರಳ ಕಾರ್ಮಿಕ ಮೃತ್ಯು

ಸುಳ್ಯ: ಬೆಳ್ಳಾರೆ ಸಮೀಪ ತಡಗಜೆಯಲ್ಲಿ ತೋಟದ ಕೆಲಸಕ್ಕಿದ್ದ ಕೇರಳದ ಕೋಝಿಕ್ಕೋಡಿನ ಪಿ.ಎಂ. ತೋಮಸ್(70) ಎಂಬವರು ಮಲಗಿದಲ್ಲೇ ಮೃತಪಟ್ಟ ಘಟನೆ ನಡೆದಿದೆ. ಬೆಳ್ಳಾರೆ ಠಾಣೆಯಲ್ಲಿ ಮೃತನ ಪುತ್ರ ಮಿಲನ್ ಜೋರ್ಜ್ ಥೋಮಸ್ ನೀಡಿದ ದೂರಿನಂತೆ ತಡಗಜೆಯಲ್ಲಿರುವ ಕೆ.ವಿ.ಜಿ.ಯವರ ತೋಟದಲ್ಲಿ ಮೃತ ವ್ಯಕ್ತಿ ಕೆಲಸಕ್ಕಿದ್ದು, ಮನೆಯಲ್ಲಿ ಒಬ್ಬರೇ ಇರುತ್ತಿದ್ದರು. ಅವರು ಬೆಂಚಿನಲ್ಲಿ ಕುಳಿತ ಸಂದರ್ಭ ಅಸ್ವಸ್ಥರಾಗಿದ್ದು, ಅವರನ್ನು ಕೆವಿಜಿ ಆಸ್ಪತ್ರೆಗೆ ಸಾಗಿಸಿದಾಗ ಮೃತಪಟ್ಟಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ್ ಸ್ಪಷ್ಟ ಸೂಚನೆ

ಇಎಸ್‌ಐ ಆಸ್ಪತ್ರೆ ಸುಸಜ್ಜಿತಗೊಳಿಸಿ

ಮಂಗಳೂರು: ಜಿಲ್ಲೆಯಲ್ಲಿರುವ ಇಎಸ್‌ಐ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲಿ ರೋಗಿಗಳಿಗೆ ಎಲ್ಲ ರೀತಿಯ ಅಗತ್ಯ ಸೌಲಭ್ಯ ದೊರಕುವ ರೀತಿ ಸುಸಜ್ಜಿತಗೊಳಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್‌ಗುಂಡೂರಾವ್ ಸೂಚಿಸಿದ್ದಾರೆ.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇ.ಎಸ್.ಐ. ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಮತ್ತು ಅವರ ಕುಟುಂಬಸ್ಥರು ಇಎಸ್‌ಐ ಚಿಕಿತ್ಸೆಯನ್ನು ಅವಲಂಭಿಸಿರುತ್ತಾರೆ. ಈ ನಿಟ್ಟಿನಲ್ಲಿ ಅವರ ಆರೋಗ್ಯ ಚಿಕಿತ್ಸೆಗೆ ಯಾವುದೇ ಕೊರತೆಯಾಗದಂತೆ ಉತ್ತಮ ಗುಣಮಟ್ಟದ ಚಿಕಿತ್ಸೆ ದೊರಕಿಸಲು ಕ್ರಮವಹಿಸಬೇಕು ಎಂದು ತಿಳಿಸಿದರು.

ಇಎಸ್‌ಐ ಆಸ್ಪತ್ರೆಗಳೊಂದಿಗೆ ತಾಲೂಕು ಮತ್ತು ಜಿಲ್ಲಾ ಸರಕಾರಿ ಆಸ್ಪತ್ರೆಗಳನ್ನು ಪರಸ್ಪರ ಜೋಡಿಸಿ ಚಿಕಿತ್ಸೆ ಒದಗಿಸುವ ಸಂಬಂಧ ಆರೋಗ್ಯ ಇಲಾಖೆ ಹಾಗೂ ಇಎಸ್‌ಐ ಇಲಾಖೆ ನಡುವೆ ಒಪ್ಪಂದ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದ ಇಎಸ್‌ಐಗೆ ಒಳಪಟ್ಟ ರೋಗಿಗಳು ತಾಲೂಕು ಮತ್ತು ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದರು. ಮಂಗಳೂರು ಇಎಸ್‌ಐ ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ಚಿಕಿತ್ಸೆ, ಪರೀಕ್ಷೆ ಮತ್ತು ಶಸ್ತ್ರಚಿಕಿತ್ಸೆ ದೊರಕುವಂತೆ ಮೇಲ್ದರ್ಜೆಗೇರಿಸಬೇಕು. ಈ ಬಗ್ಗೆ ಅಗತ್ಯ ಪ್ರಸ್ತಾವನೆ ಸಲ್ಲಿಸಬೇಕೆಂದು ಅವರ ಸೂಚಿಸಿದರು.

ಇಎಸ್‌ಐ ಆಯುಕ್ತ ಡಾ.ದಿನೇಶ್ ಮಾತನಾಡಿ, ಇಎಸ್‌ಐ ಮಂಗಳೂರು ಪ್ರಾದೇಶಿಕ ವಲಯದ ವ್ಯಾಪ್ತಿಗೆ ಬರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ 1 ಆಸ್ಪತ್ರೆ ಹಾಗೂ 11ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿದೆ. ಸುಮಾರು 3.92 ಲಕ್ಷ ಇಎಸ್‌ಐ ನೋಂದಣಿಗಾರರು ಮತ್ತು ಅವರ 15 ಲಕ್ಷದಷ್ಟು ಕುಟುಂಬಸ್ಥರು ಇಎಸ್‌ಐ ಸೌಲಭ್ಯ ಪಡೆಯುತ್ತಿದ್ದಾರೆ. ಇದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 18 ಹಾಗೂ ಉಡುಪಿಯಲ್ಲಿ 11 ಖಾಸಗಿ ಆಸ್ಪತ್ರೆಗಳಲ್ಲಿ ಇಎಸ್‌ಐ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಂಗಳೂರು ಇಎಸ್‌ಐ ಆಸ್ಪತ್ರೆಯನ್ನು 10 ಕೋಟಿ ರೂ. ವೆಚ್ಚದಲ್ಲಿ ಆಧುನೀಕರಣ ಮಾಡಲಾಗುತ್ತಿದ್ದು, ಹೊಸದಾಗಿ ಐ.ಸಿ.ಯು, ಶಸ್ತ್ರಚಿಕಿತ್ಸೆ ಕೊಠಡಿ, ಪ್ರಯೋಗಾಲಯ, ಡಯಾಲಿಸಿಸ್ ಕೇಂದ್ರ ಸೇರಿದಂತೆ ಉನ್ನತ ಸೌಲಭ್ಯಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಹೆಚ್.ಆರ್ ತಿಮ್ಮಯ್ಯ, ವೆನ್‌ಲಾಕ್ ಅಧೀಕ್ಷಕ ಡಾ. ಶಿವಪ್ರಕಾಶ್, ಇಎಸ್‌ಐ ನೋಡಲ್ ಅಧಿಕಾರಿ ಹೇಮಂತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಲೇಡಿಗೋಶನ್ ಆಸ್ಪತ್ರೆಗೆ 68.8 ಲಕ್ಷ ರೂ. ಮೊತ್ತದ ವೈದ್ಯಕೀಯ ಉಪಕರಣ ಹಸ್ತಾಂತರ

ಮಂಗಳೂರು: ಪವರ್ ಗ್ರಿಡ್ ಕಾರ್ಪೊರೇಷನ್ ಸಂಸ್ಥೆಯ ಸಿಎಸ್‌ಆರ್ ಉಪಕ್ರಮದಡಿಯಲ್ಲಿ ನಗರದ ಲೇಡಿಗೋಶನ್ ಆಸ್ಪತ್ರೆಯಲ್ಲಿ ಶುಕ್ರವಾರ 68.8 ಲಕ್ಷ ರೂ. ಮೊತ್ತದ ವಿವಿಧ ವೈದ್ಯಕೀಯ ಉಪಕರಣ ಹಸ್ತಾಂತರ ಕಾರ್ಯಕ್ರಮ ನೆರವೇರಿತು.

ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸಾ ಉಪಕರಣಗಳು, ಅನಸ್ತೇಸಿಯಾ ವರ್ಕ್ ಸ್ಟೇಷನ್ ವೆಚ್ಚವಾಗಿ 68.8 ಲ.ರೂ. ನೆರವನ್ನು ಸಿಎಸ್‌ಆರ್ ಅಡಿಯಲ್ಲಿ ಒದಗಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಆರೋಗ್ಯ ಮತ್ತು ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ದ.ಕ. ಜಿಲ್ಲಾದ್ಯಂತ ಆರೋಗ್ಯ ಸೇವೆಗಳನ್ನು ಸುಧಾರಣೆಗೊಳಪಡಿಸುವ ಉದ್ದೇಶದೊಂದಿಗೆ ವಿವಿಧ ತಾಲೂಕು ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯಗಳು ಹಾಗೂ ಖಾಸಗಿ ವೈದ್ಯಕೀಯ ಕಾಲೇಜು, ಸಂಸ್ಥೆಗಳ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಯೆನಪೊಯ ವೈದ್ಯಕೀಯ ಕಾಲೇಜು, ಮೂಡುಬಿದಿರೆಯ ಆಳ್ವಾಸ್ ಹೆಲ್ತ್ ಸೆಂಟರ್ ಹಾಗೂ ಎ.ಜೆ. ವೈದ್ಯಕೀಯ ಕಾಲೇಜುಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಮೂಲಕ ಸೇವೆಯಲ್ಲಿ ಗಣನೀಯ ಸುಧಾರಣೆಯಾಗಲಿದೆ ಎಂದರು.

ವೆನ್ಲಾಕ್ ಹಾಗೂ ಲೇಡಿಗೋಶನ್ ಆಸ್ಪತ್ರೆಗಳು ರಾಜ್ಯದಲ್ಲೇ ಮಾದರಿಯಾಗಿ ಗುರುತಿಸಿಕೊಂಡಿವೆ. ವೆನ್ಲಾಕ್ ಆಸ್ಪತ್ರೆ ಹಾಗೂ ಕೆಎಂಸಿ ಆಸ್ಪತ್ರೆ ಒಡಂಬಡಿಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ 1 ಲಕ್ಷ ಚದರಡಿ ಹೆಚ್ಚುವರಿ ಸ್ಥಳವನ್ನು ನಿರ್ಮಿಸಿಕೊಡಲಿದ್ದಾರೆ. ಅಲ್ಲದೆ ಹೆಚ್ಚುವರಿ ಸೇವೆಗಳನ್ನೂ ಕೆಎಂಸಿ ಒದಗಿಸಲಿದೆ. 70 ಕೋಟಿ ರೂ. ವೆಚ್ಚದಲ್ಲಿ ಹೊಸ ಒಪಿಡಿ ಬ್ಲಾಕ್‌ನ್ನು ಸರಕಾರ ನಿರ್ಮಿಸುತ್ತಿದೆ ಎಂದರು.

ನೆರವು ಒದಗಿಸಿಕೊಟ್ಟಿರುವ ಪವರ್ ಗ್ರಿಡ್ ಕಾರ್ಪೊರೇಷನ್ ಅನ್ನು ಅಭಿನಂದಿಸಿದ ಸಚಿವರು, ಇನ್ನಷ್ಟು ನೆರವು ನೀಡುವಂತೆಯೂ ಮನವಿ ಮಾಡಿದರು.

ಮೆಸ್ಕಾಂ ಅಧ್ಯಕ್ಷ ಹರೀಶ್‌ಕುಮಾರ್, ಕೆಎಂಸಿ ಡೀನ್ ಉಣ್ಣಿಕೃಷ್ಣನ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ತಿಮ್ಮಯ್ಯ, ವೆನ್ಲಾಕ್ ವೈದ್ಯಕೀಯ ಅಧೀಕ್ಷಕ ಡಾ. ಶಿವಪ್ರಕಾಶ್, ಮಂಗಳೂರು ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ ಉಪಸ್ಥಿತರಿದ್ದರು.



ಆಳ್ವಾಸ್ ಹೆಲ್ತ್ ಸೆಂಟರ್-ಬೆಳ್ತಂಗಡಿ ಹಾಗೂ ಮೂಡುಬಿದಿರೆ ಸಮುದಾಯ ಆರೋಗ್ಯ ಕೇಂದ್ರ, ಎ.ಜೆ.ವೈದ್ಯಕೀಯ ಕಾಲೇಜು ಹಾಗೂ ಬಂಟ್ವಾಳ ತಾಲೂಕು ಆಸ್ಪತ್ರೆ, ಯೆನಪೊಯ ವೈದ್ಯಕೀಯ ಕಾಲೇಜು ಜೊತೆ ವಿಟ್ಲ ಸಮುದಾಯ ಆರೋಗ್ಯ ಕೇಂದ್ರದ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಕೇರಳ ವಿಧಾನಸಭಾ ಚುನಾವಣೆ ಬೆನ್ನಲ್ಲೇ ಹಿಂಸಾಚಾರ

ಅಲ್ಲಲ್ಲಿ ಮನೆ, ವಾಹನಗಳ ಮೇಲೆ ದಾಳಿ

ಕಾಸರಗೋಡು: ವಿಧಾನಸಭಾ ಚುನಾವಣೆಯ ಮತದಾನ ಕೊನೆಗೊಂಡ ಬೆನ್ನಲ್ಲೇ ಕಾಸರಗೋಡು ಜಿಲ್ಲೆಯ ಗಡಿಭಾಗದ ಕಣ್ಣೂರು ಜಿಲ್ಲೆಯ ತಳಿಪರಂಬ ಮತ್ತು ಪಯ್ಯನ್ನೂರು ವಿಧಾನಸಭಾ ಕ್ಷೇತ್ರಗಳ ಹಲವೆಡೆ ವ್ಯಾಪಕ ಆಕ್ರಮಣಗಳು ನಡೆದಿವೆ. ಪಯ್ಯನ್ನೂರು ಮಾವಿಚ್ಚೇರಿ ಎಂಬಲ್ಲಿ ಯುಡಿಎಫ್‌ನ ಸ್ವತಂತ್ರ ಅಭ್ಯರ್ಥಿ ವಿ.ಕುಂಞಿಕೃಷ್ಣನ್‌ರ ಬೆಂಬಲಿಗ, ಮಾಜಿ ಸಿಪಿಎಂ ಮುಖಂಡ ಟಿ.ಪುರುಷೋತ್ತಮನ್ ಅವರ ಮನೆ ಹಾಗೂ ಕಾರಿನ ಮೇಲೆ ಆಕ್ರಮಣ ನಡೆದಿದೆ. ಡಿವೈಎಫ್‌ಐ ಮತ್ತು ಸಿಪಿಎಂ ಪ್ರಮುಖರಾಗಿದ್ದ ಟಿ.ಪುರುಷೋತ್ತಮನ್ ನಂತರ ಸಿಪಿಎಂ ತ್ಯಜಿಸಿ ಜೆಎಸ್‌ಎಸ್‌ನ ರಾಜ್ಯ ನಾಯಕರಾಗಿದ್ದರು. ಬಳಿಕ ಸಿಪಿಐಗೆ ಸೇರ್ಪಡೆಗೊಂಡಿದ್ದ ಅವರು ಪ್ರಸ್ತುತ ರಾಜಕೀಯದಿಂದ ನಿವೃತ್ತರಾಗಿದ್ದರು.

ಪಯ್ಯನ್ನೂರು ವಿಧಾನಸಭಾ ಕ್ಷೇತ್ರದ ಕಾರಮೇಲ್ ಎಂಬಲ್ಲಿ ಕಾಂಗ್ರೆಸ್ ಬೆಂಬಲಿಗ ಕೆ.ಕೆ.ಪಿ.ತಂಬಾನ್ ಅವರ ಮನೆಯ ಆವರಣಗೋಡೆಯನ್ನು ನಾಶಪಡಿಸಲಾಗಿದೆ. ತಳಿಪರಂಬ ಕ್ಷೇತ್ರದ ಮುಲ್ಲಕೋಡಿ ಎಂಬಲ್ಲಿ ಮಯ್ಯಿಲ್ ಮಂಡಲ ಕಾಂಗ್ರೆಸ್ ಸಮಿತಿ ಕಚೇರಿಯಾದ ಗಾಂಧಿ ಭವನ್‌ನ ಮೇಲೆ ಆಕ್ರಮಣ ನಡೆದಿದೆ.

ಕಯರಳಂ ಮುಲ್ಲಕೋಡಿ ಎಂಬಲ್ಲಿ ಕಾಂಗ್ರೆಸ್ ಕಾರ್ಯಕರ್ತ ಪಿ.ಭಾಸ್ಕರನ್ ಅವರ ಮನೆ ಮೇಲೂ ಆಕ್ರಮಿಸಲಾಗಿದೆ.

ಈ ಎಲ್ಲಾ ಆಕ್ರಮಣಗಳ ಹಿಂದೆ ಸಿಪಿಎಂ ಕಾರ್ಯಕರ್ತರ ಕೈವಾಡವಿದೆ ಎಂದು ಕಾಂಗ್ರೆಸ್ ಪಕ್ಷದ ಪ್ರಮುಖರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಳಿಪರಂಬ ಮತ್ತು ಪಯ್ಯನ್ನೂರು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪೊಲೀಸರು ತೀವ್ರ ನಿಗಾ ವಹಿಸಿದ್ದಾರೆ.

ಸಿಪಿಎಂ ದಾಳಿಗೆ ಖಂಡನೆ

ಸೋಲುವ ಭೀತಿಯಿಂದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಸಿಪಿಎಂ ಕಾರ್ಯಕರ್ತರು ಪದೇ ಪದೇ ನಡೆಸುತ್ತಿರುವ ದಾಳಿ ಖಂಡನೀಯವಾಗಿದೆ ಎಂದು ಕಾಂಗ್ರೆಸ್ ಪಕ್ಷದ ಕಾಸರಗೋಡು ಜಿಲ್ಲಾಧ್ಯಕ್ಷ ಪಿ.ಕೆ.ಫೈಸಲ್ ತಿಳಿಸಿದ್ದಾರೆ. ತೃಕ್ಕರೀಪುರ ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಸಂದೀಪ್ ವಾರಿಯರ್ ಅವರ ಮೇಲೆ ನೆಹರೂ ಕಾಲೇಜಿನಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ನಡೆದ ದಾಳಿ ಮತ್ತು ಚೆರ್ವತ್ತೂರು ಬಸ್ ನಿಲ್ದಾಣದಲ್ಲಿ ಯೂತ್ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ನಡೆದ ದಾಳಿ ಸಿಪಿಎಂ ಪಕ್ಷದ ಆಕ್ರಮಣ ನೀತಿಗೆ ಸ್ಪಷ್ಟ ಉದಾಹರಣೆಗಳಾಗಿವೆ. ತೃಕರೀಪುರ ಕ್ಷೇತ್ರದ ಹಲವೆಡೆಗಳಲ್ಲಿ ಕಾಂಗ್ರೆಸ್ ಪಕ್ಷದ ವಿಧಾನಸಭಾ ಚುನಾವಣಾ ಪ್ರಚಾರ ಸಾಮಗ್ರಿಗಳನ್ನು ಸಿಪಿಎಂ ನೇತೃತ್ವದಲ್ಲಿ ಹಾನಿಗೊಳಿಸಲಾಗಿದೆ. ಇದೆಲ್ಲವೂ ಸಿಪಿಎಂನ ಚುನಾವಣೆಯಲ್ಲಿ ಸೋಲುವ ಭೀತಿಯನ್ನು ತೋರ್ಪಡಿಸುತ್ತಿದೆ ಎಂದು ಪಿ.ಕೆ.ಫೈಸಲ್ ಹೇಳಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ 8,73,133 ಮಂದಿ ಮತ ಚಲಾವಣೆ

ಶೇಕಡಾ 79.12ರಷ್ಟು ಮತದಾನ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಒಟ್ಟು 11,03,618 ಮಂದಿ ಮತದಾರರ ಪೈಕಿ 8,73,133 ಜನರು ಮತ ಚಲಾಯಿಸಿದ್ದಾರೆ. ಈ ಮೂಲಕ ಜಿಲ್ಲೆಯಲ್ಲಿ ಶೇಕಡಾ 79.12ರಷ್ಟು ಮತದಾನವಾಗಿದೆ.

ಜಿಲ್ಲೆಯಲ್ಲಿ ಒಟ್ಟು 5,44,543 ಪುರುಷರು, 5,59,063 ಮಹಿಳೆಯರು ಮತ್ತು 12 ಮಂದಿ ಮಂಗಳಮುಖಿ ಮತದಾರರಿದ್ದರು. ಅವರಲ್ಲಿ 3,97,390 ಪುರುಷರು, 4,75,734 ಮಹಿಳೆಯರು ಮತ್ತು 9 ಮಂದಿ ಮಂಗಳಮುಖಿಯರು ಸೇರಿದಂತೆ 8,73,133 ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಮಂಜೇಶ್ವರ ಕ್ಷೇತ್ರದಲ್ಲಿ 85,258 ಪುರುಷರು ಮತ್ತು 1,01,218 ಮಹಿಳೆಯರು ಸೇರಿದಂತೆ 1,86,476 ಜನರು ಮತ ಚಲಾಯಿಸಿದ್ದು, ಈ ಮೂಲಕ ಶೇಕಡಾ 81.04ರಷ್ಟು ಮತದಾನವಾಗಿದೆ. ಕಾಸರಗೋಡು ಕ್ಷೇತ್ರದಲ್ಲಿ 77,408 ಪುರುಷರು ಮತ್ತು 90,512 ಮಹಿಳೆಯರು ಸೇರಿದಂತೆ 1,67,920 ಜನರು ಮತ ಚಲಾಯಿಸಿದ್ದು, ಶೇಕಡಾ 79.61ರಷ್ಟು ಮತದಾನ ನಡೆದಿದೆ.

ಉದುಮ ಕ್ಷೇತ್ರದಲ್ಲಿ 79,672 ಪುರುಷರು, 98,746 ಮಹಿಳೆಯರು ಮತ್ತು ಇಬ್ಬರು ಮಂಗಳಮುಖಿಯರು ಸೇರಿದಂತೆ 1,78,420 ಮಂದಿ ಮತ ಚಲಾಯಿಸಿದ್ದು, ಶೇಕಡಾ 78.08ರಷ್ಟು ಹಕ್ಕು ಚಲಾವಣೆಯಾಗಿದೆ. ಕಾಞಂಗಾಡು ಕ್ಷೇತ್ರದಲ್ಲಿ 79,559 ಪುರುಷರು, 93,436 ಮಹಿಳೆಯರು ಮತ್ತು 5 ಮಂದಿ ಮಂಗಳಮುಖಿಯರು ಸೇರಿದಂತೆ 1,73,000 ಮಂದಿ ಮತ ಚಲಾಯಿಸಿದ್ದು, ಶೇಕಡಾ 77.24ರಷ್ಟು ಮತದಾನವಾಗಿದೆ. ತೃಕ್ಕರೀಪುರ ಕ್ಷೇತ್ರದಲ್ಲಿ 75,493 ಪುರುಷರು, 91,822 ಮಹಿಳೆಯರು ಮತ್ತು ಇಬ್ಬರು ಮಂಗಳಮುಖಿಯರು ಸೇರಿದಂತೆ ಒಟ್ಟು 1,67,317 ಜನರು ಹಕ್ಕು ಚಲಾಯಿಸಿದ್ದು, ಶೇಕಡಾ 79.64ರಷ್ಟು ಮತದಾನ ದಾಖಲಾಗಿದೆ.



ಮಂಜೇಶ್ವರ, ಕಾಸರಗೋಡು ಮತ್ತು ಉದುಮ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಮತದಾನದ ಅಂಗವಾಗಿ ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ಇರಿಸಲಾಗಿರುವ ಕಾಸರಗೋಡು ಸರ್ಕಾರಿ ಕಾಲೇಜಿನ ಸ್ಟ್ರಾಂಗ್ ರೂಮ್‌ಗಳಿಗೆ ಗರಿಷ್ಠ ಭದ್ರತೆಯನ್ನು ಏರ್ಪಡಿಸಲಾಗಿದೆ.

ನಡುರಸ್ತೆಯಲ್ಲೇ ಧಗಧಗಿಸಿದ ಆಟೋರಿಕ್ಷಾ

ಬಂಟ್ವಾಳ: ಪುಂಜಾಲಕಟ್ಟೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂರ್ಜೆ ವಿಶಾಲ್ ನಗರ ಎಂಬಲ್ಲಿ ರಿಕ್ಷಾವೊಂದು ಸಂಪೂರ್ಣ ಬೆಂಕಿಗಾಹುತಿಯಾದ ಘಟನೆ ಶುಕ್ರವಾರ ನಡೆದಿದೆ.

ಬಂಟ್ವಾಳತಾಲೂಕಿನಬಾಂಬಿಲನಿವಾಸಿ ರೇವಣ್ಣ ಎಂಬವರ ಆಟೋರಿಕ್ಷಾ ಬೆಂಕಿಹೆ ಸಂಪೂರ್ಣ ಸುಟ್ಟು ಕರಕಲಾಗಿದ್ದು, ಅಪಾರ ನಷ್ಟ ಉಂಟಾಗಿದೆ.

ಆಟೋ ಗ್ಯಾಸ್ ಸಂಪರ್ಕವನ್ನು ಹೊಂದಿರುವ ಈ ಆಟೋ ರಿಕ್ಷಾದಲ್ಲಿ ಗ್ಯಾಸ್ ಖಾಲಿಯಾಗಿದೆ ಎಂಬ ಕಾರಣಕ್ಕೆ ಪೆಟ್ರೋಲ್ ತುಂಬಿಸಲೆಂದು ಪಂಪ್‌ನತ್ತ ತೆರಳುತ್ತಿದ್ದ ವೇಳೆ ಆಕಸ್ಮಿಕ ಎಂಬಂತೆ ಗ್ಯಾಸ್ ಸೋರಿಕೆಯ ವಾಸನೆ ಬಂದಿತ್ತೆನ್ನಲಾಗಿದೆ. ತಕ್ಷಣ ಚಾಲಕ ರೇವಣ್ಣ ಅವರು ರಿಕ್ಷಾವನ್ನು ರಸ್ತೆ ಬದಿ ನಿಲ್ಲಿಸಿ ಇಳಿಯುತ್ತಿದ್ದಂತೆ ಹಠಾತ್ತನೆ ರಿಕ್ಷಾದಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣ ಮಾತ್ರದಲ್ಲಿ ಪೂರ್ತಿ ರಿಕ್ಷಾವನ್ನು ಆವರಿಸಿಕೊಂಡಿದೆ. ಅದೃಷ್ಟವಶಾತ್ ರಿಕ್ಷಾದಲ್ಲಿಪ್ರಯಾಣಿಕರುಯಾರುಇರಲಿಲ್ಲ, ಹಾಗಾಗಿ ಅಪಾಯ ಸಂಭವಿಸಿಲ್ಲ. ಈ ಬಗ್ಗೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿದು ಬಂದಿದೆ.



ಕೇರಳದಲ್ಲಿ 335 ಇ.ವಿ. ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲು ಕ್ರಮ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದ ಎಲ್ಲಾ 14 ಜಿಲ್ಲೆಗಳಲ್ಲೂ ಹೊಸದಾಗಿ 335 ಸಾರ್ವಜನಿಕ ಇಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಕೇಂದ್ರ ಸರಕಾರವು ಕೇರಳ ವಿದ್ಯುತ್ ಮಂಡಳಿಗೆ 63.12 ಕೋಟಿ ರೂಪಾಯಿ ಅನುದಾನವನ್ನು ಒದಗಿಸಿದೆ.

ಪ್ರಧಾನಮಂತ್ರಿ ಇ-ಡ್ರೈವ್ (ಪಿಎಂ ಇಲೆಕ್ಟ್ರಿಕ್ ಡ್ರೈವ್) ರೆವೆಲ್ಯೂಶನ್ ಇನ್ ಇನ್‌ಸೆಂಟೀವ್ ವೆಹಿಕಲ್ ಎನ್‌ಹಾನ್ಸ್‌ಮೆಂಟ್ ಯೋಜನೆಯಡಿ ಈ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಮೂಲಕ ವಿದ್ಯುತ್ ಚಾಲಿತ ವಾಹನಗಳಿಗೆ ಕಾಸರಗೋಡು ಜಿಲ್ಲೆಯೂ ಸಹಿತ ರಾಜ್ಯದಲ್ಲಿ ಪ್ರೋತ್ಸಾಹ ನೀಡಲು ಕೇಂದ್ರ ಸರಕಾರವು ತೀರ್ಮಾನಿಸಿದೆ. ಈ ನಿಟ್ಟಿನಲ್ಲಿ ಕೇರಳ ವಿದ್ಯುತ್ ಮಂಡಳಿಯು ಸಲ್ಲಿಸಿದ ಸಮಗ್ರ ಯೋಜನೆಯನ್ನು ಅಧ್ಯಯನ ನಡೆಸಿದ ಕೇಂದ್ರ ಸರಕಾರವು ಅದನ್ನು ಅಂಗೀಕರಿಸಿದೆ. ಇಂತಹ ಚಾರ್ಜಿಂಗ್ ಸ್ಟೇಷನ್‌ಗಳನ್ನು ಕೇರಳ ವಿದ್ಯುತ್ ಮಂಡಳಿಯ ನೇತೃತ್ವದಲ್ಲಿ ಸ್ಥಾಪಿಸಲಾಗುವುದು.

ಕೆಲವೇ ತಿಂಗಳುಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬರಲಿದೆ.

ಉಳ್ಳಾಲದಲ್ಲಿ ಮಗನ ಜೊತೆಗೆ ಪಿಯು ಪರೀಕ್ಷೆ ಬರೆದ ಫೈನಾನ್ಶಿಯರ್ | ಬಿ.ಸಿ. ರೋಡ್ ಕೈಕಂಬದಲ್ಲಿ ಮಗಳೊಂದಿಗೆ ಭರ್ಜರಿ ಫಲಿತಾಂಶ ದಾಖಲಿಸಿದ ಗೃಹಿಣಿ

ಗೆಲ್ಲುವ ಛಲ, ಕಲಿಯುವ ಬಲ, ಜ್ಞಾನದ ಹಸಿವಿಗೆ ವಯಸ್ಸಿನ ಹಂಗೆಲ್ಲಿಯದು!

ಉಳ್ಳಾಲ: ಮದುವೆಯಾಗಿ ಮೂವರು ಮಕ್ಕಳಾದರೂ ಸಹ ಆ ಫೈನಾನ್ಶಿಯರ್‌ಗೆ ಪಿಯು ಶಿಕ್ಷಣ ಸಂಪೂರ್ಣಗೊಳಿಸದ ಕೊರಗು ಕಾಡುತ್ತಿತ್ತು. ಮಗ ಪಿಯುಸಿ ಪರೀಕ್ಷೆ ಬರೆಯುವಾಗ ತಾನೂ ಪಿಯು ಶಿಕ್ಷಣ ಸಂಪೂರ್ಣಗೊಳಿಸಿದರೆ ಮಗನಿಗೂ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ ಬರಬಹುದೆಂದು ನಿರ್ಧರಿಸಿದ ಅವರು ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಮೊದಲ ಪ್ರಯತ್ನದಲ್ಲೇ ಕಲಾ ವಿಭಾಗದ ಆರು ವಿಷಯಗಳಲ್ಲಿ 324 ಅಂಕಗಳನ್ನ ಪಡೆದು ದ್ವಿತೀಯ ದರ್ಜೆ ಶ್ರೇಣಿಯಲ್ಲಿ ತೇರ್ಗಡೆಗೊಂಡು,ಮಗನ ಪಿಯುಸಿ ಫಲಿತಾಂಶದೊಂದಿಗೆ ತಾನೂ ಸಂಭ್ರಮಿಸಿದ್ದಾರೆ.

ಉಳ್ಳಾಲ ತಾಲೂಕಿನ ಕೊಲ್ಯ ಕಣೀರುತೋಟದ ನಿವಾಸಿ ಚಿಟ್ ಫಂಡ್ ವ್ಯವಹಾರ ನಡೆಸುತ್ತಿರುವ ಮೋಹನ್ ರಾಜ್ ಅಮೀನ್ ಅವರು ದ್ವಿತೀಯ ಪಿಯುಸಿ ಪರೀಕ್ಷೆ ಬರೆದು, ಮಗನೊಂದಿಗೆ ಮೊದಲ ಪ್ರಯತ್ನದಲ್ಲೇ ತೇರ್ಗಡೆಗೊಂಡು ಸಂಭ್ರಮಿಸಿದ್ದಾರೆ.

ಮೋಹನ್ ರಾಜ್ ಅವರು ಕೊಲ್ಯದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿ,1984 ರಲ್ಲಿ ಉಳ್ಳಾಲದ ಮದನಿ ಕಾಲೇಜಲ್ಲಿಪ್ರಥಮ ಪಿಯುಸಿ ಶಿಕ್ಷಣ ಪಡೆದಿದ್ದರು. ದ್ವಿತೀಯ ಪಿಯುಸಿ ಶಿಕ್ಷಣಗಳಿಸಲು ಅಂದಿನ ದಿನಗಳಲ್ಲಿ ಮೋಹನ್ ರಾಜ್ ಅವರಿಗೆ ಪೂರಕ ವಾತಾವರಣ ಲಭಿಸಿರಲಿಲ್ಲ.ಬಡತನ, ಕುಟುಂಬ ನಿರ್ವಹಣೆಯ ಜವಾಬ್ದಾರಿಯು ಅವರ ಹೆಗಲ ಮೇಲೇರಿದ ಪರಿಣಾಮ ಅವರು ಕೆಲಸಕ್ಕೆ ತೆರಳುವ ಅನಿವಾರ್ಯತೆ ಬಂದೊದಗಿತ್ತು.ನಂತರದ ದಿನದಲ್ಲಿ ಮದುವೆಯಾಗಿ ಮಕ್ಕಳು ಜನಿಸಿ ಕಷ್ಟ ಪಟ್ಟು ವ್ಯವಹಾರದಲ್ಲಿ ಯಶಸ್ಸು ಪಡೆದರೂ ಸಹ ಪಿಯು ಶಿಕ್ಷಣ ಸಂಪೂರ್ಣಗೊಳಿಸಲಂತೂ ಸಾಧ್ಯವೇ ಆಗಿರಲಿಲ್ಲ. ಹಾಗಂತ ಮೋಹನ್ ರಾಜ್ ಅವರು ತನ್ನ ಮಕ್ಕಳನ್ನ ಶಿಕ್ಷಣದಿಂದ ವಂಚಿತಗೊಳಿಸಿರಲಿಲ್ಲ. ಅವರ ಹಿರಿಯ ಮಗಳು ವೃದ್ಧಿರೇಖ ಅವರು ಬಿಎಸ್ಸಿ ಪದವೀಧರೆಯಾಗಿದ್ದು ಖಾಸಗಿ ಉದ್ಯೋಗದಲ್ಲಿದ್ದಾರೆ. ಎರಡನೇ ಮಗಳು ಪ್ರಕೃತಿ ಕೂಡಾ ಡಿಪ್ಲೋಮ ವ್ಯಾಸಂಗ ಮುಗಿಸಿ ಖಾಸಗಿ ಉದ್ಯೋಗದಲ್ಲಿದ್ದಾರೆ.

ಮೋಹನ್ ರಾಜ್ ಅವರ ಕಿರಿಯ ಮಗ ಕ್ಷಿತಿಜ್ ರಾಜ್ ಅವರು ಈ ಭಾರಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದು ವಾಣಿಜ್ಯ ವಿಭಾಗದಲ್ಲಿ ಪ್ರಥಮ ದರ್ಜೆಯ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ.

ತನ್ನ ಮಧ್ಯ ವಯಸ್ಸಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಪಾಸಾಗುವ ಮೂಲಕ, ಸಾಧಿಸುವ ಛಲವೊಂದಿದ್ದರೆ ಅದಕ್ಕೆ ಬಡತನ, ವಯಸ್ಸು ಎಂದಿಗೂ ಅಡ್ಡಿ ಬರಲಾರದು ಎಂಬುದಕ್ಕೆ ಇಂದಿನ ಯುವ ಪೀಳಿಗೆಗೆ ಮೋಹನ್ ರಾಜ್ ಅವರು ಸಂದೇಶ ಸಾರಿ ನಿದರ್ಶನರಾಗಿದ್ದಾರೆ.



> **ಮಕ್ಕಳು ಶಿಕ್ಷಣ ಪಡೆಯಲು ಅದಕ್ಕೆ ತಕ್ಕ ಪೂರಕ ವಾತಾವರಣ ನಿರ್ಮಿಸಿ ಕೊಡುವುದು ಪೋಷಕರ ಜವಬ್ದಾರಿ ಯಾಗಿದೆ.ಇಂತಿಷ್ಟು ಅಂಕಗಳನ್ನ ಗಳಿಸಲೇ ಬೇಕೆಂಬ ಟಾರ್ಗೆಟನ್ನೂ ಪೋಷಕರು ಮಕ್ಕಳಿಗೆ ಕೊಡಬಾರದು. ಹಾಗಾದಲ್ಲಿ ಶಿಕ್ಷಣ ಎಂಬುದು ಮಕ್ಕಳಿಗೆ ಸರೆಮನೆಯಂತಾಗುತ್ತದೆ.**
> ■ ಮೋಹನ್ ರಾಜ್ ಅಮೀನ್

ಪರೀಕ್ಷಾ ಕೇಂದ್ರದವರೇ ಅವಕ್ಕಾಗಿದ್ದರು

ಮೋಹನ್ ರಾಜ್ ಅವರು ಮುಡಿಪುವಿನ ಸರಕಾರಿ ಕಾಲೇಜಿನಲ್ಲಿ ಪರೀಕ್ಷೆ ಬರೆದಿದ್ದು,ಅವರು ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆ ಬರೆಯಲು ತೆರಳಿದಾಗ ಅಲ್ಲಿ ಪರೀಕ್ಷಾ ನಿಯಂತ್ರಣಕ್ಕೆ ನಿಯೋಜನೆಗೊಂಡ ಶಿಕ್ಷಕರು ಮತ್ತು ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳು ಒಮ್ಮೆ ಅವಕ್ಕಾಗಿದ್ದರಂತೆ. ಬಳಿಕ ಮೋಹನ್ ರಾಜ್ ಅವರೇ ತಾನು ಪರೀಕ್ಷೆ ಬರೆಯಲು ಬಂದಿರುವುದಾಗಿ ಮನವರಿಸಿದ ಬಳಿಕ ಅವರ ಉತ್ಸಾಹಕ್ಕೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂಪೂರ್ಣ ಬೆಂಬಲ ನೀಡಿದ್ದರಂತೆ.

ಖಾಸಗಿ ಟ್ಯುಟೋರಿಯಲ್‌ನಲ್ಲಿ ಪರೀಕ್ಷೆಗೆ ಸಿದ್ಧತೆ

ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲು ಮೋಹನ್ ರಾಜ್ ಅವರು ಕಳೆದ ನವೆಂಬರ್ ತಿಂಗಳಿಂದ ಸಿದ್ಧತೆ ನಡೆಸಿದ್ದು,ತೊಕ್ಕೊಟ್ಟಿನ ಖಾಸಗಿ ಟ್ಯೂಷನ್ ಸಂಸ್ಥೆಯಲ್ಲಿ ಬೆಳಿಗ್ಗೆ 8 ರಿಂದ 11ರ ವರೆಗೆ ಮತ್ತು ಸಾಯಂಕಾಲದ ವೇಳೆ ತರಬೇತಿ ಪಡೆಯುತ್ತಿದ್ದರು.ಮೋಹನ್ ರಾಜ್ ಅವರ ಪರೀಕ್ಷೆ ಬರೆಯುವ ಉತ್ಸಾಹಕ್ಕೆ ಪತ್ನಿ ಮಮತಾ ಅವರು ಸಂಪೂರ್ಣ ಪ್ರೋತ್ಸಾಹ ನೀಡಿದ್ದರು. ಅರ್ಧದಲ್ಲಿ ಮೊಟಕುಗೊಂಡಿದ್ದ ಪಿಯುಸಿ ಶಿಕ್ಷಣವನ್ನು ಸಂಪೂರ್ಣಗೊಳಿಸುವುದು ಮೋಹನ್ ರಾಜ್ ಅವರ ಕಳೆದ ನಲ್ವತ್ತೆರಡು ವರುಷಗಳ ಕನಸಾಗಿದ್ದು,ಅದನ್ನು ಅವರೀಗ ಸಾಕಾರಗೊಳಿಸಿದ್ದಾರೆ.

ಅಮ್ಮ-ಮಗಳ ಜಂಟಿ ಸಾಧನೆ!

ಬಂಟ್ವಾಳ: ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಯಿ ಮತ್ತು ಮಗಳು ಏಕಕಾಲಕ್ಕೆ ಉತ್ತೀರ್ಣಗೊಂಡು ಬಂಟ್ವಾಳ ತಾಲೂಕಿನಲ್ಲಿ ಅಪರೂಪದ ಸಾಧನೆಗೈದು ಗಮನಸೆಳೆದಿದ್ದಾರೆ. ಬಿ.ಸಿ. ರೋಡ್ ಕೈಕಂಬ ನಿವಾಸಿ, ಗೃಹಿಣಿ ನೇತ್ರಾವತಿ ವಿ.ಆರ್. ಅವರು ಪಿಯುಸಿ ಪೂರೈಸಬೇಕೆಂಬ ತಮ್ಮ ಹಳೆಯ ಕನಸನ್ನು ನನಸಾಗಿಸಿಕೊಳ್ಳಲು ಈ ಬಾರಿ ಖಾಸಗಿ ಅಭ್ಯರ್ಥಿಯಾಗಿ ಕಲಾ ವಿಭಾಗದಲ್ಲಿ ಪರೀಕ್ಷೆ ಎದುರಿಸಿದ್ದರು. ಮೊದಲ ಪ್ರಯತ್ನದಲ್ಲೇ 257 ಅಂಕಗಳನ್ನು ಗಳಿಸಿ ಉತ್ತೀರ್ಣರಾಗುವ ಮೂಲಕ ಕಲಿಯುವಿಕೆಗೆ ವಯಸ್ಸು ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಇನ್ನೊಂದೆಡೆ, ಅವರ ಮಗಳಾದ ಹೇಮಶ್ರೀ ಆರ್. ಅವರು ತಾಯಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಭರ್ಜರಿ ಯಶಸ್ಸು ದಾಖಲಿಸಿದ್ದಾರೆ. ಬಿ.ಮೂಡದ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿರುವ ಹೇಮಶ್ರೀ, ಕಲಾ ವಿಭಾಗದಲ್ಲಿ 562 ಅಂಕಗಳನ್ನು ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪತ್ನಿ ಮತ್ತು ಮಗಳ ಈ ಸಾಧನೆಗೆ ಕುಟುಂಬದ ಮುಖ್ಯಸ್ಥ, ನಂದಾವರ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ರವಿಕುಮಾರ್ ಹರ್ಷ ವ್ಯಕ್ತಪಡಿಸಿದ್ದು, ಈ ತಾಯಿ-ಮಗಳ ಜೋಡಿ ಈಗ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.




Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 26°
ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 11, ಏಪ್ರಿಲ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2
ಮಂಗಳೂರು ಪಾಲಿಕೆ ಆಸ್ತಿ ತೆರಿಗೆ ಸಂಗ್ರಹದಲ್ಲಿ ಗುರಿ ಮೀರಿದ ಸಾಧನೆ



ಪುಟ 6
ಕಾಸರಗೋಡು ಇಲೆಕ್ಷನ್ ಕೆಫೆಯ 20 ಲಕ್ಷ ರೂ. ವಹಿವಾಟು!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಹೊಸ ದಿಗಂತ
ನಿಮ್ಮವರ ಮನೆಗೂ ಈ ರಾಷ್ಟ್ರ ಜಾಗೃತಿಯ ದೈನಿಕ ಪರಿಚಯಿಸಿ



ಹೆಚ್ಚಿನ ಮಾಹಿತಿಗೆ ನಮ್ಮನ್ನು ಇಲ್ಲಿ ಸಂಪರ್ಕಿಸಿ
88612 09102
88612 09100

ಶ್ರೀ ರಾಜರಾಜೇಶ್ವರೀ ಅಮ್ಮನ ಸನ್ನಿಧಿಯಲ್ಲಿ ಕಂಡಿತು 'ಪೊಳಲಿ ಚೆಂಡು' ಉತ್ಸವದ ಸಂಭ್ರಮ!



ಪುರಾಣ ಪ್ರಸಿದ್ಧ ಪೊಳಲಿ ಶ್ರೀ ರಾಜರಾಜೇಶ್ವರೀ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಪ್ರಯುಕ್ತ ಐದು ದಿನಗಳ ಪೊಳಲಿ ಚೆಂಡು ಉತ್ಸವವು ಶುಕ್ರವಾರ ಸಂಭ್ರಮ, ಸಡಗರದೊಂದಿಗೆ ಸಂಪನ್ನಗೊಂಡಿತು. ಭಾರೀ ಸಂಖ್ಯೆಯಲ್ಲಿ ಭಕ್ತಾದಿಗಳು ಹಾಜರಿದ್ದರು. ಈ ಪೊಳಲಿ ಚೆಂಡಿನ ಉತ್ಸವ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು, ಪೊಳಲಿ ಸುತ್ತಮುತ್ತಲಿನ ಗ್ರಾಮಸ್ಥರು, ಮಕ್ಕಳು ಈ ಉತ್ಸವದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ.

ಸುತ್ತಮುತ್ತ

ಅತಿಕಾರಿಬೆಟ್ಟು ಬಳಿಯಲ್ಲಿ ಎರಡು ಕಾಡುಕೋಣಗಳ ಪತ್ತೆ: ಆತಂಕದಲ್ಲಿ ಜನತೆ

ಮುಲ್ಕಿ: ಅತಿಕಾರಿಬೆಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೈಲೊಟ್ಟು ದೆಪ್ಪುಣೆಗುತ್ತು ಶಾಂಭವಿ ನದಿ ತೀರದಲ್ಲಿ ಎರಡು ಕಾಡುಕೋಣಗಳು ಪತ್ತೆಯಾಗಿದ್ದು ಸ್ಥಳೀಯರನ್ನು ಭಯಭೀತರನ್ನಾಗಿಸಿದೆ.



ಕಾಡುಕೋಣಗಳು ದೆಪ್ಪುಣೆಗುತ್ತು ಶಾಂಭವಿ ನದಿ ತೀರದ ತೋಟದಲ್ಲಿ ಮೇಯುತ್ತಿರುವುದನ್ನು ಸ್ಥಳೀಯರು ನೋಡಿ ತಕ್ಷಣವೇ ಈ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಸಂಕಷ್ಟದಲ್ಲಿದೆ ಏಷ್ಯಾ ಖಂಡದ ಅತೀ ದೊಡ್ಡ ಮೀನುಗಾರಿಕಾ ಬಂದರು

ಭದ್ರತೆ ಅತಂತ್ರ, ಸುರಕ್ಷತೆಯ ಮಂತ್ರ

ಹಲವು ಸಮಸ್ಯೆ ಸೃಷ್ಟಿಸುತ್ತಿದೆ ಟೆಂಡರ್ ಪ್ರಕ್ರಿಯೆಯಲ್ಲಿನ ವಿಳಂಬ ಧೋರಣೆ

■ ಸುದೀಪ್ ರಾಜ್ ಸುಳ್ಯ

ಉಡುಪಿ: ಏಷ್ಯಾದಲ್ಲಿನ ಅತೀ ದೊಡ್ಡ ಮೀನುಗಾರಿಕಾ ಬಂದರು ಎಂಬ ಹೆಗ್ಗಳಿಕೆ ಪಡೆದಿರುವ ಇಲ್ಲಿನ ಮಲ್ಪೆ ಬಂದರು ಇಂದು ಭದ್ರತಾ ವೈಫಲ್ಯ, ಆಡಳಿತಾತ್ಮಕ ನಿರ್ಲಕ್ಷ್ಯದ ತಾಣವಾಗಿ ಮಾರ್ಪಟ್ಟಿದೆ. ಇದಕ್ಕೆ ಕಾರಣ,



ಬಂದರು ನಿರ್ವಹಣೆಯ ಟೆಂಡರ್ ಪ್ರಕ್ರಿಯೆ ಇನ್ನೂ ಕೂಡಾ ಪೂರ್ಣಗೊಳ್ಳದಿರುವುದು.

ಟೆಂಡರ್ ಅವಧಿ ಮುಗಿದರೂ ಕ್ರಮವಿಲ್ಲ

ಕಳೆದ ಸಾಲಿನ ಟೆಂಡರ್ ಅವಧಿ ಮುಗಿದಿದ್ದರೂ, ಹೊಸ ಏಜೆನ್ಸಿಯನ್ನು ನೇಮಕ ಮಾಡುವಲ್ಲಿ ಮೀನುಗಾರಿಕಾ ಇಲಾಖೆ ತೋರುತ್ತಿರುವ ವಿಳಂಬ ನೀತಿ ಬಂದರಿನ ಸುರಕ್ಷತೆ ಹಳ್ಳ ಹಿಡಿಸಿದೆ. »ಪುಟ 2

ಇಲ್ಲಿ ಸ್ಥಾಪಿಸಿದ್ದ ತಾತ್ಕಾಲಿಕ ಪೊಲೀಸ್ ಚೌಕಿಯೂ ಗಾಯಬ್!!

ಈ ಹಿಂದೆ ಸಾರ್ವಜನಿಕರ ಒತ್ತಾಯಕ್ಕೆ ಮಣಿದು ಪ್ರವೇಶ ದ್ವಾರದಲ್ಲಿ ಸ್ಥಾಪಿಸಲಾಗಿದ್ದ ತಾತ್ಕಾಲಿಕ ಪೊಲೀಸ್ ಚೌಕಿ ಈಗ ಕಣ್ಮರೆಯಾಗಿದೆ. ದಿನದ 24 ಗಂಟೆಯೂ ಸಾವಿರಾರು ಮಂದಿ ಓಡಾಡುವ, ಕೋಟ್ಯಂತರ ರೂ. ಮೌಲ್ಯದ ಮೀನುಗಾರಿಕಾ ಉಪಕರಣ, ಡೀಸೆಲ್ ಸಂಗ್ರಹವಿರುವ ಈ ಸೂಕ್ಷ್ಮ ಪ್ರದೇಶದಲ್ಲಿ ಕನಿಷ್ಠ ಒಬ್ಬ ಪೊಲೀಸ್ ಸಿಬ್ಬಂದಿಯೂ ಇಲ್ಲ. ಕೇವಲ ಅಹಿತಕರ ಘಟನೆ ನಡೆದಾಗ ಮಾತ್ರ ಎಚ್ಚೆತ್ತುಕೊಳ್ಳುವ ವ್ಯವಸ್ಥೆ ಶಾಶ್ವತ ಹೊರಠಾಣೆ ನಿರ್ಮಿಸುವಲ್ಲಿ ಯಾಕೆ ವಿಫಲವಾಗುತ್ತಿದೆ ಎಂಬುದು ಮೀನುಗಾರರ ಪ್ರಶ್ನೆಯಾಗಿದೆ.

|| ಶ್ರೀ ವೆಂಕಟೇಶ್ವರಾಯ ನಮಃ || || ಶ್ರೀ ಲಕ್ಷ್ಮೀನಾರಾಯಣ ಮಹಮ್ಮಾಯಿ ನಮಃ ||

ಶ್ರೀಮತಿ ವಿಜಯ ಪೈ ಮತ್ತು ಶ್ರೀ ಪುರುಷೋತ್ತಮ ಪೈ ಮತ್ತು ಕುಟುಂಬಸ್ಥರು
ಇವರ ಸಂಕಲ್ಪದಲ್ಲಿ
ತಿರುಮಲ ತಿರುಪತಿ ದೇವಸ್ಥಾನ, ತಿರುಪತಿ, ಇವರಿಂದ
ಲೋಕ ಕಲ್ಯಾಣಾರ್ಥ

ದಿನಾಂಕ: 11–04–2026ನೇ ಶನಿವಾರ
ಸಂಜೆ 6.25 ಕ್ಕೆ (ಶುಭ ಗೋಧೂಳಿ ಲಗ್ನ)
ಸ್ಥಳ: ಎಸ್.ವಿ.ಎಸ್. ಕ್ರೀಡಾಂಗಣ, ಕಟಪಾಡಿ

ಆತ್ಮೀಯ ಭಕ್ತಾಭಿಮಾನಿಗಳೇ,
ಸ್ವಸ್ತಿ ಶ್ರೀ ಪರಾಭವ ನಾಮ ಸಂವತ್ಸರದ ಚೈತ್ರ ಮಾಸ ಕೃಷ್ಣ ಪಕ್ಷ
ದಿನಾಂಕ: 11–04–2026 ನೇ ಶನಿವಾರ
ಸಂಜೆ 6:25 ಕ್ಕೆ ಒದಗುವ ಶುಭ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಎಸ್.ವಿ.ಎಸ್.ಕ್ರೀಡಾಂಗಣದಲ್ಲಿ ತಿರುಮಲ ತಿರುಪತಿ ದೇವಸ್ಥಾನ, ತಿರುಪತಿ ಇವರಿಂದ ಲೋಕಕಲ್ಯಾಣಾರ್ಥ ಭೂ ವೈಕುಂಠ ಶ್ರೀ ಕ್ಷೇತ್ರ ತಿರುಮಲ ತಿರುಪತಿ ದೇವಸ್ಥಾನದಲ್ಲಿ ನಡೆಯುವ ಆಗಮ ಪದ್ಧತಿಯಂತೆ ಸರ್ವ ಪಾಪಗಳನ್ನು ಪರಿಹರಿಸಿ ಸರ್ವ ಮಂಗಳವನ್ನುಂಟು ಮಾಡುವ
ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ
ತಿರುಮಲ ತಿರುಪತಿ ದೇವಸ್ಥಾನ ಸಮಿತಿ ತಿರುಪತಿಯ ಪ್ರಧಾನ ಅರ್ಚಕ ವೃಂದ ಇವರ ನೇತೃತ್ವದಲ್ಲಿ ನಡೆಸುವುದೆಂದು ನಿಶ್ಚಯಿಸಿರುತ್ತೇವೆ. ಈ ದೇವತಾ ಕಾರ್ಯಕ್ರಮಕ್ಕೆ ಆಸ್ತಿಕ ಬಂಧುಗಳಾದ ತಾವೆಲ್ಲರೂ ಕುಟುಂಬ ಸಮೇತರಾಗಿ ಆಗಮಿಸಿ, ಪುಣ್ಯ ಕಾರ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಲ್ಯಾಣೋತ್ಸವದ ಪ್ರಸಾದ ಸ್ವೀಕರಿಸಿ, ಪದ್ಮಾವತಿ ಸಹಿತ ಶ್ರೀ ಶ್ರೀನಿವಾಸ ದೇವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಆದರಪೂರ್ವಕವಾಗಿ ಆಮಂತ್ರಿಸುವ,
ಶ್ರೀಮತಿ ವಿಜಯ ಪೈ ಮತ್ತು
ಶ್ರೀ ಪುರುಷೋತ್ತಮ ಪೈ ಮತ್ತು ಕುಟುಂಬಸ್ಥರು
ವಿಜಯ, ಕಟಪಾಡಿ



ಕಾರ್ಯಕ್ರಮಗಳ ವಿವರ
ಮಧ್ಯಾಹ್ನ 3.30ಕ್ಕೆ: ಕಟಪಾಡಿ ಪೇಟೆಗೆ ಶ್ರೀ ಶ್ರೀನಿವಾಸ ದೇವರ ಆಗಮನ
3.35ಕ್ಕೆ: ಕಟಪಾಡಿ ಪೇಟೆಯಿಂದ ಕಲ್ಯಾಣ ಮಂಟಪದ ವೇದಿಕೆಗೆ ಮೆರವಣಿಗೆ
ಸಂಜೆ 5ರಿಂದ: ಶ್ರೀ ದೇವರ ವಿವಾಹ ಮಂಟಪ ಪ್ರವೇಶ, ವಿವಾಹ ಮಂಟಪಕ್ಕೆ ಶ್ರೀ ಪದ್ಮಾವತೀ ದೇವಿಯ ಆಗಮನ, ಸ್ವರ್ಣಮಣಿ ಬಂಧನ, ಮುಹೂರ್ತ ನಿರೀಕ್ಷಣೆ, ಮಾಲಾ ಧಾರಣೆ.
ಸಂಜೆ 6.25ಕ್ಕೆ: ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಶ್ರೀ ಶ್ರೀನಿವಾಸ ದೇವರಿಗೆ ಶ್ರೀ ಪದ್ಮಾವತೀ ದೇವಿಯ ಕನ್ಯಾದಾನ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಕಂಕಣ, ಮಂಗಳಸೂತ್ರ ಸಮರ್ಪಣೆ, ವಿವಾಹ ಹೋಮ, ಮಂಗಳಾಚರಣೆ, ಮಹಾಪ್ರಸನ್ನ ಪೂಜೆ, ಅಷ್ಟಾವಧಾನ ಸೇವೆ, ತೀರ್ಥ ಪ್ರಸಾದ ವಿನಿಯೋಗ
ರಾತ್ರಿ 8 ರಿಂದ: ಸಾರ್ವಜನಿಕ ಮಹಾ ಅನ್ನಸಂತರ್ಪಣೆ

ಶ್ರೀ ವೆಂಕಟರಮಣ ದೇವರಿಗೆ ಹೂ, ಹಣ್ಣು ಹಾಗೂ ತುಳಸೀಯನ್ನು ಅರ್ಪಿಸಲು ಬಯಸುವ ಭಕ್ತಾದಿಗಳು ಅಪರಾಹ್ನ 3:00 ರ ಒಳಗಾಗಿ ಕಲ್ಯಾಣ ಮಂಟಪದಲ್ಲಿ ನೀಡಬಹುದು

ಸ್ವಾಗತ ಬಯಸುವ
• ಕೆ. ಸತ್ಯೇಂದ್ರ ಪೈ • ಕೆ.ಕೃಷ್ಣ ಮೋಹನ್ ಪೈ ಯುಎಸ್ಎ
ಇನ್ವೆಂಜರ್ ಟೆಕ್ನಾಲಜೀಸ್ ಪ್ರೈವೇಟ್ ಲಿ., ಮಂಗಳೂರು
ಅಡ್ಯಾರ್ ಪೆಟ್ರೋಲ್ ಪಂಪ್, ಮಂಗಳೂರು
ವಿಜಯಾ ಇಂಡಸ್ಟ್ರೀಸ್, ಕಟಪಾಡಿ
ಸನ್ ಮ್ಯಾಟ್ರಿಕ್ಸ್ ಆಡಿಯೋ ಲ್ಯಾಬ್, ಮಂಗಳೂರು
ಐರಥ ಆಟೋ, ಕಟಪಾಡಿ
ಸ್ಕೂಲ್ ಲೀಡರ್ ಸಿನಿಮಾ
ಇನ್ವೆಂಜರ್ ಫೌಂಡೇಶನ್
ಎಸ್.ವಿ.ಎಸ್.ವಿದ್ಯಾವರ್ಧನ ಸಂಘ, ಕಟಪಾಡಿ

ಸಂಪರ್ಕಿಸಿರಿ: 9845242167, 9964578732, 9892012060

. ವಿಶೇಷ ಚೇತನ ಹಾಗೂ ಅಶಕ್ತ ನಾಗರಿಕರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುವುದು . ತಿರುಪತಿ ದೇವಸ್ಥಾನಕ್ಕೆ ಕಾಣಿಕೆ ಕೊಡುವವರಿಗೆ ಹುಂಡಿಯ ಅವಕಾಶ ಕಲ್ಪಿಸಲಾಗಿದೆ.

ಸುತ್ತ ಮುತ್ತ

ಏ.12ರಂದು ಕಟೀಲಿನಲ್ಲಿ ಶ್ರವಣ ತಪಾಸಣೆ ಶಿಬಿರ

ಕಟೀಲು: ಶ್ರೀ ದುರ್ಗಾಪರಮೇಶ್ವರೀ ದೇವಳ ಪ್ರೌಢಶಾಲೆಯ ವಠಾರದಲ್ಲಿ ಏ.12ರಂದು ಬೆಳಗ್ಗೆ ಗಂಟೆ 10ರಿಂದ ಉಚಿತ ಕಿವಿಯ ತಪಾಸಣೆ ಮತ್ತು ಶ್ರವಣ ಯಂತ್ರ ಸಹಾಯಧನ ವಿತರಣೆ ನಡೆಯಲಿದೆ. ವೈದ್ಯೆ ಡಾ. ಅಂಕಿತಾ ಕಲ್ಲಾಡಿ ಭಾಗವಹಿಸಲಿದ್ದು ಕಟೀಲು ದೇವಸ್ಥಾನ, ಮುಲ್ಕಿ ಪ್ರೆಸ್ ಕ್ಲಬ್ ಇವರ ಸಹಕಾರದೊಂದಿಗೆ ಈ ಶಿಬಿರವನ್ನು ಟೀಮ್ ಈಶ್ವರ ಮಲ್ಪೆ ಆಯೋಜಿಸಿದೆ. 8951804399 ಈ ಸಂಖ್ಯೆಗೆ ಶಿಬಿರಾರ್ಥಿಗಳು ಹೆಸರು ನೋಂದಾಯಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಏ.23ರಿಂದ ಕಟೀಲಿನಲ್ಲಿ ಹಿಂದೂ ಧಾರ್ಮಿಕ ಶಿಬಿರ

ಕಟೀಲು: ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಶ್ರಯದಲ್ಲಿ ಪೇಜಾವರ ಮಠದ ಸಹಯೋಗದಲ್ಲಿ ಏ.23ರಿಂದ ತಾ. 30ರವರೆಗೆ ಹಿಂದೂ ಧಾರ್ಮಿಕ ಶಿಬಿರ ನಡೆಯಲಿದೆ. ಕಟೀಲು ಪ್ರೌಢಶಾಲಾ ಆವರಣದಲ್ಲಿ ದಿನಪ್ರತಿ ಬೆಳಗ್ಗೆ 9ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿರುವ ಈ ಶಿಬಿರದಲ್ಲಿ ಜಾತಿಮತ ಬೇಧವಿಲ್ಲದೆ 4ನೆಯ ತರಗತಿಂದ ಮೇಲ್ಪಟ್ಟ ಮಕ್ಕಳು, ಪುರುಷರು, ಮಹಿಳೆಯರಿಗೆ ಹಿಂದೂ ಧರ್ಮದ ಸಂಸ್ಕೃತಿ, ಆಚಾರ, ವಿಚಾರ ತಿಳಿಸಲಾಗುವುದು. ಮೈಸೂರು ರಾಮಚಂದ್ರಾಚಾರ್, ಕುತ್ಪಾಡಿ ಕೃಷ್ಣರಾಜ ಭಟ್, ಗಜಾನನ ಪೈ, ಪ್ರವೀಣ್ ಸರಳಾಯ ಮುಂತಾದವರು ತರಬೇತಿ ನೀಡಲಿದ್ದಾರೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛಿಸುವವರು ಪಾರ್ಥಸಾರಥಿ 9845228766, ಶ್ರೀವತ್ಸ ಕಟೀಲು 9880055206 ಇವರಿಗೆ ತಿಳಿಸಬಹುದಾಗಿದೆ ಎಂದು ಶ್ರೀಹರಿನಾರಾಯಣದಾಸ ಆಸ್ರಣ್ಣ ತಿಳಿಸಿದ್ದಾರೆ.

ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸಾರ್ವಜನಿಕ ಪ್ರಕಟಣೆ

ಕಿನ್ನಿಗೋಳಿ : ಪಟ್ಟಣ ಪಂಚಾಯತಿ ವ್ಯಾಪ್ತಿಯ ಆಸ್ತಿ ಮಾಲಿಕರಿಗೆ ಹಾಗೂ ಅನುಭೋಗದಾರರಿಗೆ ಸರಕಾರದ ಆದೇಶದಂತೆ 2026–27ನೇ ಸಾಲಿನ ಸ್ವಯಂಘೋಷಿತ ಆಸ್ತಿತೆರಿಗೆಯನ್ನು 2026ನೇ ಏಪ್ರಿಲ್ ತಿಂಗಳಲ್ಲಿ ಪಾವತಿ ಮಾಡಿದಲ್ಲಿ ಪ್ರತಿಶತ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತಿದೆ.
ಆಸ್ತಿ ಮಾಲಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ. 2026–27ನೇ ಸಾಲಿನ ಆಸ್ತಿ ತೆರಿಗೆ ಪಾವತಿಯಲ್ಲಿ ಶೇ.5ರಷ್ಟು ರಿಯಾಯಿತಿಯು ಎಪ್ರಿಲ್ 30ರವರೆಗೆ ಇದ್ದು ಮೇ ಮತ್ತು ಜೂನ್ ತಿಂಗಳಲ್ಲಿ ತೆರಿಗೆ ಪಾವತಿಸಿದಲ್ಲಿ ಯಾವುದೇ ದಂಡವಿರುವುದಿಲ್ಲ, ಜುಲೈ ತಿಂಗಳಿಂದ 2026–27ನೇ ಸಾಲಿನ ಆಸ್ತಿ ತೆರಿಗೆಗೆ ಪ್ರತಿ ತಿಂಗಳಿಗೆ ಶೇ2ರಷ್ಟು ದಂಡ ವಿಧಿಸಲಾಗುವುದು.
ಆಸ್ತಿ ತೆರಿಗೆ ಪಾವತಿಸಲು ಬಾಕಿ ಇದ್ದವರು ಕೂಡಲೇ ಪಾವತಿಸತಕ್ಕದ್ದು ಹಾಗೂ ಉದ್ಯಮ ಪರವಾನಿಗೆಯನ್ನು 2026–27ನೇ ಸಾಲಿಗೆ ನವೀಕರಿಸುವುದು, ಸ್ಟಾಲು ಬಾಡಿಗೆ ಹಾಗೂ ನೀರಿನ ಶುಲ್ಕವನ್ನು ಪಾವತಿಸುವುದು ಎಂದು ಪ್ರಕಟನೆ ತಿಳಿಸಿದೆ.

ಬಂಟಕಲ್ ಕಾಲೇಜಿನ ಗಣೇಶ್ ಶೆಟ್ಟಿಗೆ ಡಾಕ್ಟರೇಟ್ ಪದವಿ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕ ಗಣೇಶ್ ಶೆಟ್ಟಿ



ಬೆಂಗಳೂರು ಜೈನ್ ವಿವಿಯ ಸಹ ಪ್ರಾಧ್ಯಾಪಕ ಡಾ. ರಘು ಎನ್. ಮಾರ್ಗದರ್ಶನದಲ್ಲಿ ಮಂಡಿಸಿದ 'ಸೆಕ್ಯೂರ್ ಆ್ಯಂಡ್ ಎನರ್ಜಿ ಎಫಿಷಿಯೆಂಟ್ ಡೇಟಾ ಅಗ್ರಿಗೇಶನ್ ಮೆಕ್ಯಾನಿಸಮ್ಸ್ ಫಾರ್ ಐಒಟಿ– ಬೇಸ್ಡ್ ಹೆಲ್ತ್‌ಕೇರ್ ಅಪ್ಲಿಕೇಶನ್ಸ್' ಎಂಬ ಸಂಶೋಧನಾ ಪ್ರಬಂಧಕ್ಕೆ ಜೈನ್ ಡೀಮ್ಡ್ ಟು ಬಿ ಯುನಿವರ್ಸಿಟಿ, ಬೆಂಗಳೂರು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಮೊದಲನೇ ಪುಟದಿಂದ

ಸುರಕ್ಷತೆಯ ಮಂತ್ರ

ಟೆಂಡರ್ ಪ್ರಕ್ರಿಯೆ ಸ್ಥಗಿತಗೊಂಡಿರುವುದರಿಂದ ಬಂದರಿನಲ್ಲಿ ಸಿಸಿಟಿವಿ ಕಣ್ಗಾವಲು ಇಲ್ಲದಂತಾಗಿದೆ. ಇದರಿಂದಾಗಿ ಬೋಟ್‌ಗಳಿಂದ ಬೆಲೆಬಾಳುವ ಫಿಶ್‌ಫೈಂಡರ್‌ಗಳು ಹಾಗೂ ಮೊಬೈಲ್‌ಗಳ ಕಳ್ಳತನ ನಿರಂತರವಾಗಿ ನಡೆಯುತ್ತಿದೆ. ಹಿಂದೆ ಇದ್ದ ತಾತ್ಕಾಲಿಕ ಪೊಲೀಸ್ ಚೌಕಿಯೂ ಕಣ್ಮರೆಯಾಗಿದ್ದು, ಕೋಟ್ಯಂತರ ರೂಪಾಯಿ ವಹಿವಾಟು ನಡೆಯುವ ಈ ಸೂಕ್ಷ್ಮ ಪ್ರದೇಶದಲ್ಲಿ ಕನಿಷ್ಠ ಭದ್ರತೆಯೂ ಇಲ್ಲದಿರುವುದು ಕಳ್ಳರಿಗೆ ವರದಾನವಾಗಿದೆ. ತಪಾಸಣೆಯಿಲ್ಲದ ಮುಕ್ತ ಪ್ರವೇಶದಿಂದಾಗಿ ಹೊರರಾಜ್ಯದ ದೋಣಿಗಳು ಮತ್ತು ಸಾವಿರಾರು ಅನ್ಯರಾಜ್ಯ ಕಾರ್ಮಿಕರ ದಾಖಲೆಗಳ ಪರಿಶೀಲನೆ ಸಮರ್ಪಕವಾಗಿ ನಡೆಯುತ್ತಿಲ್ಲ, ಇದು ಕರಾವಳಿಯ ಆಂತರಿಕ ಭದ್ರತೆಗೂ ಆತಂಕ ತಂದೊಡ್ಡಿದೆ.
ಇತ್ತ ಟೆಂಡರ್ ವಿಳಂಬದಿಂದ ತ್ಯಾಜ್ಯ ವಿಲೇವಾರಿಯೂ ಸ್ಥಗಿತಗೊಂಡಿದ್ದು, ಬಂದರು ಆವರಣ ಪ್ಲಾಸ್ಟಿಕ್ ಮತ್ತು ಕೊಳಚೆ ನೀರಿನಿಂದ ದುರ್ನಾತ ಬೀರುತ್ತಿದೆ. ನೂತನ ಆರ್ಥಿಕ ವರ್ಷ ಆರಂಭವಾಗುತ್ತಿದ್ದರೂ ಇಲಾಖೆಯ ಈ ಮಂದಗತಿಯ ನಡೆ ಮೀನುಗಾರರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನಾದರೂ ಸರ್ಕಾರ ಎಚ್ಚೆತ್ತು ಟೆಂಡರ್ ಪ್ರಕ್ರಿಯೆ ಮುಗಿಸಿ, ಬಂದರಿನಲ್ಲಿ ಶಾಶ್ವತ ಪೊಲೀಸ್ ಹೊರಠಾಣೆ ಹಾಗೂ ವೈಜ್ಞಾನಿಕ ಭದ್ರತಾ ವ್ಯವಸ್ಥೆ ಕಲ್ಪಿಸಬೇಕಿದೆ.

ಸಾವಿರಾರು ಮಂದಿ ಭಕ್ತರ ಘೋಷ | ಪ್ರಾರ್ಥನೆ, ದೇವರ ಬಲಿ ಉತ್ಸವ, ಬಳಿಕ ಧ್ವಜಸ್ತಂಭ ಪೂಜೆ

ಪುತ್ತೂರು ಮಹಾಲಿಂಗೇಶ್ವರನ ಜಾತ್ರೆಗೆ ಧ್ವಜಾರೋಹಣದ ಚಾಲನೆ

ಪುತ್ತೂರು: ಇತಿಹಾಸ ಪ್ರಸಿದ್ಧ ಮಹತೋಭಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ವಾರ್ಷಿಕ ಜಾತ್ರೆಯ ಅಂಗವಾಗಿ ಶುಕ್ರವಾರ ಬೆಳಗ್ಗೆ 9.30ರ ಅನಂತರದ ವೃಷಭ ಲಗ್ನ ಸುಮುಹೂರ್ತದಲ್ಲಿ ಸಾವಿರಾರು ಮಂದಿ ಭಕ್ತರ ಘೋಷದೊಂದಿಗೆ ಧ್ವಜಾರೋಹಣ ನೆರವೇರಿಸಲಾಯಿತು.
ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಬೆಳಗ್ಗೆ ಶ್ರೀ ದೇವಾಲಯದಲ್ಲಿ ಪ್ರಾರ್ಥನೆ ನಡೆದು ಅನಂತರ ದೇವರ ಬಲಿ ಉತ್ಸವ, ಬಳಿಕ ಧ್ವಜಸ್ತಂಭ ಪೂಜೆ ನಡೆದು ಧ್ವಜಾರೋಹಣ ನೆರವೇರಿಸಲಾಯಿತು. ದೇವಸ್ಥಾನದ ಪ್ರಧಾನ ಅರ್ಚಕ ವಿ.ಎಸ್. ಭಟ್ ಮತ್ತು ವಸಂತ ಕೆದಿಲಾಯ ವೈದಿಕ ಕಾರ್ಯಕ್ರಮ ನೆರವೇರಿಸಿದರು. ಪಿ.ಜಿ. ಜಗನ್ನಿವಾಸ್ ರಾವ್ ನೇತೃತ್ವದಲ್ಲಿ ಧ್ವಜ ಏರಿಸಲಾಯಿತು. ದೇವಾಲಯದ ಎದುರು ಭಾಗದ ಕಟ್ಟೆಯಲ್ಲಿ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ಉಪಸ್ಥಿತಿಯಲ್ಲಿ ಭಗವದ್ಧ್ವಜಾರೋಹಣ ನೆರವೇರಿಸಲಾಯಿತು.
ಈ ಸಂದರ್ಭ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಮಾಜಿ ಶಾಸಕರಾದ ಸಂಜೀವ ಮಠಂದೂರು, ಶಕುಂತಳಾ ಟಿ. ಶೆಟ್ಟಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್,



ಸದಸ್ಯರಾದ ನಳಿನಿ ಪಿ. ಶೆಟ್ಟಿ ಈಶ್ವರ ಬೆಡೇಕರ್, ವಿನಯ ಸುವರ್ಣ, ದಿನೇಶ್ ಕುಲಾಲ್, ಮಹಾಬಲ ರೈ ವಳತ್ತಡ್ಕ, ಸುಭಾಷ್ ರೈ ಕಡಮಜಲು, ಕೃಷ್ಣವೇಣಿ, ದೇಗುಲದ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್ ಸಹಿತ ಗಣ್ಯರು, ಭಕ್ತರು ಪಾಲ್ಗೊಂಡರು. ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಆಗಮಿಸಿದ್ದರು.

ಹರಿದು ಬಂತು ಹಸಿರುಕಾಣಿಕೆ
ಜಾತ್ರೆ ಹಿನ್ನೆಲೆಯಲ್ಲಿ ಸೀಮೆಯ ಭಕ್ತರು ಅಡಿಕೆ, ಸೀಯಾಳ, ಬಾಳೆಗೊನೆ, ಕಬ್ಬಿನ ಜಲ್ಲೆ, ಮಾವಿನ ಕಾಯಿಯ ಗೊಂಚಲು, ಹಲಸಿನ ಕಾಯಿ, ಹಿಂಗಾರ, ತರಕಾರಿ ಮೊದಲಾದ ಸುವಸ್ತುಗಳನ್ನು ಶುಕ್ರವಾರ ಬೆಳಗ್ಗಿನಿಂದಲೇ ದೇವಾಲಯಕ್ಕೆ ತಂದೊಪ್ಪಿಸಿದ್ದಾರೆ.

ನಲ್ಕುರಿ ಸಂಪ್ರದಾಯ
ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೆ ತುಳು ಪಂಚಾಂಗದಂತೆ ಹಿಂದಿನಿಂದಲೂ ನಿಗದಿತ ದಿನಗಳಂದೇ ನಡೆಯುತ್ತದೆ. ತುಳು ಧಾರ್ಮಿಕ ಸಂದರ್ಭದಲ್ಲಿ ಇದನ್ನು ನಲ್ಕುರಿ ಸಂಪ್ರದಾಯ ಎಂದು ಕರೆಯಲಾಗುತ್ತದೆ.

ಗರುಡ ಹಾರಾಟ
ಪ್ರತಿ ವರ್ಷದಂತೆ ಈ ಬಾರಿಯೂ ಜಾತ್ರಾ ಧ್ವಜಾರೋಹಣದ ಸಂದರ್ಭದಲ್ಲಿ ದೇವಾಲಯದ ಮೇಲ್ಭಾಗದಲ್ಲಿ ಗರುಡ ಸುತ್ತು ಹೊಡೆಯುವ ದೃಶ್ಯ ಕಂಡು ಬಂತು.

ಧ್ವಜಾರೋಹಣದ ಬಳಿಕ ಸುವಸ್ತುಗಳನ್ನು ಧ್ವಜಸ್ತಂಭದ ಕಟ್ಟೆಗೆ ಸುತ್ತಲೂ ಆಕರ್ಷಕವಾಗಿ ಕಟ್ಟಲಾಯಿತು. ಪ್ರಥಮ ದಿನವೇ ಮಧ್ಯಾಹ್ನ ಸಾವಿರಾರು ಮಂದಿ ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು.

ಜೀರ್ಣೋದ್ಧಾರ ಉದ್ಘಾಟನೆ
ಇದೇ ವೇಳೆ ಜೀರ್ಣೋದ್ಧಾರಕ್ಕೆ ಸಂಬಂಧಿಸಿದ ಕಚೇರಿಯನ್ನು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ರೈ ಉದ್ಘಾಟಿಸಿದರು. ಜೀರ್ಣೋದ್ಧಾರ, ಅಭಿವೃದ್ಧಿಗೆ ಸಂಬಂಧಿಸಿದಂತೆ ದೇಣಿಗೆ ಸಂಗ್ರಹ ಕೇಂದ್ರ ಆರಂಭಿಸಲಾಗಿದ್ದು ಭಕ್ತರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಪೇಟೆ ಸವಾರಿ ಆರಂಭ
ರಾತ್ರಿ ಅಂಕುರಾರ್ಪಣೆಯ ಬಳಿಕ ಶ್ರೀ ದೇವರ ಬಲಿ ಉತ್ಸವ, ಬಳಿಕ ಪೇಟೆ ಸವಾರಿಯು ಬೊಳುವಾರು, ಶ್ರೀರಾಮ ಪೇಟೆ, ಕಜ್ಜಾಲು, ರಕ್ತೇಶ್ವರಿ ದೇವಸ್ಥಾನ, ಕಲ್ಲೇಗ, ಕರ್ಮಲ ತನಕ ತೆರಳಿ ತಡರಾತ್ರಿ ದೇವಾಲಯಕ್ಕೆ ತಲುಪಿತು. ಜಾತ್ರೆಯ ಅಂಗವಾಗಿ ಏ.11ರಂದು ಬೆಳಗ್ಗೆ ಬಲಿ ಉತ್ಸವ, ರಾತ್ರಿ ಉತ್ಸವದ ಬಳಿಕ ಶ್ರೀ ದೇವರ ಪೇಟೆ ಸವಾರಿಯು ನೆಲ್ಲಿಕಟ್ಟೆ ಸಾಲ್ಮರ, ಸೂತ್ರಬೆಟ್ಟುಗಳಲ್ಲಿ ನಡೆಯಲಿದೆ. ಮಧ್ಯಾಹ್ನ ಕೆ.ಎಸ್.ಆರ್.ಟಿ.ಸಿ. ಅಧಿಕಾರಿ, ಸಿಬಂದಿ ವರ್ಗದಿಂದ ಅನ್ನಸಂತರ್ಪಣೆ ನಡೆಯಲಿದೆ.

ಧಾರ್ಮಿಕ ಚರಿತ್ರೆ
ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೆ ಪ್ರತಿವರ್ಷ ಏ.10ರಿಂದ 20ರ ತನಕ ನಡೆಯುತ್ತದೆ. ಈ ವೇಳೆ ದೇವರು ದಶ ದಿಕ್ಕುಗಳಿಗೆ ಪೇಟೆ ಸವಾರಿ ಉತ್ಸವದಲ್ಲಿ ತೆರಳಿ ಭಕ್ತರ ಕಟ್ಟೆಪೂಜೆ ಸೇವೆಯನ್ನು ಸ್ವೀಕರಿಸುವುದು ಮತ್ತು ವರ್ಷ ಕಳೆದಂತೆ ಕಟ್ಟೆಪೂಜೆ ಸೇವೆಗಳು ಮತ್ತಷ್ಟು ವಿಜೃಂಭಣೆಯಿಂದ ನಡೆಯುತ್ತಿರುವುದು ಪುತ್ತೂರು ಜಾತ್ರೆಯ ವಿಶೇಷತೆಗಳಲ್ಲಿ ಒಂದು. 10 ದಿನಗಳ ಕಾಲ ಪೇಟೆ ಸವಾರಿ ನಡೆಯುವ ಜಾತ್ರೆ ದ.ಕ. ಜಿಲ್ಲೆಯ ಮಟ್ಟಿಗೆ ಧಾರ್ಮಿಕ ಚರಿತ್ರೆಯಾಗಿದೆ.

ಸಸಿಹಿತ್ಲು: ನಡಾವಳಿ ಉತ್ಸವದ ಪೂರ್ವಭಾವಿ ಭಂಡಾರ ಆಗಮನ



ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ನಡಾವಳಿ ಮಹೋತ್ಸವದ ಪೂರ್ವಭಾವಿಯಾಗಿ
ಏ.9ರಂದು ರಾತ್ರಿ ಕದಿಕೆ ಭಂಡಾರಮನೆಯಿಂದ ಶ್ರೀ ಕ್ಷೇತ್ರಕ್ಕೆ ಭಂಡಾರ ಆಗಮನ ನಡೆಯಿತು.ಏ. 10ರಂದು ಬೆಳಗ್ಗೆ ನಾಗ ತಂಬಿಲ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ರಾತ್ರಿ 11ರಿಂದ ನಡಾವಳಿ , ಮಹಾ ಪೂಜೆ, ಬಲಿ ಪ್ರಾರಂಭ, ಮೂರ್ತಿ ಬಲಿ, ಕಂಚೀಲು ಸೇವೆ, ಉರುಳು ಸೇವೆ ಹರಕೆ, ತುಲಾಭಾರ ಸೇವೆ ನಡೆಯಿತು
ಏ.11ರಿಂದ ಭರಣಿ ಮಹೋತ್ಸವ, ಬೆಳಗ್ಗೆ 10.25ಕ್ಕೆ ಮಿಥುನ ಲಗ್ನ ಸುಮುಹೂರ್ತದಲ್ಲಿ ಧ್ವಜಾರೋಹಣ, ರಾತ್ರಿ ಮಹಾಪೂಜೆ, 12ರಂದು ರಾತ್ರಿ 10ರಿಂದ ಪೂತಾಲಂಬ ಬಲಿ, ಮೂರ್ತಿ ದರ್ಶನ, ಪುಷ್ಪಕಲ ಹರಕೆ, ತುಲಾಭಾರ ಸೇವೆ, 13ರಂದು ರಾತ್ರಿ 10ಕ್ಕೆ ಪಡುನಡೆ, ಅಮೃತಕಲಶ, ಕಂಚೀಲು ಸೇವೆ, ಮೂರ್ತಿ ದರ್ಶನ, 14ರಂದು ರಾತ್ರಿ 10ಕ್ಕೆ ತಾಲ ಪೋಲ ಬಲಿ ಉತ್ಸವ, ಮೂರ್ತಿ ದರ್ಶನ, ಚತುರ್ಕಳ, 15ರಂದು ರಾತ್ರಿ 9ರಿಂದ, ಮೂಡುನಡೆ ಬಲಿ, ಮೂರ್ತಿ ದರ್ಶನ, ಕಂಚೀಲು ಸೇವೆ, ಉರುಳು ಸೇವೆ, ಸರ್ಪಕಳ, ಅಮೃತಕಲಶ, ತೂಟೆದಾರ, ತುಲಾಭಾರ ಸೇವೆ, 16ರಂದು ಬೆಳಗ್ಗೆ ಧ್ವಜಾ ವರೋಹಣ, ಭಂಡಾರ ನಿರ್ಗಮನ ನಡೆಯಲಿದೆ. ಏ.19ರಂದು ಬೆಳಗ್ಗೆ 6.17ರಿಂದ ಓಂ ನಮೋ ಭಗವತೆ ವಾಸುದೇವಾಯ ದ್ವಾದಶಾಕ್ಷರ ಮಂತ್ರೋಚ್ಛಾರ, 20ರಂದು ಬೆಳಗ್ಗೆ 6.16ಕ್ಕೆ ಮಹಾ ಮಂಗಳಾರತಿ, 22ರಂದು ಕದಿಕೆ ಭಂಡಾರ ಮನೆಯಲ್ಲಿ ದೀಪಾರಾಧನೆ, ಪ್ರೊಕಣ್ಣ ದೈವ, ಇತರ ದೈವಗಳಿಗೆ ತಂಬಿಲ ನಡೆಯಲಿದೆ.

ಸಮಾನ ಮನಸ್ಕ ಸಂಘಟನೆ ಮಹಾಸಭೆ, ಅಧ್ಯಕ್ಷರಾಗಿ ಮೋಹನ್ ಶೆಟ್ಟಿ ಪುನರಾಯ್ಕೆ

ಬಂಟ್ವಾಳ: ಸಮಾನ ಮನಸ್ಕ ಸಂಘಟನೆಯ ಸಮನ್ವಯ ಸಮಿತಿ ಬಂಟ್ವಾಳ ಇದರ 10 ನೇ ವಾರ್ಷಿಕ ಮಹಾಸಭೆಯು ಬಿ.ಸಿ.ರೋಡಿನಲ್ಲಿ ನಡೆಸಲಾಯಿತು.
ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಮೋಹನ್ ಶೆಟ್ಟಿ ಪಂಜಿಕಲ್ಲು ವಹಿಸಿದ್ದರು.
ಗತವರ್ಷದ ವರದಿ ಮತ್ತು ಲೆಕ್ಕ ಪತ್ರ ಕಾರ್ಯದರ್ಶಿ ಸುರೇಶ್ ಕುಮಾರ್ ವಾಚಿಸಿದರು.



ಕೆಲವೊಂದು ಪ್ರಮುಖ ನಿರ್ಣಯ ಕೈಗೊಳ್ಳಲಾಯಿತು. ಕಳೆದ 23 ವರ್ಷಗಳಿಂದ ನಿಯಮ ಉಲ್ಲಂಘಿಸಿ ಕಾರ್ಯಾಚರಿಸುತ್ತಿರುವ ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವುಗೊಳಿಸಲು ಈಗಾಗಲೇ ಆರಂಭಿಸಲಾಗಿರುವ ಹೋರಾಟ ತೀವ್ರಗೊಳಿಸುವುದಲ್ಲದೆ ಈ ಟೋಲ್ ಗೇಟ್ ತೆರವಾಗುವ ತನಕ ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವು ಹೋರಾಟ ಸಮಿತಿ ಹಮ್ಮಿಕೊಳ್ಳುವ ಯಾವುದೇ ಹೋರಾಟಕ್ಕೆ ಬೆಂಬಲಿಸುವುದು ಮತ್ತು ಟೋಲ್ ತೆರವಾಗದೇ ನಾವು ವಿರಮಿಸವೆವು ಎಂಬ ಮಹತ್ವದ ನಿರ್ಣಯ ಕೈಗೊಳ್ಳಲಾಯಿತು. ಮಹಾಸಭೆಯನ್ನು ಉದ್ದೇಶಿಸಿ ಸಂಘಟನೆ ಗೌರವಾಧ್ಯಕ್ಷ ರಾಜಾ ಚಂಡ್ತಿಮಾರ್, ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವು ಹೋರಾಟ ಸಮಿತಿ ಸಂಚಾಲಕ ಬಿ.ಶೇಖರ್, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಅಬ್ಬಾಸ್ ಅಲಿ ಮಾತನಾಡಿದರು.

ಸಮಿತಿ ರಚನೆ
2025–26ನೇ ಸಾಲಿಗೆ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಮೋಹನ್ ಶೆಟ್ಟಿ ಪಂಜಿಕಲ್ಲು ಅವರು ಪುನರಾಯ್ಕೆಯಾದರು. ಉಳಿದಂತೆ ಗೌರವಾಧ್ಯಕ್ಷರಾಗಿ ರಾಜಾ ಚಂಡ್ತಿಮಾರ್, ಉಪಾಧ್ಯಕ್ಷರಾಗಿ ಸೀತಾರಾಮ ಶೆಟ್ಟಿ ಕಾಂತಾಡಿಗುತ್ತು, ಕೇಶವ ಪೂಜಾರಿ, ಲೋಕೇಶ್ ಸುವರ್ಣ, ಜಗನ್ನಾಥ ಬಂಟ್ವಾಳ ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಕುಮಾರ್, ಸಹಕಾರ್ಯದರ್ಶಿಗಳಾಗಿ ಮ್ಯಾಥ್ಯೂ ಒ.ಸಿ., ಶ್ರೀನಿವಾಸ ಭಂಡಾರಿ, ಮುಹಮ್ಮದ್ ನಂದಾವರ, ಪ್ರೇಮನಾಥ್ ಕೆ., ಕೋಶಾಧಿಕಾರಿಯಾಗಿ ಮ್ಯಾಕ್ಸಿಂ ಡಿಸೋಜಾ, ಸಂಘಟನಾ ಕಾರ್ಯದರ್ಶಿಯಾಗಿ ಸಾಧಿಕ್ ಬಂಟ್ವಾಳ್, ಸಾಮಾಜಿಕ ಜಾಲತಾಣದ ಸಂಚಾಲಕರಾಗಿ ಉಮ್ಮರ್ ಸಾಲೆತ್ತೂರು ಆಯ್ಕೆಯಾದರು. ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಸ್ವಾಗತಿಸಿ, ಸಹಕಾರ ಕಾರ್ಯದರ್ಶಿ ಪ್ರೇಮನಾಥ ಕೆ.ವಂದಿಸಿದರು.

ಸುಜ್ಞಾನ ಪಿಯು ಕಾಲೇಜು ರಾಜ್ಯಮಟ್ಟದ ರ‍್ಯಾಂಕ್, ಶೇ.100 ಫಲಿತಾಂಶ ಸಂತಸ ತಂದಿದೆ

ಕುಂದಾಪುರ: ಯಡಾಡಿ ಮತ್ಯಾಡಿಯ ಸುಜ್ಞಾನ ಪಿಯು ಕಾಲೇಜು ಆರಂಭಗೊಂಡು ಒಂದು ವರ್ಷದಲ್ಲೇ ಪ್ರಥಮ ಬ್ಯಾಚ್‌ನ ಪಿಯುಸಿ ಫಲಿತಾಂಶದಲ್ಲಿ ರಾಜ್ಯಮಟ್ಟದ ರ‍್ಯಾಂಕ್ ಮತ್ತು ಶೇ.100 ಫಲಿತಾಂಶ ದಾಖಲಿಸಿರುವುದು ಸಂತಸ ತಂದಿದೆ ಎಂದು ಸಂಸ್ಥೆ ಅಧ್ಯಕ್ಷ ಡಾ.ರಮೇಶ ಶೆಟ್ಟಿ ಹೇಳಿದರು.
ಸುಜ್ಞಾನ ಪಿಯು ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025–2026ನೇ ಸಾಲಿನ ಪಿಯುಸಿ ಫಲಿತಾಂಶದಲ್ಲಿ ಕುಂದಾಪುರ ಸುಜ್ಞಾನ ಪಿಯು ಕಾಲೇಜಿನ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಗಳು ಅಮೋಘ ಸಾಧನೆ ಮಾಡಿದ್ದಾರೆ. ಕೇವಲ 11 ವಿದ್ಯಾರ್ಥಿಗಳಿಂದ 2024–2025ರಲ್ಲಿ ಆರಂಭವಾದ ಸುಜ್ಞಾನ ಪಿಯು ಕಾಲೇಜು ದ್ವಿತೀಯ ಪಿಯುಸಿಗೆ ಬೇರೆ ಕಾಲೇಜುಗಳಿಂದ ಸುಮಾರು 100 ವಿದ್ಯಾರ್ಥಿಗಳು ದಾಖಲಾತಿ ಪಡೆದು ಒಟ್ಟು 125 ವಿದ್ಯಾರ್ಥಿಗಳು ಈ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಉತ್ತಮ ಅಂಕ ಗಳಿಸಿ ಕಾಲೇಜಿನ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ. ಸಂಸ್ಥೆಯ ವಿದ್ಯಾರ್ಥಿನಿ ಸ್ಪಂದನಾ ಆರ್. ಶೆಟ್ಟಿ 592 ಅಂಕಗಳನ್ನು ಪಡೆದು ರಾಜ್ಯಕ್ಕೆ 9ನೇ ರ‍್ಯಾಂಕ್ ಪಡೆದಿದ್ದಾರೆ. ವಿಶೇಷವೆಂದರೆ ಸ್ಪಂದನಾ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 84 ಅಂಕ ಪಡೆದರೂ ಕೂಡ ದ್ವಿತೀಯ ಪಿಯುಸಿಯಲ್ಲಿ ಶೇ.98.7 ಅಂಕ ಗಳಿಸುವುದರ ಮೂಲಕ ಶ್ರೇಷ್ಠ ಸಾಧನೆಯನ್ನು ಮೆರೆದಿದ್ದಾರೆ. 22 ವಿದ್ಯಾರ್ಥಿಗಳು ಶೇ. 95ಕ್ಕಿಂತ ಅಧಿಕ ಅಂಕ ಪಡೆದು ಎಂದು ಹೇಳಿದರು.
ಸಂಸ್ಥೆಯ ಕಾರ್ಯದರ್ಶಿ ಪ್ರತಾಪ್ ಚಂದ್ರ ಶೆಟ್ಟಿ ಮಾತನಾಡಿ, ಉತ್ತಮ ಫಲಿತಾಂಶ ಪಡೆದವರಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಎರಡು ವರ್ಷಗಳ ಹಿಂದಿನ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಾಧಾರಣ ಅಂಕಗಳನ್ನು ಪಡೆದಿದ್ದರು. ಎಸೆಸ್ಸೆಲ್ಸಿ ಫಲಿತಾಂಶಕ್ಕೆ ಹೋಲಿಸಿದರೆ ಈ ವಿದ್ಯಾರ್ಥಿಗಳ ಪಿಯುಸಿ ಫಲಿತಾಂಶದಲ್ಲಿ ಗಣನೀಯ ಏರಿಕೆಯಾಗಿದೆ. ಪ್ರಥಮ ವರ್ಷದಲ್ಲೇ ಒಂದು ರ‍್ಯಾಂಕ್ ಹಾಗೂ ಶೇ.100 ಫಲಿತಾಂಶ ಪಡೆದಿರುವುದು ಸಂಸ್ಥೆಯ ಗುಣಮಟ್ಟದ ಶಿಕ್ಷಣಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರು.
ಖಜಾಂಚಿ ಭರತ್ ಶೆಟ್ಟಿ ಮಾತನಾಡಿ, ಶೈಕ್ಷಣಿಕ ಗುಣಮಟ್ಟದ ಜೊತೆಗೆ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವದ ಬೆಳವಣಿಗೆ ನಮ್ಮ ಆದ್ಯತೆ. ಸಂಸ್ಥೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಪರಂಪರೆ ಪರಿಚಯಿಸುವ ಚಟುವಟಿಕೆಗಳು ಹಾಗೂ ಆಟೋಟಗಳಿಗೂ ಪ್ರಾಮುಖ್ಯ ನೀಡಲಾಗುತ್ತಿದೆ. ಶೈಕ್ಷಣಿಕ ಗುಣಮಟ್ಟದ ಜೊತೆಗೆ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವದ ಬೆಳವಣಿಗೆ ನಮ್ಮ ಆದ್ಯತೆಯಾಗಿದೆ. ಉತ್ತಮ ಶೈಕ್ಷಣಿಕ ಪರಿಸರ ಕಾಯ್ದುಕೊಳ್ಳಲು ಹೆಚ್ಚು ಗಮನ ನೀಡುತ್ತಿದ್ದೇವೆ ಎಂದು ಅವರು ಹೇಳಿದರು.
ಸಂಸ್ಥೆಯ ಪ್ರಾಂಶುಪಾಲ ರಂಜನ್ ಬಿ. ಶೆಟ್ಟಿ ಮೂಜಾ ಶೆಟ್ಟಿ ಪ್ರಮತ್ ಶೆಟ್ಟಿ ರಘುರಾಮ ಶೆಟ್ಟಿ ಮಾಲತಿ ಆರ್. ಶೆಟ್ಟಿ ರ‍್ಯಾಂಕ್ ಗಳಿಸಿದ ಕಾಲೇಜಿನ ವಿದ್ಯಾರ್ಥಿನಿ ಸ್ಪಂದನಾ ಆರ್. ಶೆಟ್ಟಿ ಉಪಸ್ಥಿತರಿದ್ದರು.

ಉಜಿರೆ ರತ್ನಮಾನಸ ವಿದ್ಯಾರ್ಥಿ ನಿಲಯದಲ್ಲಿ ಅಕ್ಷರ ಜ್ಞಾನ ಶಿಬಿರ ಸಂಪನ್ನ



ಬೆಳ್ತಂಗಡಿ: ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ರತ್ನಮಾನಸ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ 6 ದಿನಗಳ ಅಕ್ಷರ ಜ್ಞಾನ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.
ಉಜಿರೆಯ ಎಸ್.ಡಿ.ಎಂ ವಸತಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸುನಿಲ್ ಪಂಡಿತ್ ಮುಖ್ಯ ಅತಿಥಿಗಳಾಗಿ ರತ್ನಮಾನಸ ನಿಲಯದಲ್ಲಿ ಕಳೆದ ಅನುಭವವನ್ನು ಹಂಚಿಕೊಂಡರು. ಮಾತೃ ಭಾಷೆ ಮತ್ತು ಮಾತೃ ಸಂಸ್ಥೆಗೆ ವಿದ್ಯಾರ್ಥಿಗಳು ಮೊದಲ ಪ್ರಾಶಸ್ತ್ಯ ನೀಡಿ ಸದಾ ಋಣಿಯಾಗಿರಬೇಕು. ಕ್ರಿಯಾಶೀಲತೆಯ ಜತೆಗೆ ಸ್ವಂತಿಕೆಯನ್ನು ಬೆಳೆಸಿಕೊಂಡರೆ ಬದುಕಿನಲ್ಲಿ ಯಶಸ್ಸು ಗಳಿಸಲು ಸಾಧ್ಯ.ಜೀವನದಲ್ಲಿ ಕಲಿಕೆ ಎಂಬುದು ನಿರಂತರವಾಗಿರಬೇಕು ಎಂದರು.
ಸಂಪನ್ಮೂಲ ವ್ಯಕ್ತಿಗಳಾಗಿ ಉಜಿರೆಯ ಸಾಹಿತಿ ಅರುಣಾ ಶ್ರೀನಿವಾಸ ಅರಿ ಪ್ಪಾಡಿ ಮಾತನಾಡಿದರು. ರತ್ನಮಾನಸ ವಿದ್ಯಾರ್ಥಿ ನಿಲಯದ ಪಾಲಕ ಯತೀಶ್ ಕೆ ಬಳಂಜ ಅಧ್ಯಕ್ಷತೆ ವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ನಿಲಯದ ವಿದ್ಯಾರ್ಥಿಗಳು ಸೇರಿದಂತೆ ಪಾಲಕರಾದ ರವಿಚಂದ್ರ, ಉದಯರಾಜ್, ದೀಪಕ್ ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ವಿದ್ಯಾರ್ಥಿಗಳಾದ ಪ್ರಥಮ್ ಕೆ., ರೋಹಿತ್ ಮತ್ತು ರಾಕೇಶ್ ಡಿ ಆರ್ ಪ್ರಾರ್ಥಿಸಿ, ಗೌತಮ್ ಎನ್. ಸ್ವಾಗತಿಸಿ, ಮಹಾಂತೇಶ್ ವಂದಿಸಿದರು. ಸಮ್ಯಕ್ ನಿರೂಪಿಸಿದರು.

ಎಸ್.ಕೆ. ಗೋಲ್ಡ್‌ಸ್ಮಿತ್ಸ್ ಸೊಸೈಟಿ ಅಪಘಾತ ವಿಮೆ ಸೌಲಭ್ಯ ಪಾವತಿ



ಮಂಗಳೂರು: ಎಸ್. ಕೆ. ಗೋಲ್ಡ್‌ಸ್ಮಿತ್ಸ್ ಇಂಡಸ್ಟ್ರಿಯಲ್ ಕೋ–ಆಪರೇಟಿವ್ ಸೊಸೈಟಿ ಲಿ. ಇದರ ವತಿಯಿಂದ ಸಂಘದ ಸದಸ್ಯರಿಗೆ ಉಚಿತ ಅಪಘಾತ ವಿಮೆ 01.4.2025 ರಿಂದ ಜಾರಿಗೊಳಿಸಿದ್ದು, ಇತ್ತೀಚಿಗೆ ಅಪಘಾತದಲ್ಲಿ ಮೃತರಾಗಿರುವ ಕೊಟ್ಟಾರಚೌಕಿ ಶಾಖೆಯ ಮಾಜಿ ಜನತಾ ನಿಧಿ ಸಂಗ್ರಾಹಕ ಹಾಗೂ ಸದಸ್ಯ ಅಶೋಕ್ ಆಚಾರ್ಯ ಬಿ. ಅವರ ಪತ್ನಿ ಜಯಂತಿ ಅಶೋಕ್ ಅವರಿಗೆ ಸಂಸ್ಥೆಯ ಅಧ್ಯಕ್ಷ ಪಿ. ಉಪೇಂದ್ರ ಆಚಾರ್ಯರು ವಿಮಾ ಮೊತ್ತ ರೂ.2 ಲಕ್ಷದ ಚೆಕ್‌ನ್ನು ವಿತರಿಸಿದರು.
ಉಪಾಧ್ಯಕ್ಷ ಎ.ಆನಂದ ಆಚಾರ್ಯ, ನಿರ್ದೇಶಕರಾದ ಕೆ. ಯಜ್ಞೇಶ್ವರ ಆಚಾರ್ಯ, ಶ್ರೀ ವೈ.ವಿ. ವಿಷ್ಣುಮೂರ್ತಿ, ಕೆ. ಶಶಿಕಾಂತ್ ಆಚಾರ್ಯ, ಮಲ್ಲಪ್ಪ ಎನ್ ಪತ್ತಾರ್, ರೋಹಿಣಿ ಎಂ.ಪಿ., ಜ್ಯೋತಿ ಎಂ.ವಿ., ರಮೇಶ್ ರಾವ್ ಯು., ಕೆ. ಪ್ರಕಾಶ್ ಆಚಾರ್ಯ, ಮಂಜುನಾಥ ಆಚಾರ್ಯ, ಚಂದ್ರಶೇಖರ ಎ.ಎಸ್, ಪ್ರಧಾನ ವ್ಯವಸ್ಥಾಪಕ ಯಜ್ಞೇಶ್ವರ ಇದ್ದರು.

ವಿಕೆ ಫರ್ನಿಚರ್–ಎಲೆಕ್ಟ್ರಾನಿಕ್ಸ್: ವಿಶೇಷ ಕಾಂಬೋ ಆಫರ್ 'ವಿವಾಹ ಬಂಧನ್' ಗ್ರಾಹಕರಿಗೆ ಭರ್ಜರಿ ರಿಯಾಯಿತಿ ಸೌಲಭ್ಯ



ಮಂಗಳೂರು: ಮದುವೆ ಸಂಭ್ರಮವನ್ನು ಇನ್ನಷ್ಟು ವಿಶೇಷಗೊಳಿಸಲು ವಿಕೆ ಫರ್ನಿಚರ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯು ವಿವಾಹ ಬಂಧನ್ ಎಂಬ ಹೆಸರಿನಲ್ಲಿ ಆಕರ್ಷಕ ಕಾಂಬೋ ಆಫರ್‌ಗಳನ್ನು ಘೋಷಿಸಿದೆ. ಮನೆಗೆ ಅಗತ್ಯವಾದ ಫರ್ನಿಚರ್ ಹಾಗೂ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಒಂದೇ ಪ್ಯಾಕೇಜ್‌ನಲ್ಲಿ ಕಡಿಮೆ ದರದಲ್ಲಿ ಪಡೆಯುವ ಸುವರ್ಣಾವಕಾಶ ಇದಾಗಿದೆ.

VK FURNITURE & ELECTRONICS

ಪ್ಲಾಟಿನಂ ಕಾಂಬೊ: ಬೆಡ್‌ರೂಮ್ ಸೆಟ್, ಕಾರ್ನರ್ ಸೋಫಾ ಸೆಟ್, 6 ಜನರ ಡೈನಿಂಗ್ ಸೆಟ್, 55" 455" 4K QLED ಟಿವಿ, ಸೈಡ್ ಬೈ ಸೈಡ್ ಫ್ರಿಜ್, ಫ್ರಂಟ್ ಲೋಡ್ ವಾಷಿಂಗ್ ಮೆಷಿನ್ ಸೇರಿದಂತೆ ಸಂಪೂರ್ಣ ಮನೆ ಸಜ್ಜು ಆಫರ್ ಬೆಲೆ: 2,49,999 (ಎಂಆರ್‌ಪಿ 3,86,330);
ಗೋಲ್ಡ್ ಕಾಂಬೊ: ಬೆಡ್‌ರೂಮ್ ಸೆಟ್, ಸೋಫಾ ಸೆಟ್ 3+1+1, 6 ಜನರ ಡೈನಿಂಗ್ ಸೆಟ್, 43" QLED ಟಿವಿ, ಡಬಲ್ ಡೋರ್ ಫ್ರಿಜ್, ಆಫರ್ ಬೆಲೆ: 1,52,999 (ಎಂಆರ್‌ಪಿ 2,38,520)
ಸಿಲ್ವರ್ ಕಾಂಬೊ: ಬೆಡ್‌ರೂಮ್ ಸೆಟ್, ಸೋಫಾ ಸೆಟ್ 3+1+1, 4 ಜನರ ಡೈನಿಂಗ್ ಸೆಟ್, 32" ಸ್ಮಾರ್ಟ್ ಟಿವಿ, ಸಿಂಗಲ್ ಡೋರ್ ಫ್ರಿಜ್. ಆಫರ್ ಬೆಲೆ: 1,08,999 (ಎಂಆರ್‌ಪಿ 1,62,320). ಗ್ರಾಹಕರ ಸೌಕರ್ಯಕ್ಕಾಗಿ 0 ಡೌನ್ ಪೇಮೆಂಟ್, 100% ಫೈನಾನ್ಸ್ ಮತ್ತು ಸುಲಭ ಇಎಂಐ ಸೌಲಭ್ಯಗಳು ಲಭ್ಯವಿವೆ. ಈ ವಿಶೇಷ ಆಫರ್‌ಗಳು ಮಂಗಳೂರಿನ ಯೆಯ್ಯಾಡಿ, ತೊಕ್ಕೊಟ್ಟು, ವಾಮಂಜೂರು ಮತ್ತು ಲೇಡಿಹಿಲ್ ಶೋರೂಮ್‌ಗಳಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ 8748800666 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

2025-26ರ ಆಡಳಿತಾಧಿಕಾರಿಗಳ ಅವಧಿಯಲ್ಲಿ 149.68 ಕೋಟಿ ರೂ. ತೆರಿಗೆ ಸಂಗ್ರಹ | 112 ಕೋಟಿ ರೂ. ಗುರಿ ನಿಗದಿ

ಮಂಗಳೂರು ಮಹಾನಗರ ಪಾಲಿಕೆ ಆಸ್ತಿ ತೆರಿಗೆ ಸಂಗ್ರಹದಲ್ಲಿ ಗುರಿ ಮೀರಿದ ಸಾಧನೆ

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ 2025–26ನೇ ಸಾಲಿನಲ್ಲಿ ಆಡಳಿತಾಧಿಕಾರಿಗಳ ಅವಧಿಯಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಗುರಿ ಮೀರಿದ ಸಾಧನೆ ಮಾಡಿದ್ದು 149.68 ಕೋಟಿ ರೂ. ತೆರಿಗೆ ಸಂಗ್ರಹಿಸಿದೆ. 112 ಕೋಟಿ ರೂ. ಗುರಿ ನಿಗದಿಯಾಗಿದ್ದು, ಇದನ್ನು ಮೀರಿ ತೆರಿಗೆ ಸಂಗ್ರಹವಾಗಿದೆ ಎಂದು ಮನಪಾ ಆಯುಕ್ತ ರವಿಚಂದ್ರ ನಾಯಕ್ ತಿಳಿಸಿದರು.
2023–24ರಲ್ಲಿ 117 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹವಾಗಿದ್ದು, 2024–25ರ ಸಾಲಿನಲ್ಲಿ 137 ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ. ವರ್ಷದಿಂದ ವರ್ಷಕ್ಕೆ ತೆರಿಗೆ ಸಂಗ್ರಹದಲ್ಲಿ ಗಣನೀಯವಾಗಿ ಏರಿಕೆ ಕಾಣುತ್ತಿದೆ. ಪಾಲಿಕೆಯ 60 ವಾರ್ಡ್‌ಗಳಲ್ಲಿ 1,75,724 ವಸತಿಗಳಿದ್ದು, 44,074 ವಾಣಿಜ್ಯ, 1,175 ಕೈಗಾರಿಕೆ ಹಾಗೂ ಗೃಹೇತರ 1,283 ಸೇರಿ ಒಟ್ಟು



2,22,256 ಆಸ್ತಿಗಳಿವೆ. ಮಾರ್ಚ್ ಅಂತ್ಯದ ವೇಳೆಗೆ ಇದು 150 ಕೋಟಿ ರೂ. ದಾಟಿ ಸಂಗ್ರಹವಾಗಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.
ಆಸ್ತಿ ತೆರಿಗೆ ನಿರ್ಧರಣೆಗೆ ಸಂಬಂಧಿಸಿ ಮಂಗಳೂರು ಪಾಲಿಕೆ ಪದವು, ಅತ್ತಾವರ, ಹಂಪನಕಟ್ಟೆ ವಾರ್ಡ್‌ಗಳನ್ನು ಪೈಲಟ್ ಯೋಜನೆಯಾಗಿ ತೆಗೆದುಕೊಳ್ಳಲಾಗಿದೆ. ಆಸ್ತಿ ತೆರಿಗೆ ಹೇಗೆ ನಿರ್ಧರಿಸಬೇಕು ಎಂಬ ಬಗ್ಗೆ ಪಾಲಿಕೆಯ ಕಂದಾಯ ಅಧಿಕಾರಿ, ಸಿಬ್ಬಂದಿ ಜೊತೆ ಶೇ.50ರಷ್ಟು ಪ್ರಾಥಮಿಕ ಸರ್ವೆ ಕಾರ್ಯ ನಡೆಸಲಾಗಿದೆ. ಈಗಾಗಲೇ 55.33 ಲಕ್ಷ ರೂ. ಹೆಚ್ಚುವರಿಯಾಗಿ ತೆರಿಗೆ ಸಂಗ್ರಹಿಸಲಾಗಿದೆ. ನೂರು ಶೇಕಡಾ ಸರ್ವೆಯಾದಲ್ಲಿ 3 ಕೋಟಿ ರೂ. ವರೆಗೆ ತೆರಿಗೆ ಸಂಗ್ರಹ ಗುರಿ ಇರಿಸಿಕೊಳ್ಳಲಾಗಿದೆ.

ಆಸ್ತಿ ತೆರಿಗೆ ಪಾವತಿಗೆ ರಿಯಾಯಿತಿ
ಏಪ್ರಿಲ್ 30ರೊಳಗೆ ಆಸ್ತಿ ತೆರಿಗೆ ಪಾವತಿಸಿದರೆ ಶೇ.5 ರಿಯಾಯಿತಿ ನೀಡಲಾಗುವುದು. ಪ್ರತಿ ವರ್ಷ ಆಸ್ತಿ ತೆರಿಗೆಯನ್ನು ಮುಂಚಿತವಾಗಿ ಏಪ್ರಿಲ್‌ನಲ್ಲಿ ಪಾವತಿಸಿದರೆ ಶೇ.5ರ ರಿಯಾಯಿತಿ ನೀಡಲಾಗುತ್ತಿದೆ. ಪಾಲಿಕೆವಾಸಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕಂದಾಯ ವಿಭಾಗದ ಆಯುಕ್ತೆ ಅಕ್ಷತಾ ತಿಳಿಸಿದರು.

ನೀರಿನ ಕೊರತೆ ಇಲ್ಲ
ಪಾಲಿಕೆ ವ್ಯಾಪ್ತಿಗೆ ಕುಡಿಯುವ ನೀರು ಪೂರೈಸುವ ತುಂಬೆ ಅಣೆಕಟ್ಟೆಯಲ್ಲಿ 30 ದಿನ ಸಾಕಾಗುವಷ್ಟು ನೀರು ಸಂಗ್ರಹ ಇದೆ. ಆದರೆ ಅದರ ಕೆಳಗಿನ ಹರೇಕಳ ಡ್ಯಾಂನಿಂದ ನೀರನ್ನು ತುಂಬೆಗೆ ಪಂಪ್ ಮಾಡುವುದರಿಂದ ಈ ನೀರಿನ ಸಂಗ್ರಹವನ್ನು 110 ದಿನಗಳಿಗೆ ಸಾಕಾಗುವಷ್ಟು ಬಳಸಬಹುದು. ಹಾಗಾಗಿ ಸದ್ಯದ ಮಟ್ಟಿಗೆ ನಗರಕ್ಕೆ ನೀರಿನ ಕೊರತೆ ಇಲ್ಲ ಎಂದು ಆಯುಕ್ತರು ಹೇಳಿದರು.

ಲಾಲ್‌ಬಾಗ್ ಮಾರುಕಟ್ಟೆ ಈ ಹಿಂದೆ 2002ರಲ್ಲಿ ಏಲಂ ಆಗಿತ್ತು. ಅಲ್ಲಿಂದ ಇಲ್ಲಿವರೆಗೆ 24 ವರ್ಷಗಳ ಕಾಲ ಕೇವಲ ವಾರ್ಷಿಕ 17.93 ಲಕ್ಷ ರೂ. ಶುಲ್ಕ ಸಂಗ್ರಹವಾಗುತ್ತಿತ್ತು. ಈಗ ಮರು ಏಲಂ ನಡೆಸಲಾಗಿದ್ದು, 71.43 ಲಕ್ಷ ರೂ. ಹೆಚ್ಚುವರಿ ಆದಾಯ ಲಭಿಸಿದೆ. ಹಾಲಿ ಮೂರು ವಾರ್ಡ್ ಹೊರತುಪಡಿಸಿ ಉಳಿದ 57 ವಾರ್ಡ್‌ಗಳಲ್ಲಿ ಕೂಡ ಆಸ್ತಿ ತೆರಿಗೆ ನಿರ್ಧರಣೆ ಸರ್ವೆ ನಡೆಸಲಾಗುವುದು ಎಂದರು.
ಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತು ಫಲಕ ಹಾಕಬೇಕಾದರೆ ಕ್ಯೂಆರ್ ಕೋಡ್ ಅಳವಡಿಸಲಾಗುವುದು. ಹೊಸ ಸಾಫ್ಟ್‌ವೇರ್ ಮೂಲಕ ಕ್ಯೂಆರ್ ಕೋಡ್ ಅಳವಡಿಸುವುದರಿಂದ ಬೇಕಾಬಿಟ್ಟಿ ಜಾಹೀರಾತು ಹಾಕುವಂತಿಲ್ಲ, ಇದರಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸಾಧ್ಯವಾಗಲಿದೆ ಎಂದರು.

ಸುತ್ತ ಮುತ್ತ

ಕುಶಾಲನಗರ ಎಪಿಸಿಎಂಎಸ್ ಅಧ್ಯಕ್ಷರಾಗಿ ಚಂದ್ರಪ್ಪ ಆಯ್ಕೆ

ಮಡಿಕೇರಿ: ಕುಶಾಲನಗರ ಕುಶಾಲನಗರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ಎಪಿಸಿಎಂಎಸ್)ದ ನೂತನ ಅಧ್ಯಕ್ಷರಾಗಿ ಎಚ್.ಬಿ. ಚಂದ್ರಪ್ಪ ಆಯ್ಕೆಯಾಗಿದ್ದಾರೆ. ಸಂಘದ ಅಧ್ಯಕ್ಷರಾಗಿದ್ದ



ಹಿರಿಯ ಸಹಕಾರಿ ಎಂ.ಎನ್. ಕುಮಾರಪ್ಪ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣಾ ಪ್ರಕ್ರಿಯೆಯಲ್ಲಿ ಇಬ್ಬರು ನಾಮಪತ್ರ ಗಳನ್ನು ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ ಒಟ್ಟು 12 ಮಂದಿ ನಿರ್ದೇಶಕರು ಹಾಜರಿದ್ದು, ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಯಲ್ಲಿ ಎಚ್.ಬಿ.ಚಂದ್ರಪ್ಪ ಅವರಿಗೆ 7 ಮತಗಳು, ಪ್ರತಿಸ್ಪರ್ಧಿ ಕೆ.ಎಂ.ಪ್ರಸನ್ನ ಅವರಿಗೆ 5 ಮತಗಳು ಬಂದವು. ಚುನಾವಣಾಧಿಕಾರಿಯಾಗಿ ಸೋಮವಾರಪೇಟೆ ತಾಲೂಕಿನ ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಪಿ. ಬಿ. ಮೋಹನ್ ಕಾರ್ಯನಿರ್ವಹಿಸಿದರು. ಸಂಘದ ಉಪಾಧ್ಯಕ್ಷೆ ಚಂದ್ರಕಲಾ, ನಿರ್ದೇಶಕರಾದ ಬಿ.ಎಂ.ಪಾರ್ವತಿ, ಕೆ.ಎಸ್.ಮಂಜುನಾಥ್, ಎನ್.ಸಿ. ಪೊನ್ನಪ್ಪ, ಎಚ್.ಜೆ.ಶರತ್, ಬಿ.ಸಿ.ಮಲ್ಲಿಕಾರ್ಜುನ, ಹೆಚ್. ಡಿ.ನಂದಕುಮಾರ್, ಡಿ.ಕೆ.ಗಂಗಾಧರ್, ಹೆಚ್.ಎನ್. ಮಹಾದೇವ ಹಾಗೂ ಡಿಸಿಸಿ ಬ್ಯಾಂಕಿನ ಪ್ರತಿನಿಧಿ ಜಲಜಾ ಶೇಖರ್ , ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಜಿ.ಜಗದೀಶ್ ಹಾಜರಿದ್ದರು.

ಇಂದು ಪ್ರತಾಪನಗರ ಶಿವ ಶಕ್ತಿ ಫ್ರೆಂಡ್ ಕ್ಲಬ್‌ನ 34ನೇ ವಾರ್ಷಿಕೋತ್ಸವ

ಉಪ್ಪಳ: ಪ್ರತಾಪನಗರ ಶಿವಶಕ್ತಿ ಫ್ರೆಂಡ್ಸ್ ಕ್ಲಬ್ ಇದರ 34ನೇ ವರ್ಷದ ವಾರ್ಷಿಕೋತ್ಸವವು ಏ.11ರಂದು ಜರಗಲಿದೆ. ವಾರ್ಷಿಕೋತ್ಸವದ ಅಂಗವಾಗಿ ಸಂಜೆ 6ಕ್ಕೆ ರಾಘವೇಂದ್ರ ಮಯ್ಯ ತಿಂಬರ ಅವರ ಪೌರೋಹಿತ್ವದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ರಾತ್ರಿ 8ರಿಂದ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕ್ಲಬ್‌ನ ಅಧ್ಯಕ್ಷ ದಿವಾಕರ ಪ್ರತಾಪನಗರ ಅಧ್ಯಕ್ಷತೆ ವಹಿಸುವರು. ಸುಕೇಶ್ ಚೌಟ ಉಳ್ಳಾಲ ಗುತ್ತು ಧಾರ್ಮಿಕ ಭಾಷಣ ಮಾಡುವರು. ಧಾರ್ಮಿಕ ಮುಂದಾಳು ಸಂಜೀವ ಶೆಟ್ಟಿ ತಿಂಬರ ಮುಂಬೈ, ವಕೀಲ ರಾಮ ಪಾಟಾಳಿ ಕುಂಬಳೆ, ಮುಂಬಯಿ ಉದ್ಯಮಿ ಮೋಹನ ಶೆಟ್ಟಿ ಕೂಳೂರು ಮಜ್ಜಾರ್, ವಾರ್ಡ್ ಸದಸ್ಯ ವಸಂತ್‌ಕುಮಾರ್ ಮಯ್ಯ, ಮಂಗಳೂರು ಎ.ಜೆ.ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಕಿಶೋರ್‌ಕುಮಾರ್ ಶೆಟ್ಟಿ ಮೊದಲಾದ ಗಣ್ಯರು ಭಾಗವಹಿಸುವರು. ಈ ಸಂದರ್ಭ ಸುಫಲ್ ಚಂದ್ರ ನಾಯಕ್, ಮಂಗಲ್ಪಾಡಿ ಅವರನ್ನು ಗೌರವಿಸಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಾತ್ರಿ 9ರಿಂದ ಅಮ್ಮ ಕಲಾವಿದರ್ ಕುಡ್ಲ ಅಭಿನಯಿಸುವ 'ಆನ್ ಮಗೆ' ತುಳು ನಾಟಕ ಪ್ರದರ್ಶನಗೊಳ್ಳಲಿದೆ.

ನಾಳೆ ನುಳ್ಳಿಪ್ಪಾಡಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ

ಕಾಸರಗೋಡು: ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಬ್ರಹ್ಮಕಲಶೋತ್ಸವದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವು ಏ.12ರಂದು ಬೆಳಗ್ಗೆ 9 ಗಂಟೆಯಿಂದ ಶ್ರೀ ಕ್ಷೇತ್ರ ಪರಿಸರದಲ್ಲಿ ಶಿಬಿರ ನಡೆಯಲಿದೆ. ಕಾಸರಗೋಡು ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್ ಹಾಗೂ ಪ್ರಸಾದ್ ನೇತ್ರಾಲಯ ಮಂಗಳೂರು ಇವುಗಳ ಸಹಭಾಗಿತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ ನೇತ್ರ ತಪಾಸಣೆ ಹಾಗೂ ಮಾನವ ದೇಹದ ವಿವಿಧ ರೋಗಗಳಿಗೆ ಸಂಬಂಧಿಸಿ ತಜ್ಞ ವೈದ್ಯರು ತಪಾಸಣೆ ನಡೆಸುವರು. ಆಸಕ್ತರು ಶಿಬಿರದ ಪ್ರಯೋಜನ ಪಡೆದುಕೊಳ್ಳಬಹುದೆಂದು ಸಂಘಟಕರು ತಿಳಿಸಿದ್ದಾರೆ.

ನಾಳೆ ಕುರ್ಯಗುತ್ತು ಧರ್ಮನೇಮ

ಮಂಜೇಶ್ವರ: ಪೈವಳಿಕೆ ಗ್ರಾಮದ ಕುರುಡಪದವು ಬಳಿಯ ಕುರ್ಯಗುತ್ತು ಮನೆಯಲ್ಲಿ ನೂತನ ಚಾವಡಿಯ ಪ್ರವೇಶೋತ್ಸವ ಮತ್ತು ಶ್ರೀ ಮಲರಾಯ ದೈವದ ಉಯ್ಯಾಲೆಯ ಕಲಶ ಮತ್ತು ಶ್ರೀ ಮಲರಾಯ ದೈವದ ಧರ್ಮನೇಮವು ಏ.12ರಂದು ಜರಗಲಿದೆ. ಏ.12ರಂದು ಬೆಳಗ್ಗೆ ಗೃಹಪ್ರವೇಶ, ಚಾವಡಿಯಲ್ಲಿ ಮಲರಾಯ ದೈವದ ಉಯ್ಯಾಲೆ ಪ್ರತಿಷ್ಠೆ ಕಲಶಾಭಿಷೇಕ, ಧರ್ಮನೇಮದ ಚಪ್ಪರ ಏರುವುದು, ಸತ್ಯನಾರಾಯಣ ಪೂಜೆ, ಯಕ್ಷಗಾನ ತಾಳಮದ್ದಳೆ, ಕರವೋಳು ಭಂಡಾರ ಮನೆಯಿಂದ ಶ್ರೀ ಮಲರಾಯ ದೈವದ ಭಂಡಾರ ಹೊರಡುವುದು, ತಂಬಿಲ ಸೇವೆ, ರಾತ್ರಿ 10 ಗಂಟೆಗೆ ಶ್ರೀ ಮಲರಾಯ ದೈವ ಹಾಗೂ ಪರಿವಾರ ದೈವದ ಧರ್ಮ ನೇಮ ಜರಗಲಿರುವುದು.

ಏ.12 ರಂದು ಆರಾಢ ದಿನದಂದು ನಡೆಯಲಿದೆ ಶ್ರೀ ಧರ್ಮದೇವತೆಗಳ ಭಂಡಾರದ ಮೆರವಣಿಗೆ

ಪೊಳಲಿ ಜಾತ್ರೆಯಲ್ಲಿ ಶ್ರೀ ಉಳ್ಳಾಕ್ಲು ಮಗ್ರಂತಾಯಿ ನೇಮದ ವೈಭವ

ಬಂಟ್ವಾಳ: ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ವರ್ಷಾವಧಿ ಜಾತ್ರೆಯ ಸಂದರ್ಭ ಶ್ರೀ ಉಳ್ಳಾಕ್ಲು ಮಗ್ರಂತಾಯಿ ಧರ್ಮದೇವತೆಗಳಿಗೆ ವೈಭವದ ನೇಮದ ಸೇವೆಯು ನಡೆದುಕೊಂಡು ಬರುತ್ತಿರುವುದು ಇಲ್ಲಿನ ವಿಶೇಷತೆಯಲ್ಲಿ ಒಂದಾಗಿದೆ.

ಶ್ರೀ ಕ್ಷೇತ್ರ ಪೊಳಲಿ ಕ್ಷೇತ್ರದ ಜಾತ್ರೆಯ ಆರಾಢದ ದಿನದಂದು ಫರಂಗಿಪೇಟೆ ಸಮೀಪದ ಅರ್ಕುಳ ಬೀಡಿನಿಂದ ಶ್ರೀ ದೈವಗಳ ಭಂಡಾರವನ್ನು ಸಕಲ ಬಿರುದಾವಳಿಗಳೊಂದಿಗೆ ಮೆರವಣಿಗೆಯ ಮೂಲಕ ತೆರಳಿ ಅಂದು ರಾತ್ರಿ ಶ್ರೀ ಉಳ್ಳಾಕ್ಲು ಮಗ್ರಂತಾಯಿ ಧರ್ಮದೇವತೆಗಳಿಗೆ ನೇಮ ಭಕ್ತಿಭಾವಪೂರ್ಣವಾಗಿ ಪೂರ್ವ ಕಟ್ಟುಕಟ್ಟಳೆಯಂತೆ ನೆರವೇರುತ್ತದೆ.

ಏ.12 ರಂದು ಪೊಳಲಿ ಕ್ಷೇತ್ರದಲ್ಲಿ ಆರಾಢದಿನವಾಗಿದ್ದು ಅಂದು ಮುಂಜಾನೆ 5ಗಂಟೆಗೆ ಅರ್ಕುಳ ಬೀಡಿನ ಬಸದಿಯಲ್ಲಿ ಪೂಜಾ ಕೈಂಕರ್ಯದ ನಡೆದ ಬಳಿಕ 5 ಪಡಿ ಅಕ್ಕಿಯನ್ನಿತ್ತು ಶ್ರೀ ಧರ್ಮದೇವತೆಗಳ ಭಂಡಾರದ ಮೆರವಣಿಗೆ ಆರಂಭವಾಗುತ್ತದೆ.



ಬೆಳಿಗ್ಗೆ 6.30ಕ್ಕೆ ಅರ್ಕುಳ ಬೀಡಿನಿಂದ ಶ್ರೀ ಧರ್ಮ ದೇವತೆಗಳ ಕಟ್ಟುಕಟ್ಟಳೆಯಂತೆ ಹೊರಡುವ ಭಂಡಾರ ಮೇರಮಜಲು, ಕುಟ್ಟಿಕಳ, ತೇವುಕಾಡು, ಮಹಮ್ಮಾಯಿ ಕಟ್ಟೆ- ಅಬ್ಬೆಟ್ಟುಗೋಳಿ, ಅಮ್ಮುಂಜೆ, ಬಡಕಬೈಲು, ಪುಂಚಮೆ ಮಾರ್ಗವಾಗಿ ಸುಮಾರು ಬೆಳಿಗ್ಗೆ 10.30 ರ ಹೊತ್ತಿಗೆ ಶ್ರೀ ಕ್ಷೇತ್ರ ಪೊಳಲಿ ತಲುಪಲಿದೆ.

ಆದೇದಿನ ರಾತ್ರಿ ಅರ್ಕುಳ ಶ್ರೀ ಉಳ್ಳಾಕ್ಲು ಮಗ್ರಂತಾಯಿ ಧರ್ಮದೇವತೆಗಳಿಗೆ ವೈಭವದ ನೇಮ ಸೇವೆ ಸಂಪನ್ನಗೊಳ್ಳಲಿದ್ದು ಪೊಳಲಿ ಆಸುಪಾಸಿನ ಭಕ್ತಸಮೂಹ ಕಣ್ತುಂಬಿಕೊಳ್ಳುತ್ತಾರೆ.

ಭಂಡಾರ ವಾಪಾಸ್

ರಾತ್ರಿ ಅರ್ಕುಳ ಶ್ರೀ ಉಳ್ಳಾಕ್ಲು ಮಗ್ರಂತಾಯಿ ಧರ್ಮದೇವತೆಗಳ ನೇಮ ಸಂಪನ್ನಗೊಂಡ ಬಳಿಕ ಮರುದಿನ ಬೆಳಿಗ್ಗೆ ಅಂದರೆ ಏ.13 ರಂದು ಭಂಡಾರವು ಪೊಳಲಿಯಿಂದ ಹೊರಟು ಅರ್ಕುಳ ಬೀಡು ತಲುಪಲಿದೆ. ಬಡಕಬೈಲು, ಧನುಪೂಜೆ, ಕಲ್ಪನೆ, ಬೆಂಜನಪದವು, ಕೊಡ್ಮಾಣ್, ನೆತ್ರೆಕೆರೆ, ಕಡೆಗೋಳಿ, ಫರಂಗಿಪೇಟೆ ಮಾರ್ಗವಾಗಿ ಸುಮಾರು 11 ಗಂಟೆ ಹೊತ್ತಿಗೆ ಭಂಡಾರ ಅರ್ಕುಳ ಬೀಡು ತಲುಪಲಿದೆ. ಭಂಡಾರದ ಮೆರವಣಿಗೆ ಪೊಳಲಿಗೆ ಸಾಗುವ ಸಂದರ್ಭ

ಮಧ್ಯದಲ್ಲಿ ಸ್ಥಗಿತವಾಗಿತ್ತು

ಕೆಲ ವರ್ಷಗಳ ಕಾಲ ಅರ್ಕುಳ ಬೀಡಿನಿಂದ ಪೊಳಲಿ ಕ್ಷೇತ್ರಕ್ಕೆ ಶ್ರೀ ಉಳ್ಳಾಕ್ಲು ಮಗ್ರಂತಾಯಿ ಧರ್ಮದೇವತೆಗಳ ಭಂಡಾರ ತೆರಳುವ ಸಂಪ್ರದಾಯ ಸ್ಥಗಿತಗೊಂಡಿತ್ತು. ಪೊಳಲಿಯ ಬ್ರಹ್ಮಕಲಶೋತ್ಸವಕ್ಕೆ ಮುನ್ನ ಪೊಳಲಿಯಲ್ಲಿ ಇರಿಸಲಾದ ಪ್ರಶ್ನಾ ಚಿಂತನೆಯಲ್ಲಿ ಈ ವಿಚಾರ ಕಂಡು ಬಂದ ಹಿನ್ನೆಲೆಯಲ್ಲಿ ಪೊಳಲಿ ಕ್ಷೇತ್ರದ ಬ್ರಹ್ಮಕಲಶ ಸಂದರ್ಭ ಈ ಸಂಪ್ರದಾಯ ಪುನರಪಿ ಆರಂಭಗೊಂಡಿದ್ದು, ತದನಂತರ ಪ್ರತಿ ವರ್ಷ ಪೂರ್ವಸಂಪ್ರದಾಯದಂತೆ ಪೊಳಲಿ ಕ್ಷೇತ್ರದ ಜಾತ್ರೆಯ ಆರಾಢ ದಿನದಂದು ಅರ್ಕುಳ ಬೀಡಿನಿಂದ ಭಂಡಾರ ತೆರಳಿ ಉಳ್ಳಾಕ್ಲು ಮಗ್ರಂತಾಯಿ ನೇಮ ನಡೆಯುತ್ತಿದೆ.

ಈ ಬಾರಿ ವಿಶೇಷವಾಗಿ ಬಡಕಬೈಲಿನಿಂದ ನೃತ್ಯ ಭಜನಾ ತಂಡ ಸೇರಿಕೊಳ್ಳಲಿದೆ.

ಪೂರ್ವಭಾವಿ ಸಭೆ

ಪೊಳಲಿ ಕ್ಷೇತ್ರದ ಜಾತ್ರೆಯ ಆರಾಢದಿನದಂದು ಅರ್ಕುಳ ಬೀಡಿನಿಂದ ಭಂಡಾರ ತೆರಳಿ ಉಳ್ಳಾಕ್ಲು ಮಗ್ರಂತಾಯಿ ನೇಮ ನಡೆಯುತ್ತಿರುವ ಹಿನ್ನಲೆಯಲ್ಲಿ ಅರ್ಕುಳ ಬೀಡಿನಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ನಡೆಯಿತು. ಈ ಸಭೆಯಲ್ಲಿ ಅರ್ಕುಳ ಬೀಡು ವಜ್ರನಾಭ ಶೆಟ್ಟಿ ಮಾತನಾಡಿ, ಪೂರ್ವ ಕಟ್ಟು ಕಟ್ಟಳೆಯಂತೆ ಸಾಂಪ್ರದಾಯಿಕವಾಗಿ ನಡೆಯುವ ಇಂತಹ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿ ಮತ್ತು ಆಚಾರ-ವಿಚಾರಗಳ ಜೀವಂತ ಪ್ರತಿಬಿಂಬಗಳಾಗಿವೆ. ಈ ಮಹತ್ವದ ಕಾರ್ಯಕ್ರಮ ಗಳಲ್ಲಿ ಶ್ರದ್ಧಾ-ಭಕ್ತಿಯಿಂದ ಭಾಗವಹಿಸುವ ಮೂಲಕ ನಮ್ಮ ಸಂಸ್ಕೃತಿಯ ಸಂವರ್ಧನೆಯಲ್ಲಿ ಎಲ್ಲರೂ ಪಾಲುದಾರರಾಗೋಣ ಎಂದು ಕರೆ ನೀಡಿದರು.

ಅರ್ಕುಳ ಬೀಡು ರತ್ನರಾಜ ಶೆಟ್ಟಿ, ಕಂಪ ಸದಾನಂದ ಆಳ್ವ , ಸಂಸ್ಕಾರ ಭಾರತಿಯ ದ.ಕ. ಜಿಲ್ಲಾ ಅಧ್ಯಕ್ಷ ತಾರಾನಾಥ ಕೊಟ್ಟಾರಿ ಮಾತನಾಡಿದರು.

ಮಂಟಮೆ ದಿನಕರ ಕರ್ಕೇರಾ ಕಾರ್ಯಕ್ರಮ ನಿರೂಪಿಸಿದರು. ಡಾ. ಎ. ಜಯಕುಮಾರ ಶೆಟ್ಟಿ ಸ್ವಾಗತಿಸಿ, ನಾಗರಾಜ ಶೆಟ್ಟಿ ತುಪ್ಪೆಕಲ್ಲು ವಂದಿಸಿದರು.

ಸರಕಾರಿ ಬಸ್ ಸಂಚಾರಕ್ಕೆ 2 ವರ್ಷ ಪೂರ್ಣ: ವಿಶೇಷ ಪೂಜೆ ಸಲ್ಲಿಸಿದ ಮಳಲಿ ಗ್ರಾಮಸ್ಥರು



ಕೈಕಂಬ: ನಿರಾತಂಕವಾಗಿ ಎರಡು ವರ್ಷ ಸಂಚಾರ ನಡೆಸಿದ ಸರಕಾರಿ ನರ್ಮ್ ಬಸ್ಸಿಗೆ ಮಳಲಿಯ ಗ್ರಾಮಸ್ಥರು ಶುಕ್ರವಾರ ಮಳಲಿ ಶ್ರೀಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಯಾಣಿಕರ ಸುರಕ್ಷತೆಗಾಗಿ ದೇವರಲ್ಲಿ ಪ್ರಾರ್ಥಿಸಿದ್ದಾರೆ.

ಪ್ರಾರಂಭದಲ್ಲಿ ಎದುರಾದ ಅಡೆತಡೆಗಳ ಮಧ್ಯೆ ಕಳೆದ 2 ವರ್ಷಗಳಿಂದ ಮಂಗಳೂರು-ಗುರುಪುರ-ಕೈಕಂಬ-ಪೊಳಲಿ-ಮಳಲಿ ಮಧ್ಯೆ ಸರಕಾರಿ ನರ್ಮ್ ಬಸ್ಸು ಯಶಸ್ವಿಯಾಗಿ ಸಂಚರಿಸಿ ಈ ಭಾಗದ ಪ್ರಯಾಣಿಕರಿಗೆ ಸೇವೆ ನೀಡುತ್ತಿದೆ. ಇದರಿಂದ ಖುಷಿಗೊಂಡ ಗ್ರಾಮಸ್ಥರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಮಳಲಿಯ ಈ ಗ್ರಾಮೀಣ ಭಾಗಕ್ಕೆ ಸರಕಾರಿ ಬಸ್ ಆರಂಭಿಸುವಲ್ಲಿ ಸ್ಥಳೀಯರೊಂದಿಗೆ ಪ್ರಯತಿಸಿದ್ದ ರಾಜ್ಯ ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಬೂಬ ಪೂಜಾರಿ ಅವರು ಮಾತನಾಡಿ, ಮಂಗಳೂರು-ಮಳಲಿ ಮಧ್ಯೆ ಸೇವೆ ನೀಡುತ್ತಿರುವ ಸರಕಾರಿ ನರ್ಮ್ ಬಸ್ಸಿಗೆ ಪ್ರಯಾಣಿಕರ ಕೊರತೆ ಉಂಟಾಗಿಲ್ಲ, ಬಸ್ಸು ನಿತ್ಯವೂ ಪ್ರಯಾಣಿಕರಿಂದ ತುಂಬಿರುತ್ತದೆ. ಈಗ ಇಲ್ಲಿ ಬಸ್ ಸೇವೆ ಖಾಯಂಗೊಂಡಿದೆ. ಇದರಿಂದ ಮಳಲಿ, ನಾಡಾಜೆ, ಅರ್ಬಿ ಗ್ರಾಮೀಣ ಭಾಗದ ಶಾಲಾ ಮಕ್ಕಳ ಸಹಿತ ಇತರರಿಗೆ ಸಾಕಷ್ಟು ಪ್ರಯೋಜನವಾಗಿದೆ ಎಂದರು.

ದೇವಳ ಪ್ರಧಾನ ಅರ್ಚಕ ಕೆ. ರತ್ನಾಕರ ಭಟ್ ಪೂಜೆ ನೆರವೇರಿಸಿದರು. ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಬೂಬ ಪೂಜಾರಿ, ತಾ.ಪಂ. ಮಾಜಿ ಸದಸ್ಯ ಸುನಿಲ್ ಗಂಜಿಮಠ, ದಾಮೋದರ ಕುಲಾಲ್, ಅಬ್ದುಲ್ ಹಮೀದ್, ಸದಾನಂದ ಮಳಲಿ, ಪ್ರೇಮಚಂದ ನಾಯಕ್, ನೀಲಯ ಪೂಜಾರಿ, ಹರೀಶ್ ಪೈ ಮಳಲಿ, ಸ್ಥಳೀಯ ಗಣ್ಯರು ಮತ್ತಿತರರಿದ್ದರು. ಬಳಿಕ ಬಸ್ ಪ್ರಯಾಣಿಕರ ಸಹಿತ ಎಲ್ಲರಿಗೂ ಸಿಹಿ ತಿಂಡಿ ಹಂಚಿ ಸಂಭ್ರಮಿಸಿದರು.

ಕಾಸರಗೋಡು ಜಿಲ್ಲೆಯಲ್ಲಿ ಗಮನ ಸೆಳೆಯಿತು ಮಹಿಳಾ ಮತಗಟ್ಟೆಗಳು!



ಕಾಸರಗೋಡು: ವಿಧಾನಸಭಾ ಚುನಾವಣೆ ಅಂಗವಾಗಿ ಜಿಲ್ಲೆಯ ಮಹಿಳಾ ಮತಗಟ್ಟೆಗಳು ಮಹಿಳಾ ಸಬಲೀಕರಣಕ್ಕೆ ಉತ್ತಮ ಉದಾಹರಣೆಯಾಗಿ ದಾಖಲಾದವು. ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ ಒಂದು ಮತಗಟ್ಟೆಯನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿತ್ತು.

ಮಂಜೇಶ್ವರ ಕ್ಷೇತ್ರದ ಕುಂಬಳೆ ಹೋಲಿ ಫ್ಯಾಮಿಲಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು ಕ್ಷೇತ್ರದ ಕಾಸರಗೋಡು ಸರ್ಕಾರಿ ಕಾಲೇಜು ಗಣಿತ ವಿಭಾಗ, ಉದುಮ ಕ್ಷೇತ್ರದ ಕುಂಡಂಗುಳಿ ಸರ್ಕಾರಿ ಪ್ರೌಢಶಾಲೆ, ಕಾಞಂಗಾಡು ಕ್ಷೇತ್ರದ ಅಜಾನೂರು ಮಾಣಿಕೋತ್ ಕೆಎಕೆಎಚ್‌ಎಂ ಸರ್ಕಾರಿ ಮೀನುಗಾರಿಕಾ ಯುಪಿ ಶಾಲೆ ಮತ್ತು ತೃಕ್ಕರೀಪುರ ಕ್ಷೇತ್ರದ ಪಿಲಿಕ್ಕೋಡು ಸರ್ಕಾರಿ ಯುಪಿ ಶಾಲೆಯು ಸಂಪೂರ್ಣವಾಗಿ ಮಹಿಳೆಯರ ನಿಯಂತ್ರಣದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಮತಗಟ್ಟೆಗಳಾಗಿವೆ.

ಉತ್ತಮ ಸೌಲಭ್ಯ

ಹಿರಿಯ ನಾಗರಿಕರು, ಮಹಿಳೆಯರು, ದಿವ್ಯಾಂಗರು ಸೇರಿದಂತೆ ವಿವಿಧ ವಲಯದವರಿಗೆ ಮತಗಟ್ಟೆಗಳಲ್ಲಿ ಅತ್ಯುತ್ತಮ ಸೌಲಭ್ಯಗಳನ್ನು ಏರ್ಪಡಿಸಲಾಗಿತ್ತು.

ಮಹಿಳೆಯರದ್ದೆ ಪಾರಮ್ಯ

ಚುನಾವಣಾಧಿಕಾರಿಗಳು, ಭದ್ರತಾ ಉಸ್ತುವಾರಿ ಹೊಂದಿರುವ ಪೊಲೀಸ್ ಅಧಿಕಾರಿ ಗಳು ಮತ್ತು ಬೂತ್ ಏಜೆಂಟ್‌ಗಳು ಸೇರಿದಂತೆ ಅನೇಕ ಮತಗಟ್ಟೆ ಅಧಿಕಾರಿಗಳು ಮಹಿಳೆಯರಾಗಿದ್ದರು. ಅಧಿಕಾರಿಗಳು ಹೆಚ್ಚಿನ ವಿಶ್ವಾಸ ಮತ್ತು ಜವಾಬ್ದಾರಿಯಿಂದ ಮತದಾನ ನಡೆಸಿದರು.

ಹೊಳೆಗೆ ತ್ಯಾಜ್ಯ ಎಸೆದ ಯಾತ್ರಿಕರಿಂದಲೇ ತೆರವುಗೊಳಿಸಿ ದಂಡ ವಿಧಿಸಿದ ಗ್ರಾ.ಪಂ.



ಕಡಬ: ಬಿಳಿನೆಲೆ ಗ್ರಾ.ಪಂ.ವ್ಯಾಪ್ತಿಯ ಬಿಳಿನೆಲೆ ಸೇತುವೆ ಸಮೀಪ ಹೊಳೆಗೆ ತ್ಯಾಜ್ಯ ಎಸೆಯುತ್ತಿದ್ದ ಆಂಧ್ರಪ್ರದೇಶ ಮೂಲದ ಯಾತ್ರಿಕರ ವಿರುದ್ಧ ಗ್ರಾ.ಪಂ. ಅಧಿಕಾರಿಗಳು ಕ್ರಮ ಕೈಗೊಂಡ ಘಟನೆ ಗುರುವಾರ ನಡೆದಿದೆ.

ಯಾತ್ರಿಕರು ತಮ್ಮ ವಾಹನಗಳನ್ನು ಸೇತುವೆ ಬಳಿ ನಿಲ್ಲಿಸಿ, ತ್ಯಾಜ್ಯಗಳನ್ನು ಹೊಳೆಗೆ ಎಸೆಯುತ್ತಿರುವುದನ್ನು ಸ್ಥಳೀಯರು ಗಮನಿಸಿ ಗ್ರಾ.ಪಂ.ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಕೂಡಲೇ ಸ್ಥಳಕ್ಕೆ ಆಗಮಿಸಿದ ಪಂಚಾಯತ್ ಸಿಬ್ಬಂದಿ ಯಾತ್ರಿಕರನ್ನು ತಡೆದು ಹೊಳೆಗೆ ಎಸೆದಿದ್ದ ತ್ಯಾಜ್ಯವನ್ನು ಅವರಿಂದಲೇ ಸಂಗ್ರಹಿಸಲು ಸೂಚಿಸಿದರು. ಪರಿಸರ ಹಾನಿ ಉಂಟು ಮಾಡಿದ ಹಿನ್ನೆಲೆ ಸಂಬಂಧಿಸಿದ ಯಾತ್ರಿಕರಿಗೆ ಸ್ಥಳದಲ್ಲೇ ರೂ.1 ಸಾವಿರ ದಂಡ ವಿಧಿ ಸಲಾಯಿತು.

ಶಿಶುಮಂದಿರ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ



ಹೆಬ್ರಿ: ಇಲ್ಲಿನ ಮುದ್ರಾಡಿ ಗ್ರಾಮದ ಸುಬ್ಬಣ್ಣಕಟ್ಟೆ ಸೇವಾ ಸಂಗಮ ಶಿಶುಮಂದಿರದಲ್ಲಿ ಶಿಶುಮಂದಿರ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು. ಶಿಶುಮಂದಿರದ ಅಧ್ಯಕ್ಷ ಅಶೋಕ ಕುಮಾರ್ ಶೆಟ್ಟಿ ಹುಟ್ಟುಹಬ್ಬದ ಆಚರಣೆ ಬಗ್ಗೆ ತಮ್ಮ ಅನಿಸಿಕೆಯನ್ನು ಹೇಳಿದರು.

ರಜತಮಹೋತ್ಸವದ ಅಧ್ಯಕ್ಷ ಶ್ರೀಧರ ಹೆಬ್ಬಾರ್ ಕಾಪೋಳಿ ಮಕ್ಕಳಿಗೆ ಶುಭ ಹಾರೈಸಿದರು. ಭಾರತಾಂಬೆಗೆ ಪುಷ್ಪ ಅರ್ಪಿಸುವ ಮೂಲಕ ಹಾಗೂ ದೀಪ ಬೆಳಗಿಸುವ ಮೂಲಕ ಹುಟ್ಟುಹಬ್ಬ ಆಚರಿಸಿದರು. ಮಾತೆಯರು ಮಕ್ಕಳಿಗೆ ಆರತಿ ಬೆಳಗಿಸಿ ಅಕ್ಷತೆ ಹಾಕಿದರು. ಶಿಶುಮಂದಿರದ ವ್ಯವಸ್ಥಾಪಕಿ ಶಿಲ್ಪಾ ಎಸ್. ನಾಯಕ್, ಸಂಚಾಲಕ ಶ್ರೀಧರ ನಾಯಕ್ ಉಪಸ್ಥಿತರಿದ್ದರು.

3 ಕೋಟಿ ರೂ.ವೆಚ್ಚದಲ್ಲಿ ಕ್ರೀಡಾ ಶಾಲಾ ಅಭಿವೃದ್ಧಿ: ಶಾಸಕ ಡಾ.ಮಂಥರ್ ಗೌಡ



ಕುಶಾಲನಗರ: ಇಲ್ಲಿಗೆ ಸಮೀಪದ ಕೂಡಿಗೆಯಲ್ಲಿರುವ ರಾಜ್ಯದ ಪ್ರಪ್ರಥಮ ಕ್ರೀಡಾಶಾಲೆಯನ್ನು ಮೂರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಡಾ.ಮಂಥರ್ ಗೌಡ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ರಾಜ್ಯದಲ್ಲೇ ಪ್ರಥಮವಾಗಿ ಆರಂಭವಾದ ಕೂಡಿಗೆಯ ಕ್ರೀಡಾಪ್ರೌಢ ಶಾಲೆಯ ಅಭಿವೃದ್ಧಿಗೆ ಕಳೆದ ಸಾಲಿನ ಬಜೆಟ್'ನಲ್ಲಿ ಮೂರು ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.ಶಾಲೆಯ ಅಭಿವೃದ್ಧಿಗೆ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮೂಲಕ ಕ್ರಿಯಾ ಯೋಜನೆ ತಯಾರಾಗಿದ್ದು, ರಾಜ್ಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಯೂ ನಡೆದಿದೆ ಎಂದರು.

ಮುಂದಿನ ದಿನಗಳಲ್ಲಿ ಕ್ರೀಡಾ ಶಾಲೆಯ ಅಭಿವೃದ್ಧಿಗೆ ಪೂರಕವಾಗಿ ಬಾಲಕ, ಬಾಲಕಿಯರ ವಸತಿ ಗೃಹಗಳನ್ನು ಮೇಲ್ದರ್ಜೆಗೇರಿಸಲಾಗುವುದಲ್ಲದೆ, ಶಾಲೆ ಬೆಳವಣಿಗೆ, ಕ್ರೀಡಾ ತರಬೇತಿಗೆ ಅನುಕೂಲ ಕಲ್ಪಿ ಸುವ ಹಿತದೃಷ್ಟಿಯಿಂದ ಸುಸಜ್ಜಿತ ಮೈದಾನಗಳ ನಿರ್ಮಾಣ, ರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ ಅದಕ್ಕೆ ಹೊಂದಿಕೊಂಡಂತೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಈಗಾಗಲೇ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿ ಪ.ಪೂ. ಶಿಕ್ಷಣಕ್ಕೆ ತೆರಳುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನೂತನ ವಸತಿ ಗೃಹ ನಿರ್ಮಾಣ ಮಾಡುವ ಚಿಂತನೆ ಹರಿಸಲಾಗಿದೆ. ಮುಂದಿನ ದಿನಗಳಲ್ಲಿ ಯುವ ಸಬಲೀಕರಣ - ಕ್ರೀಡಾ ಇಲಾಖೆ ಉನ್ನತ ಮಟ್ಟದ ಸಭೆ ಕರೆದು ಜಿಲ್ಲೆಯಲ್ಲಿ ಕ್ರೀಡಾ ಪದವಿ ತರಗತಿ ತೆರೆಯುವ ಸಂಬಂಧ ಮಾಹಿತಿ ಪಡೆದು ಕ್ರಮಕೈಗೊಳ್ಳಲು ಗಮನ ಹರಿಸಲಾಗುವುದು ಎಂದರು.

ಕುಶಾಲನಗರ ತಾ.ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್, ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ ಮತ್ತಿತರರಿದ್ದರು.

ಪ್ಲಾಸ್ಟಿಕ್ ತ್ಯಾಜ್ಯ ಎಸೆಯುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ: ಪಿಡಿಒ ರಜನಿ ಎಚ್ಚರಿಕೆ



ಕೊಣಾಜೆ: ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆಯ ಬಗ್ಗೆ ಈಗಾಗಲೇ ಸಮಾಜದಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮ ನಿರಂತರ ನಡೆಯುತ್ತಿದ್ದರೂ ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಎಸೆಯುವವರ ಸಂಖ್ಯೆ ಹೆಚ್ಚುತ್ತಿದ್ದು, ಇದಕ್ಕಾಗಿ ಕೊಣಾಜೆ ಗ್ರಾ.ಪಂ.ಕಠಿಣ ಕ್ರಮ ಕೈಗೊಳ್ಳಲು ಮುಂದಾಗಿದ್ದು, ತ್ಯಾಜ್ಯ ಎಸೆಯುವವರ ವಿರುದ್ಧ ಎಫ್‌ಐಆರ್ , ಐದು ಸಾವಿರ ರೂ. ದಂಡ ವಿಧಿಸಲಾಗುವುದು ಜೊತೆಗೆ ಪ್ಲಾಸ್ಟಿಕ್ ಎಸೆಯುವವರನ್ನು ಪತ್ತೆಹಚ್ಚಿದವರಿಗೆ ಬಹುಮಾನ ಕೊಡುವ ಯೋಜನೆ ರೂಪಿಸಲಾಗಿದೆ ಎಂದು ಕೊಣಾಜೆ ಪಂ. ಅಭಿವೃದ್ಧಿ ಅಧಿಕಾರಿ ರಜನಿ ಹೇಳಿದರು.

ಅವರು ಗುರುವಾರ ಮುಡಿಪುವಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್ನೆಸ್ಸೆಸ್ ವಿದ್ಯಾರ್ಥಿಗಳಿಂದ ಕೊಣಾಜೆ ಗ್ರಾಮದ ನಡುಪದವಿನ ಸಸ್ಯೋದ್ಯಾನದ ಬಳಿ ನಡೆದ ಪ್ಲಾಸ್ಟಿಕ್ ತ್ಯಾಜ್ಯ ಸ್ವಚ್ಛತೆ ಹಾಗೂ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮುಖಂಡರಾದ ನಾಸೀರ್ ಕೆಕೆಎಸ್ ಮಾತನಾಡಿ, ಸ್ವಚ್ಛತಾ ಜಾಗೃತಿ ನಮ್ಮ ಪರಿಸರದಲ್ಲಿ ಮಾತ್ರವಲ್ಲ ಇಡೀ ಜಿಲ್ಲೆಯಲ್ಲಿ ಆಂದೋಲನದ ರೀತಿಯಲ್ಲಿ ಆಗಬೇಕಿದೆ. ಇಂತಹ ಆಂದೋಲನದಲ್ಲಿ ಎನ್ನೆಸ್ಸೆಸ್ ವಿದ್ಯಾರ್ಥಿಗಳ ಪಾತ್ರ ಮಹತ್ವವಾದುದು ಎಂದರು.

ಮುಡಿಪು ಕಾಲೇಜಿನ ಎನ್ನೆಸ್ಸೆಸ್ ಶಿಬಿರಾಧಿಕಾರಿ ತನುಜಾ ಮಾತನಾಡಿ, ಪರಿಸರ ಸ್ವಚ್ಛತೆ ಬಗ್ಗೆ ಪ್ರತಿಯೊಬ್ಬರಲ್ಲೂ ಸ್ವಯಂ ಜಾಗೃತಿ ಮೂಡಬೇಕಾಗಿದೆ ಎಂದರು. ಈ ಸಂದರ್ಭ ಕೊಣಾಜೆ ಪಂ. ಕಾರ್ಯದರ್ಶಿ ಚಿತ್ರಾ , ಮುಖಂಡರಾದ ಜಗದೀಶ್ ಆಳ್ವ ಕುವೆತ್ತಬೈಲ್, ಮಂಗಳೂರು ವಿವಿಯ ಗಿರೀಶ್ ಮಯ್ಯ, ನವೀನ್ ಚಂದ್ರ, ಸ್ಥಳೀಯರಾದ ಇಸ್ಮಾಯಿಲ್ ನಡುಪದವು, ಜಗದೀಶ್ ನಡುಪದವು, ಅಬ್ದುಲ್ ಅಝೀಜ್, ವಿಶು, ಅಶ್ರಫ್, ತಾರನಾಥ, ಹಸೈನಾರ್ ಕಲ್ಲರ್ಬೆ ಮೊದಲಾದವರು ಉಪಸ್ಥಿತರಿದ್ದರು.

ಪತ್ರಕರ್ತ ಸತೀಶ್ ಕೊಣಾಜೆ ಸ್ವಾಗತಿಸಿ, ನಿರೂಪಿಸಿದರು. ಶಿವಪ್ರಕಾಶ್ ಭಟ್ ವಂದಿಸಿದರು.

ಕುರುಮುಜ್ಜಿಕಟ್ಟೆ: ಭಾಗವತ ಸಪ್ತಾಹ



ಬದಿಯಡ್ಕ: ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಏ.10ರಿಂದ 16ರ ತನಕ ಜರಗಲಿರುವ ಶ್ರೀಮದ್ಭಾಗವತ ಸಪ್ತಾಹದ ಅಂಗವಾಗಿ ಹಸಿರುವಾಣಿ ಹೊರೆಕಾಣಿಕೆ ಕಾರ್ಯಕ್ರಮಕ್ಕೆ ಅಗಲ್ಪಾಡಿ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರದಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು. ಶ್ರೀಮದ್ಭಾಗವತ ಸಪ್ತಾಹ ಸಮಿತಿಯ ಅಧ್ಯಕ್ಷ ನಿತ್ಯಾನಂದ ಶೆಣೈ ಬದಿಯಡ್ಕ ದೀಪ ಬೆಳಗಿಸಿದರು.

ಸಂಚಾಲಕ ಕೃಷ್ಣ ಭಟ್ ಬಳಕ್ಕ, ಕೋಶಾಧಿಕಾರಿ ಕೃಷ್ಣ ಮಣಿಯಾಣಿ ಅಗಲ್ಪಾಡಿ, ಶ್ರೀ ಗೋಪಾಲಕೃಷ್ಣ ಭಜನಾ ಮಂದಿರದ ಅಧ್ಯಕ್ಷ ಬಾಬು ಮಾಸ್ತರ್ ಜಯನಗರ, ಶ್ರೀ ಧರ್ಮಶಾಸ್ತಾ ಸೇವಾ ಸಮಿತಿಯ ಅಧ್ಯಕ್ಷ ಕೆ.ವಿ.ರಮೇಶ ಶರ್ಮ, ಭಜನಾ ಸಮಿತಿ ಅಧ್ಯಕ್ಷ ರಾಧಾಕೃಷ್ಣನ್ ನಾಯರ್ ಉಪ್ಪಂಗಳಮೂಲೆ, ಮಂದಿರದ ಗುರುಸ್ವಾಮಿ ನಾರಾಯಣ, ಸೇವಾ ಸಮಿತಿ ಗೌರವಾಧ್ಯಕ್ಷ ಪವಿತ್ರನ್ ಕುರುಮುಜ್ಜಿಕಟ್ಟೆ ವೇದಿಕೆಯಲ್ಲಿದ್ದರು.

ಶ್ರೀ ಗೋಪಾಲಕೃಷ್ಣ ಭಜನಾ ಮಂದಿರ ಪದಾಧಿಕಾರಿಗಳಾದ ರಾಜೇಶ್ ಮಾಸ್ತರ್ ಅಗಲ್ಪಾಡಿ ಸ್ವಾಗತಿಸಿ, ರಮೇಶ್ ಕೃಷ್ಣ ಪದ್ಮಾರು ವಂದಿಸಿದರು.

ಆತ್ಮಶಕ್ತಿ ಮಾಡೂರು ಶಾಖೆಯಲ್ಲಿ ವೈದ್ಯಕೀಯ, ನೇತ್ರ ತಪಾಸಣಾ ಶಿಬಿರ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಮಾಡೂರು ಶಾಖೆಯ 14ನೇ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಶಿರಡಿ ಸಾಯಿಬಾಬಾ ಮಂದಿರ ಮಾಡೂರು, ಶ್ರೀ ಶಾಸ್ತಾರ ಬಳಗ, ಶ್ರೀ ಶಾಸ್ತಾರ ಮಹಿಳಾ ಮಂಡಳಿ ಮತ್ತು ಭಜಕ ವೃಂದ, ಮಡ್ಯಾರ್ ಹಾಗೂ ಎನ್.ಜಿ. ವಲ್ಡ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು ಜಂಟಿ ಸಹಯೋಗದೊಂದಿಗೆ ಗ್ರಾಮೀಣ ಆರೋಗ್ಯ ರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರ, ಯೆನೆಪೋಯ ಪರಿಗಣಿಸಲ್ಪಟ್ಟ ವಿವಿ, ದೇರಳಕಟ್ಟೆ ಹಾಗೂ ಸಮುದಾಯ ದಂತ ಆರೋಗ್ಯ ವಿಭಾಗ, ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆ ದೇರಳಕಟ್ಟೆಯ ತಜ್ಞ ವೈದ್ಯ ತಂಡದವರಿಂದ ಉಚಿತ ವೈದ್ಯಕೀಯ, ನೇತ್ರ ತಪಾಸಣೆ ಮತ್ತು ದಂತ ಚಿಕಿತ್ಸಾ ಶಿಬಿರವು ಮಾತೃಶ್ರೀ ಕಾಂಪ್ಲೆಕ್ಸ್ ಮಾಡೂರು ಶಾಖೆಯ ಆವರಣದಲ್ಲಿ ಜರುಗಿತು.



ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆ ವೈದ್ಯ ಡಾ. ಇಮ್ರಾನ್ ಪಾಷಾ ಶಿಬಿರ ಉದ್ಘಾಟಿಸಿ ಮಾತನಾಡಿ, 'ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಸತತ ನೂರಕ್ಕೂ ಮಿಕ್ಕಿ ಉಚಿತ ವೈದ್ಯಕೀಯ ಶಿಬಿರವನ್ನು ಆಯೋಜಿಸಿ, ಸಮಾಜದ ಎಲ್ಲಾ ಜನರಿಗೆ ಉಚಿತ ಸೇವೆಯನ್ನು ಒದಗಿಸುತ್ತ ಬಂದಿದೆ. ಒಂದೇ ದಿನದಲ್ಲಿ ಮಾಡೂರು ಮತ್ತು ಕಸಿಹಿತ್ಲು, ಜಪ್ಪಿನಮೊಗರುವಿನಲ್ಲಿ ಆಯೋಜಿಸಿದ್ದು ಸಂಘದ ವಿಶೇಷತೆ ಎಂದು ಶ್ಲಾಘಿಸಿದರು. ಶಿಬಿರದಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಯ ಹಸಿರು ಕಾರ್ಡನ್ನು ವಿತರಿಸಲಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾತನಾಡಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಕಳೆದ 14 ವರ್ಷಗಳಿಂದ ವೈದ್ಯಕೀಯ ಶಿಬಿರವನ್ನು ನಿರಂತರ ಏರ್ಪಡಿಸುತ್ತಿದ್ದು, ಸಾರ್ವಜನಿಕರು ಇದರ ಸಂಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು.

ಸಂಘದ ನಿರ್ದೇಶಕರಾದ ಆನಂದ ಎಸ್ ಕೊಂಡಾಣ, ರಮಾನಾಥ ಸನಿಲ್, ಗೋಪಾಲ್ ಎಂ., ಮುಖ್ಯಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್, ಶ್ರೀ ಶಾಸ್ತಾರ ಬಳಗ, ಶ್ರೀ ಶಾಸ್ತಾರ ಮಹಿಳಾ ಮಂಡಳಿ ಮತ್ತು ಭಜಕ ವೃಂದ, ಮಡ್ಯಾರ್ ಅಧ್ಯಕ್ಷ ಸೂರಜ್ ಗಟ್ಟಿ ಕೊಂಡಾಣ, ಶ್ರೀ ಶಾಸ್ತಾರ ಕಟ್ಟೆ ಅರ್ಚಕ ಯೋಗೀಶ್ ಪೂಜಾರಿ, ಮಾಡೂರು ಶ್ರೀ ವನದುರ್ಗಾ ಅಯ್ಯಪ್ಪ ಭಜನಾ ಮಂದಿರ ಗುರುಸ್ವಾಮಿ ಭಾಸ್ಕರ್, ಗ್ರಾಮೀಣ ಆರೋಗ್ಯ ರಕ್ಷಣೆ ಮತ್ತು ಅಭಿವೃದ್ಧಿ ಕೇಂದ್ರ ಯೆನೆಪೋಯ ಪರಿಗಣಿಸಲ್ಪಟ್ಟ ವಿವಿ ದೇರಳಕಟ್ಟೆ ಇಲ್ಲಿನ ವೈದ್ಯೆ ಡಾ. ಆಯಿಷಾ ಮತ್ತಿತರರಿದ್ದರು.

ಶಿಬಿರದಲ್ಲಿ 100ಕ್ಕೂ ಅಧಿಕ ಮಂದಿ ಪ್ರಯೋಜನ ಪಡೆದುಕೊಂಡರು. ಮಾಡೂರು ಶಾಖೆಯ ಪ್ರಭಾರ ಶಾಖಾಧಿಕಾರಿ ಭವ್ಯಾ ಸ್ವಾಗತಿಸಿ, ಸಿಬ್ಬಂದಿ ರತಿಕ ವಂದಿಸಿದರು. ಸಂಘದ ಉಳ್ಳಾಲ ಶಾಖೆ ಹಿರಿಯ ಶಾಖಾಧಿಕಾರಿ ಸಚಿನ್ ನಿರೂಪಿಸಿದರು.

ಐಲ ಕ್ಷೇತ್ರದಲ್ಲಿ ಕೂಟ ಯುವಶಕ್ತಿ ಸಂಭ್ರಮ

ಮಂಜೇಶ್ವರ: ಕೂಟ ಮಹಾಜಗತ್ತು ಅಂಗ ಸಂಸ್ಥೆ ಮಂಗಲ್ಪಾಡಿ ಇದರ ನೇತೃತ್ವ ಯುವ ವೇದಿಕೆ 30ನೇ ಮತ್ತು ಮಹಿಳಾ ವೇದಿಕೆಯ 25ನೇ ಸಂವತ್ಸರ ಪೂರ್ತಿಗೊಳಿಸಿದ ವಿಶೇಷ ಸಂದರ್ಭ ಐಲ ದುರ್ಗಾಪರಮೇಶ್ವರಿ ಕಲಾಭವನದಲ್ಲಿ ಕೂಟ ಯುವ ಶಕ್ತಿ ಸಂಭ್ರಮ ಆಯೋಜಿಸಲಾಗಿತ್ತು.

ವೇ.ಮೂ.ಅಶೋಕ ನಾವಡರ ಪೌರೋಹಿತ್ಯದಲ್ಲಿ ಗಣಪತಿ ಹೋಮ ನೆರವೇರಿತು. ಚೆಂಡೆವಾದ್ಯ, ಮುತ್ತುಕೊಡೆಗಳು, ಪುಟಾಣಿಗಳ ರಾಧಾಕೃಷ್ಣ ವೇಷ, ಕಳಸ ಹಿಡಿದ ಮಹಿಳೆಯರು, ಸಮಾಜ ಬಾಂಧವರ ಭವ್ಯ ಮೆರವಣಿಗೆ ಯಲ್ಲಿ ಅತಿಥಿಗಳನ್ನು ವೇದಿಕೆಗೆ ಬರಮಾಡಿಕೊಳ್ಳಲಾಯಿತು. ಮಹಿಳಾ ವೇದಿಕೆಯ ಸದಸ್ಯೆಯರಿಂದ ತಿರುವಾದಿರ ನೃತ್ಯ ನಡೆಯಿತು.

ಕಾರ್ಯಕ್ರಮವನ್ನು ಕೂಟ ಮಹಾ ಜಗತ್ತು



ಸಾಲಿಗ್ರಾಮದ ಕೇಂದ್ರಾಧ್ಯಕ್ಷ ಪ್ರಕಾಶ ಕಾರಂತ ಉದ್ಘಾಟಿಸಿದರು. ಕೂಟ ಮಹಾಜಗತ್ತು ಮಂಗಲ್ಪಾಡಿ ಅಂಗಸಂಸ್ಥೆಯ ಅಧ್ಯಕ್ಷ ಡಾ.ಗಿರಿಧರ ರಾವ್ ಮಾಣಿಹಿತ್ಲು ಅಧ್ಯಕ್ಷತೆ ವಹಿಸಿದ್ದರು. ಐಲ ಶಂಕರನಾರಾಯಣ ಮಯ್ಯ , ಅನಂತ ಮಯ್ಯ ವೇದಘೋಷ ಮೊಳಗಿಸಿದರು.

ಕರ್ನಾಟಕೇತರ ಅಂಗಸಂಸ್ಥೆಯ ಪ್ರತಿನಿಧಿ, ಕೇಂದ್ರ ಆಡಳಿತ ಸಮಿತಿ ಸಭಾದ ಕೋಶಾಧಿಕಾರಿ ಮರಿಕಾಪು ಲಕ್ಷ್ಮೀನಾರಾಯಣ ಹೊಳ್ಳ, ಕೇಂದ್ರಾಧ್ಯಕ್ಷ ಎಚ್.ಸತೀಶ ಹಂದೆ, ಡಾ.ರಾಘವೇಂದ್ರ ಹೊಳ್ಳ, ಅಕ್ಷತಾ ಗಿರೀಶ್ ಐತಾಳ್, ಕೇಂದ್ರದ ಉಪಾಧ್ಯಕ್ಷ ಸದಾಶಿವ ಐತಾಳ್, ಡಾ.ಕೆ.ಪಿ.ಹೊಳ್ಳ ಉಪ್ಪಳ, ಎಂ.ಶ್ರೀಧರ ರಾವ್, ದತ್ತಿ ಮಂಡಳಿ ಅಧ್ಯಕ್ಷ ಟಿ.ಡಿ.ಸದಾಶಿವ ರಾವ್ ಮತ್ತಿತರರಿದರು.

ಯುವ ವೇದಿಕೆ ಅಧ್ಯಕ್ಷ ಸುಬ್ರಾಯ ಹೊಳ್ಳ ಪೆರಿಂಗಡಿ, ಮಹಿಳಾ ವೇದಿಕೆ ಅಧ್ಯಕ್ಷೆ ಶಶಿಕಲಾ ಮಯ್ಯ ಉಪ್ಪಳ ಉಪಸ್ಥಿತರಿದ್ದರು. ರಾಧಾಕೃಷ್ಣ ತುಂಗ ಸ್ವಾಗತಿಸಿದರು.

ಸುತ್ತಮುತ್ತ

ಬೈಂದೂರು: ಪದವಿ ಪ್ರವೇಶಾತಿಗೆ ಅವಕಾಶ

ಬೈಂದೂರು: ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ 2026-27ನೇ ಸಾಲಿನ ಬಿಎ, ಬಿಕಾಂ, ಬಿಬಿಎ, ಬಿಸಿಎ ಪದವಿಗಳಿಗೆ ಪ್ರವೇಶಾತಿ ಪ್ರಾರಂಭಗೊಂಡಿದ್ದು, ದ್ವಿತೀಯ ಪಿ.ಯುಸಿ ತೇರ್ಗಡೆಗೊಂಡಿರುವ ವಿದ್ಯಾರ್ಥಿಗಳು ಕಾಲೇಜಿನ ಕಚೇರಿಯನ್ನು ಸಂಪರ್ಕಿಸಿ ಪ್ರವೇಶಾತಿಯ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಪ್ರಾಂಶುಪಾಲ ನಾಗರಾಜ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಕಛೇರಿ ದೂರವಾಣಿ ಸಂಖ್ಯೆ: 08254-251068 ಅಥವಾ ಪ್ರಾಂಶುಪಾಲರ ಮೊಬೈಲ್ ಸಂಖ್ಯೆ: 9538380222 ಕ್ಕೆ ಸಂಪರ್ಕಿಸಬಹುದು.

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕೆಪಿಟಿಸಿಎಲ್ ವತಿಯಿಂದ ಬೈಕಂಪಾಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಏ.12ರಂದು ಬೆಳಗ್ಗೆ 9.30ರಿಂದ ಸಂಜೆ 4:30 ಗಂಟೆಯವರೆಗೆ ತೋಕೂರು, ಕುಳಾಯಿ, ಕೋಡಿಕೆರೆ, ಜೋಕಟ್ಟೆ ಎಸ್.ಇ.ಜೆಡ್ ಕಾಲೊನಿ, ಹೊಸಬೆಟ್ಟು, ಶಕ್ತಿ ಟೂಲ್ಸ್, ಬೆಲ್ ಪೈಂಟ್, ಲೆಮಿನಾ, ದುರ್ಗಾದಯಾ ಹೊಟೇಲ್ ಬಳಿ, ಡೆಕ್ಕನ್ ಪ್ಯಾಕೇಜಿಂಗ್, ಪಾಂಡವಬೆಟ್ಟು, ಎ1 ಬೇಕರಿ, ಟೆಲಿಫೋನ್ ಎಕ್ಸ್ ಚೇಂಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಏ.15ರಂದು ನಿಟ್ಟೆಯಲ್ಲಿ ಮೆಸ್ಕಾಂ ಜನಸಂಪರ್ಕ ಸಭೆ

ಕಾರ್ಕಳ: ಮೆಸ್ಕಾಂ ನಿಟ್ಟೆ ಉಪವಿಭಾಗ ಕಚೇರಿಯಲ್ಲಿ ಏ.15ರಂದು ಸಮಯ ಬೆಳಗ್ಗೆ 10.30ರಿಂದ 12 ಗಂಟೆಯವರೆಗೆ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 8277882890ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರೈತ ಕರೆ ಕೇಂದ್ರ; ಟೋಲ್ ಫ್ರೀ ಜೊತೆ ವ್ಯಾನಿಟಿ ಸಂಖ್ಯೆ ಸಕ್ರಿಯ

ಉಡುಪಿ: ರೈತ ಕರೆ ಕೇಂದ್ರದಲ್ಲಿ ಟೋಲ್ ಫ್ರೀ ಸಂಖ್ಯೆಯಾದ 1800-425-3553 ಅನ್ನು ಬಳಸಿ ರೈತರಿಗೆ ಬೆಳೆ ಸಮೀಕ್ಷೆ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ, ಹವಾಮಾನ ಮಾಹಿತಿ ಹಾಗೂ ಕೃಷಿ ಇಲಾಖೆಯ ಇತರೆ ಯೋಜನೆಗಳು ಮತ್ತು ತಾಂತ್ರಿಕ ಸಂಬಂಧಿತ ಮಾಹಿತಿಗಳನ್ನು ಒದಗಿಸಲಾಗುತ್ತಿದ್ದು ಮುಂದುವರೆದು ಸದರಿ ಕರೆ ಕೇಂದ್ರದಲ್ಲಿ ಕರೆಗಳನ್ನು ಸ್ವೀಕರಿಸಲು ಹಾಗೂ ಸಕಾಲದಲ್ಲಿ ಸೇವೆಗಳನ್ನು ಒದಗಿಸಲು ಟೋಲ್ ಫ್ರೀ ಸಂಖ್ಯೆಯ ಜೊತೆಗೆ ವ್ಯಾನಿಟಿ ಸಂಖ್ಯೆಯಾದ 8277003553 ಅನ್ನು ಸಕ್ರಿಯಗೊಳಿಸಲಾಗಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೃಷಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಏ. 13ಕ್ಕೆ ಅಕ್ಕ ಕೆಫೆ ನಿರ್ವಹಣೆ: ನೇರ ಸಂದರ್ಶನ

ಉಡುಪಿ: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ-ಸಂಜೀವಿನಿ ಹಾಗೂ ಜಿಲ್ಲಾ ಪಂಚಾಯತ್ ಉಡುಪಿ ಇವರ ವತಿಯಿಂದ ಉಡುಪಿ ತಾಲೂಕು ವ್ಯಾಪ್ತಿಯಲ್ಲಿ ನೂತನವಾಗಿ ಅಕ್ಕ ಕೆಫೆ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಕೆಫೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಸಲುವಾಗಿ ಅರ್ಹ ಸ್ವ-ಸಹಾಯ ಗುಂಪುಗಳನ್ನು ಆಯ್ಕೆ ಮಾಡಲು ಏ.13ರಂದು ಬೆಳಗ್ಗೆ 10 ಗಂಟೆಗೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನೇರ ಸಂದರ್ಶನ ನಡೆಯಲಿದೆ. ಕಡ್ಡಾಯವಾಗಿ ಗ್ರಾಮೀಣ ಅಥವಾ ನಗರ ಸಂಜೀವಿನಿ ಸ್ವ-ಸಹಾಯ ಗುಂಪುಗಳಾಗಿರುವ, ಹೋಟೆಲ್ ಅಥವಾ ಕ್ಯಾಟರಿಂಗ್ ಉದ್ಯಮದಲ್ಲಿ ಅನುಭವ ಹೊಂದಿರುವ ಸ್ಥಳೀಯ ಸ್ವ-ಸಹಾಯ ಗುಂಪುಗಳಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅವಿನಾಶ್, ಸಂಜೀವಿನಿ ಯೋಜನೆಯ ಜಿಲ್ಲಾ ವ್ಯವಸ್ಥಾಪಕರು, ಮೊ.ನಂ: 9844234080 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ಕಚೇರಿ ಪ್ರಕಟಣೆ ತಿಳಿಸಿದೆ.

ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ-100ರ ಸಂಭ್ರಮ

ಇಂದು, ನಾಳೆ ಶತಮಾನೋತ್ಸವ ಸಂಭ್ರಮದ ಸಮಾರೋಪ







ಶಿರ್ವ: ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ಆಡಳಿತಕ್ಕೆ ಒಳಪಟ್ಟ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗೆ ನೂರರ ಸಂಭ್ರಮ. 1926ರ ಮೊದಲೇ ಈ ಭಾಗದ ಪ್ರಗತಿಪರ ಚಿಂತಕರೂ, ಸಾಮಾಜಿಕ ಕಳಕಳಿಯ ಸಜ್ಜನ ಬಂಧುಗಳಾದ ಮಟ್ಟಾರು ದಾಮು ನಾಯಕ್, ಪಾಂಜೇಗುಡ್ಡೆ ಅನಂತ ನಾಯಕ್, ನಾಲ್ಕೂರು ನೋಮಯ್ಯ ನಾಯಕ್, ಬೆಳ್ಳೆ ದಾಮು ನಾಯಕ್, ಪಂಜಿಮಾರು ಪತ್ಮ ಪ್ರಭು, ಮಾಣ್ಣೂರು ವಿಶ್ವನಾಥ ಪ್ರಭು ಇವರ ಶ್ರಮದ ಫಲವಾಗಿ ಒಂದು ಕಾಲದಲ್ಲಿ ಕಾಡುಮೇಡುಗಳಿಂದ ಕೂಡಿದ ಹಚ್ಚಹಸಿರಿನ ರಮಣೀಯವಾದ ಬಂಟಕಲ್ಲು ಭಾಗದಲ್ಲಿ ವಿದ್ಯಾಮಂದಿರದ ನಿರ್ಮಾಣಕ್ಕೆ ಮುಂದಾದರು. ಇವರ ಪರಿಶ್ರಮದ ಫಲವಾಗಿ ಈ ಶಾಲೆ 1926ರಲ್ಲಿ ಅಂದಿನ ಬ್ರಿಟಿಷ್ ಸರಕಾರದಿಂದ ಅಧಿಕೃತವಾಗಿ ಮಾನ್ಯತೆಯನ್ನು ಪಡೆಯಿತು.

ಆರಂಭದಲ್ಲಿ ಮುಖ್ಯ ಶಿಕ್ಷಕರು ಹಾಗೂ ಸಂಚಾಲಕರಾಗಿ ಬಿ. ಲಕ್ಷ್ಮಣ ನಾಯಕ್ ಅವರ ನೇತೃತ್ವದಲ್ಲಿ ಮುಂದುವರಿದ ಈ ಶಾಲೆ, 1948ರ ಅವಧಿಯಲ್ಲಿ ಬಂಟಕಲ್ಲು ಶ್ರೀ ದೇವಳದ ಆಡಳಿತಕ್ಕೆ ವರ್ಗಾಯಿಸಲ್ಪಟ್ಟಿತು. ಅಂದಿನಿಂದ ಈ ವರೆಗೆ ಅನೇಕ ಸಂಚಾಲಕರ ನೇತೃತ್ವದಲ್ಲಿ ಶಿಕ್ಷಣಾಭಿಮಾನಿ ಬಂಧುಗಳಸಹಭಾಗಿತ್ವದಲ್ಲಿ ಮೂಲಸೌಕರ್ಯಗಳನ್ನು ವೃದ್ಧಿಸುತ್ತಾ, ಸರಕಾರದ ಪ್ರೋತ್ಸಾಹದಿಂದ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿ ಏಳು ನೂರಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಹೊಂದಿದ ಹಿರಿಯ ಪ್ರಾಥಮಿಕ ಶಾಲೆಯಾಗಿ ಅಂದಿನ ದಕ್ಷಿಣ ಕನ್ನಡ ಜಿಲ್ಲೆ (ಅವಿಭಜಿತ ಉಡುಪಿ ಜಿಲ್ಲೆ)ಯಲ್ಲಿಯೇ ಇತರ ಶಿಕ್ಷಣ ಸಂಸ್ಥೆಗಳೊಂದಿಗೆ ಸರಿಸಮಾನವಾಗಿ ಗುರುತಿಸಿಕೊಂಡ ಇತಿಹಾಸವನ್ನು ಹೊಂದಿದೆ. ಇದರ ಹಿಂದೆ ಶಾಲಾ ಹಳೆವಿದ್ಯಾರ್ಥಿಗಳ ಕೊಡುಗೆ ಹಾಗೂ ಶ್ರಮವೂ ಅಪಾರವಾಗಿದೆ.

ಹಿಂದೆ, ರಜತ ಸಂಭ್ರಮ, ಸುವರ್ಣಮಹೋತ್ಸವ, ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದ ಈ ವಿದ್ಯಾಲಯ ಈಗ ನೂರು ಸಂವತ್ಸರಗಳನ್ನು ಪೂರೈಸುತ್ತಿರುವ ಶುಭಾವಸರದಲ್ಲಿ ಹಿರಿಯರ ಕೊಡುಗೆಗಳನ್ನು ಸ್ಮರಿಸುವ ಹಾಗೂ ಈ ವಿದ್ಯಾಲಯವನ್ನು ಉಳಿಸಿ ಬೆಳೆಸುತ್ತಿರುವ ಶಾಲಾ ಆಡಳಿತ ಮಂಡಳಿ, ಹಳೆವಿದ್ಯಾರ್ಥಿಗಳು ಹಾಗೂ ಊರಿನ ಸಜ್ಜನಬಂಧುಗಳ ಸಹಭಾಗಿತ್ವದಲ್ಲಿ ಹಳೆ ವಿದ್ಯಾರ್ಥಿ ಮಾಧವ ಕಾಮತ್ ಅಧ್ಯಕ್ಷತೆ, ಶಾಲಾಭಿಮಾನಿ ಕೆ.ಆರ್. ಪಾಟ್ಕರ್ ಪ್ರಧಾನ ಕಾರ್ಯದರ್ಶಿ, ಹಳೆವಿದ್ಯಾರ್ಥಿ ವಿಶ್ವನಾಥ್ ಬಾಂದೇಲ್ಕರ್ ಕೋಶಾಧಿಕಾರಿ ಹಾಗೂ ಕಾರ್ಯಕಾರಿ ಸಮಿತಿ ನೇತೃತ್ವದಲ್ಲಿ ಶತಮಾನೋತ್ಸವ ಸಮಿತಿಯನ್ನು ರಚಿಸಿ, ವರ್ಷಪೂರ್ತಿ ಹತ್ತು ಹಲವು ಅಭಿವೃದ್ಧಿ ಕಾರ್ಯಯೋಜನೆಗಳನ್ನು ಯಶಸ್ವಿಯಾಗಿ ನಡೆಸಿದ್ದು ಏ.11, 12ರಂದು ಶತಮಾನೋತ್ಸವ ಸಂಭ್ರಮ ಸಂಪನ್ನಗೊಳ್ಳುತ್ತಿದೆ.

ಏ. 11ರಂದು ಶಾಲಾ ವಾರ್ಷಿಕೋತ್ಸವ ಜರುಗಲಿದ್ದು ಬೆಳಗ್ಗೆ ಶ್ರೀದೇವಳದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ಧ್ವಜಾರೋಹಣ ಮಾಡಲಿದ್ದಾರೆ. ಶಾಲಾ ಹಳೆವಿದ್ಯಾರ್ಥಿ ಹಾಗೂ ದಾನಿ ಉಮೇಶ ಪಾಟ್ಕರ್, ಟೋನಿ ಮೋನಿಸ್ ಅತಿಥಿಗಳಾಗಿರುವರು. ಸಂಜೆ 5ರಿಂದ ಬಂಟಕಲ್ಲು ಮತ್ತು 92 ಹೇರೂರು ಅಂಗನವಾಡಿ ಪುಟಾಣಿಗಳಿಂದ ಸಾಂಸ್ಕೃತಿಕ ವೈವಿಧ್ಯ. ಸಂಜೆ 6ರಿಂದ ಜರುಗುವ ಸಭೆಯನ್ನು ಕ್ಷೇತ್ರದ ಶಾಸಕ ಗುರ್ಮೆ ಸುರೇಶ ಶೆಟ್ಟಿ ದೀಪ ಪ್ರಜ್ವಲನೆಯೊಂದಿಗೆ ಚಾಲನೆ ನೀಡುವರು. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಎಲ್ಲಮ್ಮ, ಕರ್ನಾಟಕ ಬ್ಯಾಂಕ್ ಉಪ ಮಹಾಪ್ರಬಂಧಕ ಗೋಪಾಲಕೃಷ್ಣ ಸಾಮಗ ಬೆಳ್ಳೆ, ಶಾಲಾ ಹಳೆವಿದ್ಯಾರ್ಥಿ ಹಾಗೂ ನಿವೃತ್ತ ಯೂನಿಯನ್ ಬ್ಯಾಂಕ್ ಅಧಿಕಾರಿ ರವಿ ಶೆಟ್ಟಿ ಮುಂಬೈ, ಜಿಲ್ಲಾ ಮುಂಡಾಳ ಸಮಾಜದ ಜಿಲ್ಲಾಧ್ಯಕ್ಷ ಶಂಕರ ಪದಕಣ್ಣಾಯ, ಶಾಲಾ ಹಳೆವಿದ್ಯಾರ್ಥಿನಿ ಡಾ. ಗೀತಾ ಶರ್ಮಾ ಕಟೀಲು, ಶ್ರೀದೇವಳದ ಆಡಳಿತ ಮೊಕ್ತೇಸರ ಜಯರಾಮ ಪ್ರಭು, ಅಧ್ಯಕ್ಷ ಉಮೇಶ ಪ್ರಭು ಭಾಗವಹಿಸುವರು. ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ವಿಜಯ ಕಲಾವಿದೆರ್ ಕಿನ್ನಿಗೋಳಿ ಇವರಿಂದ 'ಮನಿಪಂದೆ ಕುಲ್ಲಡೆ' ತುಳು ಹಾಸ್ಯ ನಾಟಕ ಪ್ರದರ್ಶನಗೊಳ್ಳಲಿದೆ.

ಏ.12ರಂದು ಶತಮಾನೋತ್ಸವ ಸಮಾರೋಪ ಸಮಾರಂಭ ಜರುಗಲಿದ್ದು, ಉದ್ಯಮಿ ಅಶೋಕ ಶೆಟ್ಟಿ ಧ್ವಜಾರೋಹಣ ನೆರವೇರಿಸುವರು. ಹಳೆವಿದ್ಯಾರ್ಥಿನಿ ಗಾಯತ್ರಿ ಜಿ. ಆಚಾರ್ಯ, ಹಳೆ ವಿದ್ಯಾರ್ಥಿ ರಂಜಿತ್ ಪ್ರಕಾಶ್ ಬರ್ಬೋಜಾ ಇಸ್ರೇಲ್, ಹಿರಿಯ ಹಳೆವಿದ್ಯಾರ್ಥಿ, ನಿವೃತ್ತ ಮುಖ್ಯ ಶಿಕ್ಷಕ ನಾರಾಯಣ ಪ್ರಭು ಕೋಡುಗುಡ್ಡೆ ಭಾಗವಹಿಸುವರು. 9.30ರಿಂದ ಕಟಪಾಡಿ ಆನೆಗುಂದಿ ಶ್ರೀಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ ಆಶೀರ್ವಚನ ನೀಡುವರು. ಸಂಜೆ ಗಂಟೆ 4ರಿಂದ ಬಂಟಕಲ್ಲು ಪೇಟೆಯಿಂದ ವೇದಿಕೆವರೆಗೆ ಬೃಹತ್ ಶೋಭಾಯಾತ್ರೆ, 4.30ರಿಂದ ನಮ್ಮ ಕಲಾವಿದೆರ್ ಬೆದ್ರ ತಂಡದವರಿಂದ 'ತೆಲಿಕೆದ ಗೊಂಚಿಲ್' ನಿರಂತಹ ಹಾಸ್ಯ ಕಾರ್ಯಕ್ರಮ, ಸಂಜೆ 6ರಿಂದ ಜರುಗುವ ಸಮಾರೋಪ ಸಮಾರಂಭದಲ್ಲಿ ಶತಮಾನೋತ್ಸವ ಸಮಿತಿ ಅಧ್ಯಕ್ಷ ಮಾಧವ ಕಾಮತ್ ಅಧ್ಯಕ್ಷತೆ ವಹಿಸಲಿದ್ದು, ಪಾಂಬೂರು ಚರ್ಚ್‌ನ ಧರ್ಮಗುರು ವಂ ರೋಶನ್ ಡಿಸೋಜ ಶುಭಾಶಂಸನೆ ಗೈಯುವರು. ಮಾಜಿ ಸಚಿವ ವಿನಯಕುಮಾರ್ ಸೊರಕೆ, ವಿಧಾನ ಪರಿಷತ್ ಸದಸ್ಯ ಎಸ್.ಎಲ್ ಭೋಜೇ ಗೌಡ, ಶಾಲಾ ಶಿಕ್ಷಣ ಇಲಾಖೆ ಉಡುಪಿ ಜಿಲ್ಲಾ ಉಪನಿರ್ದೇಶಕ ಸಿ. ಲೋಕೇಶ್, ಭಾಗವಹಿಸುವರು. ಅದಾನಿ ಸಮೂಹದ ಅಧ್ಯಕ್ಷ, ಕಾರ್ಯನಿರ್ವಹಣಾಧಿಕಾರಿ ಕಿಶೋರ್ ಆಳ್ವ ಶತ ಸಂಭ್ರಮದ ಸ್ಮರಣ ಸಂಚಿಕೆ 'ವಿದ್ಯಾ ಶತಕ' ಬಿಡುಗಡೆ ಮಾಡುವರು. ಶ್ರೀನವಾಕ್ಷರೀ ಬಾರ್ಕೂರು ಎನ್.ಆರ್.ದಾಮೋದರ ಶರ್ಮಾ ಪ್ರಧಾನ ಸಂದೇಶ ನೀಡುವರು. ಗೌರವ ಅತಿಥಿಗಳಾಗಿ ಫೆರ್ನಾಂಡಿಸ್ ಗ್ರೂಪ್, ಉಡುಪಿ-ಮುಂಬೈ ಇದರ ಆಡಳಿತ ನಿರ್ದೇಶಕ ಎಲ್ವಿನ್ ಫೆರ್ನಾಂಡಿಸ್, ಹಿರಿಯ ಹಳೆವಿದ್ಯಾರ್ಥಿ ಶಂಕರ ಶೆಟ್ಟಿ ಮಾನಿಪಾಡಿ ಮೇಲ್ಮನೆ, ಶ್ರೀದೇವಳದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ವೇದಿಕೆಯಲ್ಲಿರುವರು. ನಂತರ ವಿಜಯ ಕಲಾವಿದರು ಕಿನ್ನಿಗೋಳಿ ಇವರಿಂದ ಹಾಸ್ಯಮಯ ಸಾಮಾಜಿಕ ನಾಟಕ 'ಅಮ್ಮು... ಆಮುಂಡರಾ...? ಪ್ರದರ್ಶನಗೊಳ್ಳಲಿದೆ.

ಉಪ್ಪುಂದ ಪಿಯು ಕಾಲೇಜಿಗೆ ಮುತ್ತೂಟ್ ಸಂಸ್ಥೆಯಿಂದ ಡಿಜಿಟಲ್ ಕಲಿಕಾ ಸೌಲಭ್ಯ



ಬೈಂದೂರು: ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಂಘ ಸಂಸ್ಥೆಗಳು ಕೈಜೋಡಿಸಿದಾಗ ಯಶಸ್ಸು ಸಾಧ್ಯ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ. ಎಸ್. ಸುರೇಶ ಶೆಟ್ಟಿ ಹೇಳಿದರು.

ಉಪ್ಪುಂದ ಸರ್ಕಾರಿ ಪಿಯು ಕಾಲೇಜಿನಲ್ಲಿ ಮುತ್ತೂಟ್ ಫೈನಾನ್ಸ್ ಸಂಸ್ಥೆಯಿಂದ ಕೊಡಮಾಡಿದ ಡಿಜಿಟಲ್ ಕಲಿಕಾ ಸೌಲಭ್ಯವನ್ನು ಉದ್ಘಾಟಿಸಿ ಮಾತನಾಡಿದರು. ಮುತ್ತೂಟ್ ಫೈನಾನ್ಸ್ ರೀಜನಲ್ ಮ್ಯಾನೇಜರ್ ಪ್ರಶಾಂತ್ ನಾಯ್ಕ್, ಮಂಗಳೂರು ವಲಯದ ಸಿಎಸ್‌ಆರ್ ಮ್ಯಾನೇಜರ್ ಪ್ರಸಾದ್ ಕುಮಾರ್, ಅನುಷ್ಠಾನ ಸಂಸ್ಥೆ ಶ್ರೀ ವರಲಕ್ಷ್ಮಿ ಚಾರಿಟೇಬಲ್ ಟ್ರಸ್ಟ್ ಉಪ್ಪುಂದ ಇದರ ಅಧ್ಯಕ್ಷ ಡಾ. ಗೋವಿಂದ ಬಾಬು ಪೂಜಾರಿ ಇವರನ್ನು ಗೌರವಿಸಲಾಯಿತು. ಮುತ್ತೂಟ್ ಫೈನಾನ್ಸ್ ಉಡುಪಿ ಕ್ಲಸ್ಟರ್ ಮ್ಯಾನೇಜರ್ ಸಾಗರ್ ಭಾಸ್ಕರ್, ಬೈಂದೂರು ಶಾಖಾ ವ್ಯವಸ್ಥಾಪಕ ಸಂದೀಪ್ ಖಾರ್ವಿ, ಸಮಾಜ ಸೇವಕ ಇನ್ಫೋಸಿಸ್‌ನ ಸಾಗರ್ ಸಾಬೋಜಿ, ಸಾಮಾಜಿಕ ಕಾರ್ಯಕರ್ತೆ ಯುನೈಟೆಡ್ ನೆಕ್ಸ್ಟ್ ಮೆಥಡ್ಸ್‌ನ ಶಾಲಿನಿ ಮೊಗವೀರ, ಸರ್ಕಾಕಾರಿ ಪಿಯು ಕಾಲೇಜು ಉಪ್ಪುಂದ ಸುಶೀಲಾ, ಉಪಸ್ಥಿತರಿದ್ದರು.

ತಾಯಂದಿರು ಮೊಬೈಲ್ ಬಳಕೆ ಮಾಡುವುದನ್ನು ಕಡಿಮೆ ಮಾಡಬೇಕು



ಮಂಗಳೂರು: ಮಕ್ಕಳು ಮೊಬೈಲ್ ಬಳಸುವುದನ್ನು ನಿಯಂತ್ರಿಸಲು ತಾಯಂದಿರು ಸ್ವತಃ ಮೊಬೈಲ್ ಅವಲಂಬನೆ ಕಡಿಮೆ ಮಾಡಬೇಕು ಎಂದು ಉಪನ್ಯಾಸಕ ಮುಂಡಾಜೆ ಕುಮಾರೇಶ್ವರ ಭಟ್ ಹೇಳಿದರು.

ವಿಟ್ಲ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿಗಳು ಕುಂಬ್ರೆ ನಾಯ್ಕಾಪಿನ ಟೈಲರಿಂಗ್ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು. ವನಿತಾ ಮಹಿಳಾ ಸಮಾಜ ಉಚಿತ ಟೈಲರಿಂಗ್ ತರಬೇತಿ ಶಿಕ್ಷಕಿ ವಿಜಯಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ, ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಸಿಇಒ ಜ್ಯೋತಿರಾಜ್ ಉಪಸ್ಥಿತರಿದ್ದರು. ಎಂ.ಎಸ್. ಡಬ್ಲ್ಯೂ ವಿದ್ಯಾರ್ಥಿನಿ ಚೇತಾಕುಮಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾತ್ವಿಕ್ ಶ್ರೀ ಸ್ವಾಗತಿಸಿದರು. ಪ್ರದೀಪ್ ಕುಮಾರ್ ವಂದಿಸಿದರು. ಅಶೋಕ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ನಿಖರವಾಗಿ ಭೂಮಾಪನ ನಡೆಸಿ: ಡಿಸಿ ಸೋಮಶೇಖರ್



ಮಡಿಕೇರಿ: ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ನಿಖರ ಹಾಗೂ ನಿರ್ದಿಷ್ಟವಾಗಿ ಭೂ ಮಾಪನ (ಸರ್ವೆ) ಕಾರ್ಯ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಸೂಚಿಸಿದರು.

ಜಿಲ್ಲಾಡಳಿತ ಸಹಕಾರದಲ್ಲಿ ರಾಷ್ಟ್ರೀಯ ಭೂ ಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳ ಇಲಾಖೆ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ 37ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಿಂದೆ ಸರಪಳಿ ಮತ್ತು ಥಿಯೋಡೋಲೈಟ್ ಮೂಲಕ ಸರ್ವೇ ಮಾಡಲಾಗುತ್ತಿತ್ತು. ಈಗ ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿ ಹೊಂದಿದ್ದು ಜಿಪಿಎಸ್, ರಿಮೋಟ್ ಸೆನ್ಸಿಂಗ್ ಮತ್ತು ಡ್ರೋನ್ ತಂತ್ರಜ್ಞಾನಗಳನ್ನು ಬಳಸಿ ಡಿಜಿಟಲ್ ಭೂ ದಾಖಲೆಗಳನ್ನು ನಿರ್ವಹಿಸಲಾಗುತ್ತಿದೆ. ಅವುಗಳನ್ನು ಬಳಸಿಕೊಂಡು ತ್ವರಿತವಾಗಿ ಭೂಮಾಪನ ಸರ್ವೆ ಕಾರ್ಯ ಕೈಗೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ಪೋಡಿ ಸರ್ವೆ ಕಾರ್ಯ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ ಎಂಬ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿ ಬರುತ್ತಿದೆ. ಆದ್ದರಿಂದ ಆದ್ಯತೆ ಮೇಲೆ ಕೆಲಸ ಮಾಡಬೇಕು ಎಂದು ಅವರು ಸೂಚಿಸಿದರು. ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿದರು. ಭೂ ದಾಖಲೆಗಳ ಇಲಾಖೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು. ಸರ್ ವಿಲಿಯಮ್ ಲ್ಯಾಂಬ್ಟನ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿದರು. ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ ಮಹೇಶ್ ಕುಮಾರ್, ಪರಮೇಶ್, ನಾಗೇಶ್, ಸರ್ವೇ ಮೇಲ್ವಿಚಾರಕರು, ಭೂ ಮಾಪಕರು ಇತರರು ಇದ್ದರು.

ಶಿರೂರು: ಶಾಲೆಯಲ್ಲಿ ಬಿಸಿಯೂಟದ ಬಾಯ್ಲರ್, ಸ್ಟೀಮರ್ ಲೋಕಾರ್ಪಣೆ



ಬೈಂದೂರು: ಶಿರೂರು ಪಿಎಂಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಬೈಂದೂರು ತಾಲೂಕು ಪಂಚಾಯತ್‌ನ 2025-26ನೇ ಸಾಲಿನ ಅನುದಾನದ ಯೋಜನೆಯಡಿ ಬಿಸಿ ಊಟದ ವಿಶೇಷ ವ್ಯವಸ್ಥೆಯ ಬಾಯ್ಲರ್ ಹಾಗೂ ಸ್ಟೀಮರ್ ಅನ್ನು ತಾಪಂ ಮಾಜಿ ಸದಸ್ಯ ಪುಷ್ಪರಾಜ ಶೆಟ್ಟಿ ಲೋಕಾರ್ಪಣೆಗೊಳಿಸಿದರು. ಅಲ್ಲದೇ ರಾಜ್ಯ ಉತ್ತಮ ಎಸ್‌ಡಿಎಂಸಿ ಪ್ರಶಸ್ತಿ ಅನುದಾನದಡಿ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ನೂತನ ಪೋಡಿಯಂ ಅನ್ನು ಶಾಲೆಗೆ ಎಸ್‌ಡಿಎಂಸಿ ಮೂಲಕ ಹಸ್ತಾಂತರಿಸಲಾಯಿತು. ಈ ವರ್ಷದ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಶಿಕ್ಷಕರ ಶಾಲೆಗೆ ರಾಜ್ಯದಿಂದ ಕೊಡಮಾಡಲ್ಪಡುವ ಅನುದಾನದಿಂದ ನಿಟ್ಟೆ ಇಂಜನಿಯರ್ ಕಾಲೇಜಿನ ಎಕ್ಸ್‌ಪೆರಿಮೆಂಟ್ ಲ್ಯಾಬ್‌ನ ಪ್ರೊಫೆಸರ್ ಅಕ್ಷಯ್ ನೇತೃತ್ವದಲ್ಲಿ ಸಂಶೋಧಿಸಿರುವ ಶಿಕ್ಷಣ ರೋಬೋಟ್ ಅನ್ನು ಅನಾವರಣಗೊಳಿಸಿ ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು.

ಶಾಸಕ ಗುರುರಾಜ್ ಗಂಟಿಹೊಳೆ ಮಾತನಾಡಿ, ನವ್ಯ ಕಾಲಘಟ್ಟದಲ್ಲಿ ಶೈಕ್ಷಣಿಕ ವಾತಾವರಣಕ್ಕೆ ಉತ್ತಮ ವ್ಯವಸ್ಥೆಗೊಳಿಸಿದ ಮಾದರಿ ಶಾಲೆಯ ಬಳಗವನ್ನ ಶ್ಲಾಘಿಸಿದರು. ಶಿರೂರು ಗ್ರಾಪಂ ಮಾಜಿ ಅಧ್ಯಕ್ಷೆ ನಾಗರತ್ನ ಆಚಾರ್ಯ, ಎಸ್‌ಡಿಸಿ ಉಪಾಧ್ಯಕ್ಷ ಅಶೋಕ್ ಕೆ. ಶೆಟ್ಟಿ, ಎಸ್‌ಡಿಎಂಸಿ ಉಪಾಧ್ಯಕ್ಷೆ ದೇವಿ, ನಿಟ್ಟೆ ಎಕ್ಸ್‌ಪೆರಿಮೆಂಟ್ ಲ್ಯಾಬ್‌ನ ಆದರ್ಶ ದೇವಾಡಿಗ, ಜ್ಞಾನೇಶ್ ಮಲ್ಯ ಉಪಸ್ಥಿತರಿದ್ದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ಪೂಜಾರಿ ಅಧ್ಯಕ್ಷತೆ ವಹಿಸಿದರು. ಶಿರೂರು ಸಮೂಹ ಸಂಪನ್ಮೂಲ ವ್ಯಕ್ತಿ ಗಣೇಶ್ ಪೂಜಾರಿ ಪ್ರಾಸ್ತಾವಿಸಿದರು. ಮುಖ್ಯ ಶಿಕ್ಷಕ ಶಂಕರ್ ಶಿರೂರು ಸ್ವಾಗತಿಸಿ, ರಾಜ್ಯಪ್ರಶಸ್ತಿ ಪುರಸ್ಕೃತ ಶಿಕ್ಷಕ ಸಿ. ಎನ್.

ಕುಂತೂರು: ಸರಕಾರಿ ಶಾಲೆಯ ನೂತನ ಕೊಠಡಿಗಳ ಉದ್ಘಾಟನೆ



ಕಡಬ: ಸರಕಾರವು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಮಕ್ಕಳಿಗೆ ಉಚಿತ ಬಿಸಿಯೂಟ, ಪುಸ್ತಕ ಸೇರಿದಂತೆ ಎಲ್ಲಾ ಸವಲತ್ತುಗಳನ್ನು ನೀಡಿ ಗುಣಮಟ್ಟದ ಶಿಕ್ಷಣಕ್ಕೆ ವ್ಯವಸ್ಥೆ ಮಾಡುತ್ತಿದೆ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ನುಡಿದರು.

ಅವರು ಕಡಬ ತಾಲೂಕಿನ ಕುಂತೂರು ಸರಕಾರಿ ಉ.ಹಿ.ಪ್ರಾ.ಶಾಲೆಗೆ ಮಂಜೂರಾದ ರಾಜ್ಯ ವಲಯ ಮುಂದುವರಿದ ಯೋಜನೆಗಳ ಶಾಲಾ ನೂತನ ತರಗತಿಗಳ ಮತ್ತು ಎಂಆರ್‌ಪಿಎಲ್ ಪ್ರಾಯೋಜಿತ ತರಗತಿ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು. ಕುಂತೂರು ಶಾಲೆಗೆ ಇನ್ನೆರಡು ತರಗತಿ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಒದಗಿಸಿಕೊಡುವುದಾಗಿ ಶಾಸಕಿ ಭರವಸೆ ನೀಡಿದರು.

ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಖಾಸಿಂ ಅವರು ಅಧ್ಯಕ್ಷತೆ ವಹಿಸಿದ್ದರು.

ಕಡಬ ಹಾಗೂ ಪುತ್ತೂರು ತಾ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನವೀನ್ ಭಂಡಾರಿ, ಪುತ್ತೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ., ಪುತ್ತೂರು ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಚಕ್ರಪಾಣಿ ಎ.ವಿ.ಮಾತನಾಡಿದರು.

ಆಲಂಕಾರು ಕ್ಲಸ್ಟರ್ ಮುಖ್ಯಸ್ಥ ಪ್ರಕಾಶ್ ಬಾಕಿಲ, ಮುಖ್ಯ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ನಿಂಗರಾಜು ಕೆ.ಪಿ., ಶಾಲಾ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಆಯೂಬ್ ಬಿ.ಕೆ., ಪೆರಾಬೆ ಗ್ರಾ.ಪಂ.ಮಾಜಿ ಅಧ್ಯಕ್ಷೆ ಸಂಧ್ಯಾ ಕೆ., ಸಫ್ವಾನ್ ಚಾರಿಟೇಬಲ್ ಟ್ರಸ್ಟ್‌ನ ಅಬ್ದುಲ್ಲಾ, ಗುತ್ತಿಗೆದಾರ ಮುಹಮ್ಮದ್ ಸಿನಾನ್, ಶಾಲಾ ನಾಯಕಿ ರಿಷಿಕಾ ಉಪಸ್ಥಿತರಿದ್ದರು. ಸಫ್ವಾನ್ ಚಾರಿಟೇಬಲ್ ಟ್ರಸ್ಟ್‌ನ ಅಬ್ದುಲ್ಲಾ ಸಫ್ವಾನ್, ಗುತ್ತಿಗೆದಾರ ಮುಹಮ್ಮದ್ ಸಿನಾನ್ ಅವರನ್ನು ಕಾರ್ಯಕ್ರಮದಲ್ಲಿ ಸಮ್ಮಾನಿಸಲಾಯಿತು. ಮುಖ್ಯಶಿಕ್ಷಕಿ ಸುಚೇತಾಕುಮಾರಿ ಬಿ.ಸ್ವಾಗತಿಸಿ, ದೈಹಿಕ ಶಿಕ್ಷಣ ಶಿಕ್ಷಕಿ ನೀಲಮ್ಮ ವಂದಿಸಿದರು. ಶಿಕ್ಷಕಿ ವಿದ್ಯಾಮಂಜುಳಾ ಪಿ.ಆರ್. ನಿರೂಪಿಸಿದರು.

'ಯುರೇಕಾ' 3ನೇ ದಿನದ ಕಾರ್ಯಾಗಾರ



ಪುತ್ತೂರು: ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ ವ್ಯಕ್ತಿತ್ವ ವಿಕಸನ ಶಿಬಿರ ಯುರೇಕಾ-2026ರ 3ನೇ ದಿನದ ಪ್ರಥಮ ಅವಧಿಯಲ್ಲಿ ರಸಾಯನ ಶಾಸ್ತ್ರದ ಮೂಲಭೂತ ಧಾತುಗಳು, ಆವರ್ತಕ ಕೋಷ್ಟಕ, ನಿತ್ಯ ಜೀವನದಲ್ಲಿ ರಸಾಯನ ಶಾಸ್ತ್ರದ ಬಳಕೆ ಹಾಗೂ ಅನ್ವಯಗಳ ಕುರಿತು ವಿವೇಕಾನಂದ ಪ.ಪೂ. ಕಾಲೇಜಿನ ರಸಾಯನ ಶಾಸ್ತ್ರ ವಿಭಾಗದ ಉಪನ್ಯಾಸಕಿ ನಳಿನ ಕುಮಾರಿ ಎಸ್. 'ಅನ್‌ವೈಲಿಂಗ್ ದಿ ಎಲಿಮೆಂಟ್ಸ್ ಆಫ್ ಚೇಂಜ್' ಶೀರ್ಷಿಕೆಯಡಿ ವಿಶೇಷ ಕಾರ್ಯಾಗಾರವನ್ನು ನೆರವೇರಿಸಿಕೊಟ್ಟರು. 2ನೇ ಅವಧಿಯಲ್ಲಿ ಜೀವಶಾಸ್ತ್ರ ಹಾಗೂ ಭೌತಶಾಸ್ತ್ರ ವಿಭಾಗದ ಉಪನ್ಯಾಸಕರು ವಿದ್ಯಾರ್ಥಿಗಳಿಗಾಗಿ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟರು.

'ಮೈಂಡ್ ಮ್ಯಾಟರ್ಸ್' ಎಂಬ ಮನೋವಿಜ್ಞಾನ ಆಧಾರಿತ ವಿಶೇಷ ಅವಧಿಯನ್ನು ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾಯಿತು. ಕಾಲೇಜಿನ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥ ಚಂದ್ರಕಾಂತ ಗೋರೆ ನಡೆಸಿಕೊಟ್ಟರು.

ನೆಟ್ಲ ಸರಕಾರಿ ಪ್ರಾಥಮಿಕ ಶಾಲೆಯ 'ಪ್ರಮೋಷನ್ ಡೇ'ಯಲ್ಲಿ ನಾಗರಾಜ್ ಸಲಹೆ

ಪೋಷಕರ ಸಹಕಾರ ಇದ್ದಾಗ ಮಾತ್ರ ಸರಕಾರಿ ಶಾಲೆ ಉಳಿವು



ಬಂಟ್ವಾಳ: ಗೋಳ್ತಮಜಲು ಗ್ರಾಮದ ನೆಟ್ಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಯಿಂದ 7ನೇ ತರಗತಿವರೆಗಿನ ಮಕ್ಕಳ ಮುಂದಿನ ತರಗತಿಗೆ ಸೇರಿಸುವ ವಿಶೇಷವಾದ 'ಪ್ರಮೋಷನ್ ಡೇ' ಕಾರ್ಯಕ್ರಮ ಜರಗಿತು.

ದಕ್ಷಿಣ ಕನ್ನಡ ಜಿಲ್ಲಾ ಹಸಿರು ದಳದ ಮ್ಯಾನೇಜರ್ ನಾಗರಾಜ್ ಮಕ್ಕಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿ, ಪೋಷಕರ ಸಹಕಾರ ಇದ್ದಾಗ ಮಾತ್ರ ಸರಕಾರಿ ಶಾಲೆ ಉಳಿಯಲು ಸಾಧ್ಯ, ಜನರಿಗೆ ಸ್ವಚ್ಛತೆ ಬಗ್ಗೆ ನಾಗರಿಕ ಪ್ರಜ್ಞೆ ಹಾಗೂ ಜಾಗ್ರತಿಯ ಅವಶ್ಯಕತೆ ಇದೆ ಎಂದರು.

ವಿಮಾಜೆ ಶಾಲಾ ಮುಖ್ಯ ಶಿಕ್ಷಕಿ ಡಾ. ತ್ರಿವೇಣಿ ರಮೇಶ್ ಮಾತನಾಡಿ, ಎಲ್ಲರ ಸಹಕಾರದಿಂದ ಗ್ರಾಮೀಣ ಪ್ರದೇಶದ ವಿಮಾಜೆ ಶಾಲೆ ಇಂದು ರಾಜ್ಯ ಮಟ್ಟದಲ್ಲಿ ಗುರುತಿಸುವಂತಾಗಿದೆ. ಸರಕಾರ ಈ ವರ್ಷದಿಂದ ಜಾರಿಗೆ ತಂದಿರುವ ದ್ವಿ ಬಾಷಾ ಶಿಕ್ಷಣದ ಮೂಲಕ ನೆಟ್ಲ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ರೂಪಿಸುವಸಲ್ಲಿ ಪೋಷಕರು ಸಹಕಾರ ನೀಡಬೇಕು ಎಂದರು.

ಈ ಏಳನೇ ತರಗತಿ ಮಕ್ಕಳ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು. 6ನೇ ತರಗತಿ ಮಕ್ಕಳು 7ನೇ ತರಗತಿ ಮಕ್ಕಳನ್ನು ಸ್ಮರಣಿಕೆ ಹಾಗೂ ವಿವಿಧ ಉಡುಗರೆಗಳನ್ನು ನೀಡಿ ಗೌರವಿಸಿದರು. ಶಾಲೆಯಿಂದ ಬೀಳ್ಕೊಡುತ್ತಿರುವ ಮಕ್ಕಳು ತಮ್ಮ ನೆನಪಿಗಾಗಿ ಒಂದು ಪ್ಯಾನಲ್ ಬೋರ್ಡ್ ಶಾಲೆಗೆ ಹಸ್ತಾಂತರಿಸಿದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಭಾಸ್ಕರ್ ಕುಲಾಲ್, ಉಪಾಧ್ಯಕ್ಷೆ ಭವ್ಯ, ಶಾಲಾ ಮುಖ್ಯ ಶಿಕ್ಷಕಿ ಶೋಭಾಲತಾ, ಹಸಿರು ದಳದ ಮೇಲ್ವಿಚಾರಕ ಸಾಂತಪ್ಪ ಉಪಸ್ಥಿತರಿದ್ದರು.

ಎಲ್ಲಾ ಮಕ್ಕಳಿಗೆ ಪೋಷಕರ ಜೊತೆ ಮುಂದಿನ ತರಗತಿಗೆ ಪ್ರಮೋಷನ್ ಆದ ಬಗ್ಗೆ ಪತ್ರ ನೀಡಲಾಯಿತು. ಪೋಷಕರು ಶಾಲೆಯಲ್ಲಿ ಸಿಗುವ ಶಿಕ್ಷಣದ ಗುಣಮಟ್ಟದ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ಪ್ಲಾಸ್ಟಿಕ್ ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ನೆಟ್ಲಶಾಲೆಯನ್ನು ದತ್ತು ಸ್ವೀಕಾರ ಮಾಡಲಾಯಿತು. ಹಿರಿಯ ಶಿಕ್ಷಕ ಪ್ರವೀಣ್ ಸ್ವಾಗತಿಸಿ, ಶಾಲ ಶಿಕ್ಷಕರು ತರಗತಿವಾರು ಮಕ್ಕಳ ಪ್ರಮೋಷನ್ ಪತ್ರ ವಾಚಿಸಿದರು. ಚಿತ್ರಕಲಾ ಶಿಕ್ಷಕ ಜಯರಾಮ್ ನಾವಡ ಕಾರ್ಯ ಕ್ರಮ ನಿರೂಪಿಸಿದರು.

ಶಿರೂರು ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನ ಬ್ರಹ್ಮಕಲಶ

ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ



ಬೈಂದೂರು: ಶಿರೂರು ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಏ.11 ರಿಂದ 14ರ ವರೆಗೆ ನಡೆಯುವ ಶ್ರೀ ಮಹಾಗಣಪತಿ ದೇವರ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವದ ಪ್ರಯುಕ್ತ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ ನಡೆಯಿತು.

ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ಅಧ್ಯಕ್ಷ ಹಾಗೂ ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ನಾಡೋಜ ಡಾ. ಜಿ. ಶಂಕರ್ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಮ ಎನ್. ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದ ಗೌರವಾಧ್ಯಕ್ಷ ನಾರಾಯಣ ಟಿ. ಅಳ್ವೆಗದ್ದೆ, ಅಧ್ಯಕ್ಷ ಗಣಪತಿ ಎಸ್. ಮೊಗವೀರ, ಶ್ರೀ ಬೊಬ್ಬರ್ಯ ದೈವಸ್ಥಾನದ ಅಧ್ಯಕ್ಷ ಶ್ರೀಪಾದ ಕುಮಾರ್, ಬಗ್ವಾಡಿ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಉದಯ ಕುಮಾರ್ ಹಟ್ಟಿಯಂಗಡಿ, ಉದ್ಯಮಿ ರಾಮ ಕೆ. ದೊಡ್ಮನೆಇದ್ದರು.

ಸುತ್ತಮುತ್ತ

ಉಜಿರೆಯ ಶ್ರೀ ಧ.ಮಂ. ಕಾಲೇಜು: ಶೇ.98.78 ಫಲಿತಾಂಶ ದಾಖಲು

ಬೆಳ್ತಂಗಡಿ: ಪರೀಕ್ಷೆಗೆ ಹಾಜರಾದ 904 ವಿದ್ಯಾರ್ಥಿಗಳ ಪೈಕಿ 893 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದು ವಿಜ್ಞಾನ ವಿಭಾಗದಲ್ಲಿ ಶೇ.98.62, ವಾಣಿಜ್ಯ ವಿಭಾಗದಲ್ಲಿ ಶೇ.99.69, ಕಲಾ ವಿಭಾಗದಲ್ಲಿ ಶೇ.95.77 ಫಲಿತಾಂಶ ಲಭಿಸಿದೆ.

ವಿಜ್ಞಾನ ವಿಭಾಗದ ಅಂಕಿತಾ 591 ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಹಾಗೂ ರಾಜ್ಯಮಟ್ಟದಲ್ಲಿ 9ನೇ ಸ್ಥಾನ, ವಾಣಿಜ್ಯ ವಿಭಾಗದಲ್ಲಿ ಹಂಸಿನಿ ಭಿಡೆ 595 ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 6ನೇ ಸ್ಥಾನ, ಅಂಶುಲ ಶ್ರೇಷ್ಠ 592 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 9ನೇ ಸ್ಥಾನ, ರಾಮಚರಣ್ 591 ಅಂಕಗಳೊಂದಿಗೆ ತೃತೀಯ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 10ನೇ ಸ್ಥಾನ ಮತ್ತು ಕಲಾ ವಿಭಾಗದಲ್ಲಿ ನಿಜ ಕುಲಾಲ್ 593 ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 4ನೇ ಸ್ಥಾನ, ಶ್ರೀಪೂರ್ಣ 588 ಅಂಕಗಳೊಂದಿಗೆ ಕಾಲೇಜಿಗೆ ದ್ವಿತೀಯ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 9ನೇ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 510 ವಿದ್ಯಾರ್ಥಿಗಳಲ್ಲಿ 503 ಮಂದಿ ಉತ್ತೀರ್ಣಗೊಂಡಿದ್ದು 234 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 260 ವಿದ್ಯಾರ್ಥಿಗಳು ಪ್ರಥಮ ಹಾಗೂ 9 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ವಾಣಿಜ್ಯ ವಿಭಾಗದಲ್ಲಿ 323 ವಿದ್ಯಾರ್ಥಿಗಳಲ್ಲಿ 322 ಮಂದಿ ಉತ್ತೀರ್ಣಗೊಂಡಿದ್ದು 132 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ , 182 ವಿದ್ಯಾರ್ಥಿಗಳು ಪ್ರಥಮ, 7 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಕಲಾ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 71 ವಿದ್ಯಾರ್ಥಿಗಳಲ್ಲಿ 68 ಮಂದಿ ಉತ್ತೀರ್ಣಗೊಂಡಿದ್ದು 16 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 34 ವಿದ್ಯಾರ್ಥಿಗಳು ಪ್ರಥಮ, 18 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಸಾಧಕರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲ ಪ್ರಮೋದ್ ಕುಮಾರ್ ಬಿ., ಉಪ ಪ್ರಾಂಶುಪಾಲ ಡಾ. ರಾಜೇಶ್ ಬಿ., ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ಕಾಲೇಜು: ಉತ್ತಮ ಫಲಿತಾಂಶ

ಬೈಂದೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಕೊಲ್ಲೂರು ಶ್ರೀ ಮೂಕಾಂಬಿಕಾ ಪದವಿ ಪೂರ್ವ ಕಾಲೇಜು ಕಲಾ ವಿಭಾಗದಲ್ಲಿ ಶೇ.100 ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ.97.89 ಫಲಿತಾಂಶವನ್ನು ದಾಖಲಿಸಿದೆ.

ವಾಣಿಜ್ಯ ವಿಭಾಗದಲ್ಲಿ 35 ವಿದ್ಯಾರ್ಥಿಗಳು ಹಾಗೂ ಕಲಾ ವಿಭಾಗದಲ್ಲಿ 8 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ವಾಣಿಜ್ಯ ವಿಭಾಗದಲ್ಲಿ ಪ್ರಥಮ ಪಂಚಮಿ 580 ಅಂಕ, ದ್ವಿತೀಯ: ಗೀತಾ ಕೆ. ಎಸ್. 574 ಅಂಕ, ತೃತೀಯ: ಅನನ್ಯ 573 ಅಂಕ ಹಾಗೂ ಕಲಾ ವಿಭಾಗದಲ್ಲಿ ಪ್ರಥಮ ಸುದೀಪ್ ಹೆಬ್ 560, ದ್ವಿತೀಯ ಗಣೇಶ್ ಕೆ. ಆರ್. 554, ತೃತೀಯ: ಮಾನ್ಯ ಜೆ. 528 ಅಂಕ ಪಡೆದಿದ್ದಾರೆ.

ಮೂಲ್ಕಿ ತಾಲೂಕಿನ ವಿವಿಧ ಕಾಲೇಜಿನ ಫಲಿತಾಂಶ

ಮೂಲ್ಕಿ ಮೆಡಲಿನ್ ಪಿಯು ಕಾಲೇಜು

ಮೂಲ್ಕಿ: ಮೂಲ್ಕಿ ಕಿಲ್ಪಾಡಿ ಮೆಡಲಿನ್ ಪಿಯು ಕಾಲೇಜು ಶೇ98% ಫಲಿತಾಂಶ ಗಳಿಸಿದೆ. 148 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಕಲಾ ವಿಭಾಗ ಶೇ.100 , ವಿಜ್ಞಾನ ವಿಭಾಗ98%,ವಾಣಿಜ್ಯ ವಿಭಾಗ ಶೇ.97 49 ವಿಶೀಷ್ಟ ಶ್ರೇಣಿ,ಪ್ರಥಮ,88,ದ್ವಿತೀಯ8 ಫಲಿತಾಂಶ ಲಭಿಸಿದೆ.

ಶ್ರೀನಾರಾಯಣ ಸನಿಲ್ ಸರಕಾರಿ ಪದವಿಪೂರ್ವ ಕಾಲೇಜು

ಶ್ರೀನಾರಾಯಣ ಸನಿಲ್ ಸರಕಾರಿ ಪದವಿಪೂರ್ವ ಕಾಲೇಜು ಹಳೆಯಂಗಡಿ ಶೇ. 86 ಫಲಿತಾಂಶ ಗಳಿಸಿದೆ. ಕಲಾ, ವಿಜ್ಞಾನ,ವಾಣಿಜ್ಯ ವಿಭಾಗಗಳಲ್ಲಿ 43 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ವಿಶಿಷ್ಟ ಶ್ರೇಣಿ 3, ಪ್ರಥಮದರ್ಜೆ16, ದ್ವಿತೀಯ ದರ್ಜೆ11 ಫಲಿತಾಂಶ ಲಭಿಸಿದೆ.

ಮೂಲ್ಕಿ ಸರಕಾರಿ ಪದವಿಪೂರ್ವ ಕಾಲೇಜು

ಮೂಲ್ಕಿ ಸರಕಾರಿ ಪದವಿಪೂರ್ವ ಕಾಲೇಜಿನ ಕಲಾ ವಿಭಾಗದಲ್ಲಿ 33 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 30 ತೇರ್ಗಡೆ ,ವಿಶಿಷ್ಟ ಶ್ರೇಣಿ 2,ಪ್ರಥಮ13, ದ್ವಿತೀಯ12, ಫಲಿತಾಂಶ ಶೇ. 90.90, ವಿಜ್ಞಾನ ವಿಭಾಗದಲ್ಲಿ 21 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 18 ತೇರ್ಗಡೆ ,ವಿಶಿಷ್ಟ ಶ್ರೇಣಿ 3,ಪ್ರಥಮ13, ದ್ವಿತೀಯ4, ಫಲಿತಾಂಶ ಶೇ. 85.7, ವಾಣಿಜ್ಯ ವಿಭಾಗದಲ್ಲಿ 36 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 32 ತೇರ್ಗಡೆ ,ವಿಶಿಷ್ಟ ಶ್ರೇಣಿ 1,ಪ್ರಥಮ13, ದ್ವಿತೀಯ16, ಫಲಿತಾಂಶ ಶೇ. 89 ಲಭಿಸಿದೆ.

ವಾಣಿಜ್ಯ ವಿಭಾಗದಲ್ಲಿ ಜಿಶಾ ಪಿ. ರಾಜ್ಯಕ್ಕೆ 8ನೇಸ್ಥಾನ

ಬಂಟ್ವಾಳ: 2025–26ನೇ ಸಾಲಿನ ದ್ವಿತೀಯ ಪಿಯುಸಿ



ಪರೀಕ್ಷೆಯಲ್ಲಿ ಕೆನರಾ ಪದವಿಪೂರ್ವ ಕಾಲೇಜು ಮಂಗಳೂರು ಇಲ್ಲಿನ ವಾಣಿಜ್ಯ ವಿಭಾಗದ ಜಿಶಾ ಪಿ. 593 ಅಂಕ ಪಡೆದು ರಾಜ್ಯಮಟ್ಟದಲ್ಲಿ 8ನೇ ಸ್ಥಾನ ಪಡೆದಿದ್ದಾಳೆ. ವ್ಯವಹಾರ ಅಧ್ಯಯನ 100, ಗಣಿತ 100 , ಅಕೌಂಟೆನ್ಸಿ 100, ಅಂಕಗಳನ್ನು ಪಡೆದಿದ್ದು ಸಂಖ್ಯಾಶಾಸ್ತ್ರ 99 , ಇಂಗ್ಲೀಷ್ 96, ಹಿಂದಿ 98 ಅಂಕಗಳನ್ನು ಗಳಿಸಿ ಸಾಧನೆ ಮಾಡಿರುತ್ತಾಳೆ. ಈಕೆ ಪ್ರಕಾಶ್ ಬಂಟ್ವಾಳ ಮತ್ತು ಶಿಕ್ಷಕಿ ವಿನುತಾ ಇವರ ಸುಪುತ್ರಿ.

ಅಳಿಕೆ ಸತ್ಯಸಾಯಿ ಕಾಲೇಜು: ವಿಜ್ಞಾನ, ವಾಣಿಜ್ಯದಲ್ಲಿ ಶೇ.100 ಫಲಿತಾಂಶ

ವಿಟ್ಲ: ಅಳಿಕೆ ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜು ವಿಜ್ಞಾನ ವಿಭಾಗದಲ್ಲಿ 142 ವಿದ್ಯಾರ್ಥಿಗಳು ಹಾಜರಾಗಿದ್ದು, 127 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ ಮತ್ತು 15 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಶೇ.100 ಫಲಿತಾಂಶ ದಾಖಲಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 55 ವಿದ್ಯಾರ್ಥಿಗಳು ಹಾಜರಾಗಿದ್ದು, 39 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 16 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಿಸಿರುತ್ತಾರೆ. ಕಲಾ ವಿಭಾಗದಲ್ಲಿ ಹಾಜರಾದ 15 ವಿದ್ಯಾರ್ಥಿಗಳಲ್ಲಿ 2 ವಿಶಿಷ್ಟ ಶ್ರೇಣಿ, 8 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ 2 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶೇಕಡಾ 87 ಫಲಿತಾಂಶ ದಾಖಲಾಗಿರುತ್ತದೆ.

ವಿಜ್ಞಾನ ವಿಭಾಗ


ವಿಜ್ಞಾನ ವಿಭಾಗದಲ್ಲಿ ಶಿವಸಾಗರ ಹಲನ್ನವರ್ 596 ಹಾಗೂ ಕಾರ್ತಿಕ್ ಮಹೇಶ್ ಬಡಿಗೇರ್ 596 ಪ್ರಥಮ, ಕಾರ್ತಿಕ್ ಎ. 592 ದ್ವಿತೀಯ, ಕನಿಷ್ಕ ಎಂ. ಹೊನ್ನವಾರ್ಕರ್ 591 ತೃತೀಯ ಸ್ಥಾನ ಪಡೆದಿದ್ದಾರೆ.



ವಾಣಿಜ್ಯ ವಿಭಾಗ

ವಾಣಿಜ್ಯ ವಿಭಾಗದಲ್ಲಿ ಜೈದೀಪ್ ಕಣ್ವತೀರ್ಥ 595 ಪ್ರಥಮ, ವೈಶಾಕ್ ಬಿ. 594 ದ್ವಿತೀಯ, ಸಾಯಿಲೋಚನ್ ಎನ್. 590 ತೃತೀಯ ಸ್ಥಾನ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ಸುಹಾನ್ ಪುಂಡಲೀಕ್ ಎಂ. 556 ಪ್ರಥಮ, ತನ್ಮಯ್ 538 ದ್ವಿತೀಯ, ದರ್ಶನ್ ಉಮೇಶ ಗೌಡ ಎಂ. 476 ತೃತೀಯ ಪಡೆದಿದ್ದಾರೆ.

ಕೋಟ ವಿವೇಕ ಪ.ಪೂ.ಕಾಲೇಜಿನ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ



ಕೋಟ: 2025–26ನೇ ಸಾಲಿನ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಕೋಟ ವಿವೇಕ ಪದವಿ ಪೂರ್ವ ಕಾಲೇಜಿನ 689 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 686 ವಿದ್ಯಾರ್ಥಿಗಳು ತೇರ್ಗಡೆ ಹೊಂದುವುದರೊಂದಿಗೆ ಶೇ.99.6 ಫಲಿತಾಂಶ ದಾಖಲಿಸಿದ್ದಾರೆ.

368 ವಿಶಿಷ್ಟ ಶ್ರೇಣಿಯಲ್ಲಿ ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 294 ವಿದ್ಯಾರ್ಥಿಗಳು, ದ್ವಿತೀಯ ಶ್ರೇಣಿಯಲ್ಲಿ 24 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.


ವಿಜ್ಞಾನ ವಿಭಾಗದಲ್ಲಿ ಸೃಷ್ಟಿ (594), ಸಿಂಚನ(592), ಸಮೀಕ್ಷಾ ಜಿ.(591), ವಾಣಿಜ್ಯ ವಿಭಾಗದಲ್ಲಿ ಭೂಮಿಕ ಟಿ.ಡಿ. (595), ಶರಣ್ಯ ವಾರಂಬಳ್ಳಿ (594), ಅಪೇಕ್ಷಾ ಗಣೇಶ ಪೂಜಾರಿ (593), ಕಲಾ ವಿಭಾಗದಲ್ಲಿ ಉದ್ಭವಿ ಕೆ.(569), ಎಂ. ಪೂಜಾರಿ(558), ಪೂರ್ವಿಕಾ ಭೀಮಪ್ಪ ಫಕೀರಪ್ಪ (532) ಅತೀ ಹೆಚ್ಚು ಅಂಕ ಪಡೆದು ಸಾಧನೆ ಮಾಡಿದ್ದಾರೆ.

ನಿಟ್ಟೆ ಪದವಿಪೂರ್ವ ಕಾಲೇಜ್: ಉತ್ತಮ ಫಲಿತಾಂಶ ದಾಖಲು

ನಿಟ್ಟೆ : ಪಿ.ಯು.ಸಿ. ವಾರ್ಷಿಕ ಪರೀಕ್ಷೆ 1ರಲ್ಲಿ ಡಾ.ಎನ್.ಎಸ್.ಎ.ಎಂ. ಪದವಿಪೂರ್ವ ಕಾಲೇಜು ನಿಟ್ಟೆಗೆ ರಾಜ್ಯ ಮಟ್ಟದಲ್ಲಿ 4 ರ್‍ಯಾಂಕ್‌ಗಳು ಲಭಿಸಿವೆ.

ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ ಅಮೃತಾ ಕಾಮತ್ 596 ಅಂಕಗಳೊಂದಿಗೆ ರಾಜ್ಯ ಮಟ್ಟಕ್ಕೆ 5ನೇ ರ್‍ಯಾಂಕ್ ಹಾಗೂ ದ್ವಿತೀಯ ಪಿಯು ವಿಜ್ಞಾನ ವಿಭಾಗದ ಆಡ್ಲಿನ್ ವಿಯಾನಾ ಮಥಾಯಸ್ 593 ಅಂಕಗಳೊಂದಿಗೆ ರಾಜ್ಯಮಟ್ಟಕ್ಕೆ 7ನೇ ರ್‍ಯಾಂಕ್, ನಿಧಿ ದೀಪಕ್ ಮೆಂಡನ್ 591ಅಂಕಗಳೊಂದಿಗೆ 9ನೇ ರ್‍ಯಾಂಕ್ ಮತ್ತು ವರ್ಷಾ ಎಸ್. ಭಂಡಾರಿ 590 ಅಂಕಗಳೊಂದಿಗೆ 10ನೇ ರ್‍ಯಾಂಕನ್ನು ಗಳಿಸಿದ್ದಾರೆ. ಇದರೊಂದಿಗೆ ವಾಣಿಜ್ಯ ವಿಭಾಗದ ಪ್ರತಿಷ್ಠಾ ಪ್ರಭು 589 ಮತ್ತು ನಂದಿನಿ ಎ. ಶೆಟ್ಟಿ 585 ಅಂಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಪರೀಕ್ಷೆಗೆ ಹಾಜರಾದ 278 ವಿದ್ಯಾರ್ಥಿಗಳಲ್ಲಿ 146 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಮತ್ತು 120 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡಿದ್ದು, ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 99.4% ಮತ್ತು ವಾಣಿಜ್ಯ ವಿಭಾಗದಲ್ಲಿ 100% ಫಲಿತಾಂಶ ದಾಖಲಾಗಿರುತ್ತದೆ. ಉತ್ತಮ ಫಲಿತಾಂಶವನ್ನು ಸಂಸ್ಥೆಗೆ ಒದಗಿಸಿಕೊಟ್ಟ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕ ಮತ್ತು ಸಿಬ್ಬಂದಿ ವೃಂದ ಅಭಿನಂದಿಸಿದ್ದಾರೆ.



ರಾಜ್ಯದಲ್ಲಿ ರ್‍ಯಾಂಕ್

ವಾಣಿಜ್ಯ ವಿಭಾಗದಲ್ಲಿ ಅಮೃತಾ ಕಾಮತ್ ರಾಜ್ಯ ಮಟ್ಟಕ್ಕೆ 5ನೇ ರ್‍ಯಾಂಕ್ , ವಿಜ್ಞಾನ ವಿಭಾಗದ ಆಡ್ಲಿನ್ ವಿಯಾನಾ ಮಥಾಯಸ್ ರಾಜ್ಯಮಟ್ಟಕ್ಕೆ 7ನೇ ರ್‍ಯಾಂಕ್, ನಿಧಿ ದೀಪಕ್ ಮೆಂಡನ್ 9ನೇ ರ್‍ಯಾಂಕ್ , ವರ್ಷಾ ಭಂಡಾರಿ ಗೆ 10ನೇ ರ್‍ಯಾಂಕ್‌ಬಂದಿದೆ.


ಕುಂದಾಪುರ ಶ್ರೀ ವೆಂಕಟರಮಣ ಕಾಲೇಜಿಗೆ ಶೇ.100 ಫಲಿತಾಂಶ

ಕುಂದಾಪುರ: ಕುಂದಾಪುರದ ಪ್ರತಿಷ್ಠಿತ ಶ್ರೀ ವೆಂಕಟರಮಣ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯ ಮಟ್ಟದ ಟಾಪ್ 10 ಸ್ಥಾನದಲ್ಲಿ ಒಟ್ಟು 35 ರ್‍ಯಾಂಕ್ ಪಡೆದಿದ್ದು ಶೇ. 100 ಫಲಿತಾಂಶ ದಾಖಲಿಸಿದೆ.

ಪರೀಕ್ಷೆಗೆ ಹಾಜರಾದ 538 ವಿದ್ಯಾರ್ಥಿಗಳಲ್ಲಿ 457 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 81 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಸಂಸ್ಕೃತ 94, ಗಣಿತಶಾಸ್ತ್ರ 49, ಕಂಪ್ಯೂಟರ್ ಸೈನ್ಸ್ 42, ವ್ಯವಹಾರ ಅಧ್ಯಯನ 40, ಲೆಕ್ಕಶಾಸ್ತ್ರ 26, ಭೌತಶಾಸ್ತ್ರ 20, ಅರ್ಥಶಾಸ್ತ್ರ 13, ಕನ್ನಡ 11, ಇಂಗ್ಲೀಷ್ 04, ರಸಾಯನ ಶಾಸ್ತ್ರ 02, ಜೀವಶಾಸ್ತ್ರ 02, ಹಿಂದಿ 01 ವಿಷಯವಾರು ನೂರಕ್ಕೆ ನೂರು ಅಂಕಗಳನ್ನು ವಿದ್ಯಾರ್ಥಿಗಳು ದಾಖಲಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪ್ರಾರ್ಥನಾ ಪೈ ಮತ್ತು ಇಂಚರಾ ಸಿ. ಪೂಜಾರಿ (596) 4ನೇ ರ್‍ಯಾಂಕ್, ಅಕ್ಷಯ್ ಅಶ್ವಿನ್ ಪೈ (595) 5ನೇ ರ್‍ಯಾಂಕ್, ಪ್ರವೀಣಾ ಪೈ, ದೀಕ್ಷಾ ವಿ.ಕಾಮತ್, ಶ್ರೀನಿಧಿ (593) 7ನೇ ರ್‍ಯಾಂಕ್, ಕೌಸ್ತುಬಾ, ವಸಂತ್ ಭಟ್, ವರ್ಷ ಕೆ., ಪ್ರತಿಕ್ಷಿತಾ, ರೇಖಾ ಎಲ್., ಕ್ಷಿಪಾಲಿ (592) 8ನೇ ರ್‍ಯಾಂಕ್, ವಿಭವ್ ಮೇಲಾಡಿ, ವಿಜೇತಾ ಆರ್. ಭಟ್ (591) 9ನೇ ರ್‍ಯಾಂಕ್, ಧನ್ಯಾ ಜೆ. ಪಟಗಾರ್, ಮೋನಿಶಾ ಪಿ. ವಿ., ರಚನಾ (590) 10ನೇ ರ್‍ಯಾಂಕ್ ಪಡೆದಿರುತ್ತಾರೆ.

ವಾಣಿಜ್ಯ ವಿಭಾಗದಲ್ಲಿ ಬಿ. ಶ್ರೀಲಕ್ಷ್ಮೀ ವಿ. ಅಡಿಗ, ಸಾನಿಕಾ (596) 5ನೇ ರ್‍ಯಾಂಕ್, ರಾಜೇಂದ್ರ ಭಟ್, ಶ್ರಾವ್ಯ (595) 6ನೇ ರ್‍ಯಾಂಕ್, ಧನ್ಯಾ ಭಟ್, ಹರ್ಷಿತಾ ಪೂಜಾರಿ, ಕೆ. ಪಿ. ಶಾನ್ವಿ ಸಮೀಕ್ಷಾ (594) 7ನೇ ರ್‍ಯಾಂಕ್, ತನುಶ್ರೀ ರವಿ



ಪೂಜಾರಿ, ಮೇನಕಾ, ಮೊಹಮ್ಮದ್ ಹುರ್ಝೈಫಾ (593) 8ನೇ ರ್‍ಯಾಂಕ್, ನಿಕಿತಾ, ದಿಶಾ ಎಸ್., ರಾಘವೇಶ್ ಭಟ್ (592) 9ನೇ ರ್‍ಯಾಂಕ್, ಕೀರ್ತನಾ, ಪ್ರಜ್ಞಾ, ಪ್ರತೀಕ್ಷಾ, ಸಮೀಕ್ಷಾ ಪೂಜಾರಿ (591) 10ನೇ ರ್‍ಯಾಂಕ್ ಪಡೆದುಕೊಳ್ಳುವುದರ ಮೂಲಕ ಸಾಧನೆ ಮೆರೆದಿದ್ದಾರೆ.

ಕುಂದಾಪುರ ಎಕ್ಸಲೆಂಟ್ ಕಾಲೇಜು: ಶೇ.100 ದಾಖಲೆಯ ಫಲಿತಾಂಶ

ಕುಂದಾಪುರ: 2025–26ನೇ ಸಾಲಿನ ಶೈಕ್ಷಣಿಕ ವರ್ಷದ ದ್ವಿತೀಯ ಪಿಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಕುಂದಾಪುರದ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜು ಶೇ. 100 ಫಲಿತಾಂಶ ದಾಖಲಿಸಿದೆ.

ಪರೀಕ್ಷೆಗೆ ಹಾಜರಾದ 314 ವಿದ್ಯಾರ್ಥಿಗಳಲ್ಲಿ 232 ವಿದ್ಯಾರ್ಥಿಗಳು ವಿಶಿಷ್ಟಶ್ರೇಣಿ ಹಾಗೂ 82 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವುದರೊಂದಿಗೆ ರಾಜ್ಯದಲ್ಲಿ ಉತ್ತಮ ಸಾಧನೆ ಮಾಡಿದೆ.

ವಿಜ್ಞಾನ ವಿಭಾಗದ ಮಾನ್ಯ (597), ಅನುಪ್ ಶೇಖರ್ ನಾಯ್ಕ (595) ಅಂಕಗಳೊಂದಿಗೆ ರಾಜ್ಯದಲ್ಲಿಯೇ ಅತ್ಯುತ್ತಮ ರ್‍ಯಾಂಕ್‌ನ್ನು ಗಳಿಸಿದ್ದಾರೆ. ಬಾಲಗೌಡ ಬಸವರಾಜ್ ಮಂಗೋಜಿ (592), ಆಯುಷ್ ಶೆಣೈ (592), ಕಿಶನ್ ಕುಮಾರ್ ಗಿರೀಶ್ ಹೆಗ್ಡೆ (592), ಸನ್ನಿತಾ ಎಸ್.ಎನ್. (592), ಸಾನ್ವಿ



ಶೆಟ್ಟಿ (591), ತನ್ವಿ ಶೆಟ್ಟಿ (590), ತ್ರಿಶಾ (590) ಒಟ್ಟು 9 ರ್‍ಯಾಂಕ್‌ಗಳೊಂದಿಗೆ ರಾಜ್ಯದಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆಯನ್ನು ಮಾಡಿದ್ದಾರೆ.

ಬೆಂಜನಪದವು ಸರ್ಕಾರಿ ಪ.ಪೂ. ಕಾಲೇಜಿಗೆ ಉತ್ತಮ ಫಲಿತಾಂಶ

ಬಂಟ್ವಾಳ: ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಬೆಂಜನಪದವು ಸರ್ಕಾರಿ ಪದವಿಪೂರ್ವ ಕಾಲೇಜಿನ 48 ವಿದ್ಯಾರ್ಥಿಗಳು ಹಾಜರಾಗಿದ್ದು,46 ವಿದ್ಯಾರ್ಥಿಗಳು ತೇರ್ಗಡೆಯಾಗಿ 95.83% ಫಲಿತಾಂಶ ದಾಖಲಿಸಿದ್ದಾರೆ.


10 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು, 22 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ 12 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎಲ್ಲಾ ವಿದ್ಯಾರ್ಥಿಗಳೂ ತೇರ್ಗಡೆಯಾಗಿ ಶೇ. 100 ಫಲಿತಾಂಶ ದಾಖಲಿಸಿದ್ದಾರೆ. ಕೆ.ನಾಫಿಯಾ ಮರಿಯಂ 558 ಅಂಕಗಳೊಂದಿಗೆ ಪ್ರಥಮ ಸ್ಥಾನ, ಮಿಸ್ಬಾ 499 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.



ವಾಣಿಜ್ಯ ವಿಭಾಗದ 26 ವಿದ್ಯಾರ್ಥಿಗಳಲ್ಲಿ 25 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ. 96.15 ದಾಖಲಿಸಿದ್ದಾರೆ.7 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು ಫಾತಿಮತ್ ಶಲ್ಬಾನಾ 581 ಅಂಕಗಳೊಂದಿಗೆ ಪ್ರಥಮ ಸ್ಥಾನ ಹಾಗೂ ಧನುಶ್ರೀ 560 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.ವಿಜ್ಞಾನ ವಿಭಾಗದ 12 ವಿದ್ಯಾರ್ಥಿಗಳಲ್ಲಿ 11 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು ಶೇ. 91.66 ದಾಖಲಿಸಿದ್ದಾರೆ.

ಇಬ್ಬರು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಗಳಿಸಿದ್ದು ನಿನಾದ್ 566 ಅಂಕಗಳೊಂದಿಗೆ ಪ್ರಥಮ ಸ್ಥಾನ ಹಾಗೂ ತ್ರಿಶೂಲ್ ಮೊಯಿಲಿ 539 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ವಾಣಿ ಪದವಿ ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ ದಾಖಲು



ಪುತ್ತೂರು: ಈ ಬಾರಿಯ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ವಾಣಿ ಪದವಿ ಪೂರ್ವ ಕಾಲೇಜಿನಿಂದ 651 ವಿದ್ಯಾರ್ಥಿಗಳು ಹಾಜರಾಗಿದ್ದು, 279 ಮಂದಿ ವಿದ್ಯಾರ್ಥಿಗಳು ಅತಿ ವಿಶಿಷ್ಟ ಶ್ರೇಣಿಯಲ್ಲಿ 330 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶೇ.99 ಫಲಿತಾಂಶ ಬಂದಿದೆ.

ವಾಣಿಜ್ಯ ವಿಭಾಗದಲ್ಲಿ ಸಂಜನಾ ಪೈ 593 ಅಂಕ, ಸಮೀಕ್ಷಾ 592 ಮತ್ತು ಸಾದಿಯ 590 ಅಂಕ ಗಳಿಸಿ ರಾಜ್ಯಮಟ್ಟದ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗ ದಲ್ಲಿ ನವಮಿ 588 ಅಂಕ, ದೃತಿ 586, ಗೌತಮಿ 584 , ಶೃತಿ 584 ಅಂಕಗಳನ್ನು ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ಶ್ರೀದೇವಿ 581, ಪವಿತ್ರ 571 , ತ್ರಿಶಾ ಬಿ 566 ಅಂಕ ಗಳಿಸಿದ್ದಾರೆ.

ತುಂಬೆ ಕಾಲೇಜಿಗೆ ಉತ್ತಮ ಫಲಿತಾಂಶ

ಬಂಟ್ವಾಳ: ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ತುಂಬೆ ಪ.ಪೂ.ಕಾಲೇಜಿನ ದ್ವಿತೀಯ ವಿಜ್ಞಾನ ವಿಭಾಗದಲ್ಲಿ 77 ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 74 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 96 ಫಲಿತಾಂಶ ಬಂದಿದೆ.

ಕಾಮರ್ಸ್‌ನಲ್ಲಿ ಪರೀಕ್ಷೆಗೆ ಹಾಜರಾದ 68 ವಿದ್ಯಾರ್ಥಿಗಳಲ್ಲಿ 63 ಮಂದಿ ಉತ್ತೀರ್ಣರಾಗಿ ಶೇ. 93 ಫಲಿತಾಂಶ ಬಂದಿದೆ.

ಕಲಾ ವಿಭಾಗದಲ್ಲಿ 29 ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 27 ಮಂದಿ ಉತ್ತೀರ್ಣರಾಗಿ ಶೇ.93 ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ 28 ಡಿಸ್ಟಿಂಕ್ಷನ್, 35 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಹಾಜಿರತ್ ಸಫಾ ಡಿ.ಬಿ. 583 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಕಾಮರ್ಸ್ ವಿಭಾಗದಲ್ಲಿ ಹಾಜರಾದ ವಿದ್ಯಾರ್ಥಿಗಳಲ್ಲಿ



11 ಡಿಸ್ಟಿಂಕ್ಷನ್,44 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರೆ ಯಶಿಕಾ 572 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿರುತ್ತಾಳೆ.

ಕಲಾ ವಿಭಾಗದಲ್ಲಿ ಹಾಜರಾದ ವಿದ್ಯಾರ್ಥಿಗಳಲ್ಲಿ 15 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಆಶಿಯಾ ಆಮ್ನಾ 492 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾಳೆ ಎಂದು ಕಾಲೇಜಿನ ಪ್ರಕಟಣೆತಿಳಿಸಿದೆ.

ಮಣೂರು ಪಡುಕರೆ ವಿದ್ಯಾರ್ಥಿಗಳ ಸಾಧನೆ

ಕೋಟ: ಬ್ರಹ್ಮಾವರತಾಲೂಕಿನ ಮಣೂರು ಪಡುಕರೆಯ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ತೋರಿದೆ.

ಕಾಲೇಜಿನ 8 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ, 23 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಹಾಗೂ 06 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ವಾಣಿಜ್ಯ ವಿಭಾಗದಲ್ಲಿ ದಿಗಂತ್.ಜಿ 574 ಹಾಗೂ ವಿಜ್ಞಾನ ವಿಭಾಗದ ಭೂಮಿಕಾ.ಸಿ 522 ಅಂಕಗಳನ್ನು ಗಳಿಸಿದ್ದಾರೆ. ಉಳಿದಂತೆ ವಾಣಿಜ್ಯ ವಿಭಾಗದ ಪ್ರಜ್ವಲ್ 549, ಸಾಕ್ಷಿ 541, ಯಶ್ಮಿತಾ 521, ಸ್ಪಂದನಾ 514, ವರುಣ್ 511, ಕೀರ್ತನಾ 510, ವೈಷ್ಣವಿ 498, ಫಾತಿಮಾತುಲ್ ಸನಾ 496 ಹಾಗೂ ಸ್ವಾತಿ 492 ಅಂಕಗಳನ್ನು ಗಳಿಸಿ ಉತ್ತಮ ಸಾಧನೆ ತೋರಿದ್ದಾರೆ.ಕಾಲೇಜು ಅಭಿವೃದ್ಧಿ ಸಮಿತಿ, ಪ್ರಾಂಶುಪಾಲರು, ಉಪನ್ಯಾಸಕರು, ಹಾಗೂ ಮಣೂರು ಗೀತಾನಂದ ಟ್ರಸ್ಟ್ , ಪೋಷಕರು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಫಿಲೋಮಿನಾ ಕಾಲೇಜಿಗೆ ಉತ್ತಮ ಫಲಿತಾಂಶ

ಪುತ್ತೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಪುತ್ತೂರಿನ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜ್ ಶೇ.96 ಉತ್ತೀರ್ಣತೆ ದಾಖಲಿಸಿದ್ದು, ವಿಜ್ಞಾನ ವಿಭಾಗದಲ್ಲಿ 1 ಮತ್ತು ವಾಣಿಜ್ಯ ವಿಭಾಗದಲ್ಲಿ 3 ರ್‍ಯಾಂಕ್‌ಗಳನ್ನು ತನ್ನದಾಗಿಸಿಕೊಂಡಿದೆ.

ಶೇ.95ಕ್ಕಿಂತ ಹೆಚ್ಚಿನ ಅಂಕಗಳನ್ನು ಈ ಬಾರಿ ಕಾಲೇಜಿನ 42 ಮಂದಿ ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅಪೂರ್ವ 595, ಅಂಕ ಪಡೆದು ರಾಜ್ಯದಲ್ಲಿ 5ನೇ ರ್‍ಯಾಂಕ್ ಮತ್ತು ವಾಣಿಜ್ಯ ವಿಭಾಗದಲ್ಲಿ ಸಹೀದಾ 595 ಅಂಕ ಪಡೆದು ರಾಜ್ಯದಲ್ಲಿ 6ನೇ ರ್‍ಯಾಂಕ್, ಸೋನಿಕಾ ಕುಟಿನ್ಹಾ 592 ಅಂಕ ಪಡೆದು ರಾಜ್ಯದಲ್ಲಿ 9ನೇ ರ್‍ಯಾಂಕ್, ದೀಪ್ತಿ ಕೆ.ಎಸ್. 591 ಅಂಕ ಪಡೆದು ರಾಜ್ಯದಲ್ಲಿ 10ನೇ ರ್‍ಯಾಂಕ್, ಬಿ.ವಿ. ಅನು 590, ಆಯಿಷಾ ಮಹಪೂಲ 590 ,



ಪ್ರಣಮ್ 590 ಅಂಕ ಪಡೆದುಕೊಂಡಿದ್ದಾರೆ. ಕಲಾ ವಿಭಾಗದಲ್ಲಿ ಅಶ್ವಿನ್ ಜಾರ್ಜ್ 580 ಅಂಕ ಗಳಿಸಿ ಕಾಲೇಜಿಗೆ ಪ್ರಥಮ ರೆನಿಸಿಕೊಂಡಿದ್ದಾರೆ. ಒಟ್ಟು 682 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇದರಲ್ಲಿ 214 ಮಂದಿ ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 362 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕಲಾ ವಿಭಾಗದಲ್ಲಿ ಶೇ.95, ವಾಣಿಜ್ಯ ವಿಭಾಗದಲ್ಲಿ ಶೇ.98 , ವಿಜ್ಞಾನ ವಿಭಾಗದಲ್ಲಿ ಶೇ.94 ಫಲಿತಾಂಶ ಬಂದಿದೆ.

ಸುಂಟಿಕೊಪ್ಪ ಮೊರಾರ್ಜಿ ದೇಸಾಯಿ ಕಾಲೇಜಿಗೆ ಶೇ.100 ಫಲಿತಾಂಶ

ಸುಂಟಿಕೊಪ್ಪ: ದ್ವಿತೀಯ ಪಿಯುಸಿ ಫಲಿತಾಂಶ ದಲ್ಲಿ ಗರಗಂದೂರಿನಲ್ಲಿರುವ ಮೊರಾರ್ಜಿ ದೇಸಾಯಿ ಪದವಿಪೂರ್ವ ಕಾಲೇಜಿನ 80 ಮಕ್ಕಳು ಪರೀಕ್ಷೆಯನ್ನು ಎದುರಿಸಿದ್ದು, ಶೇ.100 ಫಲಿತಾಂಶವನ್ನು ಪಡೆದಿದೆ. ಉನ್ನತ ಶ್ರೇಣಿಯಲ್ಲಿ 53 ಮಂದಿ ಪ್ರಥಮ ಶ್ರೇಣಿಯಲ್ಲಿ 27 ಉತ್ತೀರ್ಣರಾಗಿದ್ದಾರೆ.

ಕಾಲೇಜಿನ ವಿದ್ಯಾರ್ಥಿ ಜಿ.ಆರ್.ಧ್ರುವ ಮತ್ತು ಮಿಥುನ್ ಕೆ.ಎಚ್. ತಲಾ 581 (ಶೇ.97) ಅಂಕಗಳನ್ನು, ಕುಶಾಲ್ ಕೆ.ಎನ್ 579 ಅಂಕಗಳನ್ನು, ಪ್ರಹ್ಲಾದ 578 (ಶೇ.96) ಅಂಕಗಳನ್ನು ಶೈನಿ ಬಿ.ಸಿ.578 (ಶೇ.96) ಅಂಕಗಳನ್ನು ಪಡೆದು ಮೊದಲ 4 ಸ್ಥಾನಗಳನ್ನು ಹಂಚಿಕೊಂಡಿದ್ದಾರೆ.

ಶಾಲಾ ವಿದ್ಯಾರ್ಥಿಗಳ ಸಾಧನೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಚಂದ್ರ ಕೆ.ಪಿ ಹಾಗೂ ಉಪನ್ಯಾಸಕರು ಮತ್ತು ಸಿಬ್ಬಂದಿಗಳು ಅಭಿನಂದಿಸಿದ್ದಾರೆ.



ಉತ್ತಮ ಅಂಕ ಪಡೆದವರು

ಗರಗಂದೂರು ಮೊರಾರ್ಜಿ ದೇಸಾಯಿ ಪ.ಪೂ. ಕಾಲೇಜಿನ ವಿದ್ಯಾರ್ಥಿ ಜಿ.ಆರ್. ಧ್ರುವ , ಮಿಥುನ್ ಕೆ.ಎಚ್. ತಲಾ 581, ಕುಶಾಲ್ ಕೆ.ಎನ್ . 579 , ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆ ಕೆ.ಎಸ್.ಜಸ್ವಿನ್ 580 ಅಂಕ ಪಡೆದಿದ್ದಾರೆ.

ಸುಂಟಿಕೊಪ್ಪ ಸರಕಾರಿ ಕಾಲೇಜು

ಸುಂಟಿಕೊಪ್ಪ ಸರಕಾರಿ ಪದವಿಪೂರ್ವ ಕಾಲೇಜಿನ 64 ವಿದ್ಯಾರ್ಥಿಗಳಲ್ಲಿ 60 ಮಂದಿ ಉತ್ತೀರ್ಣರಾಗಿದ್ದು ಕಾಲೇಜು 95.31% ಫಲಿತಾಂಶವನ್ನು ಪಡೆದಿದೆ. ಕಲಾ ವಿಭಾಗದಲ್ಲಿ 14 ರಲ್ಲಿ 12ಮಂದಿ ವಾಣಿಜ್ಯ ವಿಭಾಗದಲ್ಲಿ 30 ರಲ್ಲಿ 29ಹಾಗೂ ವಿಜ್ಞಾನ ವಿಭಾಗದಲ್ಲಿ 20 ರಲ್ಲಿ 19 ತೇರ್ಗಡೆ ಹೊಂದಿದ್ದಾರೆ. ಕಾಲೇಜು ಒಟ್ಟಾರೆಯಾಗಿ ಶೇಕಡ 95.31 ಸಾಧನೆಯನ್ನು ಮಾಡಿದೆ ಎಂದು ಕಾಲೇಜಿ ಪ್ರಾಚಾರ್ಯ ಶ್ರೀಲತಾ ಮಾಹಿತಿ ನೀಡಿದ್ದಾರೆ.

ಸಂತ ಮೇರಿ ಆಂಗ್ಲ ಮಾಧ್ಯಮ ಕಾಲೇಜು

ಸಂತ ಮೇರಿ ಆಂಗ್ಲ ಮಾಧ್ಯಮ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ 35 ಮಕ್ಕಳ ಪೈಕಿ 33 ಮಂದಿ ತೇರ್ಗಡೆಯಾಗಿದ್ದು ಶೇಕಡ 94.28% ಫಲಿತಾಂಶ ಬಂದಿದೆ ಅತ್ಯುನ್ನತ ಶ್ರೇಣಿಯಲ್ಲಿ 8 ಮಂದಿ ಪ್ರಥಮ ದರ್ಜೆಯಲ್ಲಿ 20 ಮಂದಿ, ದ್ವಿತೀಯ ದರ್ಜೆಯಲ್ಲಿ 5 ಮಂದಿ ತೇರ್ಗಡೆ ಹೋದಿದ್ದಾರೆ. ಆ ಪೈಕಿ ಕೆ.ಎಸ್.ಜಸ್ವಿನ್ 580(ಶೇ.96.66)ಅಂಕಗಳಿಂದ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಸಂಸ್ಥೆಯ ವ್ಯವಸ್ಥಾಪಕರಾದ ರೆ.ಫಾ. ವಿಜಯ್ ಕುಮಾರ್ ಮತ್ತು ಕಾಲೇಜು ಪ್ರಾಂಶುಪಾಲರಾದ ಸೆಲ್ವರಾಜ್ ಅವರು ಮಕ್ಕಳ ಸಾಧನೆಯನ್ನು ಪ್ರಶಂಸಿದ್ದಾರೆ.

ಮಾದಾಪುರ ಡಿ.ಚೆನ್ನಮ್ಮ ಕಾಲೇಜು

ಮಾದಾಪುರ ಡಿ.ಚೆನ್ನಮ್ಮ ಪದವಿ ಪೂರ್ವಕಾಲೇಜು ಶೇಕಡ 96.20 ಫಲಿತಾಂಶ ಪಡೆದಿದ್ದು ಅತ್ಯುನ್ನತ ಶ್ರೇಣಿಯಲ್ಲಿ 8 ಮಂದಿ ಉತ್ತೀರ್ಣರಾಗಿದ್ದಾರೆ. ಪ್ರಥಮ ದರ್ಜೆಯಲ್ಲಿ 51 ಮಂದಿ, ದ್ವಿತೀಯ ದರ್ಜೆಯಲ್ಲಿ 15 ಮಂದಿ ಮತ್ತು ಸಾಮಾನ್ಯ ದರ್ಜೆಯಲ್ಲಿ 2 ಮಂದಿ ತೇರ್ಗಡೆಗೊಂಡಿದ್ದಾರೆ. ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಮಕ್ಕಳ ಸಾಧನೆಯನ್ನು ಶ್ಲಾಘಿಸಿದ್ದಾರೆ.

ಕಳೆದ ಬಾರಿಯಂತೆ ಈ ಬಾರಿಯು ಸುಂಟಿಕೊಪ್ಪ ವ್ಯಾಪ್ತಿಯಲ್ಲಿನ ಸರಕಾರಿ ಮತ್ತು ಖಾಸಗಿ ಪದವಿ ಪೂರ್ವ ಕಾಲೇಜುಗಳು ಉತ್ತಮ ಸಾಧನೆ ಮಾಡಿರುವುದು ಪೋಷಕರಲ್ಲಿ ಮತ್ತು ಕಾಲೇಜಿನ ಉಪನ್ಯಾಸಕರಲ್ಲಿ ಹರ್ಷ ಉಂಟು ಮಾಡಿದೆ.

ತೆಂಕಮಿಜಾರು ಸರಕಾರಿ ಕಾಲೇಜಿಗೆ ಉತ್ತಮ ಫಲಿತಾಂಶ

ಮೂಡುಬಿದಿರೆ : 2026ರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೆಂಕಮಿಜಾರು ಪ. ಪೂ. ಕಾಲೇಜು ಶೇ 94 ಫಲಿತಾಂಶ ದಾಖಲಿಸಿದೆ. ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ 38 ವಿದ್ಯಾಥಿ9ಗಳಲ್ಲಿ 11 ಮಂದಿ ಡಿಸ್ಟಿಂಕ್ಷನ್, 27 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶೇ.100 ಫಲಿತಾಂಶ ದಾಖಲಾಗಿದೆ. ಶ್ರೀಶಾನ್ (561), ಮಂಜುಶ್ರೀ (550), ಮುಸ್ತಾಫಾ (548) ಅಂಕ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 35 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 5 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 26 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶೇಕಡಾ 97.14 ಪಲಿತಾಂಶವನ್ನು ದಾಖಲಿಸಿದ್ದಾರೆ. ಮಹಮ್ಮದ್ ಆಶಿಕ್ (563), ಐಫಾ (558), ದೀಪ್ತಿ ಕುಮಾರಿ (549) ಅಂಕಗಳಿಸಿದ್ದಾರೆ. ಕಲಾ ವಿಭಾಗದಲ್ಲಿ 22 ಮಂದಿ ಪರೀಕ್ಷೆಗೆ ಹಾಜರಾಗಿದ್ದು 10 ಮಂದಿ ಪ್ರಥಮ ಶ್ರೇಣಿಯಲ್ಲಿ, 7 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಮೂಲಕ ಶೇ.77.27 ಫಲಿತಾಂಶ ದಾಖಲಾಗಿದೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶನಿವಾರ 11, ಏಪ್ರಿಲ್ 2026

ಸಕ್ರಿಯ ಪಾಲುದಾರರ ಜೊತೆ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸಭೆ

ಪ್ರವಾಸೋದ್ಯಮಕ್ಕೆ ಡಿಜಿಟಲ್ ಸ್ಪರ್ಶದ ಗುರಿ



ಉಡುಪಿ: ಒನ್ ಟ್ರ್ಯಾಕ್, ಮಣಿಪಾಲ್ ಸ್ಕೂಲ್ ಆಫ್ ಕಮ್ಯುನಿಕೇಷನ್ ಮತ್ತು ಉಡುಪಿ ಟೂರಿಸಂ ಸಹಭಾಗಿತ್ವದಲ್ಲಿ ಕ್ರಿಯೇಟರ್ಸ್ ಲ್ಯಾಬ್ ಉಡುಪಿ ಇವರ ಸಹಯೋಗದೊಂದಿಗೆ ಉಡುಪಿ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಜಿಲ್ಲಾಡಳಿತವು ಹಮ್ಮಿಕೊಂಡಿದೆ.

ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್ ನಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಎಲ್ಲ ಸಕ್ರಿಯ ಪಾಲುದಾರರ ಜೊತೆಯಲ್ಲಿ ವಿಶೇಷ ಸಭೆ ನಡೆಸಿ ಮಾತನಾಡಿದ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಉಡುಪಿಯ ಸಂಸ್ಕೃತಿ, ಪರಂಪರೆ, ಆಹಾರ ಶೈಲಿ ಮತ್ತು ಧಾರ್ಮಿಕತೆ ಬಗ್ಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡಲು ಉದ್ದೇಶಿಸಲಾಗಿದ್ದು ಇದಕ್ಕೆ ಡಿಜಿಟಲ್ ಸ್ಪರ್ಶ ನೀಡಲಾಗುವುದು ಎಂದರು.

ಕ್ರಿಯೇಟರ್ಸ್ ಲ್ಯಾಬ್ ಉಡುಪಿ ಸಂಸ್ಥೆಯು ರಾಷ್ಟ್ರೀಯ ಮಟ್ಟದಲ್ಲಿ ಡಿಜಿಟಲ್ ಕಂಟೆಂಟ್ ಗಳನ್ನು ತಯಾರಿಸುತ್ತಿದೆ. ಇದರಲ್ಲಿ ವಿದ್ಯಾರ್ಥಿಗಳು, ಕಂಟೆಂಟ್ ಕ್ರಿಯೇಟರ್ಸ್ ಭಾಗವಹಿಸಿ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಮಾಹಿತಿ ನೀಡುವ ಫೋಟೋ ಮತ್ತು ವೀಡಿಯೋಗಳನ್ನು ಹಂಚಿಕೊಳ್ಳುವ ಅವಕಾಶ ಇದೆ. ವಿಶೇಷವಾಗಿ ಕಾಲೇಜು ಮಟ್ಟದಲ್ಲಿ ಲ್ಯಾಬ್‌ಗಳನ್ನು ಅಳವಡಿಸಿ ಶೈಕ್ಷಣಿಕ ಸಂಸ್ಥೆಗಳ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಾಗುವುದು ಎಂದರು.

ವಿದ್ಯಾರ್ಥಿಗಳು ಉಡುಪಿ ಜಿಲ್ಲೆಯ ಬಗ್ಗೆ ಆತ್ಮಪೂರ್ವ ಕಥಾವಸ್ತು, ಸಾಂಸ್ಕೃತಿಕ ಸಾಕ್ಷ್ಯಚಿತ್ರ, ಫೋಟೋ ಗಳು ಅಥವಾ ವೀಡಿಯೋಗಳನ್ನು ತಯಾರಿಸಿ ಹಂಚಿಕೊಳ್ಳಬಹುದು. ಅತ್ಯುತ್ತಮ ಗುಣಮಟ್ಟದ ಕಂಟೆಂಟ್‌ಗಳಿಗೆ ಬೆಸ್ಟ್ ವಿಡಿಯೋ, ಫೋಟೋ ಮೆಮೊಯಿರ್ ಮತ್ತು ಬೆಸ್ಟ್ ಸ್ಟೋರಿ ವಿಭಾಗದಲ್ಲಿ ಪ್ರತಿ ತಿಂಗಳೂ ಪ್ರಶಸ್ತಿ ನೀಡುವ ಜೊತೆ ಸ್ಟೋರಿ ಆಫ್ ದ ಇಯರ್, ಎಮರ್ಜಿಂಗ್ ಸ್ಟೋರಿ ಟೆಲ್ಲರ್ ಹಾಗೂ ಕಲ್ಚರಲ್ ಡಾಕ್ಯುಮೆಂಟೇಶನ್ ವಿಭಾಗದಲ್ಲಿ ವಾರ್ಷಿಕ ಪ್ರಶಸ್ತಿಯನ್ನೂ ನೀಡಲಾಗುವುದು. ಮೊದಲಿಗೆ ಒಂದು ಕಾಲೇಜಿನಲ್ಲಿ ಕ್ರಿಯೇಟರ್ಸ್ ಲ್ಯಾಬ್ ಅನ್ನು ಸ್ಥಾಪಿಸಲಾಗುವುದು ಮುಂದಿನ ದಿನಗಳಲ್ಲಿ ಇತರ ಕಾಲೇಜುಗಳಿಗೆ ವಿಸ್ತರಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳಿವೆ. ಇಲ್ಲಿನ ಬೀಚ್‌ಗಳಲ್ಲಿ ಜಲಕ್ರೀಡೆ, ಆಯುರ್ವೇದ ಪ್ರವಾಸೋದ್ಯಮ, ಸ್ಥಳೀಯ ಆಹಾರ ಪದ್ಧತಿ, ಪ್ರಾಕೃತಿಕ ಸ್ಥಳಗಳು, ಧಾರ್ಮಿಕ ಸ್ಥಳಗಳ ಬಗ್ಗೆ ವಿದೇಶಿಗರಿಗೆ ಹೆಚ್ಚು ಪ್ರಚಾರ ನೀಡುವ ಅಗತ್ಯವಿದೆ. ಆಯುರ್ವೇದ ಪ್ರವಾಸೋದ್ಯಮಕ್ಕೆ ಒತ್ತು ನೀಡಲು ತರಬೇತಿಗಳನ್ನು ಆಯೋಜಿಸಲಾಗುವುದು ಎಂದ ಅವರು ಜಿಲ್ಲೆಯಲ್ಲಿ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡಲು ನುರಿತ ಗೈಡ್ ಗಳನ್ನೂ ನಿಯೋಜಿಸುವ ಕುರಿತು ಯೋಜಿಸಲಾಗುತ್ತಿದೆ ಎಂದರು.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕಿ ವಿಂಧ್ಯಾ, ಮೈತ್ರೇಯಿ ಆಯುರ್ವೇದ ಆಸ್ಪತ್ರೆಯ ತನ್ಮಯಿ ಗೋಸ್ವಾಮಿ, ಮಾಹೆ ಎಂಐಸಿ ನಿರ್ದೇಶಕಿ ಶುಭಾ ಎಚ್ ಎಸ್ ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.

30 ಸಾವಿರ ಭಕ್ತರ ನಿರೀಕ್ಷೆ | ಮಹಾ ಅನ್ನಸಂತರ್ಪಣೆಗೆ 20 ಕೌಂಟರ್‌ಗಳು

ಇಂದು ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ



ಶಿರ್ವ: ತಿರುಪತಿ ತಿರುಮಲ ದೇವಸ್ಥಾನ ಇವರಿಂದ ಕೆ. ಕೃಷ್ಣಮೋಹನ್ ಪೈ ಯುಎಸ್ಎ ಹಾಗೂ ಕಟಪಾಡಿ ವಿಜಯಾ ಪೈ ಮತ್ತು ಪುರುಷೋತ್ತಮ ಪೈ ಹಾಗೂ ಕುಟುಂಬಸ್ಥರ ಸಂಕಲ್ಪದಂತೆ ಕಟಪಾಡಿ ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ಲೋಕ ಕಲ್ಯಾಣಾರ್ಥವಾಗಿ ಇಂದು ಜರಗಲಿರುವ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ಇಂದು ಸಂಪನ್ನಗೊಳ್ಳಲಿದೆ.

ಸುಮಾರು 7 ಎಕರೆಗೂ ಅಧಿಕ ವಿಶಾಲವಾದ ಕಟಪಾಡಿ ಎಸ್ ವಿಎಸ್ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ಶ್ರೀದೇವರ ವಿವಾಹ ಮಂಟಪ ಎದ್ದು ನಿಂತಿದೆ. ದ.ಕ. ಮತ್ತು ಉಡುಪಿ ಜಿಲ್ಲೆಗಳ ಸುಮಾರು ಮೂವತ್ತು ಸಾವಿರದಷ್ಟು ಭಕ್ತಾಧಿಗಳು ಭಾಗವಹಿಸುವ ನಿರೀಕ್ಷೆಯಲ್ಲಿ ಸಿದ್ಧತೆಗಳು ನಡೆದಿವೆ. ಒಂದು ಸಾವಿರ ಸ್ವಯಂ ಸೇವಕರು ಸೇವೆಯನ್ನು ನೀಡಲು ಸಿದ್ಧಗೊಂಡಿದ್ದಾರೆ. ಆಬಾಲ ವೃದ್ಧರಾದಿಯಾಗಿ ವಿಶೇಷಚೇತನರೂ ಕೂಡಾ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವನ್ನು ಕಣ್ತುಂಬಿಕೊಳ್ಳುವಂತೆ ವಿಶೇಷವಾದ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ತಿರುಪತಿಯಿಂದಲೇ ದೇವರನ್ನು ತಂದು ತಿರುಪತಿ ತಿರುಮಲ ದೇವಸ್ಥಾನ ಸಮಿತಿಯವರ ಪ್ರಧಾನ ಅರ್ಚಕರಿಂದಲೇ ಕಲ್ಯಾಣೋತ್ಸವದ ಧಾರ್ಮಿಕ ಅನುಷ್ಠಾನಗಳು ಜರಗಲಿದ್ದು ಈ ಸಂದರ್ಭ ವಿಶೇಷವಾಗಿ ಮುಡಿಪು ಸೇವೆ ಸಲ್ಲಿಸುವವರಿಗೆ ತಿರುಪತಿ ಹುಂಡಿ ವ್ಯವಸ್ಥೆ ಸಿದ್ಧವಿರುತ್ತದೆ. ಇಂದು ಮಧ್ಯಾಹ್ನ 3 ಗಂಟೆಯೊಳಗಾಗಿ ತುಳಸಿ, ಹೂವು, ಹಣ್ಣುಗಳನ್ನು ಸಮರ್ಪಿಸಲು ಅವಕಾಶವನ್ನು ನೀಡಲಾಗಿದ್ದು ತಿರುಪತಿಯಿಂದಲೇ ತರಿಸಿಕೊಳ್ಳಲಾದ ವಿಶೇಷ ಲಡ್ಡುಪ್ರಸಾದ ಸಹಿತ ಪ್ರಸಾದ ವಿತರಣೆ– ಪ್ರಸಾದ ಸ್ವೀಕಾರ ಹಾಗೂ ಮಹಾ ಅನ್ನಸಂತರ್ಪಣೆಯು ಸಾಂಗವಾಗಿ ನೆರವೇರುವಂತೆ ಪ್ರತ್ಯೇಕವಾಗಿ 20 ಕೌಂಟರ್ ಗಳನ್ನು ತೆರೆಯಲಾಗುತ್ತಿದೆ. ವಿಶೇಷ ಚೇತನರು, ವಯೋವೃದ್ಧರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

ಎಲ್ಲೆಡೆಯಿಂದ ಹರಿದು ಬರುವ ಭಕ್ತರಿಗೆ ಸುವ್ಯವಸ್ಥಿತವಾದ ವಾಹನಗಳ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪಾರ್ಕಿಂಗ್ ಸ್ಥಳದಿಂದ ಕಲ್ಯಾಣೋತ್ಸವ ನಡೆಯುವ ಸ್ಥಳಕ್ಕೆ ಉಚಿತವಾಗಿ ವಾಹನಗಳ ಮೂಲಕ ಭಕ್ತರನ್ನು ಕರೆತರುವ ವ್ಯವಸ್ಥೆ ಕಲ್ಪಿಸಲಾಗಿದೆ. ಪೊಲೀಸ್ ಇಲಾಖೆಯು ಸಂಪೂರ್ಣ ಭದ್ರತೆ, ಸುರಕ್ಷತೆಯ ಕ್ರಮವನ್ನು ಕೈಗೊಳ್ಳಲಿದೆ. ಆರೋಗ್ಯ ಇಲಾಖೆ, ಅಗ್ನಿಶಾಮಕದಳ, ಗೃಹ ರಕ್ಷಕದಳ ಸೇವೆ ನೀಡಲಿದ್ದಾರೆ ಎಂದು ಪ್ರಧಾನ ವ್ಯವಸ್ಥಾಪಕ ಕೆ.ಸತ್ಯೇಂದ್ರ ಪೈ ತಿಳಿಸಿದ್ದಾರೆ.

ಕಾಸರಗೋಡು ಜಿಲ್ಲೆಯ 1146 ಮತಗಟ್ಟೆಗಳಿಗೆ ಆಹಾರ ಪೂರೈಕೆಯಿಸಿದ ಕುಟುಂಬಶ್ರೀ

ಇಲೆಕ್ಷನ್ ಕೆಫೆಗೆ 20 ಲಕ್ಷ ರೂ. ವಹಿವಾಟು





ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕುಟುಂಬಶ್ರೀ ನೇತೃತ್ವದಲ್ಲಿ ಆಹಾರ ವಿತರಣೆ ವ್ಯವಸ್ಥೆಯು ಮತಗಟ್ಟೆಗಳ ಚುನಾವಣಾ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಗಳಿಗೆ ಅತ್ಯಂತ ನೆಮ್ಮದಿ ನೀಡಿದೆ. ಕಾಸರಗೋಡು ಜಿಲ್ಲೆಯ 1146 ಮತಗಟ್ಟೆಗಳು ಮತ್ತು ಮತಯಂತ್ರಗಳ ವಿತರಣಾ ಕೇಂದ್ರಗಳಲ್ಲಿ ಆಹಾರ ಪೂರೈಕೆ ಮೂಲಕ ಕುಟುಂಬಶ್ರೀ ಜಿಲ್ಲಾ ಮಿಷನ್ ನೇತೃತ್ವದ ಇಲೆಕ್ಷನ್ ಕೆಫೆಗಳಲ್ಲಾಗಿ 20,69,412 ರೂ. ವ್ಯಾಪಾರ ವಹಿವಾಟು ನಡೆದಿದೆ.

ಸರಿಯಾದ ಯೋಜನೆಯೊಂದಿಗೆ ನಡೆಸಲಾದ ಈ ಬೃಹತ್ ಪ್ರಕ್ರಿಯೆಯು ಜಿಲ್ಲೆಯಲ್ಲಿ ಮಹಿಳಾ ಗುಂಪಿನ ಸಬಲೀಕರಣಕ್ಕೆ ಸಾಕ್ಷಿಯಾಯಿತು. ಚುನಾವಣಾ ದಿನಾಂಕ ಘೋಷಣೆಯಾದ ಕೂಡಲೇ ಜಿಲ್ಲಾ ಮಿಷನ್ ವ್ಯಾಪಕ ಸಿದ್ಧತೆಗಳನ್ನು ಪ್ರಾರಂಭಿಸಿತ್ತು. ಆಹಾರ ಪೂರೈಕೆಗಾಗಿ ಜಿಲ್ಲೆಯಾದ್ಯಂತ 324 ಕೆಫೆ ಘಟಕಗಳನ್ನು ಸ್ಥಾಪಿಸಲಾಗಿತ್ತು.

ಚುನಾವಣಾ ಅಧಿಕಾರಿಗಳಿಗೆ ಅಗತ್ಯವಿರುವ ಉಪಹಾರ, ಮಧ್ಯಾಹ್ನದ ಊಟ ಮತ್ತು ತಿಂಡಿಗಳನ್ನು ಯಾವುದೇ ತೊಂದರೆಯಿಲ್ಲದೆ ಪ್ರತಿ ಬೂತ್‌ಗೆ ಸಮಯಕ್ಕೆ ಸರಿಯಾಗಿ ತಲುಪಿಸುವುದನ್ನು ಖಚಿತಪಡಿಸಿಕೊಳ್ಳಲು ವಿಶೇಷ ವ್ಯವಸ್ಥೆ ಸ್ಥಾಪಿಸಲಾಗಿತ್ತು. ಚುನಾವಣಾ ಆಯೋಗದ ಸೂಚನೆಗಳ ಪ್ರಕಾರ ಕುಟುಂಬಶ್ರೀಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ಹಸಿರು ರೀತಿಯಲ್ಲಿ ನಡೆಸಲಾಯಿತು.

ಕನಿಷ್ಠ ತ್ಯಾಜ್ಯ , ಪರಿಸರ ಸ್ನೇಹಿ ನಿರ್ವಹಣೆ

ಪ್ಲಾಸ್ಟಿಕ್ ಕವರ್‌ಗಳು ಅಥವಾ ಎಸೆಯಬಹುದಾದ ಪಾತ್ರೆಗಳನ್ನು ಬಳಸದೆ ಪರಿಸರ ಸ್ನೇಹಿ ರೀತಿಯಲ್ಲಿ ಆಹಾರ ಬಡಿಸುವುದು, ಪ್ಯಾಕಿಂಗ್ ಗಮನಾರ್ಹವಾಗಿತ್ತು. ಈ ಮೂಲಕ ಹೆಚ್ಚು ತ್ಯಾಜ್ಯ ಉತ್ಪತ್ತಿಯಾಗುವುದನ್ನು ತಪ್ಪಿಸಲಾಯಿತು.

324 ಘಟಕಗಳು ಸಕ್ರಿಯ

ಇದೇ ವೇಳೆ ಮತದಾನ ಸಾಮಗ್ರಿ ವಿತರಿಸುವ ಕೇಂದ್ರ ಮತ್ತು ಮತದಾನದ ನಂತರ ಅವುಗಳನ್ನು ಶೇಖರಿಸುವ ಎರಡು ಪ್ರಮುಖ ಸಂಗ್ರಹಣಾ ಕೇಂದ್ರಗಳಲ್ಲಿ ಕುಟುಂಬಶ್ರೀ ಕಾರ್ಯಕರ್ತೆಯರು ಸಕ್ರಿಯರಾಗಿ ಕಾರ್ಯ ನಿರ್ವಹಿಸಿದ್ದರು.

ರಸ್ತೆ ಅಪಘಾತ: ಚಿಕಿತ್ಸೆಯಲ್ಲಿದ್ದ ವ್ಯಕ್ತಿ ಮೃತ್ಯು

ಕಾಸರಗೋಡು: ಗೂಡ್ಸ್ ಆಟೋರಿಕ್ಷಾ ಮಗುಚಿ ಬಿದ್ದು ಗಂಭೀರ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಪರವನಡ್ಕ ನಿರ್ಮಾಣ ಸಂಸ್ಥೆಯೊಂದರ ಸೂಪರ್‌ವೈಸರ್ ಆಗಿದ್ದ ಪರವನಡ್ಕ ಮಣಿಯಂಗಾನ ನಿವಾಸಿ ಎಂ.ಬದ್ರುದ್ದೀನ್ (36) ಸಾವನ್ನಪ್ಪಿದ ಘಟನೆ ನಡೆದಿದೆ.

ಪೆರುಂಬಳದಲ್ಲಿ ನಿರ್ಮಾಣ ಕೆಲಸದ ಸ್ಥಳಕ್ಕೆ ಸಾಮಗ್ರಿಗಳೊಂದಿಗೆ ಗೂಡ್ಸ್ ಆಟೋದಲ್ಲಿ ಬದ್ರುದ್ದೀನ್ ಕಳೆದ ಮಂಗಳವಾರ ತೆರಳುತ್ತಿದ್ದ ವೇಳೆ ಪೆರುಂಬಳ ರಸ್ತೆಯ ವಿಷ್ಣು ಪಾರಕುಂಡು ಜಂಕ್ಷನ್‌ಗೆ ತಲುಪಿದಾಗ ಗೂಡ್ಸ್ ಆಟೋ ನಿಯಂತ್ರಣ ತಪ್ಪಿ ಮಗುಚಿ ಬಿದ್ದಿತ್ತು. ಇದರಿಂದ ಬದ್ರುದ್ದೀನ್ ಗಂಭೀರವಾಗಿ ಗಾಯಗೊಂಡಿದ್ದರು. ಬಳಿಕ ಚಿಕಿತ್ಸೆ ಪಡೆಯುತ್ತಿದ್ದ ಅವರು ಆಸ್ಪತ್ರೆಯಲ್ಲಿ ಅಸುನೀಗಿದರು. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಗಲ್ಫ್ ರಾಷ್ಟ್ರಗಳಲ್ಲಿರುವ ಭಕ್ತರ ಕಲ್ಯಾಣಕ್ಕಾಗಿ ಪ್ರಾರ್ಥನೆ



ಮಂಗಳೂರು: ಮಂಜೇಶ್ವರ ಬಲ್ಲಂಗುಡೆಲು ಶ್ರೀ ಪಾಡಂಗರೆ ಭಗವತಿ ಭಕ್ತವೃಂದ ಗಲ್ಫ್ ನ ವತಿಯಿಂದ ಗಲ್ಫ್ ರಾಷ್ಟ್ರಗಳಲ್ಲಿರುವ ಭಕ್ತರ ಕಲ್ಯಾಣಕ್ಕಾಗಿ ವಿಶೇಷ ದೀಪಾರಾಧನೆ ಸೇವೆ ಮತ್ತು ವಿಶೇಷ ಪ್ರಾರ್ಥನೆ ಬಲ್ಲಂಗುಡೆಲು ಶ್ರೀ ಪಾಡಂಗರೆ ಭಗವತಿ ಕ್ಷೇತ್ರದ ಭಂಡಾರ ನಿಲಯದಲ್ಲಿ ಶುಕ್ರವಾರ ನಡೆಯಿತು.

ಗಲ್ಫ್ ರಾಷ್ಟ್ರಗಳಲ್ಲಿ ಇರುವ ಅಮ್ಮನ ಭಕ್ತರು ಪ್ರಸ್ತುತ ಯುದ್ಧ ಪರಿಸ್ಥಿತಿಯಿಂದಾಗಿ ಸಂಕಷ್ಟಕ್ಕೊಳಗಾಗಿದ್ದರೆ. ಅವರಿಗೆ ಉದ್ಯೋಗ ನಷ್ಟವಾಗದಿರಲಿ, ಉದ್ಯೋಗ ಕಳೆದುಕೊಂಡವರಿಗೆ ಮರು ಉದ್ಯೋಗ ದೊರಕಲಿ ಹಾಗೂ ಯುದ್ಧ ಶಮನವಾಗಿ ಎಲ್ಲರಿಗೂ ಕಲ್ಯಾಣವಾಗಲಿ ಎಂಬ ಮಹತ್ ಉದ್ದೇಶದಿಂದ ಆರಾಧ್ಯ ಮಾತೆ ಶ್ರೀ ಪಾಡಂಗರೆ ಭಗವತಿ ಅಮ್ಮನಲ್ಲಿ ಕ್ಷೇತ್ರದ ಪೂಜಾರಿಯವರಾದ ನಾರಾಯಣ ಭಗವತಿ ಪೂಜಾರಿ ಪ್ರಾರ್ಥನೆ ಮಾಡಿದರು. ಕ್ಷೇತ್ರದ ಅನುವಂಶಿಕ ಆಚ್ಚಮಾರರು, ಸೇವಾ ಸಮಿತಿಯ ಅಧ್ಯಕ್ಷ ಜಯರಾಮ ಬಲ್ಲಂಗುಡೆಲು, ಸಮಿತಿಯ ಪದಾಧಿಕಾರಿಗಳು ಮತ್ತು ಶ್ರೀ ಪಾಡಂಗರೆ ಭಗವತಿ ಭಕ್ತವೃಂದ ಗಲ್ಫ್ ನ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಕರ್ನಾಟಕ ಸರಕಾರ ಧಾರ್ಮಿಕ ದತ್ತಿ ಇಲಾಖೆ

ಶ್ರೀ ರಾಜರಾಜೇಶ್ವರೀ ದೇವಸ್ಥಾನ, ಪೊಳಲಿ

ಕರಿಯಂಗಳ ಗ್ರಾಮ, ಬಂಟ್ವಾಳ ತಾಲೂಕು - 574 219, ದಕ್ಷಿಣ ಕನ್ನಡ ದೂರವಾಣಿ : 0824-2266141, 2266241,

ಪೊಳಲಿ ಅಮ್ಮನ ಸನ್ನಿಧಿಯಲ್ಲಿ ಇಂದು ಮಹಾರಥೋತ್ಸವ

ಪೊಳಲಿ ಶ್ರೀ ರಾಜರಾಜೇಶ್ವರೀ ತಾಯಿ ಸಾವಿರ ಸೀಮೆಯ ಒಡತಿ ಎಂದೇ ಪ್ರಖ್ಯಾತಿ. ಪೊಳಲಿಯಲ್ಲಿ ವೈಭವದ ಜಾತ್ರಾ ಮಹೋತ್ಸವವು ಸುಮಾರು 1 ತಿಂಗಳ ಕಾಲ ನಡೆಯುತ್ತದೆ. ಊರು ಪರವೂರಿನ ಸಾವಿರಾರು ಭಕ್ತಾದಿಗಳು ಕ್ಷೇತ್ರಕ್ಕೆ ಆಗಮಿಸುತ್ತಾರೆ. ಜಾತ್ರಾ ಸಂದರ್ಭದಲ್ಲಿನ ಪೊಳಲಿ ಚೆಂಡು ಹೆಚ್ಚು ಪ್ರಸಿದ್ಧಿ ಪಡೆದಿದೆ. ಪೊಳಲಿಯ ಇತಿಹಾಸದ ಕುರಿತು ಅಧ್ಯಯನ ಮಾಡಿದರೆ ಕ್ಷೇತ್ರವನ್ನು ಸುರತ ಮಹಾರಾಜ ಸ್ಥಾಪಿಸಿದ ಬಗ್ಗೆ ಉಲ್ಲೇಖವಿದೆ. ರಾಜ್ಯವನ್ನು ಕಳೆದುಕೊಂಡು ಪರಿತಪಿಸುತ್ತಿದ್ದ ರಾಜನಿಗೆ ದೇವಿಯು ಸ್ವಪ್ನದಲ್ಲಿ ಬಂದು ಅಶರೀರವಾಣಿ ನುಡಿದಂತೆ ರಾಜನು ಶ್ರೀ ಸುಬ್ರಮಣ್ಯ, ಮಹಾಗಣಪತಿ, ರಾಜರಾಜೇಶ್ವರಿ, ಭದ್ರಕಾಳಿಯನ್ನು ಪ್ರತಿಷ್ಠಾಪಿಸಿದ್ದು, ಅದೆಲ್ಲವೂ ಮೃಣ್ಮಯ ಮೂರ್ತಿಗಳಾಗಿದ್ದವು ಎನ್ನಲಾಗಿದೆ. ಇಲ್ಲಿ ಸಾವಿರಾರು ವರ್ಷಗಳಿಂದಲೂ ಮಣ್ಣಿನ ಮೂರ್ತಿಯನ್ನೇ ಪೂಜಿಸುತ್ತಾ ಬರಲಾಗಿದೆ. ಇಲ್ಲಿನ ಶ್ರೀ ರಾಜರಾಜೇಶ್ವರಿಯ ಮೂರ್ತಿಯು ಸುಮಾರು 9 ಅಡಿ ಎತ್ತರವಿದ್ದು, ಇಡೀ ದೇಶದಲ್ಲೇ ಅತೀ ದೊಡ್ಡದಾದ ಮಣ್ಣಿನ ಮೂರ್ತಿಯಾಗಿದೆ ಎನ್ನಲಾಗಿದೆ.

ಪುಳಿನ, ಪೊಳಲ್ ಎಂದರೆ ಮಣ್ಣು ಎಂಬ ಅರ್ಥವಿದ್ದು, ಮುಂದೆ ಅದೇ ಪೊಳಲಿಯಾಯಿತು ಎಂಬ ಪ್ರತೀತಿ ಇದೆ. ಕ್ಷೇತ್ರದಲ್ಲಿ ಪ್ರಧಾನ ದೇವತೆಯಾಗಿ ಶ್ರೀ ರಾಜರಾಜೇಶ್ವರೀ ದೇವಿ ಇದ್ದು, ಎಡಗಡೆಯಲ್ಲಿ ಭದ್ರಕಾಳಿ, ಬಲಗಡೆಯಲ್ಲಿ ಶ್ರೀ ಸುಬ್ರಹ್ಮಣ್ಯ, ಶ್ರೀ ಮಹಾಗಣಪತಿ, ಬ್ರಹ್ಮವಟು, ವಿಷ್ಣುವಟು, ಶೂಲಿನಿ, ದಂಡಿನಿ, ಮುಂಡಿನಿ ಪರಿವಾರ ಗಣಗಳ ಸಾನಿಧ್ಯವಿದೆ. ಹೊರಾಂಗಣದ ಬಲಬದಿಯಲ್ಲಿ ಶ್ರೀ ದುರ್ಗಾಪರಮೇಶ್ವರೀ ದೇವಿಯ ಗುಡಿಯಿದ್ದು, ಇದನ್ನು ಸುಮೇಧ ಮುನಿಯು ಪ್ರತಿಷ್ಠಾಪಿಸಿದ ಬಗ್ಗೆ ಪುರಾಣದಲ್ಲಿ ಉಲ್ಲೇಖವಿದೆ. ಎಡಬದಿಯಲ್ಲಿ ಶ್ರೀ ಕ್ಷೇತ್ರಪಾಲನ ಸನ್ನಿಧಿ ಇದೆ.

30 ದಿವಸಗಳ ಜಾತ್ರೆ

ಕ್ಷೇತ್ರದಲ್ಲಿ ಪ್ರತೀ ವರ್ಷ ಒಂದು ತಿಂಗಳ ಜಾತ್ರೆಯೊಂದಿಗೆ ವಿಶೇಷ ಉತ್ಸವ, ಜತೆಗೆ ನವರಾತ್ರಿ ಉತ್ಸವ, ಷಷ್ಠಿ ಉತ್ಸವಗಳು ನಡೆಯುತ್ತವೆ. ಪೊಳಲಿಯ ವಾರ್ಷಿಕ ಜಾತ್ರೆಯು ಹಲವು ವಿಶೇಷತೆಗಳನ್ನು ಹೊಂದಿದ್ದು, ಪೊಳಲಿ ಜಾತ್ರೆಯ ಧ್ವಜಾರೋಹಣಕ್ಕೆ ಪೂರ್ವಭಾವಿಯಾಗಿ ನಂದ್ಯ ಕ್ಷೇತ್ರದಿಂದ ಶ್ರೀ ಭಗವತಿ, ಶ್ರೀ ಭದ್ರಕಾಳಿ ಹಾಗೂ ಅರಸು ದೈವಗಳ ಭಂಡಾರವು ದೋಣಿಯ ಮೂಲಕ ನದಿಯನ್ನು ದಾಟಿ ಆಗಮಿಸುತ್ತದೆ. ಜತೆಗೆ ಉಳಿಪ್ಪಾಡಿಗುತ್ತಿನಿಂದ ಕೊಡಮಣಿತ್ತಾಯ ದೈವದ ಭಂಡಾರವು ಸೂಟೆದಾರದೊಂದಿಗೆ ಆಗಮಿಸಿ ಧ್ವಜಾರೋಹಣದ ಮೂಲಕ ತಿಂಗಳ ಜಾತ್ರೆ ಶುರುವಾಗುತ್ತದೆ. ಕುದಿ ಕರೆಯುವ ಸಂಪ್ರದಾಯದ ಮೂಲಕ ಜಾತ್ರೆಯ ದಿನ ನಿಗದಿಯಾಗಿ ಆರಾಢಕ್ಕೆ ಮುನ್ನಾದಿನ ಮಹಾರಥೋತ್ಸವ, ಅದಕ್ಕೂ ಮುನ್ನ 5 ದಿನಗಳ ಕಾಲ ಪುರಲ್ದ ಚೆಂಡಿನ ಉತ್ಸವ ನಡೆಯುತ್ತದೆ.

ಧ್ವಜಾರೋಹಣದ ಬಳಿಕ ಪ್ರತಿ ಐದು ದಿನಕ್ಕೊಮ್ಮೆ 5ನೇ ದಂಡಮಾಲೆ ಉತ್ಸವ, 10ನೇ ದಂಡಮಾಲೆ, 15ನೇ ದಂಡಮಾಲೆ, 20ನೇ ದಂಡಮಾಲೆ, ಈ ದಿನ ನವಿಲು ರಥ ನಡೆಯುತ್ತದೆ. ಇದರ ಮಧ್ಯೆ ಕೋಳಿಗುಂಟ ನಡೆಯುವುದು ವಿಶೇಷವಾಗಿದೆ. ಜಾತ್ರೆಯ ಕೋಳಿ ಗುಂಟದವರೆಗೆ ಶುದ್ಧ ಸಸ್ಯಾಹಾರ ಸೇವನೆ, ಕೋಳಿ ಗುಂಟದ ಬಳಿಕ ಮಾಂಸಾಹಾರ ಸೇವಿಸಬಹುದು ಎನ್ನಲಾಗಿದೆ. ರಥೋತ್ಸವದ ಮರುದಿನ ಅವಭೃತ ಸ್ನಾನ, ಧ್ವಜಾವರೋಹಣ, ಉಳ್ಳಾಕ್ಲು–ಮಗ್ರಂತಾಯಿ ದೈವಗಳ ನೇಮ, ಮರುದಿನ ಕೊಡಮಣಿತ್ತಾಯ ದೈವದ ನೇಮ, ಅದರ ಮರುದಿನ ಸಂಪ್ರೋಕ್ಷಣೆ, ಮಂತ್ರಾಕ್ಷತೆ ನಡೆಯುತ್ತದೆ.

ಪೊಳಲಿ ಜಾತ್ರೆಯ ಸಂದರ್ಭ ಕಲ್ಲಂಗಡಿ ವ್ಯಾಪಾರ ತಲೆತಲಾಂದಿಂದಲೂ ನಡೆದು ಬಂದ ಸಂಪ್ರದಾಯವಾಗಿದ್ದು, ಭಕ್ತರು ಜಾತ್ರೆಗಾಗಿಯೇ ಕಲ್ಲಂಗಡಿ ಹಣ್ಣನ್ನು ಬೆಳೆದು ತಾಯಿಗೆ ಸಮರ್ಪಿಸಿ ಬಳಿಕ ಜಾತ್ರೆಯ ಸಂದರ್ಭದಲ್ಲಿ ವ್ಯಾಪಾರ ಮಾಡುವುದು ಹಿಂದಿನಿಂದಲೂ ಬಂದ ವ್ಯವಹಾರವಾಗಿದೆ.

ಇಂದು ಮಹಾ ರಥೋತ್ಸವ

ಏ.6ರಂದು ಕೊಡಿ ಚೆಂಡು ಆರಂಭಗೊಂಡಿದ್ದು, ಕುಮಾರ ರಥ ಉತ್ಸವ ನಡೆದಿದೆ. ಏ.7 ರಂದು 2ನೇ ಚೆಂಡು, ಹೂವಿನ ತೇರು, ಏ.8ರಂದು ಮೂರನೇ ಚೆಂಡು ಸೂರ್ಯಮಂಡಲ ರಥ, ಏ.9ರಂದು ನಾಲ್ಕನೇ ಚೆಂಡು ಚಂದ್ರ ಮಂಡಲ ರಥ ನಡೆದಿದೆ. ಏ.10ರಂದು ಕಡೇ ಚೆಂಡು ನಡೆದಿದೆ. ಈ ಸಂದರ್ಭದಲ್ಲಿ ಬೆಳ್ಳಿ ರಥ ಹಾಗೂ ಆಳು ಪಲ್ಲಕಿ ರಥ ಉತ್ಸವ ಕೂಡಾ ನಡೆಯುತ್ತದೆ. ಇಂದು ಮಹಾ ರಥೋತ್ಸವ, ಸುಡುಮದ್ದು ಪ್ರದರ್ಶನವಿರಲಿದೆ. ನಾಳೆ ಆರಾಡ, ಅವಭೃತ ಸ್ನಾನ, ಮಗ್ರಂತಾಯ ನೇಮ, ಏ.13ರಂದು ಪ್ರಧಾನ ದೈವ ಶ್ರೀ ಕೊಡಮಣಿತ್ತಾಯ ನೇಮ ನೆರವೇರಲಿದೆ.



ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಪಾದ ಕಮಲಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು

ಭುವನೇಶ್ ಪಚ್ಚಿನಡ್ಕ ಅಧ್ಯಕ್ಷರು, ಬಂಟ್ವಾಳ ತಾಲೂಕು ಬಿಲ್ಲವ ಸಂಘ	**ಸುಕೇಶ್ ಚೌಟ** ಬಡಕಬೈಲು	**ಚಂದ್ರಹಾಸ ಶೆಟ್ಟಿ** ನಾರಳ
ನಂದರಾಮ್ ರೈ ನಿರ್ದೇಶಕರು, ಕೆ.ಎಮ್.ಎಫ್. ಮಂಗಳೂರು	**ನಿತೇಶ್ ಕುಮಾರ್** ಕಾಜಿಲಕೋಡಿ	**ವೆಂಕಟೇಶ್ ನಾವಡ** ಪೊಳಲಿ